ಭಾನುವಾರ, ಮೇ 11, 2025 |₹ 7.00
www.prajavani.net
prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಚಿನ್ನಕ್ಕೆ ಗುರಿಯಿಟ್ಟ ಮಧುರಾ

ಭಾರತದ ಮಧುರಾ ಧಾಮಣಗಾಂವಕರ್ ಅವರು ಶಾಂಘೈನಲ್ಲಿ ನಡೆದ ವಿಶ್ವಕಪ್ ಸ್ಟೇಜ್ 2 ಆರ್ಚರಿ ಕಾಂಪೌಂಡ್ ವಿಭಾಗದಲ್ಲಿ ವೈಯಕ್ತಿಕ ಚಿನ್ನದ ಪದಕ ಗೆದ್ದರು. ಭಾರತ ಒಟ್ಟು ಐದು ಪದಕಗಳನ್ನು ಗೆದ್ದು, ಅಗ್ರಸ್ಥಾನದಲ್ಲಿದೆ

2	1	2
ಚಿನ್ನ	ಬೆಳ್ಳಿ	ಕಂಚು



fresho!

ಮಾವಿನ ಹಣ್ಣುಗಳ ಡೆಲಿವರಿ 10 ನಿಮಿಷಗಳಲ್ಲಿ!*

bigbasket
A TATA Enterprise

Banganapalli
Perfectly sweet and juicy

₹69.00 1kg



Firmly satisfying

Alphonso Badami
Intensely sweet with hints of honey

₹99.00 1kg



Silky smooth and buttery

Alphonso Ratnagiri
Intensely sweet with hints of honey

₹159.00 2N



Silky smooth and buttery

Lalbagh (Sindhura)
Delightfully sweet and tangy

₹79.00 1kg



Intensly juicy and ripe

Badami
(Organically Grown)
Intensely sweet with hints of honey

₹119.00 1kg



Silky smooth and buttery pulp

Kesar
Richly sweet

₹129.00 1kg



Soft and Creamy rich

Malgoa
Delightfully sweet and mildly Tangy

₹229.00 1kg



Velvety soft and juicy richness

Mallika
Delightfully sweet and Tangy

₹139.00 1kg



Velvety soft and buttery

Himayath
(Imam Pasand)
Delightfully sweet with citrusy notes

₹189.00 1kg



Velvety Soft

Raspuri
Richly sweet with a tangy undertone

₹139.00 1kg



Intensely Juicy, Satisfyinfly Soft

Sindura
(Organically Grown)
Delightfully sweet and tangy

₹89.00 1kg



Intensely Juicy

Raw Mango
Tart and Tangy

₹39.00 1kg



Firm & crisp with a crunchy bite

PENTAGON 12920

Offers valid in Bengaluru only. Offers on Mangoes are valid on May 10 & 11, 2025. Offers valid till stocks last. Images are for illustration purposes only.
*T&C apply. For more details, offers, terms & conditions visit the bigbasket app or log on to bigbasket.com/FAQ

ಭಾನುವಾರ, ಮೇ 11, 2025 | ₹ 7.00
www.prajavani.net
prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಕುದುರೆ ಗಸ್ತು...

ಸಾರ್ವಜನಿಕ ಸ್ಥಳಗಳಲ್ಲಿ ಸುರಕ್ಷತಾ ಭಾವನೆ ಮೂಡಿಸುವ ಉದ್ದೇಶದಿಂದ ನಗರ ಸಶಸ್ತ್ರ ಮೀಸಲು ಪಡೆಯ ಅಶ್ವದಳ ಸಿಬ್ಬಂದಿ ಶನಿವಾರ ಬೆಂಗಳೂರಿನ ವಿಧಾನಸೌಧದ ಮುಂದೆ ಗಸ್ತು ನಡೆಸಿದರು



ಶೇಕಡಾ 9ರಿಂದ 50ರಷ್ಟು ಹೆಚ್ಚಳ: ಆಸ್ತಿ ಮೇಲಿನ ತೆರಿಗೆ ಕೈಬಿಡಲು ಆಗ್ರಹ

ತೆರಿಗೆ ಬರೆ: ಆಸ್ತಿ ಮಾಲೀಕರಿಗೆ ಹೊರೆ

• ಕೆ.ಎಸ್.ಸುನಿಲ್

ಬೆಂಗಳೂರು: ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ) ತನ್ನ ವ್ಯಾಪ್ತಿಯ ಸ್ವತ್ತುಗಳ ಮೇಲಿನ ತೆರಿಗೆಯನ್ನು ಶೇಕಡಾ 9ರಿಂದ 50ರಷ್ಟು ಹೆಚ್ಚಳ ಮಾಡಿರುವುದನ್ನು ಆಸ್ತಿ ಮಾಲೀಕರು ತೀವ್ರವಾಗಿ ವಿರೋಧಿಸಿದ್ದಾರೆ.

ಬಿಡಿಎ ಅಭಿವೃದ್ಧಿಪಡಿಸಿರುವ ನಾಡಪ್ರಭು ಕೆಂಪೇಗೌಡ, ಅಂಜನಾಪುರ, ವಿಶ್ವೇಶ್ವರಯ್ಯ, ಅರ್ಕಾವತಿ, ಬನಶಂಕರಿ ಸೇರಿ 9 ಬಡಾವಣೆಗಳು, ಪ್ರಾಧಿಕಾರ ಅನುಮೋದಿತ ಬಡಾವಣೆ, ಹಂಚಿಕೆ ಮಾಡಿರುವ ಅಪಾರ್ಟ್‌ಮೆಂಟ್ ವಸತಿಗಳೂ ಸೇರಿದಂತೆ ಸುಮಾರು 1.22 ಲಕ್ಷಕ್ಕೂ ಹೆಚ್ಚು ಜನರಿಗೆ ತೆರಿಗೆ ಏರಿಕೆಯ ಬಿಸಿ ತಟ್ಟಿದೆ. ಅದರಲ್ಲೂ ಕೆಂಪೇಗೌಡ ಬಡಾವಣೆಗೆ ಶೇ 10 ರಿಂದ 50ರಷ್ಟು ಹೆಚ್ಚಳವಾಗಿದೆ.

ಮೂಲ ಸೌಕರ್ಯ ಕಲ್ಪಿಸದೇ ತೆರಿಗೆ ಹೆಚ್ಚಳದ ಕ್ರಮಕ್ಕೆ ವಿವಿಧ ಬಡಾವಣೆಗಳ ನಿವಾಸಿಗಳ ಸಂಘಗಳು ವಿರೋಧ ವ್ಯಕ್ತಪಡಿಸಿವೆ. ಆಸ್ತಿಗಳ ಮೇಲಿನ ತೆರಿಗೆ ಪರಿಷ್ಕರಣೆ ಅವೈಜ್ಞಾನಿಕವಾಗಿದ್ದು, ಕೂಡಲೇ ತೆರಿಗೆ ಹೆಚ್ಚಳ ವಾಪಸ್ ಪಡೆಯುವಂತೆ ಪ್ರಾಧಿಕಾರಕ್ಕೆ ಮನವಿ ಮಾಡಿದ್ದಾರೆ.

ನಾಡಪ್ರಭು ಕೆಂಪೇಗೌಡ ಬಡಾವಣೆ (ಎನ್‌ಕೆಪಿಎಲ್) ಮುಕ್ತ ವೇದಿಕೆಯ ಜಂಟಿ ಕಾರ್ಯದರ್ಶಿ ಸೂರ್ಯಕಿರಣ್, 'ಎನ್‌ಕೆಪಿಎಲ್ ಬಡಾವಣೆಗೆ ಶೇ 10ರಿಂದ 50ರಷ್ಟು ಹೆಚ್ಚಳವಾಗಿದೆ. ಎಂಟು ವರ್ಷದಿಂದ ತೆರಿಗೆ ಪಾವತಿಸುತ್ತಿದ್ದೇವೆ. ಗುತ್ತಿಗೆ ಆಧಾರದ ಮೇಲೆ ನಿವೇಶನ ಹಂಚಿಕೆ ಮಾಡಲಾಗಿದೆ. ಹತ್ತು ವರ್ಷದವರೆಗೆ ನಿವೇಶನ ಮಾರಾಟ ಮಾಡುವಂತಿಲ್ಲ. ಬಡಾವಣೆ ಪೂರ್ಣ ಅಭಿವೃದ್ಧಿಯಾಗಿಲ್ಲ. ಹೀಗಿರುವಾಗ ಆಸ್ತಿ ತೆರಿಗೆ ಪರಿಷ್ಕರಣೆ ಮಾಡುವುದು ಅವಶ್ಯಕತೆಯೇ ಇಲ್ಲ. ನಿಯಮದ ಪ್ರಕಾರ ಆಸ್ತಿ ತೆರಿಗೆ ಪರಿಷ್ಕರಣೆಗೂ ಮುನ್ನ ಅಧಿಸೂಚನೆ ಹೊರಡಿಸಿ, ಆಕ್ಷೇಪಣೆ ಸಲ್ಲಿಸಲು ಅವಕಾಶ ನೀಡಬೇಕು. ಆದರೆ, ಇಲ್ಲಿ ನಿಯಮ ಪಾಲನೆ ಮಾಡಿಲ್ಲ. ಮೂಲಸೌಕರ್ಯ ಇಲ್ಲದೇ ಮನೆ ಕಟ್ಟಲು ಪರದಾಡುತ್ತಿದ್ದೇವೆ' ಎಂದು ಬೇಸರ ವ್ಯಕ್ತಪಡಿಸಿದರು.

'ತೆರಿಗೆ ಜತೆ ಸೆಸ್ ವಿಧಿಸುತ್ತಿರುವುದು ಅವೈಜ್ಞಾನಿಕ. ಯಾವ ಕಾರಣಕ್ಕೆ ಸೆಸ್ ಸಂಗ್ರಹ ಮಾಡಲಾಗುತ್ತಿದೆ ಎಂಬುದರ ಬಗ್ಗೆ ತಿಳಿಸಿಲ್ಲ. ಆಸ್ತಿ ತೆರಿಗೆ ಪರಿಷ್ಕರಣೆ ರದ್ದುಗೊಳಿಸುವಂತೆ ಮನವಿ ಮಾಡಲಾಗಿದೆ' ಎಂದು ತಿಳಿಸಿದರು.

ಅರ್ಕಾವತಿ ಬಡಾವಣೆಯ ನಿವೇಶನ ಮಾಲೀಕ ನಾರಾಯಣಸ್ವಾಮಿ, '2006ರಲ್ಲಿ ನಿವೇಶನ ಹಂಚಿಕೆ ಮಾಡಲಾಯಿತು. ಈಗ ರಸ್ತೆ ನಿರ್ಮಿಸುವ ಕೆಲಸ ನಡೆಯುತ್ತಿದೆ. ಸಮರ್ಪಕ ವಿದ್ಯುತ್ ಪೂರೈಕೆ ಇಲ್ಲ. ಕಾವೇರಿ ನೀರಿನ ಸಂಪರ್ಕ ಇಲ್ಲ. ಇಂತಹ ಪರಿಸ್ಥಿತಿಯಲ್ಲಿ ಆಸ್ತಿ ತೆರಿಗೆ ಹೆಚ್ಚಳ ಮಾಡಿರುವುದು ಸರಿಯಲ್ಲ. ತಿಂಗಳಿಗೆ ಟ್ಯಾಂಕರ್ ನೀರಿಗೆ ₹15 ಸಾವಿರ ವೆಚ್ಚವಾಗುತ್ತಿದೆ' ಎಂದು ಅಳಲು ತೋಡಿಕೊಂಡರು.

ಬನಶಂಕರಿ ಆರನೇ ಹಂತದ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಪಿ.ಎಸ್.ಮಹೇಶ್, 'ಬಡಾವಣೆಗೆ ಮೂಲ ಸೌಕರ್ಯ ಇಲ್ಲ. 30X40 ಅಡಿ ನಿವೇಶನಕ್ಕೆ ಶೇ 30ರಷ್ಟು ತೆರಿಗೆ ಹೆಚ್ಚಳ ಮಾಡಲಾಗಿದೆ. ತೆರಿಗೆ ಹೆಚ್ಚಳ ಮಾಡದಂತೆ ಪ್ರಾಧಿಕಾರಕ್ಕೆ ಮನವಿ ಮಾಡಲಾಗುವುದು' ಎಂದರು.

'ನಿಯಮದ ಪ್ರಕಾರ ತೆರಿಗೆ ಹೆಚ್ಚಳ'

'ಸ್ವತ್ತಿನ ಮಾರ್ಗಸೂಚಿ ಬೆಲೆ ಆಧಾರದ ಮೇಲೆ ಆಸ್ತಿ ತೆರಿಗೆ ನಿರ್ಧಾರ ಮಾಡಲಾಗಿದೆ. ಮಾರ್ಗಸೂಚಿ ದರ ಪರಿಷ್ಕರಣೆ ಮಾಡಿದ್ದರಿಂದ ಆಸ್ತಿ ತೆರಿಗೆಯಲ್ಲಿ ಬದಲಾವಣೆ ಆಗಿದೆ. ಒಟ್ಟಾರೆ ಶೇ 14ರಷ್ಟು ಹೆಚ್ಚಳವಾಗಿದೆ. ಆದರೆ, ಕೆಲವೊಂದು ಬಡಾವಣೆಗೆ ಶೇ 10 ರಿಂದ 20, ಶೇ 10 ರಿಂದ 50 ಏರಿಕೆ ಆಗಿದೆ. ತೆರಿಗೆ ಹೆಚ್ಚಳ ಅವೈಜ್ಞಾನಿಕ ಎಂಬ ಆರೋಪ ಸರಿಯಲ್ಲ. ಯಾವುದೇ ಗೊಂದಲ ಇದ್ದರೂ ಪ್ರಾಧಿಕಾರದಲ್ಲಿ ಬಗೆಹರಿಸಿಕೊಳ್ಳಬಹುದು. ತೆರಿಗೆ ಹೆಚ್ಚಳ ಆದೇಶ ವಾಪಸ್ ಪಡೆಯುವ ಪ್ರಶ್ನೆಯೇ ಇಲ್ಲ' ಎಂದು ಬಿಡಿಎ ಆರ್ಥಿಕ ಸದಸ್ಯ ಲೋಕೇಶ್ ಸ್ಪಷ್ಟಪಡಿಸಿದರು.

'ಸರ್ಕಾರದಿಂದ ಪ್ರಾಧಿಕಾರಕ್ಕೆ ಯಾವುದೇ ಅನುದಾನ ಇಲ್ಲ. ಹಲವು ವರ್ಷಗಳಿಂದ ಕೋಟ್ಯಂತರ ರೂಪಾಯಿ ತೆರಿಗೆ ಪಾವತಿಯಾಗದೇ ಬಾಕಿಯಿದೆ. ಎಲ್ಲರಿಗೂ ನೋಟಿಸ್ ಕಳುಹಿಸಲಾಗಿದೆ' ಎಂದು ಹೇಳಿದರು.

'ಅವೈಜ್ಞಾನಿಕ ತೆರಿಗೆ ಬೇಡ'

ನಾಡಪ್ರಭು ಕೆಂಪೇಗೌಡ ಬಡಾವಣೆಯಲ್ಲಿ ನಿವೇಶನ ಮತ್ತು ಕಟ್ಟಡಗಳಿಗೆ ಅವೈಜ್ಞಾನಿಕವಾಗಿ ತೆರಿಗೆ ದರ ಪರಿಷ್ಕರಿಸುವ ಮೂಲಕ ಬೆಲೆ ಹೆಚ್ಚಳ ಬಿಸಿ ತಟ್ಟಿಸಲಾಗಿದೆ ಎಂದು ಶಾಸಕ ಎಸ್.ಸುರೇಶ್ ಕುಮಾರ್ ಆರೋಪಿಸಿದ್ದಾರೆ.

ಬಡಾವಣೆಯನ್ನು ಸಂಪೂರ್ಣವಾಗಿ ಅಭಿವೃದ್ಧಿಪಡಿಸಿ ಅಂತಿಮ ಮಾಲೀಕತ್ವ ಪ್ರಮಾಣಪತ್ರ ನೀಡುವವರೆಗೆ ಅವೈಜ್ಞಾನಿಕವಾಗಿ ವಿಧಿಸಿರುವ ತೆರಿಗೆಯನ್ನು ವಾಪಸ್ ಪಡೆಯಬೇಕು ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರಿಗೆ ಬರೆದಿರುವ ಪತ್ರದಲ್ಲಿ ಅವರು ಆಗ್ರಹಿಸಿದ್ದಾರೆ.

ಕೆಲವು ಪ್ರಕರಣದಲ್ಲಿ ಶೇ 10ರಿಂದ 50ರಷ್ಟು ಹೆಚ್ಚಿಸಿರುವುದು ದಿಗ್ಭ್ರಮೆ ಉಂಟು ಮಾಡಿದೆ. ಮೂಲ ಸೌಕರ್ಯಗಳ ಕೊರತೆಯಿಂದಾಗಿ ನಿವೇಶನ ಮಾಲೀಕರು ಮನೆಯನ್ನು ನಿರ್ಮಿಸಲು ಸಾಧ್ಯವಾಗದ ತ್ರಿಶಂಕು ಪರಿಸ್ಥಿತಿಯಲ್ಲಿದ್ದಾರೆ. ತೆರಿಗೆ ಹೆಚ್ಚಳ ಬಗ್ಗೆ ಘೋಷಣೆಯನ್ನು ಹೊರಡಿಸದೆ ಏಕಾಏಕಿ ತಂತ್ರಾಂಶದಲ್ಲಿ ಆಸ್ತಿ ತೆರಿಗೆಯನ್ನು ಹೆಚ್ಚಳ ಮಾಡಲಾಗಿದೆ. ಈ ಮೂಲಕ ನಿವೇಶನದಾರರಿಗೆ ತೆರಿಗೆ ಪಾವತಿಸುವಂತೆ ಒತ್ತಡ ಹಾಕುವುದು ಬಲವಂತದ ಕ್ರಮವಾಗಿದೆ ಎಂದು ಹೇಳಿದ್ದಾರೆ.

'ಕೇರಳ: ಮೇ 27ಕ್ಕೆ ಮುಂಗಾರು'

ಪ್ರಜಾವಾಣಿ ವಾರ್ತೆ

ನವದೆಹಲಿ: ಈ ಬಾರಿ ನೈರುತ್ಯ ಮುಂಗಾರು ಮೇ 27ರಂದು ಕೇರಳ ಪ್ರವೇಶಿಸುವ ಸಾಧ್ಯತೆಯಿದೆ ಎಂದು ಭಾರತೀಯ ಹವಾಮಾನ ಇಲಾಖೆ (ಐಎಂಡಿ) ಶನಿವಾರ ತಿಳಿಸಿದೆ.

ಇದು ಖಾರಿಫ್ ಬಿತ್ತನೆ ಋತುವಿನ ಮೇಲೆ ಸಕಾರಾತ್ಮಕ ಪರಿಣಾಮ ಬೀರಲಿದೆ ಎಂದು ನಿರೀಕ್ಷಿಸಲಾಗಿದೆ.

2025ರ ಮುಂಗಾರು ಋತುವಿನಲ್ಲಿ ವಾಡಿಕೆಗಿಂತ ಹೆಚ್ಚಿನ ಮಳೆ ಸುರಿಯಲಿದೆ ಎಂದು ಏಪ್ರಿಲ್‌ನಲ್ಲಿ ಮುನ್ಸೂಚನೆ ನೀಡಿದ್ದ ಐಎಂಡಿ, ಎಲ್ ನಿನೊ ಸಾಧ್ಯತೆಯನ್ನು ತಳ್ಳಿಹಾಕಿತ್ತು.



'ನಾಲ್ಕು ತಿಂಗಳ ಮುಂಗಾರು ಋತುವಿನಲ್ಲಿ (ಜೂನ್‌ನಿಂದ ಸೆಪ್ಟೆಂಬರ್) ಹೆಚ್ಚು ಮಳೆಯಾಗುವ ಸಾಧ್ಯತೆಯಿದೆ. ಶೇ 105ರಷ್ಟು ಮಳೆಯಾಗಲಿದ್ದು, ಸರಾಸರಿ 87 ಸೆಂ.ಮೀ. ವರ್ಷಧಾರೆ ಸುರಿಯಲಿದೆ ಎಂದು ಅಂದಾಜಿಸಲಾಗಿದೆ' ಎಂದು ಭೂವಿಜ್ಞಾನ ಸಚಿವಾಲಯದ ಕಾರ್ಯದರ್ಶಿ ಎಂ.ರವಿಚಂದ್ರನ್ ಹೇಳಿದ್ದಾರೆ.

ಮಧ್ಯಪ್ರದೇಶ, ರಾಜಸ್ಥಾನ, ಮಹಾರಾಷ್ಟ್ರ, ಒಡಿಶಾ, ಛತ್ತೀಸಗಢದಲ್ಲಿ ಹೆಚ್ಚಿನ ಮಳೆಯಾಗುವ ನಿರೀಕ್ಷೆಯಿದ್ದರೆ, ಜಮ್ಮು ಮತ್ತು ಕಾಶ್ಮೀರ, ಲಡಾಖ್, ತಮಿಳುನಾಡು, ಬಿಹಾರ ಹಾಗೂ ಈಶಾನ್ಯ ರಾಜ್ಯಗಳಲ್ಲಿ ವಾಡಿಕೆಗಿಂತ ಕಡಿಮೆ ಮಳೆಯಾಗಬಹುದು.

ಸುದ್ದಿ 2 ನಿಮಿಷ

ಕನ್ನಡ ಸಾಹಿತ್ಯಕ್ಕೆ ವೀರಶೈವ ಕವಿಗಳ ಕೊಡುಗೆ ಅಪಾರ: ಸಿದ್ಧಲಿಂಗಶ್ರೀ

ಬೆಂಗಳೂರು: ಕನ್ನಡ ಸಾಹಿತ್ಯ ಕ್ಷೇತ್ರಕ್ಕೆ ವೀರಶೈವ ಕವಿಗಳು ಮಹತ್ವವಾದ ಕೃತಿಗಳನ್ನು ನೀಡಿದ್ದಾರೆ ಎಂದು ತುಮಕೂರು ಸಿದ್ದಗಂಗಾ ಮಠದ ಸಿದ್ಧಲಿಂಗ ಸ್ವಾಮೀಜಿ ಹೇಳಿದರು.

ಸುಮಾ ಪ್ರಕಾಶನ, ಜ್ಞಾನ ಸಂಬುದ್ಧ ಪ್ರಕಾಶನ ಶನಿವಾರ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ 'ವೀರಶೈವ ಶತಕ ಸಾಹಿತ್ಯ' ಕೃತಿ ಬಿಡುಗಡೆ, ಎಸ್.ಆರ್. ಸದಾಶಿವಯ್ಯ ಅವರ 73ನೇ ಜನ್ಮ ದಿನೋತ್ಸವ ಸಮಾರಂಭದಲ್ಲಿ ಅವರು ಮಾತನಾಡಿದರು.

'ಶತಕ ಸಾಹಿತ್ಯವು ಕನ್ನಡದ ಪ್ರಕಾರಗಳಲ್ಲಿ ಒಂದಾಗಿದೆ. ಇದು ಸಂಸ್ಕೃತ ಶತಕಗಳಿಗಿಂತ ಬೇರೆಯೇ ಸ್ವರೂಪವನ್ನು ಹೊಂದಿದೆ. ಸಮನ್ವಯ ಜೀವನದ ವಿವೇಕವನ್ನು ಕನ್ನಡದ ಶತಕಗಳು ಪ್ರತಿಪಾದಿಸಿವೆ' ಎಂದು ವಿವರಿಸಿದರು.

ಭಕ್ತಿ, ಜ್ಞಾನ, ವೈರಾಗ್ಯ, ಶರಣ ತತ್ವ, ಲೋಕನೀತಿ ಸ್ಥಾನ, ಲೋಕಾನುಭವ ಇವುಗಳು ಶತಕಗಳ ವಿಷಯವಾಗಿದ್ದು ವೀರಶೈವ ಶತಕ ಸಾಹಿತ್ಯವು ಕನ್ನಡದ ಧಾರ್ಮಿಕ ತಾತ್ವಿಕ ಸಾಹಿತ್ಯವಾಗಿದ್ದು ಬಸವಾದಿ ಶರಣರು ಪ್ರತಿಪಾದಿಸಿದ ಸಕಲರಿಗೆ ಲೇಸು ಬಯಸುವ ಉದಾತ್ತ ಮೌಲ್ಯಗಳು, ಅನುಭಾವಿಕ ಆಯಾಮಗಳು ಇವುಗಳ ಮುಖ್ಯ ಉದ್ದೇಶ ಎಂದರು.

ವಿ.ಸೋಮಣ್ಣ ಪ್ರತಿಷ್ಠಾನ ಅಧ್ಯಕ್ಷೆ ಶೈಲಜಾ ಸೋಮಣ್ಣ ಮಾತನಾಡಿ, 'ಕವಿ ಹರಿಹರರಿಂದ ಹಿಡಿದು ಇಲ್ಲಿಯವರೆಗೆ ಕನ್ನಡದ ಕವಿ ಪರಂಪರೆ ನಾಡಿಗೆ ದೊಡ್ಡ ಕೊಡುಗೆಯನ್ನು ನೀಡಿದೆ. ವೀರಶೈವ ಧರ್ಮವು ಎಲ್ಲರನ್ನು ಅಪ್ಪಿಕೊಂಡು ಸನ್ಮಾರ್ಗದಲ್ಲಿ ನಡೆಯುವ ತತ್ವವನ್ನು ಹೇಳಿದೆ' ಎಂದರು.

ಸಮಸ್ಯೆ ಹೇಳಿಕೊಂಡ ನಾಗರಿಕರು



ಬೆಂಗಳೂರು: ಸಂಚಾರ ಪೊಲೀಸ್ ಇಲಾಖೆಯ ಪಶ್ಚಿಮ ವಿಭಾಗದ ವತಿಯಿಂದ ಮಾಗಡಿ ಮುಖ್ಯರಸ್ತೆಯ ಕೊಟ್ಟಿಗೆಪಾಳ್ಯದ ರಾಷ್ಟ್ರೀಯ ಯುನಾನಿ ವೈದ್ಯಕೀಯ ಸಂಸ್ಥೆಯ ಸಭಾಂಗಣದಲ್ಲಿ ಶನಿವಾರ ನಗರ ಪೊಲೀಸ್ ಕಮಿಷನರ್ ಬಿ.ದಯಾನಂದ ಅವರ ಅಧ್ಯಕ್ಷತೆಯಲ್ಲಿ ಸಂಚಾರ ಸಂಪರ್ಕ ದಿನ ನಡೆಯಿತು.

ಸಭೆಯಲ್ಲಿ ವಿವಿಧ ಬಡಾವಣೆಯ ನಿವಾಸಿಗಳು ಪಾಲ್ಗೊಂಡು ತಮ್ಮ ಭಾಗದ ಸಮಸ್ಯೆಗಳ ಕುರಿತು ಬೆಳಕು ಚೆಲ್ಲಿದರು.

ಸಂಚಾರ ದಟ್ಟಣೆ, ಪಾದಚಾರಿ ಮಾರ್ಗಗಳ ಒತ್ತುವರಿ, ಸಾರ್ವಜನಿಕ ಸ್ಥಳಗಳಲ್ಲಿ ಕಸ ಸುರಿಯುವಿಕೆ, ಏಕಮುಖ ಮಾರ್ಗದಲ್ಲಿ ವಾಹನಗಳ ಸಂಚಾರ, ಅತಿವೇಗದ ಚಾಲನೆ, ವ್ಹೀಲಿ ಸೇರಿ ವಿವಿಧ ಸಮಸ್ಯೆಗಳ ಕುರಿತು ಸಭೆಯಲ್ಲಿ ಸಾರ್ವಜನಿಕರು ಗಮನ ಸೆಳೆದರು.

ಕೊಟ್ಟಿಗೆಪಾಳ್ಯದ ಬಸ್ ನಿಲ್ದಾಣದ ಬಳಿ ರಸ್ತೆ ದಾಟುವುದಕ್ಕೆ ಜನರಿಗೆ ತೀವ್ರ ಸಮಸ್ಯೆ ಆಗುತ್ತಿದೆ. ಅದನ್ನು ಬಗೆಹರಿಸಿ. ಸುಮನಹಳ್ಳಿ ಬಳಿಯಿರುವ ಸ್ಕೈವಾಕ್ ಅನ್ನು ಯಾರೂ ಬಳಸುತ್ತಿಲ್ಲ. ಅದನ್ನು ಕೊಟ್ಟಿಗೆಪಾಳ್ಯಕ್ಕೆ ಸ್ಥಳಾಂತರ ಮಾಡಿದರೆ ಅನುಕೂಲ ಆಗಲಿದೆ ಎಂದು ಸ್ಥಳೀಯ ನಿವಾಸಿ ಗಿರೀಶ್ ಕುಮಾರ್ ಕೋರಿದರು. ಸಂಚಾರ ವಿಭಾಗದ ಜಂಟಿ ಪೊಲೀಸ್ ಕಮಿಷನರ್ ಎಂ.ಎನ್.ಅನುಚೇತ್ ಹಾಜರಿದ್ದರು.

ಸಂಕ್ಷಿಪ್ತ ಸುದ್ದಿ

ಮಹಾರಾಷ್ಟ್ರ: 3 ಮಹಿಳೆಯರ ಕೊಂದ ಹುಲಿ



ಚಂದ್ರಾಪುರ (ಪಿಟಿಐ): ಮಹಾರಾಷ್ಟ್ರದ ಚಂದ್ರಾಪುರ ಜಿಲ್ಲೆಯಲ್ಲಿ ಹುಲಿಯೊಂದು ಮೂವರು ಮಹಿಳೆಯರನ್ನು ಶನಿವಾರ ಬೆಳಿಗ್ಗೆ ಕೊಂದಿದೆ ಎಂದು ಅರಣ್ಯ ಅಧಿಕಾರಿಗಳು ತಿಳಿಸಿದ್ದಾರೆ.

ಹುಲಿಯು ಏಕಕಾಲದಲ್ಲಿ ಮೂವರನ್ನು ಕೊಂದಿರುವ ಈ ಆಘಾತಕಾರಿ ಘಟನೆಯು ಸಿಂದೆವಾಹಿ ಅರಣ್ಯ ಪ್ರದೇಶದಲ್ಲಿ ನಡೆದಿದೆ.

ಮೆಂಢಾ ಮಲ್ ಗ್ರಾಮದ ಮಹಿಳೆಯರು ತೆಂಡು ಎಲೆಗಳನ್ನು ಸಂಗ್ರಹಿಸಲು ಅರಣ್ಯಕ್ಕೆ ತೆರಳಿದ್ದರು. 11.30ರ ವೇಳೆಗೆ ಇವರ ಮೇಲೆ ದಾಳಿ ಮಾಡಿದ ಹುಲಿಯು ಎಲ್ಲರನ್ನೂ ಕೊಂದು ಹಾಕಿದೆ. ಕಾಂತಾಬಾಯಿ ಚೌಧರಿ (60), ಇವರ ಸೊಸೆ ಶುಭಾಂಗಿ ಚೌಧರಿ (38) ಹಾಗೂ ಸಾರಿಕಾ ಶಿಂದೆ ಮೃತರು.

ಸಿಂದೆವಾಹಿ ಸರ್ಕಾರಿ ಆಸ್ಪತ್ರೆಯಲ್ಲಿ ಮೃತದೇಹಗಳ ಮರಣೋತ್ತರ ಪರೀಕ್ಷೆ ನಡೆಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಘಟನೆ ನಡೆದ ಸ್ಥಳದಿಂದ 5 ಕಿ.ಮೀ ದೂರದಲ್ಲಿ 50 ವರ್ಷದ ಮಹಿಳೆಯೊಬ್ಬರ ಮೇಲೆ ಹುಲಿಯೊಂದು ದಾಳಿ ಮಾಡಿರುವ ಪ್ರತ್ಯೇಕ ಘಟನೆ ನಡೆದಿದೆ.

16ರಿಂದ ಸಿಎ ಪರೀಕ್ಷೆ

ನವದೆಹಲಿ (ಪಿಟಿಐ): ಭಾರತೀಯ ಲೆಕ್ಕ ಪರಿಶೋಧಕರ ಸಂಸ್ಥೆಯು (ಐಸಿಎಐ) ಮೇ 16ರಿಂದ 24ರ ವರೆಗೆ ಅಂತಿಮ ಸಿಎ, ಸಿಎ ಮಧ್ಯಂತರ (ಇಂಟರ್‌ಮೀಡಿಯೆಟ್) ಮತ್ತು ಮೌಲ್ಯಮಾಪನ ಪರೀಕ್ಷೆಯನ್ನು ನಡೆಸಲಿದೆ.

ನಿಗದಿತ ವೇಳಾಪಟ್ಟಿಯಂತೆ ಮೇ 9ರಿಂದ 14ರ ವರೆಗೆ ನಡೆಯಬೇಕಿದ್ದ ಪರೀಕ್ಷೆಯನ್ನು ದೇಶದಲ್ಲಿ ತಲೆದೋರಿರುವ ಉದ್ವಿಗ್ನ ಸ್ಥಿತಿಯಿಂದಾಗಿ ಮುಂದೂಡಲಾಗಿತ್ತು.

55,666 ವಿದ್ಯಾರ್ಥಿಗಳು ಅಂತಿಮ ಪರೀಕ್ಷೆ ಹಾಗೂ 1.02 ಲಕ್ಷ ವಿದ್ಯಾರ್ಥಿಗಳು ಸಿಎ ಮಧ್ಯಂತರ ಪರೀಕ್ಷೆಗೆ ಹೆಸರು ನೋಂದಾಯಿಸಿದ್ದಾರೆ.

ಆರ್‌ಆರ್‌ನಗರ: ದವಸ, ಧಾನ್ಯಗಳ ಜೊತೆಗೆ ರುಚಿ ರುಚಿ ಖಾದ್ಯಗಳೂ ಲಭ್ಯ

ಮೂರನೇ 'ರೈತ ಸಂತೆ'ಗೆ ಚಾಲನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜರಾಜೇಶ್ವರಿ ನಗರದ ಐಡಿಯಲ್‌ಹೋಮ್ಸ್ ಲೇಔಟ್‌ನಲ್ಲಿರುವ ಮುನಿವೆಂಕಟಯ್ಯ ಸ್ಮಾರಕ ಬಯಲು ರಂಗಮಂದಿರದಲ್ಲಿ ಶನಿವಾರದಿಂದ ಎರಡು ದಿನಗಳ 'ರೈತ ಸಂತೆ' ಆರಂಭವಾಯಿತು.

ಕರ್ನಾಟಕ ರಾಜ್ಯ ರೈತ ಸಂಘ ಮತ್ತು ಹಸಿರು ಸೇನೆಯ ಸಾಮೂಹಿಕ ನಾಯಕತ್ವದಲ್ಲಿ ಹದಿನೈದು ದಿನಗಳಿಗೊಮ್ಮೆ ಈ ರೈತ ಸಂತೆ ನಡೆಯುತ್ತಿದೆ. ಈಗಾಗಲೇ ಎರಡು ಸಂತೆಗಳು ನಡೆದಿವೆ.

'ನೇರ ಮಾರಾಟದ ಮೂಲಕ ನಮ್ಮ ಹೋರಾಟ' – 'ನಮ್ಮ ಬೆಳೆಗೆ ನಮ್ಮದೇ ಬೆಲೆ' ಶೀರ್ಷಿಕೆಯಡಿ ರೈತರು ತಮ್ಮ ಉತ್ಪನ್ನಗಳನ್ನು ನೇರವಾಗಿ ಗ್ರಾಹಕರಿಗೆ ಮಾರಾಟ ಮಾಡುವ ಪರಿಕಲ್ಪನೆಯಡಿ ಈ ರೈತ ಸಂತೆ ಆಯೋಜಿಸಲಾಗುತ್ತಿದೆ. ಭಾನುವಾರವೂ ಸಂತೆ ನಡೆಯಲಿದೆ. ಬೆಳಿಗ್ಗೆ 7 ರಿಂದ ಸಂಜೆ 5ರವರೆಗೂ ಸಂತೆ ನಡೆಯುತ್ತದೆ.



ಆರ್‌ಆರ್‌ನಗರದ ಐಡಿಯಲ್‌ಹೋಮ್ಸ್ ಲೇಔಟ್‌ನಲ್ಲಿ ಆರಂಭವಾಗಿರುವ 'ರೈತ ಸಂತೆ'

ಕಳೆದ ಎರಡು ಸಂತೆಗಳಲ್ಲಿ ರೈತರಿಗೆ ಭರಪೂರ ವ್ಯಾಪಾರವಾಗಿತ್ತು. ಗ್ರಾಹಕರಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿತ್ತು. ಗ್ರಾಹಕರ ಬೇಡಿಕೆಯ ಮೇರೆಗೆ ಪ್ರತಿ ಹದಿನೈದು ದಿನಗಳಿಗೊಮ್ಮೆ ಎರಡು ದಿನಗಳು ಸಂತೆ ಆಯೋಜಿಸಲು ತೀರ್ಮಾನಿಸಲಾಯಿತು.

ಈ ಬಾರಿಯ ಸಂತೆಗೆ ಬೇಳೆ–ಕಾಳು, ಅಡುಗೆ ಎಣ್ಣೆ, ತರಕಾರಿ– ಹಣ್ಣುಗಳ ಜೊತೆಗೆ, ಗುಂಡ್ಲುಪೇಟೆ ರೈತ ಸಂಘದ 50 ಕಾರ್ಯಕರ್ತರು ಸೇರಿ ಸಾಮೂಹಿಕ ಸಹಜ ಕೃಷಿಯಲ್ಲಿ ಬೆಳೆದಿರುವ ಸೊಪ್ಪು, ತರಕಾರಿಗಳು, ಕಲ್ಲಂಗಡಿ ಹಣ್ಣು, ಬಾಳೆಹಣ್ಣು ಬಂದಿವೆ. ಇದರ ಜೊತೆಗೆ, ಮಾವಿನ ಹಣ್ಣು, ಹಲಸಿನ ಹಣ್ಣು, ತರಕಾರಿ, ದವಸ–ಧಾನ್ಯಗಳನ್ನು ರೈತರು ತಂದಿದ್ದಾರೆ. ರಾಜ್ಯದ ವಿವಿಧೆಡೆಯಿಂದ ರೈತರು ಉತ್ಪನ್ನಗಳನ್ನು ತಂದಿದ್ದಾರೆ.

ಸಂತೆಯಲ್ಲಿ ನಿಸರ್ಗದ ಆಹಾರದ ವಿಶೇಷ ಮಳಿಗೆಯೂ ಸೇರಿದೆ. ಈ ಮಳಿಗೆಯಲ್ಲಿ ಸಜ್ಜೆ ಹಾಲು, ಬೆಣ್ಣೆ ಕಾಫಿ, ಹುರುಳಿ ಕಾಳಿನ ಪಾಯಸ, ಬೇಲದ ಹಣ್ಣಿನ ಪಾನಕ, ಸಿರಿಧಾನ್ಯದ ಪೊಂಗಲ್ ಮತ್ತು ಬಿಸಿಬೇಳೆ ಬಾತ್ ಸವಿಯಬಹುದು ಎಂದು ಆಯೋಜಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಂತೆ ಕುರಿತ ಹೆಚ್ಚಿನ ಮಾಹಿತಿಗೆ 9036654365 ಮತ್ತು 9035454365 ಸಂಪರ್ಕಿಸಬಹುದು.



ಪ್ರೊ.ಹಿ.ಶಿ.ರಾಮಚಂದ್ರ ಗೌಡ ಹಾಗೂ ಬಿ.ಎನ್‌.ಸುಮಿತ್ರಾ ಬಾಯಿಯವರಿಗೆ ಗೌರವ ದತ್ತಿ ಪ್ರಶಸ್ತಿ ಪ್ರದಾನ ಮಾಡಲಾಯಿತು. ಮನು ಬಳಿಗಾರ, ಬಿ.ಎಂ.ಪಟೇಲ್ ಪಾಂಡು, ನೇ.ಭ.ರಾಮಲಿಂಗ ಶೆಟ್ಟಿ, ಷಡಕ್ಷರಿ, ಪದ್ಮಿನಿ ನಾಗರಾಜು ಉಪಸ್ಥಿತರಿದ್ದರು

ಸಂಸ್ಥೆಗಳು ಸನ್ಮಾರ್ಗದತ್ತ ಕರೆದೊಯ್ಯಬೇಕು: ಷಡಕ್ಷರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಂಘ–ಸಂಸ್ಥೆಗಳ ಉದ್ದೇಶ ಸನ್ಮಾರ್ಗದತ್ತ ಎಲ್ಲರನ್ನೂ ಕರೆದುಕೊಂಡು ಹೋಗುವುದಾಗಿದೆ' ಎಂದು ರಮಣಶ್ರೀ ಉದ್ಯಮ ಸಂಸ್ಥೆಗಳ ಸಮೂಹದ ಮುಖ್ಯಸ್ಥ ಎಸ್. ಷಡಕ್ಷರಿ ಹೇಳಿದರು.

ಕನ್ನಡ ಸಾಹಿತ್ಯ ಪರಿಷತ್ ಮಾಜಿ ಅಧ್ಯಕ್ಷ ಮನು ಬಳಿಗಾರ ಅವರು ಸ್ಥಾಪಿಸಿರುವ ಗೌರವ ದತ್ತಿ ಪ್ರಶಸ್ತಿಗಳ ಪ್ರದಾನ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಕನ್ನಡ ಸಾಹಿತ್ಯ ಪರಿಷತ್‌ನಂತಹ ಸಂಸ್ಥೆ, ಕನ್ನಡಿಗರನ್ನು ಒಗ್ಗೂಡಿಸಿ ನಾಡು-ನುಡಿಯ ಏಳಿಗೆಗೆ ಮಿಡಿಯುವುದಾಗಿದೆ. ಹೀಗಾಗಿಯೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಗಳು ಸಾಂಸ್ಕೃತಿಕ ಸಮ್ಮೇಳನಗಳಾಗಿವೆ ಎಂದರು.

ಜಾನಪದ ತಜ್ಞ ಪ್ರೊ.ಹಿ.ಶಿ. ರಾಮಚಂದ್ರ ಗೌಡ ಮತ್ತು ವಿಮರ್ಶಕರಾದ ಬಿ.ಎನ್.ಸುಮಿತ್ರಾ ಬಾಯಿ ಅವರನ್ನು ಗೌರವ ದತ್ತಿ ಪ್ರಶಸ್ತಿ ನೀಡಿ ಪುರಸ್ಕರಿಸಲಾಯಿತು.

ಮನು ಬಳಿಗಾರ, ಕನ್ನಡ ಸಾಹಿತ್ಯ ಪರಿಷತ್‌ನ ಕೋಶಾಧ್ಯಕ್ಷ ಬಿ.ಎಂ. ಪಟೇಲ್ ಪಾಂಡು, ಗೌರವ ಕಾರ್ಯದರ್ಶಿಗಳಾದ ನೇ.ಭ.ರಾಮಲಿಂಗ ಶೆಟ್ಟಿ, ಪದ್ಮಿನಿ ನಾಗರಾಜು ಭಾಗವಹಿಸಿದ್ದರು.



ಕೊಮ್ಮಘಟ್ಟ ಬಳಿಯ ಬಸವೇಶ್ವರನಗರದಲ್ಲಿ ಒಳಚರಂಡಿ ಕಾಮಗಾರಿಗೆ ಶಾಸಕ ಎಸ್‌.ಟಿ.ಸೋಮಶೇಖರ್ ಚಾಲನೆ ನೀಡಿ ಮಾತನಾಡಿದರು

'ಒಳಚರಂಡಿ ಬಳಿಕ ಕಾವೇರಿ ಸಂಪರ್ಕ'

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ವಿವಿಧ ಕಾಮಗಾರಿಗಳಿಗೆ ಚಾಲನೆ
- ಗ್ರೇಟರ್ ಬೆಂಗಳೂರು ಮಾಡುವುದರಿಂದ ನಗರದ ಪ್ರಗತಿ ಸಾಧ್ಯ: ಶಾಸಕ

ರಾಜರಾಜೇಶ್ವರಿನಗರ: 'ಸೂಲಿಕೆರೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಬಸವೇಶ್ವರ ನಗರದಲ್ಲಿ ಒಳಚರಂಡಿ ಕಾಮಗಾರಿ ಪೂರ್ಣಗೊಂಡ ನಂತರ ಕಾವೇರಿ ನೀರಿನ ಸಂಪರ್ಕ ಕಲ್ಪಿಸಲಾಗುವುದು' ಎಂದು ಶಾಸಕ ಎಸ್‌.ಟಿ.ಸೋಮಶೇಖರ್ ತಿಳಿಸಿದರು.

ಬಸವೇಶ್ವರ ನಗರದಲ್ಲಿ ಒಳಚರಂಡಿ, ಸಿ.ಸಿ ರಸ್ತೆ ಕಾಮಗಾರಿಗೆ ಚಾಲನೆ ನೀಡಿ ಮಾತನಾಡಿದ ಅವರು, 'ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ (ಬಿಡಿಎ) ಕೆಂಪೇಗೌಡ ಬಡಾವಣೆಗೆ ಹೊಂದಿಕೊಂಡಿರುವ 14 ಗ್ರಾಮಗಳ ವ್ಯಾಪ್ತಿಯಲ್ಲಿ ₹55 ಕೋಟಿ ವೆಚ್ಚದಲ್ಲಿ ಒಳಚರಂಡಿ ಕಾಮಗಾರಿಗೆ ಚಾಲನೆ ನೀಡಲಾಗಿದೆ' ಎಂದು ತಿಳಿಸಿದರು.

'ಗ್ರೇಟರ್ ಬೆಂಗಳೂರು ವಿಧೇಯಕಕ್ಕೆ ರಾಜ್ಯಪಾಲರು ಸಹಿ ಹಾಕಿದರೆ, ಇದಕ್ಕೆ ಹಲವರು ವಿರೋಧ ವ್ಯಕ್ತಪಡಿಸುತ್ತಿದ್ದಾರೆ. ಇದು ಸರಿಯಲ್ಲ. ಗ್ರೇಟರ್ ಬೆಂಗಳೂರು ಮಾಡುವುದರಿಂದ ಬೆಂಗಳೂರು ಪ್ರಗತಿ ಕಾಣಲಿದೆ' ಎಂದರು.

ಸೂಲಿಕೆರೆ ಗ್ರಾಮ ಪಂಚಾಯಿತಿ ಸದಸ್ಯ ಎಸ್.ಆರ್.ಮೋಹನ್ ಕುಮಾರ್, ಕಾಂಗ್ರೆಸ್ ಮುಖಂಡ ಕೆ.ಎಚ್. ತಿಮ್ಮೇಗೌಡ, ಗ್ರಾಮ ಪಂಚಾಯಿತಿ ಅಧ್ಯಕ್ಷ ಚಿಕ್ಕಣ್ಣ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ವೀರಭದ್ರಸ್ವಾಮಿ, ಕಾರ್ಯದರ್ಶಿ ಉಮಾದೇವಿ, ಬಯಲು ಬಸವೇಶ್ವರ ಹಿರಿಯ ನಾಗರಿಕ ವೇದಿಕೆಯ ಮುಖಂಡರು ಕಾರ್ಯಕ್ರಮದಲ್ಲಿ ಹಾಜರಿದ್ದರು.

ಬ್ಯಾಂಕ್ ನೌಕರರಿಗೆ ಹಲವು ಸವಾಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬ್ಯಾಂಕ್ ನೌಕರರ ಮುಂದೆ ಸಾಕಷ್ಟು ಸವಾಲುಗಳಿವೆ. ಬದುಕಿಗಾಗಿ ಹೋರಾಡಬೇಕು ಮತ್ತು ಹೋರಾಡಲು ಬದುಕಬೇಕು ಎಂದು ಅಖಿಲ ಭಾರತ ಬ್ಯಾಂಕ್ ನೌಕರರ ಸಂಘದ (ಎಐಬಿಇಎ) ಪ್ರಧಾನ ಕಾರ್ಯದರ್ಶಿ ಸಿ.ಎಚ್.ವೆಂಕಟಾಚಲಂ ಅವರು ಕರೆ ನೀಡಿದರು.

ಸೆಂಟ್ರಲ್ ಕಾಲೇಜಿನಲ್ಲಿ ಶನಿವಾರ ಆಯೋಜಿಸಿದ್ದ ಕೆನರಾ ಬ್ಯಾಂಕ್ ನೌಕರರ ಸಂಘದ(ಸಿಬಿಇಯು) ಅಮೃತ ಮಹೋತ್ಸವ ಸಮಾರಂಭದಲ್ಲಿ ಮಾತನಾಡಿದರು.

ಆಡಳಿತ ಮಂಡಳಿ, ಸರ್ಕಾರದ ನೀತಿಗಳ ವಿರುದ್ಧ ಹಿಂದಿನಿಂದಲೂ ಹೋರಾಟ ನಡೆಸಿಕೊಂಡು ಬಂದಿದ್ದೇವೆ. ಮುಂದೆಯೂ ಹೋರಾಟ ನಡೆಸಬೇಕಾಗಿದೆ. ವಿದೇಶಿ ಬಂಡವಾಳ ಹೂಡಿಕೆಯನ್ನು ವಿರೋಧಿಸಿದ್ದೇವೆ. ದೇಶದ ಹಿತ ಕಾಯುವುದು ಸಂಘಟನೆಯ ಧ್ಯೇಯವಾಗಿದೆ ಎಂದು ಸ್ಪಷ್ಟಪಡಿಸಿದರು.

1951ರಲ್ಲಿ ಕೆನರಾ ಬ್ಯಾಂಕ್ ನೌಕರರ ಸಂಘ ಪ್ರಾರಂಭವಾಯಿತು. ಇದಕ್ಕೂ ಮುಂಚೆ ಬ್ಯಾಂಕಿಂಗ್ ಕ್ಷೇತ್ರದಲ್ಲಿ ನೌಕರರ ಸ್ಥಿತಿ ಶೋಚನೀಯವಾಗಿತ್ತು. ಇದನ್ನು ವಿರೋಧಿಸಿದರೆ, ಪ್ರತಿಭಟನೆ ಮಾಡಿದರೆ ಅಂತಹವರನ್ನು ಸೇವೆಯಿಂದ ವಜಾ ಮಾಡಲಾಗುತ್ತಿತ್ತು. ಇದನ್ನೆಲ್ಲಾ ಮನಗಂಡು ಸಂಘ ಸ್ಥಾಪಿಸಿ ನೌಕರರ ಕ್ಷೇಮಾಭಿವೃದ್ಧಿಗೆ ಶ್ರಮಿಸಲಾಗುತ್ತಿದೆ ಎಂದು ವಿವರಿಸಿದರು.



ನಗರದಲ್ಲಿ ಶನಿವಾರ ಆಯೋಜಿಸಿದ್ದ ಕೆನರಾ ಬ್ಯಾಂಕ್ ನೌಕರರ ಸಂಘದ(ಸಿಬಿಇಯು) ಅಮೃತ ಮಹೋತ್ಸವ ಸಮಾರಂಭದಲ್ಲಿ ಸಿ.ಎಚ್. ವೆಂಕಟಾಚಲಂ, ಎಂ.ಎಸ್‌.ಶ್ರೀನಿವಾಸನ್, ಬಿ.ರಾಮಪ್ರಕಾಶ್ ಪಾಲ್ಗೊಂಡಿದ್ದರು

ಕೆನರಾ ಬ್ಯಾಂಕ್ ವ್ಯವಸ್ಥಾಪಕ ನಿರ್ದೇಶಕ ಕೆ.ಸತ್ಯನಾರಾಯಣ ರಾಜು ಮಾತನಾಡಿ, ₹17 ಸಾವಿರ ಕೋಟಿ ಠೇವಣಿ ಸಂಗ್ರಹಿಸಿದ್ದು, ಬ್ಯಾಂಕಿಂಗ್ ಕ್ಷೇತ್ರದಲ್ಲಿ ಚರಿತ್ರೆ ನಿರ್ಮಾಣವಾಗಿದೆ ಎಂದರು.

ಸಿಬಿಇಯು ಅಧ್ಯಕ್ಷ ಎಂ.ಎಸ್. ಶ್ರೀನಿವಾಸನ್, ಪ್ರಧಾನ ಕಾರ್ಯದರ್ಶಿ ಬಿ.ರಾಮಪ್ರಕಾಶ್, ಮಾಜಿ ಅಧ್ಯಕ್ಷ ಎ.ಶಶಿಕಾಂತ್, ಎಐಬಿಇಎ ಜಂಟಿ ಕಾರ್ಯದರ್ಶಿಗಳಾದ ಅನಿರುದ್ಧ್ ಕುಮಾರ್, ಎಂ.ಜಯಂತ್, ಮಾಜಿ ಉಪಾಧ್ಯಕ್ಷ ಎಚ್.ವಸಂತ್ ರೈ, ಮಹಿಳಾ ಕೌನ್ಸಿಲ್‌ನ ರಾಷ್ಟ್ರೀಯ ಸಂಚಾಲಕಿ ರಿಚಾ ಗಾಂಧಿ ಮತ್ತಿತರರು ಉಪಸ್ಥಿತರಿದ್ದರು.

ನಗರದಲ್ಲಿ ಇಂದು

ಅನ್ನಪೂರ್ಣಾಂ ಸಮೇತ ನಗರೇಶ್ವರ ಸ್ವಾಮಿಯ ಬ್ರಹ್ಮ ರಥೋತ್ಸವ: ಬೆಳಿಗ್ಗೆ 7ಕ್ಕೆ ಮೂಲ ದೇವರಿಗೆ ಪಂಚಾಮೃತ ಅಭಿಷೇಕ, 8ಕ್ಕೆ ಕಲಶ ಸ್ಥಾಪನೆ, ನಗರೇಶ್ವರ ಸ್ವಾಮಿಗೆ ಏಕವಾರ ರುದ್ರಾಭಿಷೇಕ ಅಗ್ನಿಪ್ರತಿಷ್ಠಾಪನೆ, ಗಣಪತಿ, ನವಗ್ರಹ, ಪರಿವಾರ ದೇವತಾ ಸಹಿತ ಮಹಾ ಹೋಮ, ಮಧ್ಯಾಹ್ನ 12.30ಕ್ಕೆ ಪೂರ್ಣಾಹುತಿ, ಮಹಾಮಂಗಳಾರತಿ, 2ಕ್ಕೆ ಗಿರಿಜಾ ಕಲ್ಯಾಣೋತ್ಸವ, ಸಂಜೆ 4.30ಕ್ಕೆ ಅಡ್ಡಪಲ್ಲಕ್ಕಿ ಪ್ರಾಕಾರೋತ್ಸವ, 5ಕ್ಕೆ ಚಿಕ್ಕರಥದಲ್ಲಿ ರಾಜಬೀದಿ ಮೆರವಣಿಗೆ, ಪುಷ್ಪಯಾಗ, ದಾಸೋಹ, ಆಯೋಜನೆ ಮತ್ತು ಸ್ಥಳ: ಬಿ.ಎ.ಎಸ್.ವಿ. (ನಗರ್ತ) ಸಮಿತಿ, ನಗರೇಶ್ವರಸ್ವಾಮಿ ದೇವಾಲಯದ ಆವರಣ, ನಗರ್ತರಪೇಟೆ

ಮಹಾಗಣಪತಿ, ಅನ್ನಪೂರ್ಣೇಶ್ವರಿ, ಮುನೇಶ್ವರ ಸ್ವಾಮಿ ವಾರ್ಷಿಕೋತ್ಸವ, ದೇವಾಲಯದ ಜೀರ್ಣೋದ್ಧಾರದ 25ನೇ ವಾರ್ಷಿಕೋತ್ಸವ: ಬೆಳಿಗ್ಗೆ 8ಕ್ಕೆ ವೇದಿಕಾರ್ಚನೆ, ಚಂಡಿಕಾ ಹೋಮ, 13 ಅಧ್ಯಾಯಗಳ ಹೋಮ ಪ್ರಾರಂಭ, ಕನ್ನಿಕಾ ಪೂಜೆ, ಸುಮಂಗಲಿ ಪೂಜೆ, ದಂಪತಿ ಪೂಜೆ, ಮಹಾ ಪೂರ್ಣಾಹುತಿ, ವಿಮಾನ ಗೋಪುರ ಹಾಗೂ ರಾಜ ಗೋಪುರಕ್ಕೆ ಕುಂಭಾಭಿಷೇಕ, ಮಹಾಮಂಗಳಾರತಿ, ತೀರ್ಥ ಪ್ರಸಾದ ವಿನಿಯೋಗ, ಸಾನ್ನಿಧ್ಯ: ನಂಜಾವಧೂತ ಸ್ವಾಮೀಜಿ, ಸಿದ್ಧಲಿಂಗ ಸ್ವಾಮೀಜಿ, ಅತಿಥಿಗಳು: ಡಿ.ಕೆ. ಶಿವಕುಮಾರ್, ಡಾ.ಸಿ. ಎನ್. ಅಶ್ವತ್ಥನಾರಾಯಣ, ಎಸ್.ಆರ್. ವಿಶ್ವನಾಥ್, ಡಾ.ಎಚ್.ಡಿ. ರಂಗನಾಥ್, ಬಿ.ಕೆ. ಶಿವರಾಂ, ಆಯೋಜನೆ ಮತ್ತು ಸ್ಥಳ: ಮುನೇಶ್ವರ ದೇವಸ್ಥಾನ ಟ್ರಸ್ಟ್ ಆಡಳಿತ ಮಂಡಳಿ, ಮಲ್ಲೇಶ್ವರ

ಕೌಟುಂಬಿಕ ಮಿಲನಕೂಟ: ಉದ್ಘಾಟನೆ: ಬೈರಮಂಗಲ ರಾಮೇಗೌಡ, ಅಧ್ಯಕ್ಷತೆ: ವಿ.ಎನ್. ಅನಿಲ್‌ಕುಮಾರ್, ಅತಿಥಿಗಳು: ಭವ್ಯಾ, ರಾಘವೇಂದ್ರ ಆಚಾರ್ಯ, ಟಿ.ಎನ್. ನರಸಿಂಹಮೂರ್ತಿ, ಎಚ್. ಲಿಂಗರಾಜ, ಕುಸುಮಾ ರಾಜಶೇಖರ್, ಬಿ.ಎನ್. ಶಿವಲಿಂಗ, ಆಯೋಜನೆ: ಕನ್ನಡ ಕಲಾ ಸಂಘ, ಸ್ಥಳ: ವಿ.ಎಂ. ಘಾಟ್ಗೆ ಸಭಾಂಗಣ, ಎಚ್‌ಎಎಲ್ ಮಧ್ಯ ಬಡಾವಣೆ, ಬೆಳಿಗ್ಗೆ 8ರಿಂದ



ನಿರ್ಮಲಾನಂದನಾಥ ಸ್ವಾಮೀಜಿ

ಎಸ್.ಆರ್. ಉಮಾಶಂಕರ್–60 ಅಭಿನಂದನೆ, ಗೌರವ ಗ್ರಂಥ ಬಿಡುಗಡೆ: ಸಾನ್ನಿಧ್ಯ: ನಿರ್ಮಲಾನಂದನಾಥ ಸ್ವಾಮೀಜಿ, ಸಿದ್ಧಲಿಂಗ ಸ್ವಾಮೀಜಿ, ಉದ್ಘಾಟನೆ: ಚಂದ್ರಶೇಖರ ಕಂಬಾರ, ಅಧ್ಯಕ್ಷತೆ: ನಿಶ್ಚಲಾನಂದನಾಥ ಸ್ವಾಮೀಜಿ, ಗ್ರಂಥ ಬಿಡುಗಡೆ: ಡಿ.ಕೆ. ಶಿವಕುಮಾರ್, ಅಭಿನಂದಿತರು: ಎಸ್.ಆರ್. ಉಮಾಶಂಕರ್, ಅತಿಥಿಗಳು: ರಾಮಲಿಂಗಾರೆಡ್ಡಿ, ಬರಗೂರು ರಾಮಚಂದ್ರಪ್ಪ, ಡಾ.ಸಿ.ಎನ್. ಮಂಜುನಾಥ್, ಜಯರಾಂ ರಾಯಪುರ, ಉಪಸ್ಥಿತಿ: ತುಷಾರ್ ಗಿರಿನಾಥ್, ಎಂ.ಎ. ಸಲೀಂ, ಆಯೋಜನೆ: ಎಸ್.ಆರ್. ಉಮಾಶಂಕರ್ ಐ.ಎ.ಎಸ್. ಅಭಿನಂದನಾ ಸಮಿತಿ, ವಿಶ್ವ ಒಕ್ಕಲಿಗರ ಮಹಾ ಸಂಸ್ಥಾನ ಮಠ, ಸ್ಥಳ: ಕುವೆಂಪು ಕಲಾಕ್ಷೇತ್ರ, ರಾಜ್ಯ ಒಕ್ಕಲಿಗರ ಸಂಘ, ಕೆ.ಆರ್. ರಸ್ತೆ, ವಿ.ವಿ. ಪುರ, ಸಂಜೆ 5

ಆರ್ಗ್ಯಾನಿಕ್ ಸಂತೆ: ಅತಿಥಿಗಳು: ಸಾಕ್ಷಿ ಮೇಘನಾ, ರಾಗಿಣಿ ಭಾರತೀಶ್, ಭಾರತೀಶ್ ಎಚ್.ಪಿ., ಪ್ರಮೋದ್ ಗೌರವ್ ಬಿ., ಆಯೋಜನೆ ಮತ್ತು ಸ್ಥಳ: ದಿ ಗ್ರೀನ್ ಪಾಥ್, ಮಲ್ಲೇಶ್ವರ, ಬೆಳಿಗ್ಗೆ 8

ವಿಶ್ವ ಅಮ್ಮಂದಿರ ದಿನದ ಅಂಗವಾಗಿ 110 ಮಂದಿ ಅಮ್ಮಂದಿರಿಗೆ ಗೌರವ ಪೂರ್ವಕ ಸಮರ್ಪಣಾ ಕಾರ್ಯಕ್ರಮ: ಉದ್ಘಾಟನೆ: ನರಸಮ್ಮ, ಅಧ್ಯಕ್ಷತೆ: ಸುಶೀಲಮ್ಮ, ಅತಿಥಿಗಳು: ಪುಟ್ಟಮ್ಮ, ಕಾಂತಮ್ಮ, ಹೇಮಲತಾ ಸದಾನಂದ, ಲಕ್ಷ್ಮೀ ಮೃತ್ಯುಂಜಯ, ಆಯೋಜನೆ: ಸಿರಿಗಂಧ ಸಾಹಿತ್ಯ ಮತ್ತು ಸಾಂಸ್ಕೃತಿಕ ವೇದಿಕೆ, ಸ್ಥಳ: ಸದ್ಗುರು ಸಿ.ಎಸ್.ಆರ್. ಪ್ಯಾಲೇಸ್ ಕಲ್ಯಾಣ ಮಂಟಪ, ಬೆಳಿಗ್ಗೆ 10

'ವಕ್ಫ್ ಮಸೂದೆ ತಿದ್ದುಪಡಿ–2025 ಉದ್ದೇಶ–ಪರಿಣಾಮ' ಒಂದು ಅವಲೋಕನ: ಸಂಪನ್ಮೂಲ ವ್ಯಕ್ತಿಗಳು: ಎಸ್. ಇಸ್ಮಾಯಿಲ್ ಝುಬೀಉಲ್ಲಾ, ಮುಜಿಬುಲ್ಲಾ ಜಫಾರಿ, ಸೈಯದ್ ಶಫೀಉಲ್ಲಾ ಸಾಬ್, ಭಾಗವಹಿಸುವವರು: ಕೆ.ಎಸ್. ವಿಮಲಾ, ಗೌರಮ್ಮ, ಅಬ್ದುಲ್ ಗಫೂರ್, ಜಾವೀದ್ ಅಹ್ಮದ್, ಖಾಸಿಂಸಾಬ್, ಕೆ. ಫೈರೋಜ್, ಫಾರೂಕ್, ಆಯೋಜನೆ: ಇನ್ಸಾಫ್ ಕರ್ನಾಟಕ–ಬೆಂಗಳೂರು, ಸ್ಥಳ: ಸೌಹಾರ್ದ ನಂ.1, ಒಂದನೇ ಕ್ರಾಸ್ ಸಿಎಸ್‌ಐ ಕಾಂಪೌಂಡ್, ಸುಬ್ಬಯ್ಯ ವೃತ್ತ, ಮಿಷನ್ ರಸ್ತೆ, ಬೆಳಿಗ್ಗೆ 10.30

ವಿಶ್ವ ತಾಯಂದಿರ ದಿನಾಚರಣೆ ಕವಿಗೋಷ್ಠಿ, ಅಮ್ಮನ ಹಾಡುಗಳ ಗಾಯನ, ಪ್ರಶಸ್ತಿ ಪ್ರದಾನ: ವಿ.ಟಿ. ರಾಮಕೃಷ್ಣಯ್ಯ, ಅಧ್ಯಕ್ಷತೆ: ಬಿ. ಶೃಂಗೇಶ್ವರ್, ಅತಿಥಿಗಳು: ವಿ. ಮಲ್ಲಿಕಾರ್ಜುನಯ್ಯ, ಕೆ.ವಿ. ಲಕ್ಷ್ಮಣಮೂರ್ತಿ, ಉಪಸ್ಥಿತಿ: ಬಿ.ಎನ್. ಮಹದೇವ್, ನಾಗೇಶ್ ಡಿ. ಪಾಟಕ್, ಕುವರ ಯಲ್ಲಪ್ಪ, ಆಯೋಜನೆ: ಸಮ್ಮಿಲನ, ಸ್ಥಳ: ಕೆನ್ ಕಲಾಶಾಲೆ, ಶೇಷಾದ್ರಿಪುರ, ಬೆಳಿಗ್ಗೆ 10.30ರಿಂದ

ಗೌರಿಸುಂದರ ವಾರ್ಷಿಕ ಪ್ರಶಸ್ತಿ ಪ್ರದಾನ, ಮಂ.ಅ. ವೆಂಕಟೇಶ್ ಅವರ 'ಕರ್ನಾಟಕ ರಾಜ್ಯ ರಮಾರಮಣರು' ಪುಸ್ತಕ ಬಿಡುಗಡೆ: ಪ್ರಶಸ್ತಿ ಸ್ವೀಕರಿಸುವವರು: ಸುಷ್ಮಾ ಎಸ್.ವಿ., ಅತಿಥಿಗಳು: ಬಿ.ಆರ್. ಲಕ್ಷ್ಮಣರಾವ್, ಗುಂಡಣ್ಣ, ಎಚ್. ಗೋಪಾಲಕೃಷ್ಣ, ಆಯೋಜನೆ: ಸುಂದರ ಪ್ರಕಾಶನ, ಸ್ಥಳ: ದಿ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್, ಬಿ.ಪಿ. ವಾಡಿಯಾ ರಸ್ತೆ, ಬಸವನಗುಡಿ, ಬೆಳಿಗ್ಗೆ 11



ಬಿ.ಆರ್. ಲಕ್ಷ್ಮಣರಾವ್



ಎಸ್‌.ಜಿ. ಸಿದ್ಧರಾಮಯ್ಯ

ಜಗಜ್ಯೋತಿ ಬಸವೇಶ್ವರರ ಜಯಂತಿ, ಶಿವಕುಮಾರ ಸ್ವಾಮೀಜಿ ಜಯಂತಿ, 'ಶರಣ ಮುಕುಟ' ಪ್ರಶಸ್ತಿ ಪ್ರದಾನ: ಸಿ. ಸೋಮಶೇಖರ್, ಸಾನ್ನಿಧ್ಯ: ಬಸವರಾಜೇಂದ್ರ ಸ್ವಾಮೀಜಿ, ಪ್ರಶಸ್ತಿ ಸ್ವೀಕರಿಸುವವರು: ಎಸ್.ಜಿ. ಸಿದ್ಧರಾಮಯ್ಯ, ಆಯೋಜನೆ: ವೀರಶೈವ ಸೇವಾ ಸಮಾಜ, ಸ್ಥಳ: ಎಸ್.ಎಂ. ಕಲ್ಯಾಣ ಮಂಟಪ, ಜರಗನಹಳ್ಳಿ, ಕನಕಪುರ ರಸ್ತೆ, ಬೆಳಿಗ್ಗೆ 10

ಥೈಲಾಂಬಲ್ ಸ್ಮಾರಕ ಸಂಗೀತ ಕಾರ್ಯಾಗಾರ: 'ಗುಡಲೂರು ನಾರಾಯಣಸ್ವಾಮಿ ಬಾಲಸುಬ್ರಮಣ್ಯಂ ಜಿಎನ್‌ಬಿ ಅವರ ಸಂಯೋಜನೆಗಳ' ಕುರಿತ ಉಪನ್ಯಾಸ: ಬಳ್ಳಾರಿ ರಾಘವೇಂದ್ರ, ಆಯೋಜನೆ: ದಿ ಕಲಾಪ್ರೇಮಿ ಫೌಂಡೇಶನ್, ಸ್ಥಳ: ಸೇವಾ ಸದನ, ಮಲ್ಲೇಶ್ವರ, ಬೆಳಿಗ್ಗೆ 22

'ಪ್ರಸಕ್ತ ಆರ್ಥಿಕ ಪರಿಸ್ಥಿತಿಯಲ್ಲಿ ಪತ್ರಕರ್ತರ ಸಮಸ್ಯೆಗಳು–ಪರಿಹಾರಗಳು' ವಿಚಾರಸಂಕಿರಣ: ಭಾಗವಹಿಸುವವರು: ಬಿ.ಸಿ. ದೇಶಪಾಂಡೆ, ಸಿ. ಕೃಷ್ಣಮೂರ್ತಿ, ಕೆ. ಶಂಭುಲಿಂಗ, ಎ.ಸಿ. ತಿಪ್ಪೇಸ್ವಾಮಿ, ಹುಲಿ ಅಮರನಾಥ್, ಮೆಹಬೂಬ್ ಮಾಲಬಾವಡಿ, ಗಂಧರ್ವ ಶ್ರೀನಿವಾಸ್, ಶಮಂತಾ, ಆಯೋಜನೆ: ಕರ್ನಾಟಕ ಕಾರ್ಯನಿರತ ಪತ್ರಕರ್ತರ ಒಕ್ಕೂಟ, ಸ್ಥಳ: ಬೆಂಗಳೂರು ಪ್ರೆಸ್‌ಕ್ಲಬ್, ಕಬ್ಬನ್ ಉದ್ಯಾನ, ಬೆಳಿಗ್ಗೆ 11

ಆಸ್ಕರಿ ಪ್ರಶಸ್ತಿ ಪ್ರದಾನ: ಅತಿಥಿಗಳು: ಶೇಷಾದ್ರಿ ಮೋಕ್ಷಗುಂಡಮ್, ಚೇತನ್ ಆರ್., ಪ್ರಶಸ್ತಿ ಸ್ವೀಕರಿಸುವವರು: ಪರಂ ಜೈನ್, ಕೌಶಿಕ್ ರಾವ್. ಆರ್., ಆಯೋಜನೆ: ಆಸ್ಕರಿ ಪ್ರಶಸ್ತಿ ಸಂಸ್ಥೆ, ಸ್ಥಳ: ಕರ್ನಾಟಕ ಚಿತ್ರಕಲಾ ಪರಿಷತ್ತು, ಕುಮಾರಕೃಪಾ ರಸ್ತೆ, ಬೆಳಿಗ್ಗೆ 11

ಹಾಸ್ಯ ಸಂಜೆ: ಉದ್ಘಾಟನೆ: ಭರತ್ ಚಂದ್ರ, ಭಾಷಣಕಾರರು: ಕೆ.ಪಿ. ಪುತ್ತುರಾಯ, ಎಚ್. ಡುಂಡಿರಾಜ್, ಆಯೋಜನೆ: ಲಕ್ಷ್ಮೀನಾರಾಯಣ ಚಡಗ ಮೆಮೋರಿಯಲ್ ಚಾರಿಟಬಲ್ ಟ್ರಸ್ಟ್, ಸ್ಥಳ: ಪಟೇಲ್ಸ್ ಇನ್, ಆರ್‌.ಟಿ. ನಗರ, ಸಂಜೆ 4


ಮೈಸೂರು ಕೆ. ವಾಸುದೇವಾಚಾರ್ಯರ ಜನ್ಮದಿನದ ಅಂಗವಾಗಿ ಎಸ್. ಶಂಕರ್ ಅವರ ಶಂಕರಾಭರಣ ಸದಸ್ಯರಿಂದ ಆಯ್ದ ಕೃತಿಗಳ ನೃತ್ಯ ನಿರೂಪಣೆ, ಗಾಯನ: ಈಶ್ವರ್ ಐಯ್ಯರ್, ಮನಸ್ವಿನಿ ಚಂದ್ರಶೇಖರ್, ಆಯೋಜನೆ ಮತ್ತು ಸ್ಥಳ: ಬೆಂಗಳೂರು ಗಾಯನ ಸಮಾಜ, ಸಂಜೆ 5.30

'ಸ್ವರ ಧಾರಾ' ಸಂಗೀತ ಕಛೇರಿ: ಸಿತಾರ್: ಟಿ. ರಾಧಾಕೃಷ್ಣ, ತಬಲಾ: ಮಿಹಿರ್ ಕಲ್ಯಾಣಪುರ, ಗಾಯನ: ಪ್ರವೀಣ್ ಗಾಂವಕರ್, ಸಾರಂಗಿ: ಗುರುಪ್ರಸಾದ್ ಹೆಗಡೆ, ತಬಲಾ: ಕಾರ್ತಿಕ್ ಭಟ್ಟ, ಹಾರ್ಮೋನಿಯಂ: ಸೂರ್ಯ ಉಪಾಧ್ಯಾಯ, ಆಯೋಜನೆ: ಸಪ್ತಕ, ಸ್ಥಳ: ದಿ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್, ಬಿ.ಪಿ. ವಾಡಿಯಾ ರಸ್ತೆ, ಬಸವನಗುಡಿ, ಸಂಜೆ 5.30

'ಚಕ್ರ ಚಂಡಿಕಾ' ಯಕ್ಷಗಾನ ತಾಳಮದ್ದಲೆ: ಹಿಮ್ಮೇಳ: ನಂದನ್ ಹೆಗಡೆ ದಂಡಕಲ್, ವೆಂಕಟೇಶ್ ಹೆಗಡೆ, ಮುಮ್ಮೇಳ: ಅಜಿತ ಕಾರಂತ ಟಿ.ವಿ., ಸುಹಾಸ್ ಮರಾಠೆ, ಅಕ್ಷಯ ಹೆಗಡೆ, ಶ್ರೀಕರ ಭಟ್, ಆಯೋಜನೆ: ಯಕ್ಷರಂಜನಿ ತಂಡ, ಸ್ಥಳ: ಮಾತಿನ ಮನೆ, ಚಾಮರಾಜಪೇಟೆ, ಸಂಜೆ 5.30

ವಿಶ್ವ ತಾಯಂದಿರ ದಿನಾಚರಣೆ, ವಾರ್ಷಿಕೋತ್ಸವ, ಪ್ರಶಸ್ತಿ ಪ್ರದಾನ: ಅತಿಥಿಗಳು: ಮಮತಾ ಬಿ.ಆರ್., ಟಿ.ಎ. ಶರವಣ, ಜ್ಯೋತಿ ಕೆ., ಸಿದ್ದಲಿಂಗಪ್ಪ, ಬಾನಂದೂರು ಕೆಂಪಯ್ಯ, ಆಯೋಜನೆ: ಪರಿವರ್ತನಂ ಟ್ರಸ್ಟ್, ಮಾಯಾ ಫೌಂಡೇಶನ್, ಸ್ಥಳ: ವಿವೇಕ ಸಭಾಂಗಣ, ಯುವಪಥ, ನಾಲ್ಕನೇ ಬ್ಲಾಕ್, ಜಯನಗರ, ಸಂಜೆ 6

ಸಿಎಂಇ, ವಿಶ್ವ ಆರೋಗ್ಯ ದಿನ, ಅಂತರರಾಷ್ಟ್ರೀಯ ಮಹಿಳೆಯರ ದಿನ, ವಿಶ್ವ ಅಮ್ಮಂದಿರ ದಿನಾಚರಣೆ: ಅತಿಥಿಗಳು: ಡಾ. ವಿಜಯಲಕ್ಷ್ಮಿ ದೇಶಮಾನೆ, ಡಾ. ವಿದ್ಯಾಮಣಿ, ಡಾ. ಕಲಾವತಿ, ಡಾ. ಶ್ರೀಲತಾ, ಡಾ. ವೀಣಾ ಆಚಾರ್ಯ, ಅಧ್ಯಕ್ಷತೆ: ಡಾ. ವಿಜಯಾನಂದ್ ಎಸ್., ಆಯೋಜನೆ: ಇಂಡಿಯನ್ ಮೆಡಿಕಲ್ ಅಸೋಸಿಯೇಷನ್ ಬೆಂಗಳೂರು ಘಟಕ, ಸ್ಥಳ: ಐಎಂ ಸಭಾಂಗಣ, ಚಾಮರಾಜಪೇಟೆ, ಸಂಜೆ 6



ಹರಿಪ್ರಸಾದ್ ಚೌರಾಸಿಯಾ

'ಬಾನ್ಸುರಿ ಜಬ್ ಗಾನೆ ಲಗೇ' ಸಂಗೀತ ಕಛೇರಿ: ಹರಿಪ್ರಸಾದ್ ಚೌರಾಸಿಯಾ ಜೀವನವನ್ನು ಗೀತೆಗಳಲ್ಲಿ ಪ್ರಸ್ತುತಪಡಿಸುವುದು, ಹರಿಪ್ರಸಾದ್ ಚೌರಾಸಿಯಾ ಅವರೊಂದಿಗೆ ಸಂವಾದ, ಆಯೋಜನೆ: ಸ್ಪಿಕ್ ಮೆಕೆ, ಸ್ಥಳ: ಜೆ.ಎನ್. ಟಾಟಾ ಸಭಾಂಗಣ, ಐಐಎಸ್‌ಸಿ, ಸಂಜೆ 5.30

'ಅಮರ ಮಧುರ ಪ್ರೇಮ' ನಾಟಕ ಪ್ರದರ್ಶನ: ಯಶವಂತ ಸರದೇಶಪಾಂಡೆ, ಆಯೋಜನೆ: ನಳಪಾಕ ನಾಟಕ ಸಂಜೆ, ಸ್ಥಳ: ಎಡಿಎ ರಂಗಮಂದಿರ, ಜೆ.ಸಿ. ರಸ್ತೆ, ಸಂಜೆ 6.45

'ಮಿಸ್ಟರ್. ರಾವ್ ಆ್ಯಂಡ್ ಅಸೋಸಿಯೇಟ್ಸ್' ನಾಟಕ ಪ್ರದರ್ಶನ: ರಚನೆ: ಭೀಷ್ಮ ರಾಮಯ್ಯ, ನಿರ್ದೇಶನ: ಬಾಷ್ ರಾಘವೇಂದ್ರ, ಆಯೋಜನೆ: ಅಂತರಂಗ ಬಹಿರಂಗ, ಸ್ಥಳ: ಕಲಾಗ್ರಾಮ ಮಲ್ಲತ್ತಹಳ್ಳಿ, ಸಂಜೆ 7

ಸಾಹಿತ್ಯ, ಸಾಂಸ್ಕೃತಿಕ, ಶೈಕ್ಷಣಿಕ ಸೇರಿ ವಿವಿಧ ಕಾರ್ಯಕ್ರಮಗಳ ವಿವರಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ
nagaradalli_indu@prajavani.co.in


ಭಾನುವಾರ, ಮೇ 11, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 130 | ಪುಟ 22
www.prajavani.net
prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಮುಂದುವರಿದ ಆತಂಕ

ಸೇನಾ ಸಂಘರ್ಷ ಶಮನಗೊಂಡಿದೆ ಎಂದ ನಂತರವೂ ಶ್ರೀನಗರ, ಗುಜರಾತ್‌ನ ಕಛ್ ಹಾಗೂ ಪಂಜಾಬ್‌ನ ಕೆಲವೆಡೆ ಸ್ಫೋಟದ ಶಬ್ದ ಕೇಳಿಸಿದೆ ಪಂಜಾಬ್‌ನಲ್ಲಿ ಬ್ಲ್ಯಾಕ್‌ಔಟ್ ಅನ್ನು ಮತ್ತೆ ಜಾರಿಗೊಳಿಸಲಾಗಿದೆ



ಪಾಕ್‌ಗೆ ಸಾಲ: ಭಾರತ ಆಕ್ಷೇಪ 12
ಸೈನಿಕರ ಕಲ್ಯಾಣ ನಿಧಿಗೆ ₹3 ಕೋಟಿ 5
‘ಒಳಮೀಸಲಾತಿ ಸಮೀಕ್ಷೆ ಸಮಸ್ಯೆ ಸರಿಪಡಿಸಿ’ 5
ಕಾರಾಗೃಹಗಳಲ್ಲಿ 90 ಕೈದಿಗಳ ಆತ್ಮಹತ್ಯೆ 13

ಒಪ್ಪಂದ ಮುರಿದು ಸಂಘರ್ಷಕ್ಕಿಳಿದ ಪಾಕ್

ಒಪ್ಪಂದ ಜಾರಿ ಬಳಿಕವೂ ಶ್ರೀನಗರದಲ್ಲಿ ಕೇಳಿಬಂದ ಸ್ಫೋಟದ ಭಾರಿ ಸದ್ದು ● ಎಸ್–400 ಹಾಗೂ ಬ್ರಹ್ಮೋಸ್ ಕ್ಷಿಪಣಿ ನೆಲೆಗಳನ್ನು ನಾಶಮಾಡಲಾಗಿದೆ ಎಂಬ ಪಾಕ್ ನೀಡಿದ ಸುಳ್ಳು ಮಾಹಿತಿಯನ್ನು ಸಾಕ್ಷಿಸಹಿತ ಅಲ್ಲಗಳೆದ ಭಾರತ ● ಶಮನದ ಮುಂಚಿನ ಸಂಘರ್ಷದಲ್ಲಿ ಪಾಕ್ ವಾಯು ನೆಲೆಗಳಿಗೆ ಭಾರಿ ಹಾನಿ



ಅಮೆರಿಕವು ರಾತ್ರಿಯೆಲ್ಲಾ ನಡೆಸಿದ ಮಾತುಕತೆಯ ಕಾರಣದಿಂದಾಗಿ ಸಂಪೂರ್ಣವಾಗಿ ಹಾಗೂ ತತ್‌ಕ್ಷಣದಿಂದಲೇ ಸಂಘರ್ಷ ಕೊನೆಗಾಣಿಸಲು ಭಾರತ–ಪಾಕ್ ಒಪ್ಪಿಗೆ ಸೂಚಿಸಿವೆ ಎಂದು ಘೋಷಿಸುವುದಕ್ಕೆ ಅತೀವ ಖುಷಿಯಾಗುತ್ತಿದೆ. ವಿವೇಕ ಮತ್ತು ಬುದ್ಧಿಮತ್ತೆಯಿಂದ ವರ್ತಿಸಿದ್ದಕ್ಕೆ ಎರಡೂ ದೇಶಗಳನ್ನು ಅಭಿನಂದಿಸುತ್ತೇನೆ

ಡೊನಾಲ್ಡ್ ಟ್ರಂಪ್, ಅಮೆರಿಕ ಅಧ್ಯಕ್ಷ



ಕಳೆದ 48 ಗಂಟೆಗಳಲ್ಲಿ ನಾನು ಮತ್ತು ಉಪಾಧ್ಯಕ್ಷ ವ್ಯಾನ್ಸ್ ಅವರು ಭಾರತದ ಪ್ರಧಾನಿ ಮೋದಿ, ಪಾಕಿಸ್ತಾನದ ಪ್ರಧಾನಿ ಶರೀಫ್ ಸೇರಿದಂತೆ ಆಯಾ ದೇಶಗಳ ವಿದೇಶಾಂಗ ಸಚಿವರು, ರಾಷ್ಟ್ರೀಯ ಭದ್ರತಾ ಸಲಹೆಗಾರರೊಂದಿಗೆ ಮಾತುಕತೆ ನಡೆಸಿದೆವು. ಶಾಂತಿ ಮಾರ್ಗ ಆಯ್ಕೆ ಮಾಡಿದ ಎರಡೂ ದೇಶಗಳ ಪ್ರಧಾನಿಗಳ ನಿಲುವು ಅಭಿನಂದನಾರ್ಹ

ಮಾರ್ಕೊ ರುಬಿಯೊ, ಅಮೆರಿಕದ ವಿದೇಶಾಂಗ ಕಾರ್ಯದರ್ಶಿ



ಗುಂಡಿನ ದಾಳಿ ಮತ್ತು ಸೇನಾ ಕಾರ್ಯಾಚರಣೆಗಳನ್ನು ನಡೆಸದಿರಲು ಭಾರತ ಮತ್ತು ಪಾಕಿಸ್ತಾನ ಒಪ್ಪಂದ ಮಾಡಿಕೊಂಡಿವೆ. ಯಾವುದೇ ಸ್ವರೂಪದ ಭಯೋತ್ಪಾದನೆ ಮತ್ತು ಭಯೋತ್ಪಾದನಾ ಕೃತ್ಯಗಳ ಕುರಿತು ಭಾರತದ ನಿಲುವು ಯಾವಾಗಲೂ ಅಚಲ ಮತ್ತು ಈ ಬಗ್ಗೆ ರಾಜಿ ಇಲ್ಲ. ನಮ್ಮ ನಿಲುವು ಮುಂದೆಯೂ ಹೀಗೇ ಇರಲಿದೆ

ಎಸ್. ಜೈಶಂಕರ್, ಭಾರತದ ವಿದೇಶಾಂಗ ಸಚಿವ



ತಕ್ಷಣದಿಂದಲೇ ಜಾರಿಯಾಗುವಂತೆ ಪಾಕಿಸ್ತಾನ ಮತ್ತು ಭಾರತ ಸಂಘರ್ಷ ಶಮನಕ್ಕೆ ಒಪ್ಪಿಕೊಂಡಿವೆ. ಪಾಕಿಸ್ತಾನವು ಎಂದಿಗೂ ಶಾಂತಿಗಾಗಿ ಮತ್ತು ದೇಶದ ಭದ್ರತೆಗಾಗಿ ಹೋರಾಡುತ್ತಲೇ ಬಂದಿದೆ. ಈ ಹೋರಾಟದಲ್ಲಿ ಎಂದಿಗೂ ನಾವು ನಮ್ಮ ಸಾರ್ವಭೌಮತ್ವ ಮತ್ತು ದೇಶದ ಸಮಗ್ರತೆಯ ಕುರಿತು ರಾಜಿ ಮಾಡಿಕೊಂಡಿಲ್ಲ

ಇಶಾಕ್ ಡಾರ್, ಪಾಕಿಸ್ತಾನ ವಿದೇಶಾಂಗ ಸಚಿವ



ಇದು ಯಾವ ರೀತಿಯ ಕದನವಿರಾಮ? ಇಲ್ಲಿ ಯಾವುದೇ ಕದನ ವಿರಾಮ ಇಲ್ಲ. ಶ್ರೀನಗರದ ತುಂಬೆಲ್ಲಾ ಸ್ಫೋಟದ ಶಬ್ದ ಕೇಳಿಸುತ್ತಿದೆ... ವಾಯುದಾಳಿ ತಡೆ ವ್ಯವಸ್ಥೆ ಈಗಷ್ಟೇ ಮತ್ತೊಮ್ಮೆ ಕಾರ್ಯಪ್ರವೃತ್ತವಾಗಿದೆ. ಜನಜೀವನ ಸಹಜ ಸ್ಥಿತಿಗೆ ತರುವಲ್ಲಿ ಕೇಂದ್ರ ಸರ್ಕಾರವು ತಕ್ಷಣವೇ ಕ್ರಮ ಕೈಗೊಳ್ಳಲಿದೆ ಎಂದು ಆಶಿಸುತ್ತೇನೆ

ಒಮರ್ ಅಬ್ದುಲ್ಲಾ, ಜಮ್ಮು ಮತ್ತು ಕಾಶ್ಮೀರ ಮುಖ್ಯಮಂತ್ರಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಪಾಕಿಸ್ತಾನ ಬೆಂಬಲಿತ ಉಗ್ರರನ್ನು ಸದೆಬಡಿಯಲು ಭಾರತ ನಡೆಸಿದ ‘ಆಪರೇಷನ್ ಸಿಂಧೂರ’ ಕಾರ್ಯಾಚರಣೆಯ ಬಳಿಕ ಉಭಯ ರಾಷ್ಟ್ರಗಳ ನಡುವೆ ಸೃಷ್ಟಿಯಾಗಿದ್ದ ಯುದ್ಧದ ಸ್ವರೂಪದ ಸಂಘರ್ಷ ಕೊನೆಗೊಳಿಸಲು ಶನಿವಾರ ಒಪ್ಪಂದ ಮಾಡಿಕೊಂಡ ಬೆನ್ನಲ್ಲೇ ಪಾಕ್ ಮತ್ತೆ ದಾಳಿ ಆರಂಭಿಸಿದೆ.

ಎರಡೂ ದೇಶಗಳ ಸೇನಾ ಕಾರ್ಯಾಚರಣೆಗಳ ಮಹಾನಿರ್ದೇಶಕರು (ಡಿಜಿಎಂಒ) ಪರಸ್ಪರ ಮಾತುಕತೆ ನಡೆಸಿ, ಶನಿವಾರ ಸಂಜೆಯಿಂದಲೇ ಸಂಘರ್ಷ ಕೊನೆಗಾಣಿಸಲು ಒಪ್ಪಿಗೆ ಸೂಚಿಸಿದ್ದರು. ಆದರೆ ಶನಿವಾರ ರಾತ್ರಿ ಜಮ್ಮು ಮತ್ತು ಕಾಶ್ಮೀರ, ಪಂಜಾಬ್, ರಾಜಸ್ಥಾನ ಮತ್ತು ಗುಜರಾತ್ ಗಡಿಪ್ರದೇಶಗಳಲ್ಲಿ ಡ್ರೋನ್ ದಾಳಿಗೆ ಪಾಕ್ ಯತ್ನ ನಡೆಸಿದ್ದು, ಭಾರತ ತಕ್ಕ ಪ್ರತ್ಯುತ್ತರ ನೀಡಿದೆ.

ನಿರಂತರವಾಗಿ ದಾಳಿ ನಡೆಸಿದ್ದ ಪಾಕಿಸ್ತಾನಕ್ಕೆ ಭಾರತೀಯ ಸಶಸ್ತ್ರ ಪಡೆಯು ಶುಕ್ರವಾರ ರಾತ್ರಿ ಹಾಗೂ ಶನಿವಾರ ತೀಕ್ಷ್ಣ ಪ್ರತಿಕ್ರಿಯೆ ನೀಡಿದೆ. ಪಾಕಿಸ್ತಾನದ ಎಂಟು ಮಿಲಿಟರಿ ನೆಲೆಗಳ ಮೇಲೆ ನಿಖರ ದಾಳಿ ನಡೆಸಿ ಭಾರಿ ಹಾನಿ ಉಂಟು ಮಾಡಿದೆ. ಅದರ ಬೆನ್ನಲ್ಲೇ, ಪಾಕಿಸ್ತಾನದ ಡಿಜಿಎಂಒ, ಭಾರತದ ಡಿಜಿಎಂಒ ಅವರಿಗೆ ಮಧ್ಯಾಹ್ನ 3:30ಕ್ಕೆ ಕರೆ ಮಾಡಿ ಮಾತುಕತೆ ನಡೆಸಿದರು.

13ನೇ ಪುಟ ನೋಡಿ



ಸೇನಾ ಸಂಘರ್ಷ ಶಮನದ ಘೋಷಣೆ ಹೊರಬಿದ್ದ ಬಳಿಕ ಶ್ರೀನಗರದ ಲಾಲ್‌ಚೌಕ್‌ನಲ್ಲಿ ಸೇರಿದ್ದ ಜನ. ಪಾಕ್ ಮತ್ತೆ ದಾಳಿ ಯತ್ನ ನಡೆಸಿದ ಕಾರಣ ಅವರಲ್ಲಿ ದುಗುಡ ಆವರಿಸಿತು– ಪಿಟಿಐ ಚಿತ್ರ



ಭಾರತೀಯ ಕಾಲಮಾನ ಶನಿವಾರ ಸಂಜೆ 5ರಿಂದ ಜಾರಿಗೆ ಬರುವಂತೆ ಭೂಮಿ, ವಾಯು ಮತ್ತು ಸಾಗರದ ಮೂಲಕ ಸೇನಾ ಕಾರ್ಯಾಚರಣೆಯನ್ನು ಸಂಪೂರ್ಣವಾಗಿ ನಿಲ್ಲಿಸಲು ಒಪ್ಪಂದ ಮಾಡಿಕೊಳ್ಳಲಾಗಿದೆ. ಆದರೆ ಪಾಕ್ ಈ ಒಪ್ಪಂದದ ಬೆನ್ನಲ್ಲೇ ಕದನ ವಿರಾಮವನ್ನು ಉಲ್ಲಂಘಿಸಿದೆ. ನಮ್ಮ ಸಶಸ್ತ್ರ ಪಡೆಗಳು ಇದಕ್ಕೆ ತಕ್ಕ ಪ್ರತ್ಯುತ್ತರ ನೀಡಿವೆ

ವಿಕ್ರಂ ಮಿಸ್ರಿ, ವಿದೇಶಾಂಗ ಇಲಾಖೆಯ ಕಾರ್ಯದರ್ಶಿ

‘ಅಮೆರಿಕ ಮಧ್ಯಸ್ಥಿಕೆ ಫಲ’

ವಾಷಿಂಗ್ಟನ್(ಪಿಟಿಐ): ‘ಭಾರತ–ಪಾಕಿಸ್ತಾನ ಸೇನಾ ಸಂಘರ್ಷ ಶಮನವು ಅಮೆರಿಕ ಮಧ್ಯಸ್ಥಿಕೆಯಲ್ಲಿ ನಡೆದ ಮಾತುಕತೆಯ ಫಲ’ ಎಂದು ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಪ್ರತಿಪಾದಿಸಿದ್ದಾರೆ.

ಅಮೆರಿಕ ವಿದೇಶಾಂಗ ಕಾರ್ಯದರ್ಶಿ ಮಾರ್ಕೊ ರುಬಿಯೊ ಅವರು ವಿದೇಶಾಂಗ ಸಚಿವರಾದ ಎಸ್.ಜೈಶಂಕರ್ ಹಾಗೂ ಇಶಾಕ್ ಡಾರ್ ಹಾಗೂ ಸೇನಾ ಮುಖ್ಯಸ್ಥ ಜನರಲ್ ಅಸಿಮ್ ಮುನೀರ್ ಅವರೊಂದಿಗೆ ಮಾತುಕತೆ ನಡೆಸಿದ ಬಳಿಕ, ಟ್ರಂಪ್ ಈ ಹೇಳಿಕೆ ನೀಡಿದ್ದಾರೆ.

ಸನ್ನದ್ಧ ಸ್ಥಿತಿಯಲ್ಲಿ ಸೇನೆ

ನವದೆಹಲಿ: ‘ದೇಶದ ರಕ್ಷಣೆಗೆ ಸಂಬಂಧಿಸಿ ಅಗತ್ಯವೆಂದು ಕಂಡು ಬಂದ ಯಾವುದೇ ಕಾರ್ಯಾಚರಣೆ ನಡೆಸಲು ನಾವು ಸನ್ನದ್ಧರಾಗಿರುತ್ತೇವೆ’ ಎಂದು ಕಮಡೋರ್ ರಘು ನಾಯರ್ ಹೇಳಿದ್ದಾರೆ. ‘ಪಾಕಿಸ್ತಾನ ನಡೆಸುವ ಯಾವುದೇ ದುಷ್ಕೃತ್ಯಕ್ಕೆ ನಮ್ಮ ಪಡೆಗಳು ತಕ್ಕ ಉತ್ತರ ನೀಡಲಿವೆ. ಭವಿಷ್ಯದಲ್ಲಿ ನಡೆಯುವ ಯಾವುದೇ ಸಂಘರ್ಷಕ್ಕೆ ನಿರ್ಣಾಯಕ ಪ್ರತಿಕ್ರಿಯೆ ನೀಡಲಾಗುವುದು’ ಎಂದೂ ಹೇಳಿದ್ದಾರೆ.



- ಮುಂದೆ ಯಾವುದೇ ಭಯೋತ್ಪಾದನಾ ಕೃತ್ಯ ನಡೆದಲ್ಲಿ ಅದನ್ನು ‘ಯುದ್ಧ ಚಟುವಟಿಕೆ’ ಎಂದೇ ಪರಿಗಣಿಸಲಾಗುವುದು ಎಂದು ಹೇಳಿದ ಭಾರತ ಸರ್ಕಾರ
- ಪಾಕಿಸ್ತಾನದೊಂದಿಗಿನ ಸೇನಾ ಸಂಘರ್ಷ ಶಮನಗೊಂಡಿದ್ದರೂ, ಅಮಾನತುಗೊಂಡಿರುವ ಸಿಂಧೂ ಜಲ ಒಪ್ಪಂದದ ವಿಷಯದಲ್ಲಿ ಸದ್ಯ ಯಾವುದೇ ಬದಲಾವಣೆ ಇಲ್ಲ
- 100 ಗಂಟೆಗಳಿಗಿಂತ ತುಸು ಕಡಿಮೆ ಅವಧಿಯಷ್ಟು ನಡೆದಿದ್ದ ಸೇನಾ ಸಂಘರ್ಷ
- ಐಪಿಎಲ್ ಕ್ರಿಕೆಟ್ ಅನ್ನು ಆದಷ್ಟು ಬೇಗ ಮುಂದುವರಿಸುವ ನಿಟ್ಟಿನಲ್ಲಿ ಮಾತುಕತೆ ನಡೆಯುತ್ತಿದೆ: ಐಪಿಎಲ್ ಅಧ್ಯಕ್ಷ ಅರುಣ್ ಧುಮಾಲ್

ಪಹಲ್ಗಾಮ್ ದಾಳಿಯಿಂದ ಸಂಘರ್ಷ ಶಮನದವರೆಗೆ


- **ಏ.22:** ಕಾಶ್ಮೀರದ ಪಹಲ್ಗಾಮ್‌ನಲ್ಲಿ ಉಗ್ರರು ಗುಂಡಿನ ದಾಳಿ ನಡೆಸಿ, ಒಟ್ಟು 26 ಪ್ರವಾಸಿಗರನ್ನು ಹತ್ಯೆ ಮಾಡಿದರು. ಇದು ಎರಡು ದೇಶಗಳ ಮಧ್ಯೆ ಸಂಘರ್ಷಕ್ಕೆ ಕಾರಣವಾಯಿತು
- **ಏ.23:** ಪಾಕಿಸ್ತಾನದೊಂದಿಗೆ ಭಾರತವು ಎಲ್ಲ ರೀತಿಯ ರಾಜತಾಂತ್ರಿಕ ಸಂಬಂಧವನ್ನು ಕಡಿದುಕೊಂಡಿತು. ಗಡಿಗಳನ್ನು ಮುಚ್ಚಲಾಯಿತು, ಜಲ ಒಪ್ಪಂದವನ್ನು ರದ್ದು ಮಾಡಲಾಯಿತು. ಆದರೆ, ಪಾಕಿಸ್ತಾನವು ತನ್ನ ಮೇಲಿನ ಎಲ್ಲ ಆರೋಪಗಳನ್ನು ಅಲ್ಲಗಳೆಯಿತು
- **ಏ 24:** ಪಾಕಿಸ್ತಾನಿ ನಾಗರಿಕರಿಗೆ ಭಾರತವು ನೀಡಿದ್ದ ಮತ್ತು ಪಾಕಿಸ್ತಾನವು ಭಾರತದ ನಾಗರಿಕರಿಗೆ ನೀಡಿದ್ದ ವೀಸಾವನ್ನು ಪರಸ್ಪರ ರದ್ದು ಮಾಡಲಾಯಿತು. ಭಾರತದ ಎಲ್ಲ ವಿಮಾನ ಹಾರಾಟಕ್ಕೆ ಪಾಕಿಸ್ತಾನವು ತನ್ನ ವಾಯು ಮಾರ್ಗವನ್ನು ಮುಚ್ಚಿತು
- **ಏ 25:** ‘ಗಡಿ ನಿಯಂತ್ರಣ ರೇಖೆ ಬಳಿ ಪಾಕಿಸ್ತಾನ ಹಾಗೂ ಭಾರತದ ಸೈನಿಕರ ಮಧ್ಯೆ ಗುಂಡಿನ ದಾಳಿಗಳು ನಡೆದಿವೆ’ ಎಂದು ಭಾರತವು ಹೇಳಿತು. ಗುಂಡಿನ ದಾಳಿಗಳು ಹಲವು ದಿನಗಳವರೆಗೆ ನಡೆಯಿತು
- **ಮೇ 3:** ಪಾಕಿಸ್ತಾನವು ಭಾರತದ ಮೇಲೆ ಪರೀಕ್ಷಾರ್ಥವಾಗಿ ಕ್ಷಿಪಣಿಗಳನ್ನು ಉಡಾಯಿಸಿತು. ಪಾಕಿಸ್ತಾನದ ಹಡಗುಗಳು ಭಾರತದ ಬಂದರುಗಳಿಗೆ ಬರುವುದನ್ನು ಭಾರತ ನಿಷೇಧಿಸಿತು. ಅಂತೆಯೇ ಪಾಕಿಸ್ತಾನವು ಭಾರತದ ಹಡಗುಗಳಿಗೆ ನಿಷೇಧ ಹೇರಿತು

13ನೇ ಪುಟ ನೋಡಿ

ಕೃಷಿ ವಿಜ್ಞಾನಿ ಅಯ್ಯಪ್ಪನ್ ನಿಗೂಢ ಸಾವು

ಪ್ರಜಾವಾಣಿ ವಾರ್ತೆ

ಶ್ರೀರಂಗಪಟ್ಟಣ/ ಮೈಸೂರು: ಕೃಷಿ ವಿಜ್ಞಾನಿ, ಭಾರತೀಯ ಕೃಷಿ ಸಂಶೋಧನಾ ಮಂಡಳಿಯ (ಐಸಿಎಆರ್) ನಿವೃತ್ತ ನಿರ್ದೇಶಕ, ‘ಪದ್ಮಶ್ರೀ’ ಪುರಸ್ಕೃತ ಪ್ರೊ.ಸುಬ್ಬಣ್ಣ ಅಯ್ಯಪ್ಪನ್ (70) ಅವರು ನಿಗೂಢವಾಗಿ ಸಾವಿಗೀಡಾಗಿದ್ದಾರೆ.



ಸುಬ್ಬಣ್ಣ ಅಯ್ಯಪ್ಪನ್

ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣ ಬಳಿ ಕಾವೇರಿ ನದಿಯಲ್ಲಿ ಶನಿವಾರ ಮಧ್ಯಾಹ್ನ ಮೃತದೇಹವು ಕೊಳೆಯುವ ಸ್ಥಿತಿಯಲ್ಲಿ ಪತ್ತೆಯಾಗಿದೆ. ಅವರಿಗೆ ಪತ್ನಿ, ಇಬ್ಬರು ಪುತ್ರಿಯರಿದ್ದಾರೆ.

ಅಯ್ಯಪ್ಪನ್ ಮೈಸೂರಿನ ವಿಶ್ವೇಶ್ವರ ನಗರ ಕೈಗಾರಿಕಾ ಪ್ರದೇಶದ ಅಕ್ಕಮಹಾದೇವಿ ರಸ್ತೆಯ ಮನೆಯಲ್ಲಿ ವಾಸವಿದ್ದರು.

13ನೇ ಪುಟ ನೋಡಿ

‘ಸುಳ್ಳು ಸುದ್ದಿಗಳಿಗೆ ಕಡಿವಾಣ ಹಾಕಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರಾಜ್ಯದಲ್ಲಿ ಸುಳ್ಳು ಸುದ್ದಿಗಳಿಗೆ ಕಡ್ಡಾಯವಾಗಿ ಕಡಿವಾಣ ಹಾಕಬೇಕು. ಸುಳ್ಳು ಸುದ್ದಿ ಹರಡಿಸುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಅಧಿಕಾರಿಗಳಿಗೆ ಸ್ಪಷ್ಟ ಸೂಚನೆ ನೀಡಿದರು.

ಎಲ್ಲ ಜಿಲ್ಲಾಧಿಕಾರಿಗಳು, ಪೊಲೀಸ್ ಅಧಿಕಾರಿಗಳು, ಕಮಿಷನರ್‌ಗಳು ಮತ್ತು ಜಿಲ್ಲಾ ಎಸ್‌ಪಿಗಳ ಜೊತೆ ಶನಿವಾರ ಮುಖ್ಯಮಂತ್ರಿ ಅವರು ವಿಡಿಯೊ ಸಂವಾದ ನಡೆಸಿದರು.

‘ಮಾಧ್ಯಮಗಳು ಮತ್ತು ಸಾಮಾಜಿಕ ಜಾಲತಾಣಗಳಲ್ಲಿ ಸುಳ್ಳು ಸುದ್ದಿಗಳು ಹರಡುವುದನ್ನು ತಪ್ಪಿಸಲು ಕಟ್ಟೆಚ್ಚರ ವಹಿಸಬೇಕು. ಫ್ಯಾಕ್ಟ್ ಚೆಕ್ ನಿರಂತರವಾಗಿ ಮಾಡಬೇಕು. ಸುಳ್ಳು ಸುದ್ದಿಗಳ ಬಗ್ಗೆ ಮೂಲದಲ್ಲೇ ಅಧಿಕೃತ ಸ್ಪಷ್ಟೀಕರಣ ನೀಡಬೇಕು’ ಎಂದು ಮುಖ್ಯಮಂತ್ರಿ ಆದೇಶಿಸಿದರು.



ಕೋಮು ಸಾಮರಸ್ಯ ಕದಡಲು ಯತ್ನಿಸುವವರ ಮೇಲೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು. ಕೋಮು ಗೂಂಡಾಗಳ ಪಟ್ಟಿ ನವೀಕರಿಸಿ, ಅಂಥವರ ಮೇಲೆ ನಿಗಾ ಇಡಬೇಕು

ಸಿದ್ದರಾಮಯ್ಯ, ಮುಖ್ಯಮಂತ್ರಿ

‘ಪರಿಸ್ಥಿತಿಯನ್ನು ದುರುಪಯೋಗ ಪಡಿಸಿಕೊಂಡು ದೇಶದ, ರಾಜ್ಯದ ಸಹಬಾಳ್ವೆಗೆ ಧಕ್ಕೆ ತರುವ, ಕೋಮುಭಾವನೆ ಕೆರಳಿಸಿ, ಕೋಮು ವಿಭಜನೆಗೆ, ದೇಶದ ಭದ್ರತೆಗೆ ಅಪಾಯ ತರಲು ಷಡ್ಯಂತ್ರ ನಡೆಸುತ್ತಿರುವವರ ಪಟ್ಟಿ ಸಿದ್ಧಪಡಿಸಿ ಕಾನೂನು ಕ್ರಮಕ್ಕೆ ಒಳಪಡಿಸಬೇಕು’ ಎಂದು ನಿರ್ದೇಶನ ನೀಡಿದರು.

‘ಭಾರತ– ಪಾಕಿಸ್ತಾನ ನಡುವೆ ಪರಿಸ್ಥಿತಿ ಉದ್ವಿಗ್ನಗೊಂಡಿರುವ ಕಾರಣ ಯಾವುದೇ ಪರಿಸ್ಥಿತಿ ಎದುರಿಸಲು ನಾವು ಸರ್ವಸನ್ನದ್ಧರಾಗಿರಬೇಕು. ಕಾನೂನು ಸುವ್ಯವಸ್ಥೆಗಿಂತ ಯಾವುದೂ ದೊಡ್ಡದಲ್ಲ. ರಾಜ್ಯದ ಜನರ ರಕ್ಷಣೆಗೆ ಮೊದಲ ಆದ್ಯತೆ ನೀಡಬೇಕು. ಈ ಕಾರಣಕ್ಕೆ ಗುಪ್ತಚರ ವ್ಯವಸ್ಥೆಯನ್ನು ಇನ್ನಷ್ಟು ಬಲಪಡಿಸಬೇಕು’ ಎಂದು ಹೇಳಿದರು.

13ನೇ ಪುಟ ನೋಡಿ

ಜೆನ್ ಝೀ; ನಾವೇಕೆ ಹೀಗೆ..?

● ಇ.ಎಸ್. ಸುಧೀಂದ್ರ ಪ್ರಸಾದ್

ಒಳನೋಟ

ಸದಾ ಮೊಬೈಲ್‌ನಲ್ಲೇ ಮುಳುಗಿರುವ ಈ ತಲೆಮಾರಿನವರ ಮಾತು, ವರ್ತನೆ ಒಂದೂ ಅರ್ಥವಾಗದು. ಹೇಳಿದ್ದನ್ನು ಕೇಳುವವರಲ್ಲ, ಮಲ್ಟಿ ಟಾಸ್ಕಿಂಗ್ ಮಾಡುವವರಲ್ಲ... ಹೀಗೆ ಹೊಸ ತಲೆಮಾರಿನವರ ಕುರಿತು ಪಾಲಕರಿಂದ ಶಿಕ್ಷಕ ರವರೆಗೆ, ಕಾರ್ಪೊರೇಟ್ ಕಂಪನಿಗಳಿಂದ ಅಕ್ಕಪಕ್ಕದ ಹಿರಿಯರವರೆಗೂ ಎಲ್ಲೆಡೆಯಿಂದ ಕೇಳಿ ಬರುವ ಆರೋಪಗಳು.

ನಮಗೇನು ಬೇಕು ಎಂಬ ಸ್ಪಷ್ಟತೆ ನಮಗಿದೆ. ಜಗತ್ತು ಹೇಗಿದೆ ಎಂಬುದರ ಜ್ಞಾನವೂ ಇದೆ. ತಂತ್ರಜ್ಞಾನದ ಬಲವಿದೆ. ಅನಿಸಿದ್ದನ್ನು ನೇರವಾಗಿ ಹೇಳುವ ನಮ್ಮ ಈ ಸ್ವಭಾವ ಇತರರಿಗೆ ಇಷ್ಟವಾಗದು. ಹೀಗಾಗಿ ಅವರು ನಮ್ಮ ಕುರಿತು ಇಲ್ಲ-ಸಲ್ಲದ್ದನ್ನು ಹೇಳುತ್ತಾರೆ. ಇದು ಇಂದಿನ ತಲೆಮಾರಿನವರ ವಾದ.

ಹಿಂದಿಗಿಂತಲೂ ಇಂದು ತಲೆಮಾರು ವೇಗವಾಗಿ ಬದಲಾಗುತ್ತಿದೆ. ಸದ್ಯ ಬಿಟಾ ಪೀಳಿಗೆ ಜನಿಸಿದ್ದರೂ, ಜನರೇಷನ್ ಝೂಡ್ (ಜೆನ್ ಝೀ) ತಲೆಮಾರು ಈಗ ದೇಶದ ಭವಿಷ್ಯ ನಿರ್ಧರಿಸುವ ದೊಡ್ಡ ಯುವಪಡೆಯಾಗಿದೆ.



ಜನರೇಷನ್ ಝೀ ಸ್ವತಂತ್ರ, ಸತ್ಯಾನ್ವೇಷಣೆ ಬಯಸುವವರು. ತಂತ್ರಜ್ಞಾನ ಇವರಿಗೆ ಕರಗತ. ಭವಿಷ್ಯದಲ್ಲಿ ಹೊಸ ಅನ್ವೇಷಣೆಗಳು ಈ ತಲೆಮಾರಿನವರಿಂದ ಸಾಧ್ಯ

ಡಾ. ಬಿ.ಸಿ. ಭಗವಾನ್, ಕುಲಪತಿ, ರಾಜೀವ್ ಗಾಂಧಿ ಆರೋಗ್ಯ ವಿಶ್ವವಿದ್ಯಾಲಯ

‘ಜೆನ್ ಝೀ’ ಎಂದೇ ಕರೆಯಲಾಗುವ 1997ರಿಂದ 2012ರವರೆಗೆ ಜನಿಸಿದವರ ಮಾತು, ಮನೋಭಾವ, ಅವರ ಬೇಕು, ಬೇಡಗಳನ್ನು ಅರ್ಥೈಸಿಕೊಳ್ಳಲು ಯತ್ನಿಸುತ್ತಿರುವ ಜಗತ್ತಿನ ಹಲವು ಮನೋವಿಜ್ಞಾನಿಗಳು, ನಿರಂತರ ಲೇಖನಗಳನ್ನು ಪ್ರಕಟಿಸುತ್ತಲೇ ಇದ್ದಾರೆ.



ಭಾರತದಲ್ಲಿ ಸುಮಾರು 35 ಕೋಟಿಯಷ್ಟು, ಈ ತಲೆಮಾರಿನವರೇ ಇರುವುದರಿಂದ ಇವರ ಜೀವನಶೈಲಿಯ ಅಧ್ಯಯನ ನಡೆಯುತ್ತಲೇ ಇದೆ. ಸಮಾಜಕ್ಕಿಂತ ಹೆಚ್ಚಾಗಿ, ಸಾಮಾಜಿಕ ಜಾಲತಾಣವನ್ನೇ ನೆಚ್ಚಿಕೊಂಡಿರುವ ಈ ತಲೆಮಾರು ಹಿಂದಿನ ಪೀಳಿಗೆಗಳಿಗೆ ಇನ್ನೂ ಒಗಟಾಗಿಯೇ ಇದೆ. ಆರ್ಥಿಕವಾಗಿ ಮತ್ತು ರಾಜಕೀಯವಾಗಿ ಹೆಚ್ಚು ಸ್ಪಷ್ಟತೆ ಇರುವಂತೆ ವರ್ತಿಸುವ ಈ ವರ್ಗವೆಂದರೆ ಮಾರುಕಟ್ಟೆಗೂ ಅಷ್ಟೇ ಪ್ರೀತಿ. ಏಕೆಂದರೆ ಸದ್ಯ ಸಾಕಷ್ಟು ಬೇಕುಗಳ ಬಯಕೆಯನ್ನೇ ಹೊಂದಿರುವ ಜೆನ್ ಝೀ ಒಟ್ಟು ಖರೀದಿಯ ಶೇ 46ರಷ್ಟು ಮಾರುಕಟ್ಟೆ ಪಾಲು ಹೊಂದಿದೆ. ಇದರ ಅಂದಾಜು 860 ಶತಕೋಟಿ ಅಮೆರಿಕನ್ ಡಾಲರ್ ಎಂದರೆ ಈ ತಲೆಮಾರಿನ ಕುರಿತು ಏಕಿಷ್ಟು ಸಂಶೋಧನೆಗಳು ಎಂಬುದನ್ನು ಅರ್ಥೈಸಿಕೊಳ್ಳಬಹುದು.

ತ್ವರಿತವಾಗಿ ಬದಲಾಗುತ್ತಿರುವ ತಂತ್ರಜ್ಞಾನದೊಂದಿಗೇ ಹೆಜ್ಜೆ ಹಾಕುತ್ತಿರುವ ಜೆನ್ ಝೀ ನಿಜವಾದ ಡಿಜಿಟಲ್ ಯುವಪೀಳಿಗೆ.

6ನೇ ಪುಟ ನೋಡಿ

ಚಿನಕುರುಳಿ

ಪ್ರಕಾಶ್ ಶೆಟ್ಟಿ






|| ಹರಿ ಓಂ ತತ್ಸತ್ ಓಂ ಶ್ರೀ ರಾಮಕೃಷ್ಣಾಯತೇ ನಮಃ || ಶ್ರೀ ರಾಮಕೃಷ್ಣ ವಿದ್ಯಾಶ್ರಮ ಟ್ರಸ್ಟ್ (ರಿ) |
ಶ್ರೀ ರಾಮಕೃಷ್ಣ ವಿದ್ಯಾನಿಕೇತನ (ರಿ) ವಸತಿ ಶಾಲೆ
ಗೋಪಾಳ, ಶಿವಮೊಗ್ಗ
SINCE 1992
ಡಿ.ಎಂ.ವೆಂಕಟರಮಣ
ಸತತವಾಗಿ 19 ಬಾರಿ 100% ಫಲಿತಾಂಶ ನೀಡಿ, 2024-25 ಸಾಲಿನ SSLC ಪರೀಕ್ಷೆಯಲ್ಲಿ 34 ವಿದ್ಯಾರ್ಥಿಗಳು 600+ ಅಂಕ ಪಡೆದಿರುತ್ತಾರೆ
625/625 ನಿತ್ಯ ಎಂ ಕುಲಕರ್ಣಿ
ಸಂಸ್ಕೃತ-125, ಕನ್ನಡ-100, ಇಂಗ್ಲಿಷ್-100, ಗಣಿತ-100, ವಿಜ್ಞಾನ-100, ಸಮಾಜ ವಿಜ್ಞಾನ-100
1 STATE FIRST RANK
621/625 ಸಾನ್ವಿ ಹೆಚ್ ಜಿ
620/625 ಅಮೋಘ ಎ ನಾಡಿಗರ್
619/625 ಪೂರ್ವಿ ಎಸ್
619/625 ಹರ್ಷ ನಾಯ್ಕ್
618/625 ಗಗನ್ ಎ ಎಂ
ಕನ್ನಡ-125, 98.88%
617/625 ನಿಖಿಲ್ ಚೌಹಾನ್
617/625 ಸ್ವಾತಿ ಎಸ್ ಬಾದಲ್
616/625 ಸ್ವಾತಿ ಎನ್
616/625 ಅಬ್ದುಲ್ ರೆಹಮಾನ್
616/625 ತ್ರಿಶಾ ಜಿ
615/625 ಧ್ರುವ ಬಿ
615/625 ನಿಹಾರಿಕಾ ಎಸ್ ಕೆ
615/625 ವರ್ಣ ಎಸ್
ಶ್ರೀ ರಾಮಕೃಷ್ಣ ಗುರುಕುಲ ವಸತಿ ಶಾಲೆ, ಅನುಪಿನಕಟ್ಟೆ, ಶಿವಮೊಗ್ಗ
ಪ್ರತಿ ವರ್ಷದಂತೆ ಈ ವರ್ಷವು ಸಹ 2024-25 ಸಾಲಿನ ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಅದ್ವಿತೀಯ ಸಾಧನೆಗೈದ ವಿದ್ಯಾರ್ಥಿಗಳು
620/625 ಧನುಷ್ ವಿ
ಕನ್ನಡ-125, ಹಿಂದಿ-100, ಗಣಿತ-100, 99.2%
STATE SIXTH RANK
607/625 ಪ್ರಜ್ವಲ್ ಎ ಜಿ 97.12 %
603/625 ಅತೀಶ್ ಆನಂದ ಲೇವಿ ಕನ್ನಡ-125, ಹಿಂದಿ-100, 96.48%
599/625 ಮನೀಶ್ ಎನ್ ಆರ್ 95.84%
598/625 ಭುವನ್ ಎನ್ ಪಿ 95.68%
598/625 ತರುಣ್ ಎಚ್ 95.68%
596/625 ಭುವನ್ ವಸಂತಕುಮಾರ್ ಪಾಟೀಲ್ 95.36%
594/625 ಪ್ರೀತಮ್ ಎಸ್ 95.04%
591/625 ಯಶಸ್ ವಿ ಇಂಗ್ಲಿಷ್-100, 94.56%
ಶ್ರೀ ರಾಮಕೃಷ್ಣ ಗುರುಕುಲ, ಚೋರಡಿ, ಶಿವಮೊಗ್ಗ
STATE SEVENTH RANK
619/625 ರಮ್ಯ ಸಿ ಪಿ
4 ಬಾರಿ ರಾಜ್ಯಕ್ಕೆ ಪ್ರಥಮ ಸ್ಥಾನ ಪಡೆದಿರುವ ಏಕೈಕ ಶಾಲೆ
100% RESULTS
Admission Opens from LKG to 10th std
ಶ್ರೀ ರಾಮಕೃಷ್ಣ ಆಂಗ್ಲ ಮಾಧ್ಯಮ ಪ್ರೌಢಶಾಲೆ
ಬಿ.ಆರ್.ವಿ ಮಾಡೆಲ್ ಸ್ಕೂಲ್, ತ್ಯಾಗರಾಜನಗರ, ಶೃಂಗೇರಿ
612/625 ಆಕ್ಷಿನ್ ಯು ಹೆಚ್
602/625 ಧನುಷ್ ಆರ್ ಶೆಟ್ಟಿ 96.32%
598/625 ಪ್ರೀತಮ್ ಆರ್ ಹಿಂದಿ-100, 95.68%
595/625 ಸಾನ್ವಿ ಎಮ್ ಎಸ್ 95.02%
593/625 ಶರಣ್ಯ ಹೆಚ್ಎಸ್ ಹಿಂದಿ-100, 94.88%
589/625 ಮಾಹೀನ ಮಾಳಿ 94.24%
ಪ್ರತಿ ವರ್ಷದಂತೆ ಈ ಬಾರಿಯೂ ಗುಣಾತ್ಮಕ ಫಲಿತಾಂಶದಲ್ಲಿ ತಾಲ್ಲೂಕಿಗೆ ಪ್ರಥಮ
9845560531 , 9480109422 , 9035937423, 9108255263

ಪರಿಶಿಷ್ಟ ಜಾತಿ ಸಮೀಕ್ಷೆಗೆ ಸಮನ್ವಯ ತಂಡ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿ ಪರಿಶಿಷ್ಟ ಜಾತಿ ಸಮಗ್ರ ಸಮೀಕ್ಷೆ ವೇಳೆ ಸಮಸ್ಯೆ ಕಂಡುಬಂದರೆ ಅದನ್ನು ಬಗೆಹರಿಸುವುದಕ್ಕಾಗಿ ಸಮನ್ವಯ ತಂಡ ನಿಯೋಜಿಸಲು ಮುಖ್ಯ ಆಯುಕ್ತ ಎಂ. ಮಹೇಶ್ವರ ರಾವ್ ಸೂಚಿಸಿದ್ದಾರೆ.

ಬಿಬಿಎಂಪಿ ಹಾಗೂ ಇ-ಆಡಳಿತ ಸಮನ್ವಯದಿಂದ ಕೆಲಸ ಮಾಡಬೇಕು. ಮೊಬೈಲ್ ತಂತ್ರಾಂಶದ ಮೂಲಕ ಸಮೀಕ್ಷಾ ಕಾರ್ಯ ನಡೆಸುತ್ತಿದ್ದು, ಹೆಚ್ಚುವರಿಯಾಗಿ ತರಬೇತಿ ನೀಡಿ ತ್ವರಿತವಾಗಿ ಸಮೀಕ್ಷೆ ಮಾಡಲು ಅಗತ್ಯ ಕ್ರಮಗಳನ್ನು ಕೈಗೊಳ್ಳಲು ಅಧಿಕಾರಿಗಳಿಗೆ ಸೂಚಿಸಿದರು. ನಗರದ 28 ವಿಧಾನಸಭಾ ಕ್ಷೇತ್ರಗಳಲ್ಲಿ ಬೂತ್ ಮಟ್ಟದ ಅಧಿಕಾರಿಗಳನ್ನು ಗಣತಿದಾರರನ್ನಾಗಿ ನಿಯೋಜಿಸಲಾಗಿದ್ದು, ಆಯಾ ವಲಯ ಹಿರಿಯ ಅಧಿಕಾರಿಗಳು ಸಮೀಕ್ಷಾ ಕಾರ್ಯವನ್ನು ಖುದ್ದು ಮೇಲ್ವಿಚಾರಣೆ ಮಾಡಬೇಕು. ಪರಿಶಿಷ್ಟ ಜಾತಿ ಸಮಗ್ರ ಸಮೀಕ್ಷಾ ಕಾರ್ಯವನ್ನು ತ್ವರಿತವಾಗಿ ಪೂರ್ಣಗೊಳಿಸುವ ನಿಟ್ಟಿನಲ್ಲಿ ಪ್ರತ್ಯೇಕ ಸರ್ವರ್ ವ್ಯವಸ್ಥೆ ಮಾಡಲು ಅಗತ್ಯ ಕ್ರಮ ಕೈಗೊಳ್ಳಬೇಕು ಎಂದರು.

ಬಿಬಿಎಂಪಿ ಸುದ್ದಿ

ಪರಿಶಿಷ್ಟ ಜಾತಿ, ಉಪ ಜಾತಿ ಸಮಗ್ರ ಸಮೀಕ್ಷೆಗೆ ಒಳಪಡುವವರು ಆಧಾರ್/ಪಡಿತರ ಚೀಟಿ ನೀಡಿ ನೋಂದಣಿ ಮಾಡಿಕೊಂಡ ನಂತರ ಅವರ ಮತ್ತು ಕುಟುಂಬದವರ ವೈಯಕ್ತಿಕ ವಿವರ ಒದಗಿಸಬೇಕಾಗುತ್ತದೆ. ಕುಟುಂಬ ಸದಸ್ಯರ ವಿವರ, ಶೈಕ್ಷಣಿಕ, ಆರ್ಥಿಕ, ಔದ್ಯೋಗಿಕ, ಸರ್ಕಾರಿ ಸವಲತ್ತುಗಳು, ಮೂಲಸೌಕರ್ಯ ಸೇರಿ ಸಮಗ್ರ ಮಾಹಿತಿ ಒದಗಿಸಬೇಕಿರುತ್ತದೆ ಎಂದು ತಿಳಿಸಿದರು.

ಬಿಬಿಎಂಪಿ ವ್ಯಾಪ್ತಿಯ 28 ವಿಧಾನಸಭೆ ಕ್ಷೇತ್ರಗಳಲ್ಲಿ ಈವರೆಗೆ 13,796 ಪರಿಶಿಷ್ಟ ಜಾತಿ ಮನೆಗಳಿಗೆ ಭೇಟಿ ನೀಡಿ ಸಮೀಕ್ಷಾ ಕಾರ್ಯ ಕೈಗೊಳ್ಳಲಾಗಿದೆ ಎಂದರು.

ಕಾರ್ಮಿಕರ ಕೆಲಸದ ಅವಧಿ ಹೆಚ್ಚಳ ಸರ್ಕಾರದ ನಿರ್ಧಾರಕ್ಕೆ ವಿರೋಧ

ಬೆಂಗಳೂರು: ರಾಜ್ಯ ಸರ್ಕಾರ ಕಾರ್ಮಿಕರ ಕೆಲಸದ ಅವಧಿಯನ್ನು 8 ಗಂಟೆಯಿಂದ 10 ಗಂಟೆಯವರೆಗೆ ಹೆಚ್ಚಿಸಿರುವುದು ಖಂಡನೀಯ ಎಂದು ಆಲ್ ಇಂಡಿಯಾ ಬಹುಜನ ಸಮಾಜ ಪಾರ್ಟಿ ತಿಳಿಸಿದೆ.

‘ಡಾ.ಬಿ.ಆರ್. ಅಂಬೇಡ್ಕರ್ ಅವರು ಕೆಲಸದ ವೇಳೆ 8 ಗಂಟೆ ಇರಬೇಕೆಂದು ಸ್ವಾತಂತ್ರ್ಯ ಪೂರ್ವ ಮತ್ತು ಸ್ವಾತಂತ್ರ್ಯ ನಂತರದಲ್ಲಿ ಯಶಸ್ವಿ ಹೋರಾಟ ನಡೆಸಿದ್ದರು. ದಿನದ 8 ಗಂಟೆ ಕೆಲಸದ ಅವಧಿ ಜಾರಿಗೆ ಅಂತರರಾಷ್ಟ್ರೀಯ ಮಟ್ಟದಲ್ಲಿ ಅನೇಕ ಹೋರಾಟಗಳು ನಡೆಯುತ್ತಿವೆ. ವಿಶ್ವದ ಅನೇಕ ದೇಶಗಳಲ್ಲಿ ಕೆಲಸದ ಅವಧಿಯನ್ನು 5 ಗಂಟೆಗೆ ಕಡಿತಗೊಳಿಸುವ ಸಂದರ್ಭದಲ್ಲಿ ನಮ್ಮ ರಾಜ್ಯ ಹಿಂದಡಿ ಇಡುತ್ತಿರುವುದು ಸರಿಯಲ್ಲ. ಇದಕ್ಕೆ ನಮ್ಮ ವಿರೋಧವಿದೆ’ ಎಂದು ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ಮಾರಸಂದ್ರ ಮುನಿಯಪ್ಪ ತಿಳಿಸಿದ್ದಾರೆ.

‘ಮಹಿಳೆಯರ ರಾತ್ರಿ ಪಾಳಿಯ ಬಗ್ಗೆ ತೀರ್ಮಾನ ಕೈಗೊಳ್ಳುವ ಮೊದಲು ಕೆಲಸದ ಸ್ಥಳದಲ್ಲಿ ಮತ್ತು ಕೆಲಸಕ್ಕೆ ಹೋಗಿ ಬರುವಾಗ ಅವರ ಸುರಕ್ಷತೆಯ ಬಗ್ಗೆ ವ್ಯಾಪಕ ಚರ್ಚೆ ನಡೆಸಿ ಸರ್ಕಾರ ತೀರ್ಮಾನ ಕೈಗೊಳ್ಳಬೇಕು ಎಂದು ಪ್ರಕಟಣೆಯಲ್ಲಿ ಒತ್ತಾಯಿಸಿದ್ದಾರೆ.



ಕಲ್ಕೆರೆ ರಸ್ತೆಯಲ್ಲಿ ಒಡೆದು ಹೋಗಿದ್ದ ಕಾವೇರಿ ನೀರಿನ ಕೊಳವೆಯನ್ನು ದುರಸ್ತಿಗೊಳಿಸಿರುವುದು

ಕಲ್ಕೆರೆ: ನೀರಿನ ಕೊಳವೆ ದುರಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು/ ಕೆ.ಆರ್.ಪುರ: ರಾಮಮೂರ್ತಿನಗರ ವಾರ್ಡ್ ವ್ಯಾಪ್ತಿಯ ಕಲ್ಕೆರೆ, ಬಂಜಾರ ಬಡಾವಣೆಗಳ ಸುತ್ತಮುತ್ತಲಿನ ಪ್ರದೇಶಗಳಲ್ಲಿ (ಓಂಶಕ್ತಿ ದೇವಾಲಯದ ಸಮೀಪ) ಒಡೆದು ಹೋಗಿದ್ದ ಕಾವೇರಿ ನೀರು ಸರಬರಾಜು ಕೊಳವೆಗಳನ್ನು ಜಲಮಂಡಳಿ ಅಧಿಕಾರಿಗಳು ದುರಸ್ತಿಗೊಳಿಸಿದ್ದಾರೆ.

ಕೊಳವೆಗಳು ಒಡೆದು ನೀರು ಸೋರಿಕೆಯಾಗುತ್ತಿದ್ದರಿಂದ, ಕಲ್ಕೆರೆ ಮತ್ತು ಬಂಜಾರ ಬಡಾವಣೆಯ ಕೆಲವು ರಸ್ತೆಗಳಲ್ಲಿನ ಮನೆಗಳಿಗೆ ಕಾವೇರಿ ನೀರು ಪೂರೈಕೆಯಾಗದೇ ತೊಂದರೆಯಾಗಿತ್ತು. ‘ಹಣ ಪಾವತಿಸಿ ಕಾವೇರಿ ಸಂಪರ್ಕ ಪಡೆದು ಮೂರು ತಿಂಗಳಾದರೂ ನೀರು ಬರುತ್ತಿಲ್ಲ.

ವರದಿ ಪರಿಣಾಮ

ಈ ಬಗ್ಗೆ ಜಲಮಂಡಳಿಗೆ ದೂರು ನೀಡಿದ್ದರೂ ಪ್ರಯೋಜನವಾಗಿಲ್ಲ’ ಎಂದು ನಿವಾಸಿಗಳು ದೂರಿದ್ದರು.

ಈ ಕುರಿತು ‘ಪ್ರಜಾವಾಣಿ’ಯ ಮೇ 8ರ ಸಂಚಿಕೆಯಲ್ಲಿ ‘ಹಣ ಪಾವತಿಸಿದರೂ ಬಾರದ ‘ಕಾವೇರಿ’ ಶೀರ್ಷಿಕೆಯಡಿ ವರದಿ ಪ್ರಕಟಿಸಲಾಗಿತ್ತು. ವರದಿಯಿಂದ ಎಚ್ಚೆತ್ತ ಜಲಮಂಡಳಿ ಸಿಬ್ಬಂದಿ ಬಡಾವಣೆಗಳಿಗೆ ಭೇಟಿ ನೀಡಿ, ಒಡೆದು ಹೋಗಿರುವ ಕಾವೇರಿ ನೀರಿನ ಕೊಳವೆಗಳ ದುರಸ್ತಿ ಆರಂಭಿಸಿದ್ದಾರೆ.

‘ಬೆಸ್ಕಾಂನಿಂದ ಭೂಗತ ಕೇಬಲ್‌ಗಳ ಅಳವಡಿಕೆ ಕಾಮಗಾರಿ ನಡೆಯುತ್ತಿದೆ. ಕಾಮಗಾರಿ ಸಂದರ್ಭದಲ್ಲಿ ಐದು ಮುಖ್ಯ ರಸ್ತೆಗಳಲ್ಲಿ 12 ಕಡೆ ಕಾವೇರಿ ನೀರು ಪೂರೈಕೆಯ ಕೊಳವೆಗಳು ಒಡೆದು ಹೋಗಿದ್ದವು. ಇದರಿಂದ ಕೆಲವು ಕಡೆ ನೀರು ಪೂರೈಕೆಯಲ್ಲಿ ವ್ಯತ್ಯಯವಾಗಿತ್ತು. ಈಗ ತಕ್ಷಣಕ್ಕೆ ಆರು ಕಡೆ ದುರಸ್ತಿಕಾರ್ಯ ಪೂರ್ಣಗೊಳಿಸಲಾಗಿದೆ. ಉಳಿದ ಕಡೆ ದುರಸ್ತಿ ಕಾರ್ಯ ಕೈಗೊಳ್ಳಲಾಗುತ್ತಿದೆ’ ಎಂದು ಜಲಮಂಡಳಿ ಎಂಜಿನಿಯರ್ ಒಬ್ಬರು ‘ಪ್ರಜಾವಾಣಿ’ಗೆ ತಿಳಿಸಿದರು.

‘ಕೊಳವೆಗಳನ್ನು ಜಲಮಂಡಳಿಯವರು ದುರಸ್ತಿ ಮಾಡಿದ್ದಾರೆ. ಇನ್ನೂ ಕೆಲವು ಕಡೆ ಬಾಕಿ ಇವೆ. ಕೆಲವು ಮನೆಗಳಿಗೆ ಇನ್ನೂ ಕಾವೇರಿ ಬರುತ್ತಿಲ್ಲ. ಒಳಚರಂಡಿ ವ್ಯವಸ್ಥೆಯೂ ಸರಿಯಾಗ ಬೇಕಾಗಿದೆ’ ಎಂದು ನಿವಾಸಿಗಳು ಪ್ರತಿಕ್ರಿಯಿಸಿದರು.

ಸಮೀಕ್ಷೆ ಅವಧಿ ವಿಸ್ತರಿಸಲು ಆಗ್ರಹ

ಬೆಂಗಳೂರು: ಒಳಮೀಸಲಾತಿ ವರ್ಗೀಕರಣ ಮಾಡಲು ಪರಿಶಿಷ್ಟ ಜಾತಿಯ ಉಪಜಾತಿಗಳ ಸಮೀಕ್ಷೆ ನಡೆಸಲು ಆಯೋಗ ನಿಗದಿ ಪಡಿಸಿರುವ ಅವಧಿಯನ್ನು ಮೇ 23ರ ಬದಲು ಜೂನ್ 15ರವರೆಗೆ ವಿಸ್ತರಿಸಬೇಕು ಎಂದು ಕರ್ನಾಟಕ ನವ ಜಾಗೃತಿ ವೇದಿಕೆ ಆಗ್ರಹಿಸಿದೆ.

ಗ್ರಾಮೀಣ ಭಾಗಗಳಲ್ಲಿ ನೆಟ್‌ವರ್ಕ್ ಸಮಸ್ಯೆ ಇರುವುದರಿಂದ ಮೊಬೈಲ್‌ನಲ್ಲಿ ಆಯೋಗದ ಆ್ಯಪ್ ಬಳಸಿ ದತ್ತಾಂಶ ದಾಖಲು ಮಾಡಲು ಪ್ರತಿ ಮನೆಗೆ ಕನಿಷ್ಠ ಒಂದು ಗಂಟೆ ಬೇಕು. ಒಬ್ಬರಿಗೆ ದಿನಕ್ಕೆ 5–6 ಮನೆಗಳಷ್ಟೇ ಸಂದರ್ಶಿಸಲು ಸಾಧ್ಯ. ಅಲ್ಲದೇ ಬಿಬಿಎಂಪಿ ಸೇರಿದಂತೆ ನಗರ ಪ್ರದೇಶಗಳಲ್ಲಿ ಸಮೀಕ್ಷೆದಾರರು ಉದಾಸೀನದಿಂದ ಇನ್ನೂ ಸಮೀಕ್ಷೆ ಆರಂಭಿಸಿಲ್ಲ. ಕೆಲವೆಡೆ ಸಮೀಕ್ಷೆದಾರರ ನೇಮಕವೂ ಆಗಿಲ್ಲ. ಅದಕ್ಕಾಗಿ ಸಮೀಕ್ಷಾ ಅವಧಿ ವಿಸ್ತರಿಸಬೇಕು. ಉದಾಸೀನ ತೋರಿರುವ ಸಮೀಕ್ಷೆದಾರರ, ಅಧಿಕಾರಿಗಳ ಮೇಲೆ ಕ್ರಮ ಕೈಗೊಳ್ಳಬೇಕು ಎಂದು ವೇದಿಕೆ ಅಧ್ಯಕ್ಷ ಅನಂತರಾಯಪ್ಪ ಆಗ್ರಹಿಸಿದ್ದಾರೆ.

ಆರೋಪಿ ವಶಕ್ಕೆ ಪಡೆದ ಮಡಿವಾಳ ಠಾಣೆಯ ಪೊಲೀಸರು

ಪಾರ್ಟಿ ವೇಳೆ ಗಲಾಟೆ: ವ್ಯಕ್ತಿ ಕೊಲೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಡಿವಾಳ ಪೊಲೀಸ್ ಠಾಣಾ ವ್ಯಾಪ್ತಿಯ ವೆಂಕಟೇಶ್ವರ ಲೇಔಟ್‌ನಲ್ಲಿ ಸ್ನೇಹಿತರು ನಡೆಸುತ್ತಿದ್ದ ಮದ್ಯದ ಪಾರ್ಟಿ ವೇಳೆ ಗಲಾಟೆ ನಡೆದು ವ್ಯಕ್ತಿಯನ್ನು ಕೊಲೆ ಮಾಡಲಾಗಿದೆ.

ವೆಂಕಟೇಶ್ವರ ಲೇಔಟ್ ನಿವಾಸಿ ಮಾರ್ಟಿನ್ ಸೈಮನ್ (28) ಕೊಲೆಯಾದ ವ್ಯಕ್ತಿ. ಕೃತ್ಯ ಎಸಗಿದ ಇನ್ಸೆಂಟ್ ರಾಜು (26) ಎಂಬಾತನನ್ನು ಪೊಲೀಸರು ವಶಕ್ಕೆ ಪಡೆದುಕೊಂಡಿದ್ದಾರೆ.

ಶುಕ್ರವಾರ ರಾತ್ರಿ ಠಾಣೆ ವ್ಯಾಪ್ತಿಯ ವೆಂಕಟೇಶ್ವರ ಲೇಔಟ್‌ನ 18ನೇ ಕ್ರಾಸ್‌ನ ಮನೆಯೊಂದರಲ್ಲಿ ಮದ್ಯದ ಪಾರ್ಟಿ ನಡೆಯುತ್ತಿತ್ತು. ಆಗ ಗಲಾಟೆ ನಡೆದು ಅದು ವಿಕೋಪಕ್ಕೆ ಹೋಗಿ ವ್ಯಕ್ತಿಯನ್ನು ಕೊಲೆ ಮಾಡಲಾಗಿದೆ ಎಂದು ಪೊಲೀಸರು ಹೇಳಿದರು.

ತಮಿಳುನಾಡಿನ ಮಾರ್ಟಿನ್ ಸೈಮನ್ ಅವರು ಸಾಫ್ಟ್‌ವೇರ್ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದರು. ಕುಟುಂಬದ ಜತೆಗೆ ವೆಂಕಟೇಶ್ವರ ಲೇಔಟ್‌ನ ನಾಲ್ಕು ಅಂತಸ್ತಿನ ಕಟ್ಟಡದಲ್ಲಿ ಮೂರನೇ ಮಹಡಿಯಲ್ಲಿ ವಾಸವಾಗಿದ್ದರು. ಆರೋಪಿ ಇನ್ಸೆಂಟ್ ರಾಜು, ಖಾಸಗಿ ಬ್ಯಾಂಕ್‌ನಲ್ಲಿ ಸಾಲ ವಸೂಲಾತಿ ವಿಭಾಗದಲ್ಲಿ ಕೆಲಸ ಮಾಡುತ್ತಿದ್ದ. ಸೈಮನ್ ವಾಸವಾಗಿದ್ದ ಕಟ್ಟಡದ ನೆಲಮಹಡಿಯ ಮನೆಯಲ್ಲಿ ಆರೋಪಿ ವಾಸವಾಗಿದ್ದ ಎಂದು ತಿಳಿಸಿದರು.

‘ಒಂದೇ ಕಟ್ಟಡದಲ್ಲಿ ಇಬ್ಬರೂ ವಾಸವಿದ್ದ ಕಾರಣಕ್ಕೆ ಪರಸ್ಪರ ಪರಿಚಯ ಇದ್ದರು. ಸ್ನೇಹಿತರಾಗಿದ್ದರು. ಶುಕ್ರವಾರ ರಾತ್ರಿ ಕಟ್ಟಡದ ಚಾವಣಿಯ ಜಾಗದಲ್ಲಿ ಇಬ್ಬರು ಮದ್ಯದ ಪಾರ್ಟಿ ಮಾಡಲು ಹೋಗಿದ್ದರು. ಮದ್ಯದ ಅಮಲಿನಲ್ಲಿ ಗಲಾಟೆ ಮಾಡಿಕೊಂಡಿದ್ದಾರೆ. ಕೋಪಗೊಂಡ ಆರೋಪಿ ಪಕ್ಕದಲ್ಲೇ ಇದ್ದ ಇಟ್ಟಿಗೆಯಿಂದ ಸೈಮನ್ ಮೇಲೆ ಹಲ್ಲೆ ನಡೆಸಿ ಕೊಲೆ ಮಾಡಿದ್ದಾನೆ. ಸೈಮನ್ ಸ್ಥಳದಲ್ಲೇ ಮೃತಪಟ್ಟಿದ್ದರು. ಆರೋಪಿ ಪರಾರಿ ಆಗಿದ್ದ’ ಎಂದು ಪೊಲೀಸರು ಹೇಳಿದರು.

ಕೊಲೆ ಪ್ರಕರಣ ದಾಖಲಿಸಿಕೊಂಡು, ಸ್ನೇಹಿತನ ಮನೆಯಲ್ಲಿ ಅಡಗಿದ್ದ ಆರೋಪಿಯನ್ನು ಶನಿವಾರ ಮಧ್ಯಾಹ್ನ ಬಂಧಿಸಲಾಗಿದೆ ಎಂದು ತಿಳಿಸಿದರು.

ಉದ್ಯಮಿಗೆ ಥಳಿಸಿ ಕಾರು ಕೊಂಡೊಯ್ದ ಆರೋಪ; ಪ್ರಕರಣ ದಾಖಲು

ಕಾರು ತಾಗಿದ್ದಕ್ಕೆ ಉದ್ಯಮಿಯನ್ನು ಥಳಿಸಿ ಕಾರನ್ನೇ ಕೊಂಡೊಯ್ದ ಆರೋಪದಡಿ ಮಹಿಳೆಯ ವಿರುದ್ಧ ಕಬ್ಬನ್‌ಪಾರ್ಕ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಉದ್ಯಮಿ ವಿನಯ್ ಗೌಡ ಅವರು ನೀಡಿದ ದೂರಿನ ಮೇರೆಗೆ ದೀಪ್ತಿ ಕಟ್ರಗಡ್ಡ ಇತರರ ವಿರುದ್ಧ ಎಫ್‌ಐಆರ್ ದಾಖಲಿಸಿಕೊಂಡು ತನಿಖೆ ನಡೆಸಲಾಗುತ್ತಿದೆ ಎಂದು ಪೊಲೀಸರು ತಿಳಿಸಿದರು.

‘ಕಾರು, ಕಾರಿನಲ್ಲಿದ್ದ ದುಬಾರಿ ಬೆಲೆಯ ವಸ್ತುಗಳು ಹಾಗೂ ನಗದು ಹೊತ್ತೊಯ್ಯಲಾಗಿದೆ’ ಎಂದು ದೂರುದಾರರು ಆರೋಪಿಸಿದ್ದಾರೆ.

ಲ್ಯಾವೆಲ್ಲೆ ರಸ್ತೆಯ ಪೂರ್ವ ಗ್ರ್ಯಾಂಡ್ ಅಪಾರ್ಟ್‌ಮೆಂಟ್‌ನಲ್ಲಿ ವಾಸವಾಗಿರುವ ವಿನಯ್ ಅವರು ಮೇ 3ರಂದು ಮುಂಜಾನೆ ತಮ್ಮ ಪೋರ್ಶೆ ಕಾರನ್ನು ಅಪಾರ್ಟ್‌ಮೆಂಟ್‌ನಿಂದ ಹೊರಕ್ಕೆ ತೆಗೆಯುತ್ತಿದ್ದರು. ಆಗ ದೀಪ್ತಿ ಎಂಬುವರ ಕಾರಿಗೆ ತಾಗಿದ್ದರಿಂದ ಇಬ್ಬರ ಮಧ್ಯೆ ಗಲಾಟೆ ನಡೆದಿತ್ತು. ದೀಪ್ತಿ ಕಡೆಯವರು ನನ್ನ ಮೇಲೆ ಹಲ್ಲೆ ನಡೆಸಿದ್ದಾರೆ ಎಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ.

ಹಲ್ಲೆಯ ಬಳಿಕ ₹56 ಲಕ್ಷ ಮೌಲ್ಯದ ಕಾರು ಹಾಗೂ ಕಾರಿನಲ್ಲಿದ್ದ ₹1.50 ಲಕ್ಷ ನಗದು, ₹85 ಸಾವಿರ ಮೌಲ್ಯದ ಸನ್‌ಗ್ಲಾಸ್ ಕಳವು ಮಾಡಿದ್ದಾರೆ ಎಂದು ಹೇಳಿದ್ದಾರೆ.

₹20 ಲಕ್ಷಕ್ಕೆ ಬೇಡಿಕೆ: ‘ದೀಪ್ತಿ ಅವರಿಗೆ ಕರೆ ಮಾಡಿ ಕಾರು ಹಾಗೂ ಮೊಬೈಲ್ ವಾಪಸ್ ನೀಡುವಂತೆ ಮನವಿ ಮಾಡಿದ್ದೆ. ₹20 ಲಕ್ಷ ನೀಡಿದರೆ ವಾಪಸ್ ನೀಡುವುದಾಗಿ ಹೇಳಿದ್ದರು’ ಎಂದು ವಿನಯ್ ಗೌಡ ಆರೋಪಿಸಿದ್ದಾರೆ.

‘ಮಹಿಳೆಗೆ ನೋಟಿಸ್ ನೀಡಿ ವಿಚಾರಣೆ ನಡೆಸಲಾಗಿದೆ. ವಿನಯ್ ಅವರ ಕಾರು ತಮ್ಮ ಕಾರಿಗೆ ಡಿಕ್ಕಿ ಹೊಡೆದಿದ್ದು ನಿಜ. ಅಲ್ಲಿಂದ ಕಾರು ತೆಗೆದುಕೊಂಡು ಹೋಗಿಲ್ಲ. ದೂರುದಾರರೇ ದೇವನಹಳ್ಳಿಯ ಮನೆಯ ಎದುರು ಕಾರು ನಿಲುಗಡೆ ಮಾಡಿ ಸುಳ್ಳು ಹೇಳಿದ್ದಾರೆ’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

‘ದೂರುದಾರ ಹಾಗೂ ಮಹಿಳೆ ಹೇಳಿಕೆಯನ್ನು ಪಡೆದುಕೊಂಡು ಪರಿಶೀಲಿಸಲಾಗುತ್ತಿದೆ. ಆರೋಪಿ ಹೇಳಿರುವುದು ಮೇಲ್ನೋಟಕ್ಕೆ ನಿಜವೆಂದು ಕಾಣಿಸುತ್ತಿದೆ. ತನಿಖೆ ಮುಂದುವರೆದಿದೆ’ ಎಂದು ಪೊಲೀಸರು ಹೇಳಿದರು.

ಚಕ್ರವರ್ತಿ ವಿರುದ್ಧ ದೂರು

ಯುವ ಬ್ರಿಗೇಡ್‌ನ ಸಂಸ್ಥಾಪಕ ಚಕ್ರವರ್ತಿ ಸೂಲಿಬೆಲೆ ಅವರು ಕಾಂಗ್ರೆಸ್ ವಿರುದ್ಧ ಅಪಪ್ರಚಾರ ನಡೆಸುತ್ತಿದ್ದಾರೆ ಎಂದು ಆರೋಪಿಸಿ ದೂರು ನೀಡಲಾಗಿದೆ.

ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಎಸ್.ಮನೋಹರ್ ಅವರು ನೀಡಿರುವ ದೂರನ್ನು ಸ್ವೀಕರಿಸಿರುವ ಹೈಗ್ರೌಂಡ್ಸ್ ಠಾಣೆ ಪೊಲೀಸರು ಸ್ವೀಕೃತಿ ಪತ್ರ ನೀಡಿದ್ದಾರೆ.

ಪಾಕಿಸ್ತಾನದಲ್ಲಿದ್ದ ಉಗ್ರರ ಅಡಗು ತಾಣಗಳನ್ನು ಭಾರತೀಯ ಸೇನೆ ಧ್ವಂಸ ಮಾಡಿದೆ. ಇಂತಹ ಸಂದರ್ಭದಲ್ಲಿ ರಾಜಕೀಯ ಲಾಭಕ್ಕಾಗಿ ಪ್ರಚಾರ ಪಡೆಯುವ ಚಕ್ರವರ್ತಿ ಸೂಲಿಬೆಲೆ ಅವರು ಭಾರತದ ಸೈನಿಕರ ಆತ್ಮಸ್ಥೈರ್ಯವನ್ನು ಕುಗ್ಗಿಸುವಂತಹ ಹೇಳಿಕೆ ನೀಡುತ್ತಿದ್ದಾರೆ. ಅಲ್ಲದೇ ಕಾಂಗ್ರೆಸ್ ಪಕ್ಷದ ಬಗ್ಗೆ ಅಪಪ್ರಚಾರ ಮಾಡುತ್ತಿದ್ದಾರೆ. ಹಿಂದೂ, ಮುಸ್ಲಿಂ, ಭಾರತ– ಪಾಕಿಸ್ತಾನದ ಹೆಸರಿನಲ್ಲಿ ಪ್ರಚಾರ ಗಿಟ್ಟಿಸಿಕೊಳ್ಳಲು ಸುಳ್ಳು ಮಾಹಿತಿ ಹರಿಬಿಡುತ್ತಿದ್ದಾರೆ. ಚಕ್ರವರ್ತಿ ಸೂಲಿಬೆಲೆಯ ವಿರುದ್ಧ ಕ್ರಮ ಕೈಗೊಳ್ಳುವಂತೆ ಮನೋಹರ್ ಅವರು ದೂರಿನಲ್ಲಿ ಕೋರಿದ್ದಾರೆ.

ಸುದ್ದಿ 2 ನಿಮಿಷ

ಬೈಕ್ ಸವಾರನಿಗೆ ಜೈಲು

ಬೆಂಗಳೂರು: ಪಾದಚಾರಿಯ ಸಾವಿಗೆ ಕಾರಣನಾಗಿದ್ದ ಬೈಕ್ ಸವಾರನಿಗೆ ಒಂದನೇ ಜೆಎಂಎಫ್‌ಸಿ ನ್ಯಾಯಾಲಯವು 30 ದಿನ ಜೈಲು ಶಿಕ್ಷೆ ಹಾಗೂ ಒಂದು ಸಾವಿರ ರೂಪಾಯಿ ದಂಡ ವಿಧಿಸಿ ಆದೇಶಿಸಿದೆ.

ಧರ್ಮನ್ (39) ಶಿಕ್ಷೆಗೆ ಒಳಗಾದ ಸವಾರ. ಬೈಕ್ ಸವಾರ ದಂಡ ಪಾವತಿಸಲು ವಿಫಲನಾದರೆ ಹೆಚ್ಚುವರಿಯಾಗಿ 15 ದಿನ ಸಾದಾ ಸಜೆ ವಿಧಿಸಿ ನ್ಯಾಯಾಲಯ ಆದೇಶಿಸಿದೆ.

ಸಂಚಾರ ಪೂರ್ವ ವಿಭಾಗದ ಎಚ್‌ಎಎಲ್ ಏರ್‌ಪೋರ್ಟ್ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯ ಹೊರವರ್ತುಲ ರಸ್ತೆಯ ದೇವರಬೀಸನಹಳ್ಳಿ ಕಂಟ್ರಿ ಕ್ಲಬ್



ಬಸ್‌ನಿಲ್ದಾಣದ ಬಳಿ 2020ರ ಆಗಸ್ಟ್ 23ರಂದು ಸಂಭವಿಸಿದ ಅಪಘಾತದಲ್ಲಿ ಪಾದಚಾರಿ ನಾರಾಯಣ್ (59) ಎಂಬುವರು ಮೃತಪಟ್ಟಿದ್ದರು. ಪ್ರಕರಣ ದಾಖಲಿಸಿಕೊಂಡಿದ್ದ ಸಂಚಾರ ಪೊಲೀಸರು ತನಿಖೆ ನಡೆಸಿ ನ್ಯಾಯಾಲಯಕ್ಕೆ ಅಂತಿಮ ವರದಿ ಸಲ್ಲಿಸಿದ್ದರು.

ಸವಾರ ಬೆಳ್ಳಂದೂರು ಕಡೆಯಿಂದ ಕಾಡುಬೀಸನಹಳ್ಳಿ ಕಡೆಗೆ ದ್ವಿಚಕ್ರ ವಾಹನದಲ್ಲಿ ಬರುತ್ತಿದ್ದ. ಅದೇ ವೇಳೆ ರಸ್ತೆ ದಾಟುತ್ತಿದ್ದ ನಾರಾಯಣ ಅವರಿಗೆ ಬೈಕ್ ಡಿಕ್ಕಿಯಾದ ಪರಿಣಾಮ ಗಂಭೀರವಾಗಿ ಗಾಯಗೊಂಡಿದ್ದರು. ಗಾಯಾಳುವನ್ನು ಸಂಜಯಗಾಂಧಿ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆಸ್ಪತ್ರೆಯಲ್ಲಿ ಅವರು ಮೃತಪಟ್ಟಿದ್ದರು.

ಬೈಕ್ ಸವಾರ ಧರ್ಮನ್, ಅತಿವೇಗ ಹಾಗೂ ಅಜಾಗರೂಕತೆಯ ಚಾಲನೆಯಿಂದ ಅಪಘಾತ ನಡೆದಿದ್ದು ಸಂಚಾರ ಪೊಲೀಸರ ತನಿಖೆಯಿಂದ ಗೊತ್ತಾಗಿತ್ತು.

₹50 ಲಕ್ಷದ ಆಭರಣ ಕಳ್ಳತನ

ಬೆಂಗಳೂರು: ಯಲಹಂಕ ನ್ಯೂಟೌನ್ ಪೊಲೀಸ್ ಠಾಣಾ ವ್ಯಾಪ್ತಿಯ ಮನೆಯೊಂದರ ಕಬ್ಬಿಣದ ಗ್ರಿಲ್ ಅನ್ನು ಗ್ಯಾಸ್ ಕಟರ್‌ನಿಂದ ಕತ್ತರಿಸಿ ಮನೆಯ ಒಳಗೆ ನುಗ್ಗಿದ ಕಳ್ಳರು ₹50 ಲಕ್ಷ ಮೌಲ್ಯದ ಚಿನ್ನ ಹಾಗೂ ವಜ್ರದ ಆಭರಣಗಳನ್ನು ಕಳ್ಳತನ ಮಾಡಿ ಪರಾರಿ ಆಗಿದ್ದಾರೆ.

ಎಸ್‌ಎಸ್‌ಎಫ್ ಬಡಾವಣೆಯ ನಿವಾಸಿ ದುರುಜಸ್ವಾಲ್ ಎಂಬುವರು ಮೇ 5ರಂದು ತಮ್ಮ ಮನೆಗೆ ಬೀಗ ಹಾಕಿಕೊಂಡು ಕೇರಳ ಹಾಗೂ ಮೈಸೂರು ಪ್ರವಾಸಕ್ಕೆ ತೆರಳಿದ್ದರು. ಪ್ರವಾಸ ಮುಗಿಸಿಕೊಂಡು ಮನೆಗೆ ಬಂದು ನೋಡುವಾಗ ಮನೆಯ ಹಿಂದೆ ಅಳವಡಿಸಿದ್ದ ಕಬ್ಬಿಣದ ಗ್ರಿಲ್ ಅನ್ನು ಗ್ಯಾಸ್ ಕಟರ್ ನೆರವಿನಿಂದ ಕತ್ತರಿಸಿ ಮನೆಯ ಒಳಕ್ಕೆ ನುಗ್ಗಿ ಕಳ್ಳತನ ಮಾಡಿರುವುದು ಗೊತ್ತಾಗಿತ್ತು. ಅದಾದ ಮೇಲೆ ಮನೆ ಮಾಲೀಕರು ದೂರು ನೀಡಿದ್ದರು ಎಂದು ಪೊಲೀಸರು ಹೇಳಿದರು.

‘350 ಗ್ರಾಂ ಚಿನ್ನ ಹಾಗೂ ವಜ್ರದ ಆಭರಣಗಳನ್ನು ಕಳ್ಳತನ ಮಾಡಲಾಗಿದೆ ಎಂದು ದೂರು ನೀಡಲಾಗಿದೆ. ಶ್ವಾನದಳ ಹಾಗೂ ಬೆರಳಚ್ಚು ತಜ್ಞರು ಸ್ಥಳಕ್ಕೆ ತೆರಳಿ ಪರಿಶೀಲನೆ ನಡೆಸಿದ್ದಾರೆ. ರಸ್ತೆ ಹಾಗೂ ಅಕ್ಕಪಕ್ಕದ ಮನೆಗಳಲ್ಲಿ ಅಳವಡಿಸಿದ್ದ ಸಿ.ಸಿ.ಟಿ.ವಿ ಕ್ಯಾಮೆರಾಗಳಲ್ಲಿ ಸೆರೆಯಾದ ದೃಶ್ಯವನ್ನು ಪರಿಶೀಲನೆ ನಡೆಸಲಾಗಿದೆ’ ಎಂದು ಪೊಲೀಸರು ಹೇಳಿದರು.

ನಾಳೆ ಮಾಂಸ ಮಾರಾಟ ನಿಷೇಧ

ಬೆಂಗಳೂರು: ಬುದ್ಧ ಪೌರ್ಣಿಮಿ ಪ್ರಯುಕ್ತ ಬಿಬಿಎಂಪಿ ವ್ಯಾಪ್ತಿಯ ಕಸಾಯಿ ಖಾನೆಯಲ್ಲಿ ಪ್ರಾಣಿವಧೆ ಹಾಗೂ ಮಾರಾಟ ಮಳಿಗೆಗಳಲ್ಲಿ ಮೇ 12ರಂದು ಮಾಂಸ ಮಾರಾಟ ನಿಷೇಧಿಸಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

‘ಮಾಲಿನ್ಯ ತಡೆಗಟ್ಟದಿದ್ದರೆ ಸಂಕಷ್ಟ’

ಇಂಪ್ಯಾಕ್ಟಾಥಾನ್' ಅಭಿಯಾನದಲ್ಲಿ ರೇವತಿ ಕಾಮತ್ ಕಳವಳ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಾಲಿನ್ಯ ತಡೆಗಟ್ಟಿ, ಪರಿಸರ ರಕ್ಷಿಸದಿದ್ದರೆ ಭವಿಷ್ಯದಲ್ಲಿ ವಿಷಮ ಪರಿಸ್ಥಿತಿ ನಿರ್ಮಾಣವಾಗಲಿದೆ ಎಂದು ಪರಿಸರ ಕಾರ್ಯಕರ್ತೆ ರೇವತಿ ಕಾಮತ್ ಕಳವಳ ವ್ಯಕ್ತಪಡಿಸಿದರು.

ನಗರದಲ್ಲಿ ಶನಿವಾರ ವಿಮೂವ್ ಫೌಂಡೇಷನ್ ಆಯೋಜಿಸಿದ್ದ ‘ಇಂಪ್ಯಾಕ್ಟಾಥಾನ್’ ಅಭಿಯಾನಕ್ಕೆ ಚಾಲನೆ ನೀಡಿ ಮಾತನಾಡಿದರು.

ಸುಸ್ಥಿರ, ಹಸಿರು ಮತ್ತು ಸ್ವಚ್ಛ ಬೆಂಗಳೂರು ನಿರ್ಮಾಣಕ್ಕೆ ಪರಿಣಾಮಕಾರಿಯಾಗಿ ಕೆಲಸವಾಗಬೇಕಿದೆ. ಮಾಲಿನ್ಯ ತಡೆಗೆ ತುರ್ತಾಗಿ ಕ್ರಮ ತೆಗೆದುಕೊಳ್ಳಬೇಕಿದೆ. ದಿನದಿಂದ ದಿನಕ್ಕೆ ನೀರು, ಗಾಳಿ ಮತ್ತು ಪರಿಸರ ಕಲುಷಿತವಾಗುತ್ತಿದ್ದು, ಇದನ್ನು ತಡೆಗಟ್ಟಬೇಕಿದೆ. ಕೊಳಚೆ ನೀರಿಂದ ಹಾಳಾಗಿರುವ ನದಿ, ಕೆರೆಗಳನ್ನು ಪುನಶ್ಚೇತನಗೊಳಿಸಬೇಕು ಎಂದು ಒತ್ತಾಯಿಸಿದರು.

ಮಾಲಿನ್ಯದಿಂದ ಕ್ಯಾನ್ಸರ್ ಸೇರಿ ಮಾರಣಾಂತಿಕ ಕಾಯಿಲೆಗಳು ಹೆಚ್ಚಾಗುತ್ತಿವೆ. ಅಭಿವೃದ್ಧಿ ಹೆಸರಿನಲ್ಲಿ ಮರಗಳನ್ನು ಕಡಿಯುವುದನ್ನು ನಿಲ್ಲಿಸಬೇಕು. ಮಳೆ ನೀರು ಸಂಗ್ರಹ ವ್ಯವಸ್ಥೆ ಅಳವಡಿಸಬೇಕಿದೆ. ನಗರ ಸೇರಿ ರಾಜ್ಯದ ಕೆಲ ನಗರಗಳಲ್ಲಿ ಸುಲಭವಾಗಿ ಶಾಲಾ- ಕಾಲೇಜಿನ ವಿದ್ಯಾರ್ಥಿಗಳಿಗೆ ಮಾದಕ ವಸ್ತು ಸಿಗುತ್ತಿದ್ದು, ಇದಕ್ಕೆ ಕಡಿವಾಣ ಹಾಕಬೇಕು ಎಂದು ರೇವತಿ ಕಾಮತ್ ಆಗ್ರಹಿಸಿದರು.



ನಗರದಲ್ಲಿ ಶನಿವಾರ ವಿಮೂವ್ ಫೌಂಡೇಷನ್ ಆಯೋಜಿಸಿದ್ದ ಕಾರ್ಯಕ್ರಮವನ್ನು ಸಸಿಗೆ ನೀರು ಹಾಕುವ ಮೂಲಕ ಡಿ.ರಂದೀಪ್ ಉದ್ಘಾಟಿಸಿದರು. ವಿನಯ್ ಶಿಂಧೆ, ಕೆ.ಜಿ. ಸುನಿಲ್, ನಟಿ ಸಂಯುಕ್ತ ಹೊರನಾಡು ಉಪಸ್ಥಿತರಿದ್ದರು ಪ್ರಜಾವಾಣಿ ಚಿತ್ರ

ವಿಮೂವ್ ಸಂಸ್ಥಾಪಕ ವಿನಯ್ ಶಿಂಧೆ, ಸುಸ್ಥಿರ, ಹಸಿರು ಮತ್ತು ಸ್ವಚ್ಛ ಬೆಂಗಳೂರು ನಿರ್ಮಾಣಕ್ಕೆ ಪ್ರತಿಯೊಬ್ಬರೂ ನೀಡುವ ಸಲಹೆ ಮತ್ತು ಸಮೀಕ್ಷಾ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಲಾಗುವುದು. ‘ಸುಸ್ಥಿರ ಗ್ರೇಟರ್ ಬೆಂಗಳೂರು' ಬಗ್ಗೆ ಸಾರ್ವಜನಿಕರಲ್ಲಿ ಅರಿವು ಮೂಡಿಸಲು 21 ದಿನ ಅಭಿಯಾನವನ್ನು ಕೈಗೊಂಡಿದ್ದೇವೆ. ಇದಕ್ಕೆ ವಿವಿಧ ಸಂಸ್ಥೆಗಳು, ಪರಿಸರ ತಜ್ಞರು ಕೈಜೋಡಿಸಿದ್ದಾರೆ ಎಂದು ಮಾಹಿತಿ ನೀಡಿದರು.

ನಟಿ ಸಂಯುಕ್ತ ಹೊರನಾಡು ಮಾತನಾಡಿ, ತಾಪಮಾನ ಹೆಚ್ಚಳ ನಿಯಂತ್ರಣ, ಪರಿಸರ ಸಂರಕ್ಷಣೆ ಪ್ರತಿಯೊಬ್ಬರ ಕರ್ತವ್ಯವಾಗಬೇಕಿದೆ ಎಂದರು.

ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಕಾರ್ಯದರ್ಶಿ ಡಿ.ರಂದೀಪ್, ಅಂತರರಾಷ್ಟ್ರೀಯ ಮಟ್ಟದ ನಗರವಾಗಿರುವ ಬೆಂಗಳೂರನ್ನು ‘ಸುಸ್ಥಿರ ನಗರ’ವನ್ನಾಗಿಸುವ ಬಗ್ಗೆ ಪ್ರತಿಯೊಬ್ಬರೂ ಧ್ವನಿ ಎತ್ತುವ ಅಗತ್ಯವಿದೆ. ಸಮಾಜಮುಖಿ ಕಾರ್ಯಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಯುವಕರು ಪಾಲ್ಗೊಳ್ಳಬೇಕು ಎಂದು ಸಲಹೆ ನೀಡಿದರು.

ಪ್ಲಾಸ್ಟಿಕ್ ಸರ್ಜರಿ: ಉಚಿತ ಶಿಬಿರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಫ್ರೆಂಡ್ಸ್ ವೆಲ್‌ಫೇರ್ ಆರ್ಗನೈಜೇಷನ್ ವತಿಯಿಂದ ಮಲ್ಲೇಶ್ವರದ ಮಾರ್ಗೊಸಾ ರಸ್ತೆಯಲ್ಲಿರುವ ನಾರಾಯಣ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ಮೇ 21ರಿಂದ 29ರವರೆಗೆ ಉಚಿತವಾಗಿ ಪ್ಲಾಸ್ಟಿಕ್ ಸರ್ಜರಿ ಮಾಡುವ ಶಿಬಿರ ನಡೆಯಲಿದೆ.

ಮೇ 20ರ ಬೆಳಿಗ್ಗೆ 8.30ರಿಂದ ತಪಾಸಣೆ ನಡೆಯಲಿದೆ. ಸುಟ್ಟ ಅಪಘಾತದ ಸಂತ್ರಸ್ತರಿಗೆ, ಆ್ಯಸಿಡ್ ಬಾಧಿತರಿಗೆ, ವಿದ್ಯುತ್ ಸುಟ್ಟ ಗಾಯದ ಸಮಸ್ಯೆಗಳಿಂದ ಬಳಲುತ್ತಿರುವವರಿಗೆ ಈ ಶಿಬಿರದಲ್ಲಿ ಅಮೆರಿಕದ ವೈದ್ಯರ ತಂಡ ಉಚಿತ ಚಿಕಿತ್ಸೆ ನೀಡಲಿದೆ.

ಮಾಹಿತಿಗಾಗಿ– 9880307780 ಅಥವಾ 9148741707ಗೆ ಸಂಪರ್ಕಿಸಿ.

ಫೆಲೊ ಆಗಿ ಎಂ.ಕೃಷ್ಣಮೂರ್ತಿ ಆಯ್ಕೆ

ಬೆಂಗಳೂರು: ಅಮೆರಿಕಾದ ಷಿಕಾಗೊ ವಿಶ್ವವಿದ್ಯಾಲಯವು ಬೆಂಗಳೂರಿನ ಭಾರತೀಯ ಸಾಂಖ್ಯಿಕ ಸಂಸ್ಥೆಯ ಗ್ರಂಥಾಲಯ ಹಾಗೂ ಮಾಹಿತಿ ವಿಜ್ಞಾನದ ಪ್ರಾಧ್ಯಾಪಕ ಎಂ. ಕೃಷ್ಣಮೂರ್ತಿ ಅವರನ್ನು ಫೆಲೊ ಆಗಿ ಆಯ್ಕೆ ಮಾಡಿದೆ.



ಕೃಷ್ಣಮೂರ್ತಿ


ಜೂನ್ 15, 16ರಂದು ಷಿಕಾಗೊ ವಿಶ್ವವಿದ್ಯಾಲಯದಲ್ಲಿ ನಡೆಯುವ ಸಮ್ಮೇಳನದಲ್ಲಿ ‘ರಿಸರ್ಚ್ ಡಾಟಾ ಮ್ಯಾನೇಜ್‌ಮೆಂಟ್ ಇನ್ ಸೋಷಿಯಲ್ ಸೈನ್ಸ್’ ಎಂಬ ವಿಷಯದ ಕುರಿತು ಎಂ. ಕೃಷ್ಣಮೂರ್ತಿ ಉಪನ್ಯಾಸ ನೀಡಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

‘ಕೊರಮ, ಕೊರಚ ನಮೂದಿಸಿ’

ಬೆಂಗಳೂರು: ಪರಿಶಿಷ್ಟ ಜಾತಿ ಮೀಸಲು ವರ್ಗೀಕರಣ ಸಂಬಂಧ ನಡೆಯುತ್ತಿರುವ ಸಮೀಕ್ಷೆಯಲ್ಲಿ ಕೊರಮ, ಕೊರಚ ಸಮುದಾಯದ ಕುಟುಂಬಗಳು ಕಡ್ಡಾಯವಾಗಿ ಭಾಗವಹಿಸಬೇಕು. ಜಾತಿ ಮರೆ ಮಾಚದೇ ಜಾತಿ ಕಾಲಂನಲ್ಲಿ ಕೊರಮ, ಕೊರಚ ಎಂದೇ ನಮೂದಿಸಬೇಕು ಎಂದು ನುಲಿಯ ಚಂದಯ್ಯ ಕೊರಮ ಕೊರಚ ಜನಾಂಗದ ಸೇವಾ ಸಂಘದ ಅಧ್ಯಕ್ಷ ಎಚ್.ಟಿ. ಜಯಣ್ಣ ತಿಳಿಸಿದ್ದಾರೆ.

ಎಸ್‌ಎಸ್‌ಎಲ್‌ಸಿ ಸಾಧಕರು

ಲಗ್ಗೆರೆಯ ರಾಜೀವ್ ಗಾಂಧಿ ಪಬ್ಲಿಕ್ ಸ್ಕೂಲ್



ಕಾವ್ಯ (98.56%) | ರಜತ್ ಯಾದವ್ (91.20%) | ವರ್ಷಿತಾ ಕೆ.ಎನ್ (90.40%) | ಭಾವನಾ ಕೆ.ಎನ್ (90.08%) | ಪುಷ್ಪಲತಾ (90%)

ನಿಧನ ವಾರ್ತೆ

ಕನಕೇಶ್ ಕುಮಾರ್ ಬಿ.

ಬೆಂಗಳೂರು: ನಗರದ ಕೆಂಗೇರಿ ಮುಖ್ಯರಸ್ತೆಯಲ್ಲಿರುವ ಓಂಕಾರ್ ಲೇಔಟ್‌ನ ನಿವಾಸಿ ಕನಕೇಶ್ ಕುಮಾರ್ ಬಿ. (54) ಶನಿವಾರ ಹೃದಯಾಘಾತದಿಂದ ನಿಧನರಾಗಿದ್ದಾರೆ.



ಮೃತರಿಗೆ ಪತ್ನಿ ಹಾಗೂ ಪುತ್ರ, ಪುತ್ರಿ ಇದ್ದಾರೆ. ಭಾನುವಾರ ಸಂಜೆ ಅಂತ್ಯಕ್ರಿಯೆ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಕನಕೇಶ್ ಕುಮಾರ್ ಅವರು ‘ದಿ ಪ್ರಿಂಟರ್ಸ್ (ಮೈಸೂರು) ಪ್ರೈ. ಲಿ. ಸಂಸ್ಥೆಯ ಉತ್ಪಾದನಾ ವಿಭಾಗದಲ್ಲಿ ಸುಮಾರು 31 ವರ್ಷ ಕರ್ತವ್ಯ ನಿರ್ವಹಿಸಿದ್ದರು.

ನ್ಯಾ. ಎಚ್‌.ಎನ್‌.ನಾಗಮೋಹನದಾಸ್ ಆಯೋಗಕ್ಕೆ ಎಡ –ಬಲ ಸಮುದಾಯದ ನಾಯಕರ ನಿಯೋಗದ ಮನವಿ

‘ಒಳಮೀಸಲು ಸಮೀಕ್ಷೆ ಸಮಸ್ಯೆ ಸರಿಪಡಿಸಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಪರಿಶಿಷ್ಟ ಜಾತಿಗಳಲ್ಲಿ ಒಳಮೀಸಲಾತಿ ಕಲ್ಪಿಸಲು ನಡೆಸುತ್ತಿರುವ ಸಮೀಕ್ಷೆಯಲ್ಲಿ ಹಲವು ತಾಂತ್ರಿಕ ತೊಡಕುಗಳಿವೆ. ಅವುಗಳನ್ನು ಶೀಘ್ರವೇ ನಿವಾರಿಸಿ’ ಎಂದು ಒಳಮೀಸಲಾತಿಗೆ ಸಂಬಂಧಿಸಿದ ವಿಚಾರಣಾ ಆಯೋಗದ ಅಧ್ಯಕ್ಷ ನ್ಯಾಯಮೂರ್ತಿ ಎಚ್‌.ಎನ್‌. ನಾಗಮೋಹನದಾಸ್ ಅವರಿಗೆ ಎಡ ಮತ್ತು ಬಲ ಸಮುದಾಯದ ನಾಯಕರ ನಿಯೋಗವು ಮನವಿ ಮಾಡಿದೆ.

ಮಾಜಿ ಸಚಿವ ಎಚ್‌.ಆಂಜನೇಯ, ಸಾಹಿತಿ ಎಲ್‌.ಹನುಮಂತಯ್ಯ, ದಲಿತ ಸಂಘರ್ಷ ಸಮಿತಿಯ ರಾಜ್ಯ ಸಂಚಾಲಕ ಡಿ.ಜಿ.ಸಾಗರ್ ಅವರಿದ್ದ ನಿಯೋಗವು ವಿಚಾರಣಾ ಆಯೋಗದ ಕಚೇರಿಯಲ್ಲಿ ನಾಗಮೋಹನದಾಸ್ ಅವರನ್ನು ಶನಿವಾರ ಭೇಟಿ ಮಾಡಿ, ಮನವಿ ಸಲ್ಲಿಸಿದೆ.

‘ಒಳಮೀಸಲಾತಿಯನ್ನು ಶೀಘ್ರವೇ ಜಾರಿಗೆ ತರಬೇಕು ಎಂಬ ಸರ್ಕಾರದ ಕಾಳಜಿ ಮತ್ತು ಬದ್ಧತೆ ಸ್ವಾಗತಾರ್ಹ.



ನ್ಯಾಯಮೂರ್ತಿ ಎಚ್‌.ಎನ್‌.ನಾಗಮೋಹನದಾಸ್ ಅವರನ್ನು ಪರಿಶಿಷ್ಟ ಜಾತಿಗಳ ಎಡಬಲ ಸಮುದಾಯಗಳ ಮುಖಂಡರ ನಿಯೋಗವು ಭೇಟಿ ಮಾಡಿ, ಮನವಿ ಸಲ್ಲಿಸಿತು

ಆದರೆ ಸಮೀಕ್ಷಾ ಕಾರ್ಯಕ್ಕೆ ನಿಯೋಜಿತರಾಗಿರುವ ಸಿಬ್ಬಂದಿಗೆ, ಕೇವಲ 3 ಗಂಟೆ ತರಬೇತಿ ನೀಡಲಾಗಿದೆ. ಪರಿಣಾಮವಾಗಿ ಅವರು ಸಮೀಕ್ಷೆಯನ್ನು ಪರಿಣಾಮಕಾರಿಯಾಗಿ ನಡೆಸಲು ಸಾಧ್ಯವಾಗುತ್ತಿಲ್ಲ. ಅವರಿಗೆ ಮತ್ತೊಮ್ಮೆ ಒಂದು ದಿನದ ತರಬೇತಿ ನೀಡಬೇಕು’ ಎಂದು ನಿಯೋಗವು ಕೋರಿದೆ.

‘ಸಮೀಕ್ಷೆಯಲ್ಲಿ ಬಳಸಲಾಗುತ್ತಿರುವ ಪ್ರಶ್ನಾವಳಿಗಳು ಕ್ಲಿಷ್ಟವಾಗಿವೆ. ಪರಿಶಿಷ್ಟ ಜಾತಿ ಸಮುದಾಯಗಳ ಜನರ ಶೈಕ್ಷಣಿಕ ಮಟ್ಟವು ಕಡಿಮೆ ಇದ್ದು, ಅವರಿಗೆ ಅರ್ಥವಾಗುವ ರೀತಿಯಲ್ಲಿ ಪ್ರಶ್ನೆಗಳನ್ನು ವಿವರಿಸುವ ಅವಶ್ಯ ಇದೆ. ಇಲ್ಲದೇ ಇದ್ದಲ್ಲಿ, ಸಮೀಕ್ಷೆಯಲ್ಲಿ ತಪ್ಪು ಮಾಹಿತಿ ಸಂಗ್ರಹವಾಗುವ ಅಪಾಯವಿದೆ’ ಎಂದು ನಿಯೋಗವು ಕಳವಳ ವ್ಯಕ್ತಪಡಿಸಿದೆ.

‘ಸಮೀಕ್ಷೆಗಾಗಿ ರೂಪಿಸಲಾಗಿರುವ ಆ್ಯಂಡ್ರಾಯ್ಡ್ ಅಪ್ಲಿಕೇಷನ್‌ನಲ್ಲಿ ಕೆಲ ಸಮಸ್ಯೆಗಳಿವೆ. ಹಳೆಯ ಆ್ಯಂಡ್ರಾಯ್ಡ್ ಫೋನ್‌ಗಳಲ್ಲಿ ಈ ಅಪ್ಲಿಕೇಷನ್ ಡೌನ್‌ಲೋಡ್ ಆಗುವುದಿಲ್ಲ. ಡೌನ್‌ಲೋಡ್ ಆದರೂ ಸರಿಯಾಗಿ ಕಾರ್ಯನಿರ್ವಹಿಸುತ್ತಿಲ್ಲ. ಈ ಬಗ್ಗೆ ತಕ್ಷಣವೇ ಕ್ರಮ ತೆಗೆದುಕೊಳ್ಳಬೇಕು’ ಎಂದು ಕೋರಿದೆ.

ಭೇಟಿಯ ನಂತರ ಸುದ್ದಿಗಾರರ ಜತೆ ಮಾತನಾಡಿದ ಎಚ್‌.ಆಂಜನೇಯ, ‘ಒಳಮೀಸಲಾತಿ ಜಾರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಬದ್ಧರಾಗಿದ್ದಾರೆ. ಪರಿಶಿಷ್ಟ ಜಾತಿಗಳ ಯಾವುದೇ ಸಮುದಾಯಕ್ಕೂ ಅನ್ಯಾಯವಾಗದ ರೀತಿ ಒಳಮೀಸಲಾತಿ ಕಲ್ಪಿಸಬೇಕು ಎಂಬುದು ಅವರ ಒತ್ತಾಸೆ. ಅದರ ಸಲುವಾಗಿ ನಡೆಯುತ್ತಿರುವ ಸಮೀಕ್ಷೆಯು ವಾಸ್ತವಕ್ಕೆ ಹತ್ತಿರವಿರುವ ರೀತಿಯಲ್ಲಿ ನೋಡಿಕೊಳ್ಳುವ ಹೊಣೆಗಾರಿಕೆ ವಿಚಾರಣಾ ಆಯೋಗದ್ದು’ ಎಂದಿದ್ದಾರೆ.

ಮುಖ್ಯಾಂಶಗಳು

- ಸಮೀಕ್ಷೆಗೆ ನಿಯೋಜಿಸಿದ ಸಿಬ್ಬಂದಿಗೆ ಮತ್ತೊಮ್ಮೆ ತರಬೇತಿ ನೀಡಿ
- ಸರಳವಾದ ಪ್ರಶ್ನಾವಳಿಗಳು ಇರಲಿ
- ಅಪ್ಲಿಕೇಷನ್‌ನಲ್ಲಿ ಹಲವು ತೊಂದರೆ– ಸರಿಪಡಿಸಲು ಆಗ್ರಹ

‘ತಪ್ಪು ಮಾಹಿತಿಗೆ ಕಡಿವಾಣ ಹಾಕಿ’

‘ಲಿಂಗಾಯತ ಸಮಾಜದಲ್ಲಿ ಗುರುಸ್ಥಾನದಲ್ಲಿರುವ ವೀರಶೈವ ಸಮುದಾಯದ ಕೆಲವರು ಸಮೀಕ್ಷೆ ವೇಳೆ ತಾವು ಬೇಡಜಂಗಮರು ಎಂದು ಬರೆಸುತ್ತಿದ್ದಾರೆ ಎಂಬ ಆರೋಪವಿದೆ. ಇದರಿಂದಾಗಿ ಮೂಲ ಬೇಡಜಂಗಮರಿಗೆ ಅನ್ಯಾಯವಾಗಲಿದೆ. ಇಂತಹ ತಪ್ಪುಗಳಿಗೆ ಕಡಿವಾಣ ಹಾಕಬೇಕು. ಸುಳ್ಳು ಮಾಹಿತಿ ನೀಡುವವರ ವಿರುದ್ಧ ಕಾನೂನು ಕ್ರಮ ತೆಗೆದುಕೊಳ್ಳಬೇಕು’ ಎಂದು ನಿಯೋಗವು ಕೋರಿದೆ.

‘ಪಡಿತರ ಚೀಟಿಯಲ್ಲಿ (ಕುಟುಂಬ ಡೇಟಾಬೇಸ್) ಹೆಸರು ಇಲ್ಲದಿದ್ದರೆ, ಪ್ರತಿ ಕುಟುಂಬದಲ್ಲಿ ಹೆಚ್ಚುವರಿಯಾಗಿ ಇಬ್ಬರನ್ನಷ್ಟೇ ಸೇರಿಸಲು ಅವಕಾಶವಿದೆ. ಬಹಳಷ್ಟು ಕುಟುಂಬಗಳಲ್ಲಿ ಸಣ್ಣ ಮಕ್ಕಳನ್ನು ಇನ್ನೂ ಪಡಿತರ ಚೀಟಿಗೆ ಸೇರಿಸಿಲ್ಲ. ಹೊಸದಾಗಿ ಮದುವೆಯಾಗಿ ಬಂದ ಹೆಣ್ಣುಮಕ್ಕಳ ಹೆಸರೂ ಚೀಟಿಯಲ್ಲಿ ಇಲ್ಲ. ಅಂತಹವರ ಹೆಸರು ಮತ್ತು ವಿವರಗಳನ್ನು ಸಮೀಕ್ಷೆಯಲ್ಲಿ ಕಲೆಹಾಕಲು ಆಗುತ್ತಿಲ್ಲ. ಇದು ಗಂಭೀರವಾದ ಸಮಸ್ಯೆ ಆಗಿದ್ದು, ತಕ್ಷಣವೇ ಸರಿಪಡಿಸಬೇಕು’ ಎಂದು ಆಗ್ರಹಿಸಿದೆ.

‘ಸಮೀಕ್ಷೆ ನಡೆಸುತ್ತಿರುವ ಕೆಲ ಸಿಬ್ಬಂದಿ ಉದ್ದೇಶಪೂರ್ವಕವಾಗಿ ತಪ್ಪು ಮಾಹಿತಿ ನಮೂದಿಸುತ್ತಿದ್ದಾರೆ ಎಂಬ ಆರೋಪವಿದೆ. ಈ ಸಂಬಂಧ ದೂರುಗಳು ಬಂದರೆ, ಕಾನೂನು ಕ್ರಮ ತೆಗೆದುಕೊಳ್ಳಬೇಕು’ ಎಂದಿದೆ.



ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಉಳ್ಳಾಲ ಸೈಯ್ಯದ್ ಮದನಿ ದರ್ಗಾಕ್ಕೆ ಶನಿವಾರ ಭೇಟಿ ನೀಡಿದರು

‘ಉಳ್ಳಾಲ ದರ್ಗಾಕ್ಕೆ 50 ಕುರಿಗಳ ಹರಕೆ’

ಪ್ರಜಾವಾಣಿ ವಾರ್ತೆ

ಉಳ್ಳಾಲ (ದಕ್ಷಿಣ ಕನ್ನಡ): ಇಲ್ಲಿನ ಉಳ್ಳಾಲ ಸೈಯ್ಯದ್ ಮದನಿ ದರ್ಗಾದ ಉರುಸ್ ಕಾರ್ಯಕ್ರಮದಲ್ಲಿ ಶನಿವಾರ ಪಾಲ್ಗೊಂಡಿದ್ದ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, 50 ಕುರಿಗಳ ಹರಕೆ ಸಮರ್ಪಿಸುವುದಾಗಿ ತಿಳಿಸಿದರು.

ದರ್ಗಾದಲ್ಲಿ ಝಿಯಾರತ್ ನಡೆಸಿದ ನಂತರ ಮಾತನಾಡಿದ ಅವರು, ‘ದೇಶದ ಏಕತೆಯ ಸಂಕೇತವಾಗಿ ಉಳ್ಳಾಲ ದರ್ಗಾದ ಉರುಸ್‌ನಲ್ಲಿ ಹಲವರು ಭಾಗಿಯಾಗುತ್ತಾರೆ. ಉಳ್ಳಾಲ ದರ್ಗಾ ಸಮಿತಿ ಹೇಳಿಕೆಯಂತೆ ಇದು ದೇಶದಲ್ಲಿಯೇ ಎರಡನೇ ಪವಿತ್ರ ಕ್ಷೇತ್ರವೆಂಬ ಮಾನ್ಯತೆ ಪಡೆದಿದೆ’ ಎಂದರು.

‘ವಿಧಾನಸಭಾಧ್ಯಕ್ಷ ಯು.ಟಿ.ಖಾದರ್ ಅವರ ಬೇಡಿಕೆಯನ್ನು ಪುರಸ್ಕರಿಸಿ ರಾಜ್ಯ ಸರ್ಕಾರ ₹3 ಕೋಟಿ ಅನುದಾನ ಮಂಜೂರು ಮಾಡಿದೆ’ ಎಂದು ತಿಳಿಸಿದರು.

ಯು.ಟಿ.ಖಾದರ್, ಖತೀಬ್ ಸಿರಾಜುದ್ದೀನ್ ಹಿಮಮಿ, ಕೇಂದ್ರ ಜುಮಾ ಮಸೀದಿ ಖತೀಬ್ ಹಾಫಿಳ್ ಅಬ್ದುಲ್ ಮಜೀದ್ ಫಾಳಿಲ್, ದರ್ಗಾ ಅಧ್ಯಕ್ಷ ಹನೀಫ್ ಹಾಜರಿದ್ದರು.



ರಥೋತ್ಸವ... ಚಾಮರಾಜನಗರ ಜಿಲ್ಲೆ ಯಳಂದೂರಿನ ಪ್ರಸಿದ್ಧ ಬಿಳಿಗಿರಿ ರಂಗನಾಥಸ್ವಾಮಿ ದೇವಸ್ಥಾನದಲ್ಲಿ ಶನಿವಾರ ನಡೆದ ವೈಭವದ ಬ್ರಹ್ಮರಥೋತ್ಸವದಲ್ಲಿ ಸಾವಿರಾರು ಭಕ್ತರು ಪಾಲ್ಗೊಂಡರು

ಗಣಿ: ರೆಡ್ಡಿಯಿಂದ ನಷ್ಟ ವಸೂಲಿಗೆ ಆಗ್ರಹ

ರಾಜ್ಯದಲ್ಲಿ ಇದ್ದುದು ಗುಣಮಟ್ಟದ ಅದಿರು • 28.90 ಲಕ್ಷ ಟನ್ ಅದಿರಿನ ಮೊತ್ತ ಕನಿಷ್ಠ ₹867 ಕೋಟಿ

• ಹರಿಶಂಕರ್ ಆರ್.

ಬಳ್ಳಾರಿ: ಜನಾರ್ದನ ರೆಡ್ಡಿ ಮತ್ತು ಓಬುಳಾಪುರಂ ಮೈನಿಂಗ್ ಕಂಪನಿಯ (ಓಎಂಸಿ) ಅಕ್ರಮ ಗಣಿಗಾರಿಕೆಯಿಂದ ರಾಜ್ಯಕ್ಕೆ ಆದ ನಷ್ಟದ ವಸೂಲಿಗಾಗಿ ಮತ್ತೊಂದು ಹಂತದ ನ್ಯಾಯಾಂಗ ಹೋರಾಟ ಆರಂಭಿಸಲು, ಸರ್ಕಾರಕ್ಕೆ ಮನವಿ ಸಲ್ಲಿಸಲು ಪ್ರತ್ಯೇಕ ಪ್ರಯತ್ನಗಳು ಆರಂಭವಾಗಿವೆ.

ಸಮಾಜ ಪರಿವರ್ತನಾ ಸಮುದಾಯದ ಮುಖ್ಯಸ್ಥ ಎಸ್‌.ಆರ್ ಹಿರೇಮಠ ಮತ್ತು ಗಣಿ ಉದ್ಯಮಿಗಳಾದ ಟಪಾಲ್ ಸಹೋದರರು ಪ್ರತ್ಯೇಕವಾಗಿ ಹೋರಾಟ ನಡೆಸಲು ಸಿದ್ಧತೆ ನಡೆಸಿದ್ದಾರೆ.

ಅನಂತಪುರ ಜಿಲ್ಲೆಯ ರಾಯದುರ್ಗ ತಾಲ್ಲೂಕಿನ ಮಲಪನಗುಡಿ ಗ್ರಾಮದ ಅಂತರಗಂಗಮ್ಮ ಕೊಂಡ ಎಂಬಲ್ಲಿ 68.50 ಹೆಕ್ಟೇರ್ ಪ್ರದೇಶದಲ್ಲಿ ಗಣಿಗಾರಿಕೆ ನಡೆಸುತ್ತಿದ್ದ ಓಎಂಸಿ ಕಂಪನಿಯು ಕರ್ನಾಟಕ ಮತ್ತು ಆಂಧ್ರ ಪ್ರದೇಶದ ನಡುವಿನ ಅಂತರರಾಜ್ಯ ಗಡಿ ನಾಶಪಡಿಸಿದೆ. ಬಳ್ಳಾರಿ ಮೀಸಲು ಅರಣ್ಯ ಪ್ರದೇಶದಲ್ಲಿ ಅಕ್ರಮವಾಗಿ 28.90 ಲಕ್ಷ ಟನ್ ಅದಿರನ್ನು ಹೊರತೆಗೆದು, ಅಕ್ರಮವಾಗಿ ಸಾಗಿಸಿದೆ ಎಂಬುದು ಸಾಬೀತಾಗಿದೆ. ಸಿಬಿಐ ನ್ಯಾಯಾಲಯ ಇತ್ತೀಚೆಗೆ ಪ್ರಕಟಿಸಿದ ತೀರ್ಪಿನಲ್ಲಿ ಇದರ ಉಲ್ಲೇಖವಿದೆ.

ಕರ್ನಾಟಕ ಭಾಗದಲ್ಲಿದ್ದ ಅದಿರು ಉತ್ತಮ ಗುಣಮಟ್ಟದ್ದು. ಅದಕ್ಕೆ ಜನಾರ್ದನ ರೆಡ್ಡಿ ಅಕ್ರಮವಾಗಿ ಹೊರತೆಗೆದು ಸಾಗಿಸಿದ್ದರು. ಈ ಅದಿರಿನ ಬೆಲೆ ಟನ್‌ಗೆ ಕನಿಷ್ಠ ₹3,000 ಎಂದು ಲೆಕ್ಕ ಹಾಕಿದರೂ, 28.90 ಲಕ್ಷ ಟನ್ ಅದಿರಿನ ಮೊತ್ತ ಕನಿಷ್ಠ ₹ 867 ಕೋಟಿ ಆಗುತ್ತದೆ.

‘ಜನಾರ್ದನ ರೆಡ್ಡಿ ದೋಷಿಯಾಗಿದ್ದು, ಶಿಕ್ಷೆಯೂ ಘೋಷಣೆಯಾಗಿದೆ. ಈಗ ತೀರ್ಪೇ ನಮಗೆ ಆಧಾರ. ಅಕ್ರಮ ಗಣಿಗಾರಿಕೆ ಮೂಲಕ ಜನಾರ್ದನ ರೆಡ್ಡಿ ರಾಜ್ಯ, ಹೊರ ರಾಜ್ಯ, ವಿದೇಶಗಳಲ್ಲಿ ಆಸ್ತಿ ಮಾಡಿದ್ದಾರೆ. ಇದೆಲ್ಲವನ್ನೂ ‘ಪ್ರೊಸೀಡ್ಸ್ ಆಫ್ ಕ್ರೈಂ (ಅಪರಾಧ ಚಟುವಟಿಕೆ ಮೂಲಕ ಮಾಡಿದ ಆಸ್ತಿ)’ ಎಂದು ಪರಿಗಣಿಸಬೇಕು. ಅದನ್ನು ಮುಟ್ಟುಗೋಲು ಹಾಕಿಕೊಳ್ಳಬೇಕು. ಸರ್ಕಾರ ಈ ಕ್ರಮಕ್ಕೆ ಮುಂದಾಗಬೇಕಾಗಿತ್ತು. ಆದರೆ, ಅದು ಆಗುತ್ತಿಲ್ಲ’ ಎಂದು ಸಮಾಜ ಪರಿವರ್ತನಾ ಸಮುದಾಯದ ಮುಖ್ಯಸ್ಥ ಎಸ್‌.ಆರ್ ಹಿರೇಮಠ ‘ಪ್ರಜಾವಾಣಿ’ಗೆ ತಿಳಿಸಿದರು.

‘ಜನಾರ್ದನ ರೆಡ್ಡಿ ರಾಜ್ಯದ ಸಂಪತ್ತು ಕದ್ದು ಸಾಗಿಸಿರುವುದನ್ನು ಕೋರ್ಟ್ ಕೂಡ ಪರಿಗಣಿಸಿದೆ. ರೆಡ್ಡಿ ನಮ್ಮ ಗಣಿಯಿಂದಲೂ ಅದಿರು ಸಾಗಿಸಿದ್ದರು. ಲೂಟಿ ಹೊಡೆದ ರಾಜ್ಯದ ಸಂಪತ್ತಿಗೆ ಪರಿಹಾರವನ್ನು ಸರ್ಕಾರ ರೆಡ್ಡಿಯಿಂದ ವಸೂಲಿ ಮಾಡಬೇಕು. ನಮ್ಮ ಗಣಿಯಿಂದ ಲೂಟಿಯಾಗಿದ್ದ ಅದಿರಿನ ಪಾಲನ್ನು ನಮಗೂ ಕೊಡಿಸಿಕೊಡಬೇಕು ಎಂದು ನಾವು ಸರ್ಕಾರದ ಮುಖ್ಯ ಕಾರ್ಯದರ್ಶಿಗೆ ಪತ್ರ ಬರೆಯುತ್ತೇವೆ. ಈ ನಿಟ್ಟಿನಲ್ಲಿಯೂ ನಮ್ಮ ಹೋರಾಟ ಮುಂದುವರಿಯಲಿದೆ’ ಎಂದು ಗಣಿ ಉದ್ಯಮಿ ಟಪಾಲ್ ಏಕಾಂಬರಂ ತಿಳಿಸಿದರು.

ಗಣಿ–ಖನಿಜ ಕಾಯ್ದೆ ಏನು ಹೇಳುತ್ತದೆ?:

‘ಯಾವುದೇ ವ್ಯಕ್ತಿ ಕಾನೂನಾತ್ಮಕ ಅಧಿಕಾರವಿಲ್ಲದೆ ಯಾವುದೇ ಭೂಮಿಯಿಂದ ಯಾವುದೇ ಖನಿಜವನ್ನು ಹೊರತೆಗೆದು, ವಿಲೇವಾರಿ ಮಾಡಿದ್ದರೆ, ಅದರ ಮೌಲ್ಯವನ್ನು ವಸೂಲಿ ಮಾಡಬಹುದು. ವ್ಯಕ್ತಿಯು ಭೂಮಿಯನ್ನು ಅತಿಕ್ರಮಿಸಿಕೊಂಡಿದ್ದ ಅವಧಿಗೆ ಬಾಡಿಗೆ, ರಾಯಧನ ಅಥವಾ ತೆರಿಗೆಯನ್ನೂ ವಸೂಲಿ ಮಾಡಬಹುದು’ ಎಂದು ಗಣಿ ಮತ್ತು ಖನಿಜಗಳು (ಅಭಿವೃದ್ಧಿ ಮತ್ತು ನಿಯಂತ್ರಣ) ಕಾಯ್ದೆಯ ಸೆಕ್ಷನ್ 21(5) ವಿವರಿಸುತ್ತದೆ.



ನಷ್ಟ ವಸೂಲಿ ಮುಖ್ಯ. ಇಲ್ಲದಿದ್ದರೆ, ಕದ್ದು ಜೈಲಿಗೆ ಹೋಗಿ ಬಂದರಾಯ್ತು ಎಂಬ ಭಾವನೆ ಬರುತ್ತದೆ. ನಷ್ಟ ಪರಿಹಾರಕ್ಕೆ ಏನು ಮಾಡಬಹುದು ಎಂಬುದರ ಬಗ್ಗೆ ಅಧ್ಯಯನ ನಡೆದಿದೆ

ಸಂತೋಷ ಹೆಗ್ಡೆ, ನಿವೃತ್ತ ಲೋಕಾಯುಕ್ತ ನ್ಯಾಯಮೂರ್ತಿ



ನಮ್ಮ ಎದುರು ಕಾನೂನು ಹೋರಾಟದ ಆಯ್ಕೆ ಇದೆ. ಕರ್ನಾಟಕದಿಂದ ಸಂಪತ್ತು ಲೂಟಿಯಾಗಿದೆ ಎಂದು ನ್ಯಾಯಾಲಯ ಹೇಳಿದೆ. ಅದರ ವಸೂಲಿಗೆ ಸರ್ಕಾರಕ್ಕೂ ಇಚ್ಛಾಶಕ್ತಿ ಬೇಕು

ಎಸ್‌.ಆರ್‌.ಹಿರೇಮಠ, ಮುಖ್ಯಸ್ಥ, ಸಮಾಜ ಪರಿವರ್ತನಾ ಸಮುದಾಯ

ಕೇಂದ್ರ–ರಾಜ್ಯದ ಮೇಲೆ ಒತ್ತಡ ಹೇರಲು ಇದೇ 20ಕ್ಕೆ ಮುಷ್ಕರ

‘ಕಾರ್ಮಿಕ, ರೈತ ವಿರೋಧಿ ನೀತಿ ರದ್ದುಪಡಿಸಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾರ್ಮಿಕ ವಿರೋಧಿ ನಾಲ್ಕು ಕಾಯ್ದೆಗಳು ಹಾಗೂ ರೈತ ವಿರೋಧಿ ನೀತಿಗಳನ್ನು ರದ್ದುಪಡಿಸುವುದು ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ಮೇ 20ರಂದು ರಾಜ್ಯದಾದ್ಯಂತ ಸಾರ್ವತ್ರಿಕ ಮುಷ್ಕರ ನಡೆಸಲಾಗುವುದು ಎಂದು ಸಂಯುಕ್ತ ಹೋರಾಟ–ಕರ್ನಾಟಕ ಸಮಿತಿ ತಿಳಿಸಿದೆ.

ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಮಿತಿಯ ಸಂಯೋಜಕರಾದ ಬಡಗಲಪುರ ನಾಗೇಂದ್ರ, ಕೆ.ವಿ. ಭಟ್, ಎಸ್. ವರಲಕ್ಷ್ಮಿ, ನೂರ್ ಶ್ರೀಧರ್, ಟಿ. ಯಶವಂತ, ‘ಕೇಂದ್ರ ಸರ್ಕಾರ ಕಾರ್ಪೊರೇಟ್ ಬಂಡವಾಳದ ಪರ ರೂಪಿಸಿರುವ ಕಾರ್ಮಿಕ ವಿರೋಧಿ ನಾಲ್ಕು ಕಾಯ್ದೆಗಳನ್ನು ರದ್ದುಪಡಿಸಬೇಕು. ಇಂದಿನ ಬೆಲೆ ಏರಿಕೆಗೆ ಅನುಗುಣವಾಗಿ ಎಲ್ಲ ಸಂಘಟಿತ, ಅಸಂಘಟಿತ, ಗುತ್ತಿಗೆ ಕಾರ್ಮಿಕರಿಗೆ ತಿಂಗಳಿಗೆ ₹36 ಸಾವಿರ ಕನಿಷ್ಠ ವೇತನ ನಿಗದಿಪಡಿಸಬೇಕು. ಗುತ್ತಿಗೆ, ಹೊರಗುತ್ತಿಗೆ, ಅಪ್ರೆಂಟಿಸ್, ಟ್ರೈನಿ ಹೆಸರಿನಲ್ಲಿ ಕಾರ್ಮಿಕರನ್ನು ನೇಮಕ ಮಾಡಿಕೊಳ್ಳುವುದನ್ನು ಸ್ಥಗಿತಗೊಳಿಸಬೇಕು. ಸಮಾನ ಕೆಲಸಕ್ಕೆ ಸಮಾನ ವೇತನ ನೀಡಬೇಕು’ ಎಂದು ಆಗ್ರಹಿಸಿದರು.

‘ರೈತರ ಬದುಕಿಗೆ ಮಾರಕವಾಗಿರುವ ಭೂ ತಿದ್ದುಪಡಿ ಕಾಯ್ದೆ, ಎಪಿಎಂಸಿ ಕಾಯ್ದೆ ಹಾಗೂ ಜಾನುವಾರು ತಿದ್ದುಪಡಿ ಕಾಯ್ದೆಗಳನ್ನು ಕಾಂಗ್ರೆಸ್ ನೇತೃತ್ವದ ಸರ್ಕಾರ ಕೂಡಲೇ ರದ್ದುಪಡಿಸಬೇಕು. ಕೇಂದ್ರ ಸರ್ಕಾರ ಜಾರಿಗೊಳಿಸಲು ಉದ್ದೇಶಿಸಿರುವ ಕೃಷಿ ಉತ್ಪನ್ನಗಳ ಮಾರುಕಟ್ಟೆ ರಾಷ್ಟ್ರೀಯ ಚೌಕಟ್ಟು ನೀತಿಯನ್ನು ರಾಜ್ಯ ಸರ್ಕಾರ ತಿರಸ್ಕರಿಸಬೇಕು’ ಎಂದು ಒತ್ತಾಯಿಸಿದರು.

‘ಎಲ್ಲ ಕೃಷಿ ಉತ್ಪನ್ನಗಳಿಗೆ ಕನಿಷ್ಠ ಬೆಂಬಲ ಬೆಲೆ ಯೋಜನೆಗೆ (ಎಂಎಸ್‌ಪಿ) ಕಾನೂನು ರೂಪಿಸಬೇಕು. ರೈತರಿಗೆ ಬಿತ್ತನೆ ಬೀಜ, ರಸಗೊಬ್ಬರ ಮತ್ತು ವಿದ್ಯುತ್ ಮೇಲಿನ ಸಬ್ಸಿಡಿ ಹೆಚ್ಚಿಸಬೇಕು. ಸಮಗ್ರ ಸಾಲ ಮನ್ನಾ ಮತ್ತು ಬೆಳೆ ವಿಮೆ ಯೋಜನೆಗಳನ್ನು ಜಾರಿಗೊಳಿಸಬೇಕು. ಕೇಂದ್ರ ಸರ್ಕಾರ ಸಂಯುಕ್ತ ಕಿಸಾನ್ ಮೋರ್ಚಾಗೆ (ಎಸ್‌ಕೆಎಂ) ನೀಡಿದ್ದ ಲಿಖಿತ ಭರವಸೆಗಳನ್ನು ಈಡೇರಿಸಬೇಕು’ ಎಂದು ಹೇಳಿದರು.

‘ವಿದ್ಯುತ್ ತಿದ್ದುಪಡಿ ಮಸೂದೆ–2022 ಹಿಂಪಡೆಯಬೇಕು. ವಿದ್ಯುತ್ ಖಾಸಗೀಕರಣ, ಸ್ಮಾರ್ಟ್ ಮೀಟರ್ ಅಳವಡಿಕೆಯನ್ನು ಸ್ಥಗಿತಗೊಳಿಸಬೇಕು. ಬಗರ್‌ಹುಕುಂ ಸಮಸ್ಯೆಗಳನ್ನು ತ್ವರಿತವಾಗಿ ನಿವಾರಿಸಬೇಕು. ಬಲವಂತದ ಭೂಸ್ವಾಧೀನ ಕೈಬಿಡಬೇಕು. ಅರಣ್ಯ ಹಕ್ಕು ಕಾಯ್ದೆಯನ್ನು (ಎಫ್‌ಆರ್‌ಎ) ಕಟ್ಟುನಿಟ್ಟಾಗಿ ಅನುಷ್ಠಾನಗೊಳಿಸಬೇಕು’ ಎಂದು ಒತ್ತಾಯಿಸಿದರು.

ಆದಿವಾಸಿಗಳ ನಿಲ್ಲದ ಪ್ರತಿಭಟನೆ; ಆಕ್ರೋಶ

ಪ್ರಜಾವಾಣಿ ವಾರ್ತೆ

ಮಡಿಕೇರಿ: ನಾಗರಹೊಳೆ ಹುಲಿ ಸಂರಕ್ಷಿತ ಅರಣ್ಯದೊಳಗಿನ ಕರಡಿಕಲ್ಲು ಅತ್ತೂರು ಕೊಲ್ಲಿ ಪ್ರದೇಶದಲ್ಲಿ ಮೇ 5ರಿಂದ ಪ್ರತಿಭಟನೆ ನಡೆಸುತ್ತಿರುವ ಜೇನು ಕುರುಬ ಸಮುದಾಯಕ್ಕೆ ಸೇರಿದ 52 ಕುಟುಂಬಗಳ ಪ್ರತಿಭಟನೆ ಶನಿವಾರವೂ ಮುಂದುವರಿಯಿತು.

‘ಬೆಂಗಳೂರು, ಎಚ್‌.ಡಿ.ಕೋಟೆ ಸೇರಿದಂತೆ ಇತರೆ ಜಿಲ್ಲೆಗಳಿಂದ ಬಂದಿದ್ದ ಹೋರಾಟಗಾರರನ್ನು ಪೊಲೀಸರು ತಡೆದರು. ಈ ವೇಳೆ ಪೊಲೀಸರು ಹಾಗೂ ಅರಣ್ಯ ಸಿಬ್ಬಂದಿಯೊಂದಿಗೆ ಮಾತಿನ ಚಕಮಕಿ ನಡೆಯಿತು. ಇಬ್ಬರಿಗೆ ಅರಣ್ಯ ಪ್ರವೇಶಕ್ಕೆ ಅನುಮತಿ ನೀಡಿದರು’ ಎಂದು ನಾಗರಹೊಳೆ ಆದಿವಾಸಿ ಜಮ್ಮಾಪಾಳೆ ಹಕ್ಕು ಸ್ಥಾಪನಾ ಸಮಿತಿ ಕಾರ್ಯದರ್ಶಿ ಶಿವು ‘ಪ್ರಜಾವಾಣಿ’ಗೆ ತಿಳಿಸಿದರು.

‘ಅರಣ್ಯದೊಳಗೆ ನಿರ್ಮಾಣ ಕಾಮಗಾರಿ ಮಾಡಬಾರದು ಎಂದು ಸುಪ್ರೀಂಕೋರ್ಟ್ ಹೇಳಿದೆ. ಆದರೆ, ಅರಣ್ಯ ಇಲಾಖೆ ನಮ್ಮನ್ನು ಕಾಡಿನಿಂದ ಹೊರನಡೆಯಿರಿ ಎಂದು ನೋಟಿಸ್ ನೀಡಿದೆ. ಇದೆಲ್ಲವೂ ನಮ್ಮ ಹೋರಾಟವನ್ನು ದಿಕ್ಕು ತಪ್ಪಿಸುವ ಪ್ರಯತ್ನ’ ಎಂದು ದೂರಿದರು.

‘ನಮ್ಮ ಹೋರಾಟವನ್ನು ದಿಕ್ಕು ತಪ್ಪಿಸಲಾಗುತ್ತಿದೆ ಎಂದು ಕೇಂದ್ರ ಬುಡಕಟ್ಟು ವ್ಯವಹಾರಗಳ ಸಚಿವಾಲಯ, ಕೇಂದ್ರೀಯ ಎಸ್‌.ಟಿ ಕಮಿಷನ್, ರಾಜ್ಯದ ಎಸ್‌ಸಿ, ಎಸ್‌ಟಿ ಕಮಿಷನ್ ಹಾಗೂ ಮುಖ್ಯಮಂತ್ರಿಗೆ ಪತ್ರ ಬರೆಯಲಾಗುವುದು. ಪ್ರತಿಭಟನೆ ಮುಂದುವರಿಯಲಿದೆ’ ಎಂದರು. ‘ಸ್ವಲ್ಪ ದೂರದಲ್ಲೇ ಸಫಾರಿ ನಡೆಯುತ್ತಿದೆ. ಆದರೆ, ಹೋರಾಟಗಾರರ ಅರಣ್ಯ ಪ್ರವೇಶಕ್ಕೆ ತಡೆ ಒಡ್ಡಲಾಗುತ್ತಿದೆ. ಇದರಿಂದ ನಮಗೆ ಸಭೆ ನಡೆಸಲಾಗುತ್ತಿಲ್ಲ’ ಎಂದು ದೂರಿದರು.

ನವೋದಯ ಗ್ರಾಮ ವಿಕಾಸ ಟ್ರಸ್ಟ್‌ನ ಎಸ್‌ಎಚ್‌ಜಿಗಳ ರಜತ ಸಂಭ್ರಮ

ಸೈನಿಕರ ಕಲ್ಯಾಣ ನಿಧಿಗೆ ₹3 ಕೋಟಿ


ಪ್ರಜಾವಾಣಿ ವಾರ್ತೆ

ಮಂಗಳೂರು: ‘ನವೋದಯ ಸಂಘ ಹಾಗೂ ದಕ್ಷಿಣ ಕನ್ನಡ ಜಿಲ್ಲಾ ಕೇಂದ್ರ ಸಹಕಾರಿ (ಎಸ್‌ಸಿಡಿಸಿಸಿ) ಬ್ಯಾಂಕ್ ವತಿಯಿಂದ ಹಣ ಸಂಗ್ರಹಿಸಿ ಸೈನಿಕ ಕಲ್ಯಾಣ ನಿಧಿಗೆ ₹3 ಕೋಟಿ ನೆರವು ನೀಡಲಾಗುವುದು’ ಎಂದು ಎಸ್‌ಸಿಡಿಸಿಸಿ ಬ್ಯಾಂಕ್ ಅಧ್ಯಕ್ಷ ಎಂ.ಎನ್. ರಾಜೇಂದ್ರ ಕುಮಾರ್ ಶನಿವಾರ ತಿಳಿಸಿದರು.

ನವೋದಯ ಗ್ರಾಮ ವಿಕಾಸ ಚಾರಿಟಬಲ್ ಟ್ರಸ್ಟ್‌ನ ನವೋದಯ ಸ್ವ ಸಹಾಯ ಗುಂಪುಗಳ ರಜತ ಸಂಭ್ರಮದ ನಿಮಿತ್ತ ನಡೆದ ಸಮಾವೇಶದಲ್ಲಿ, ಟ್ರಸ್ಟ್‌ನ ಸಂಸ್ಥಾಪಕರೂ ಆದ ಅವರು ಈ ಮಾಹಿತಿ ನೀಡಿದರು.

‘ದೇಶದ ಗಡಿಯಲ್ಲಿ ನಮ್ಮ ರಕ್ಷಣೆಗಾಗಿ ಹೋರಾಡುತ್ತಿರುವ ಸೈನಿಕರಿಗೆ ನೆರವಾಗುವುದು ನಮ್ಮ ಕರ್ತವ್ಯ’ ಎಂದೂ ಹೇಳಿದರು.

ರಾಜ್ಯಪಾಲ ಥಾವರಚಂದ್ ಗೆಹಲೋತ್ ಸಹಕಾರಿ ಧ್ವಜಾರೋಹಣ ನೆರವೇರಿಸಿದರು. ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸಮಾವೇಶ ಉದ್ಘಾಟಿಸಿದರು. ಧರ್ಮಸ್ಥಳದ ಧರ್ಮಾಧಿಕಾರಿ ಡಿ. ವೀರೇಂದ್ರ ಹೆಗ್ಗಡೆ ‘ಸಂತೃಪ್ತಿ’ ಸ್ಮರಣ ಸಂಚಿಕೆ ಬಿಡುಗಡೆಗೊಳಿಸಿದರು.



ನವೋದಯ ಗ್ರಾಮ ವಿಕಾಸ ಚಾರಿಟಬಲ್ ಟ್ರಸ್ಟ್‌ನ ಸ್ವ ಸಹಾಯ ಗುಂಪುಗಳ ರಜತ ಸಂಭ್ರಮವನ್ನು ರಾಜ್ಯಪಾಲ ಥಾವರಚಂದ್ ಗೆಹಲೋತ್ ಹಾಗೂ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಉದ್ಘಾಟಿಸಿದರು. ಪೇಜಾವರ ಮಠಾಧೀಶ ವಿಶ್ವಪ್ರಸನ್ನತೀರ್ಥ ಸ್ವಾಮೀಜಿ, ಧರ್ಮಸ್ಥಳದ ಧರ್ಮಾಧಿಕಾರಿ ಡಿ. ವೀರೇಂದ್ರ ಹೆಗ್ಗಡೆ, ಸ್ಪೀಕರ್ ಯು.ಟಿ. ಖಾದರ್, ಸಚಿವರಾದ ಆರ್‌.ಬಿ. ತಿಮ್ಮಾಪುರ, ಲಕ್ಷ್ಮಿ ಹೆಬ್ಬಾಳಕರ, ಕೆ.ಎನ್‌. ರಾಜಣ್ಣ, ದಿನೇಶ್ ಗುಂಡೂರಾವ್ ಭಾಗವಹಿಸಿದ್ದರು ಪ್ರಜಾವಾಣಿ ಚಿತ್ರ

ಕ್ಯಾಂಪ್ಕೊದಿಂದ ರಕ್ಷಣಾ ನಿಧಿಗೆ ₹5 ಕೋಟಿ ದೇಣಿಗೆ

ಮಂಗಳೂರು: ಇಲ್ಲಿಯ ಕೇಂದ್ರೀಯ ಅಡಿಕೆ ಮತ್ತು ಕೊಕ್ಕೊ ಮಾರುಕಟ್ಟೆ, ಸಂಸ್ಕರಣ ಸಹಕಾರ ನಿಯಮಿತ (ಕ್ಯಾಂಪ್ಕೊ) ಸಂಸ್ಥೆಯು ರಾಷ್ಟ್ರೀಯ ರಕ್ಷಣಾ ನಿಧಿಗೆ ₹5 ಕೋಟಿ ದೇಣಿಗೆ ನೀಡಿದೆ.

‘ಪಹಲ್ಗಾಮ್ ಕೃತ್ಯದ ಬಳಿಕ ಪ್ರಧಾನಿ ತೆಗೆದುಕೊಂಡಿರುವ ಕಠಿಣ ಕ್ರಮವನ್ನು ಬೆಂಬಲಿಸುತ್ತೇವೆ. ದೇಶದ ಯೋಧರಿಗೆ ನೆರವಾಗಲು ಕ್ಯಾಂಪ್ಕೊ ₹5 ಕೋಟಿ ಕೊಡುಗೆ ನೀಡುತ್ತಿದ್ದು, ರಾಷ್ಟ್ರದ ಹಿತರಕ್ಷಣೆಗೆ ತನ್ನ ಬದ್ಧತೆ ತೋರಿಸಿದೆ’ ಎಂದು ಕ್ಯಾಂಪ್ಕೊ ಅಧ್ಯಕ್ಷ ಕಿಶೋರ್ ಕುಮಾರ್ ಕೊಡ್ಗಿ ತಿಳಿಸಿದ್ದಾರೆ.

‘ಕ್ಯಾಂಪ್ಕೊ ಎಂದಿಗೂ ರಾಷ್ಟ್ರೀಯ ಹಿತ, ಮಾನವೀಯ ಮೌಲ್ಯ ಎತ್ತಿ ಹಿಡಿಯುವಲ್ಲಿ ಮುಂಚೂಣಿಯಲ್ಲಿ ಇರುವ ರೈತರ ಸಹಕಾರಿ ಸಂಸ್ಥೆಯಾಗಿದೆ. ದೇಶದ ಸಮಸ್ತ ರೈತರು ಒಗ್ಗಟ್ಟು ಪ್ರದರ್ಶಿಸಿ, ಕೇಂದ್ರ ಸರ್ಕಾರಕ್ಕೆ ಬೆಂಬಲ ನೀಡಬೇಕು’ ಎಂದೂ ಮನವಿ ಮಾಡಿದ್ದಾರೆ.

‘ಕೊಲೆ ಆಗುತ್ತಲೇ ಇರುತ್ತವೆ; ಎಲ್ಲರ ಮನೆಗೆ ಹೋಗಬೇಕಿಲ್ಲ’

ಮಂಗಳೂರು: ‘ಕೊಲೆಗಳು ಆಗುತ್ತಲೇ ಇರುತ್ತವೆ. ಕೊಲೆಯಾದ ಪ್ರತಿಯೊಬ್ಬರ ಮನೆಗೆ ಸಚಿವರು ಹೋಗಲೇ ಬೇಕು ಎಂದೇನೂ ಇಲ್ಲ. ಕೊಲೆ ಏಕೆ ಆಗಿದೆ ಎಂಬುದೂ ಮುಖ್ಯವಾಗುತ್ತದೆ’ ಎಂದು ಜಿಲ್ಲಾ ಉಸ್ತುವಾರಿ ಸಚಿವ ದಿನೇಶ್ ಗುಂಡೂರಾವ್ ಶನಿವಾರ ಹೇಳಿದರು.



ದಿನೇಶ್ ಗುಂಡೂರಾವ್

ಬಜಪೆ ಬಳಿ ಈಚೆಗೆ ಹತ್ಯೆಗೀಡಾದ ಹಿಂದುತ್ವ ಪರ ಕಾರ್ಯಕರ್ತ ಸುಹಾಸ್ ಶೆಟ್ಟಿ ಮನೆಗೆ ಸಚಿವರು ಭೇಟಿ ನೀಡಿಲ್ಲ ಎಂಬ ಬಿಜೆಪಿಯವರ ಆರೋಪಕ್ಕೆ ಸಚಿವರು ಹೀಗೆ ಪ್ರತಿಕ್ರಿಯಿಸಿದರು.

ಸುದ್ದಿಗೋಷ್ಠಿಯಲ್ಲಿ ಅವರು, ‘ಸುಹಾಸ್ ಶೆಟ್ಟಿ ಕೊಲೆ ಏಕೆ ಆಗಿದೆ ಎಂಬುದನ್ನು ತಿಳಿದಿರುವ ಸರ್ಕಾರ, ತಪ್ಪಿತಸ್ಥರನ್ನು ಬಂಧಿಸಿ ಜವಾಬ್ದಾರಿ ನಿರ್ವಹಿಸಿದೆ. ಯಾರನ್ನು ರಕ್ಷಿಸುವ ಪ್ರಶ್ನೆಯೇ ಇಲ್ಲ’ ಎಂದು ಹೇಳಿದರು.

‘ಆರೋಪಿಗಳನ್ನು ಬಂಧಿಸಿದ್ದೇವೆ. ನಿಷ್ಪಕ್ಷಪಾತವಾಗಿ ತನಿಖೆ ನಡೆಯುತ್ತಿದೆ. ಎನ್‌ಐಎಗೆ ತನಿಖೆ ವಹಿಸಬೇಕು ಎಂಬ ಬಿಜೆಪಿಯವರ ಒತ್ತಾಯಕ್ಕೆ ಉತ್ತರಿಸಲಾಗದು.ಬಿಜೆಪಿಯವರು ಊಹಾಪೋಹದ ಹೇಳಿಕೆ ಬಿಟ್ಟು ಸ್ಪಷ್ಟ ಮಾಹಿತಿ ಇದ್ದರೆ ತಿಳಿಸಲಿ’ ಎಂದರು.

ಸಂಕ್ಷಿಪ್ತ ಸುದ್ದಿ

ಡಿಸಿಇಟಿ: ಅರ್ಜಿ ಸಲ್ಲಿಸಲು 13ರವರೆಗೆ ಅವಕಾಶ

ಬೆಂಗಳೂರು: ಡಿಪ್ಲೊಮಾ ಮಾಡಿದವರಿಗೆ ಎಂಜಿನಿಯರಿಂಗ್ ಕೋರ್ಸ್‌ಗೆ 3ನೇ ಸೆಮಿಸ್ಟರ್ ಅಥವಾ ಎರಡನೇ ವರ್ಷಕ್ಕೆ ನೇರ ಪ್ರವೇಶ ನೀಡಲು ನಡೆಸಲಾಗುವ ‘ಡಿಸಿಇಟಿ-2025’ ಗೆ ಅರ್ಜಿ ಸಲ್ಲಿಸಲು ಕೊನೆ ದಿನಾಂಕವನ್ನು ಮೇ 13ರವರೆಗೆ ವಿಸ್ತರಿಸಲಾಗಿದೆ.

ಅಂದು ಬೆಳಿಗ್ಗೆ 11ರವರೆಗೆ ಅರ್ಜಿ ಸಲ್ಲಿಸಿ, ಅಂದೇ ಸಂಜೆ 6 ಗಂಟೆ ಒಳಗೆ ಶುಲ್ಕ ಪಾವತಿಸಬೇಕು ಎಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕ ಎಚ್. ಪ್ರಸನ್ನ ತಿಳಿಸಿದ್ದಾರೆ.

‘ಸ್ಲೀಪರ್‌ಸೆಲ್‌ಗಳ ಮೇಲೆ ನಿಗಾ ವಹಿಸಿ’

ಶಿರಸಿ: ‘ಇಸ್ಲಾಂ ಉಳಿವಿಗಾಗಿ ಪಾಕಿಸ್ತಾನಕ್ಕೆ ಎಲ್ಲೆಡೆಯ ಮುಸ್ಲಿಮರು ಬೆಂಬಲಿಸುವಂತೆ ಅಲ್‌ಖೈದಾ ಮುಖಂಡರ ಕರೆ ಹಿನ್ನಲೆಯಲ್ಲಿ ರಾಜ್ಯದಲ್ಲಿ ಇರುವ ಪಾಕ್ ಮನಸ್ಥಿತಿಯವರ ಮೇಲೆ ವಿಶೇಷ ನಿಗಾ ಇರಿಸಬೇಕು. ಸೂಕ್ತ ಕ್ರಮವೂ ತೆಗೆದುಕೊಳ್ಳಬೇಕು’ ಎಂದು ಶಾಸಕ ಅರಗ ಜ್ಞಾನೇಂದ್ರ ಹೇಳಿದರು.

‘ರಾಜ್ಯದಲ್ಲಿನ ಪಾಕ್‌ನ ಸ್ಲೀಪರ್ ಸೆಲ್‌ಗಳ ಮೇಲೆ ನಿಗಾವಹಿಸಬೇಕಿದೆ. ದೇಶದ ಗಡಿಯಲ್ಲಿ ಸೈನಿಕರು ಹೋರಾಡಿದರೆ, ಆಂತರಿಕವಾಗಿ ಪೊಲೀಸ್ ವ್ಯವಸ್ಥೆ ಗಮನ ಹರಿಸಬೇಕು. ಸಾರ್ವಜನಿಕರು ಮೈ ಎಲ್ಲವನ್ನೂ ಕಣ್ಣಾಗಿಸಿಕೊಳ್ಳಬೇಕು’ ಎಂದು ಶನಿವಾರ ಸುದ್ದಿಗಾರರಿಗೆ ತಿಳಿಸಿದರು.

ನೆಟ್ಟ ಸಸಿಗಳಿಗೆ ಜಿಯೊ ಟ್ಯಾಗ್: ಸಚಿವ ಈಶ್ವರ ಖಂಡ್ರೆ

ಕಲಬುರಗಿ: ‘ಅರಣ್ಯ ಇಲಾಖೆಯ ವತಿಯಿಂದ ನೆಡಲಾಗುವ ಸಸಿಗಳ ಬೆಳವಣಿಗೆ ಮೇಲೆ ನಿಗಾವಹಿಸಲು ಪ್ರತಿ ಸಸಿಯನ್ನು ಜಿಯೊ ಟ್ಯಾಗ್ ಮೂಲಕ ದಾಖಲೀಕರಣ ಮಾಡುವಂತೆ ಅಧಿಕಾರಿಗಳಿಗೆ ಆದೇಶಿಸಿದ್ದೇನೆ’ ಎಂದು ಅರಣ್ಯ ಮತ್ತು ಪರಿಸರ ಸಚಿವ ಈಶ್ವರ ಖಂಡ್ರೆ ಹೇಳಿದರು.

ಶನಿವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ನಮ್ಮ ಮಣ್ಣಿಗೆ ಹೊಂದಿಕೊಂಡು ಉತ್ತಮವಾಗಿ ಬೆಳೆಯುವ ಸಸಿಗಳನ್ನು ಸರ್ವೆ ನಂಬರ್ ಸಹಿತ ಜಿಯೊ ಟ್ಯಾಗ್ ಮಾಡಲಾಗುವುದು. ಸಸಿ ಯಾವ ವರ್ಷ ಎಷ್ಟು ಬೆಳೆಯಿತು? ಸ್ಥಿತಿಗತಿ ಏನಿದೆ ಎಂಬ ಮಾಹಿತಿ ಇಲಾಖೆ ವೆಬ್‌ಸೈಟ್‌ನಲ್ಲಿ ಸಿಗಲಿದೆ’ ಎಂದರು.

‘ನಮ್ಮ ಸರ್ಕಾರ ಬಂದ ಮೇಲೆ 8.50 ಕೋಟಿ ಸಸಿ ನೆಡಲಾಗಿದೆ. ಇವುಗಳಲ್ಲಿ ಶೇ 70ರಷ್ಟು ಉಳಿದಿವೆ. ಈ ವರ್ಷ ಪ್ರತಿ ನಗರದಲ್ಲಿ ತಲಾ ಒಂದು ಲಕ್ಷ ಸಸಿ ನೆಡಲಾಗುವುದು. ಅವುಗಳನ್ನು ಥರ್ಡ್ ಪಾರ್ಟಿ ಏಜೆನ್ಸಿಯಿಂದ ಪರಿಶೀಲನೆ ಸಹ ನಡೆಸಲಾಗುವುದು’ ಎಂದು ಹೇಳಿದರು.



ಈಶ್ವರ ಖಂಡ್ರೆ

‘ಮಾಲಿನ್ಯಕ್ಕೆ ಕಾರಣವಾಗುವ ಕಾರ್ಖಾನೆಗಳ ಬಗ್ಗೆ ವರದಿ ತರಿಸಿಕೊಂಡು, ಕ್ರಿಮಿನಲ್ ಮೊಕದ್ದಮೆ ದಾಖಲಿಸಲಾಗುವುದು. ದಂಡವನ್ನು ವಿಧಿಸಲಾಗುವುದು’ ಎಂದು ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿದರು.

ಚೀಮನಹಳ್ಳಿ ರಮೇಶಬಾಬುಗೆ ‘ಸಂಗಂ’ ಪುರಸ್ಕಾರ

ಬಳ್ಳಾರಿ: ಕಾದಂಬರಿಕಾರ ಚೀಮನಹಳ್ಳಿ ರಮೇಶಬಾಬು ಅವರ ‘ಮಂಪರು’ ಕಾದಂಬರಿಗೆ 2024ನೇ ಸಾಲಿನ ‘ಸಂಗಂ ಸಾಹಿತ್ಯ ಪುರಸ್ಕಾರ’ ಲಭಿಸಿದೆ. ಪುರಸ್ಕಾರ ₹25 ಸಾವಿರ ನಗದು ಒಳಗೊಂಡಿದೆ.

ಶನಿವಾರ ಇಲ್ಲಿ ನಡೆದ ಮೂರನೇ ವರ್ಷದ ‘ಸಂಗಂ’ ಸಾಹಿತ್ಯ ಪುರಸ್ಕಾರ ಪ್ರದಾನ ಸಮಾರಂಭದಲ್ಲಿ ಸಾಹಿತಿ ಜಿ.ಪಿ. ಬಸವರಾಜ ಅವರು ಪ್ರಶಸ್ತಿಗೆ ಚೀಮನಹಳ್ಳಿ ರಮೇಶಬಾಬು ಹೆಸರು ಘೋಷಿಸಿದರು.

ಒಟ್ಟು 73 ಕಾದಂಬರಿಗಳು ಪುರಸ್ಕಾರ ಕೋರಿ ಬಂದಿದ್ದವು. ತಾರಿಣಿ ಶುಭದಾಯಿನಿ, ಸಿರಾಜ್ ಅಹಮದ್ ಮತ್ತು ವೆಂಕಟಗಿರಿ ದಳವಾಯಿ ತೀರ್ಪುಗಾರರಾಗಿದ್ದರು.



ಚೀಮನಹಳ್ಳಿ ರಮೇಶಬಾಬು

ಕನ್ನಡ: ಫಲಿತಾಂಶದಲ್ಲಿ 13, ಮರು ಎಣಿಕೆಯಲ್ಲಿ 73 ಅಂಕ

ಪ್ರಜಾವಾಣಿ ವಾರ್ತೆ

ತೆಕ್ಕಲಕೋಟೆ (ಬಳ್ಳಾರಿ ಜಿಲ್ಲೆ): ಎಸ್‌ಎಸ್‌ಎಲ್‌ಸಿ ಫಲಿತಾಂಶ ಪ್ರಕಟವಾದಾಗ ಕನ್ನಡ ವಿಷಯದಲ್ಲಿ 13 ಅಂಕ ಪಡೆದಿದ್ದ ತೆಕ್ಕಲಕೋಟೆ ಹೋಬಳಿಯ ಕರೂರು ಗ್ರಾಮದ ಡಾ. ಬಿ. ಆರ್. ಅಂಬೇಡ್ಕರ್ ವಸತಿ ಶಾಲೆಯ ವಿದ್ಯಾರ್ಥಿನಿ ವೀರನಿಖಿತಾಂಜಲಿ, ಮರು ಎಣಿಕೆಯಲ್ಲಿ 73 ಅಂಕ ಪಡೆದಿದ್ದಾಳೆ.

ಕನ್ನಡದಲ್ಲಿ ಕಡಿಮೆ ಅಂಕ ಪಡೆದು, ವೀರನಿಖಿತಾಂಜಲಿ ಅನುತ್ತೀರ್ಣಗೊಂಡಿದ್ದಳು. ಈಗ ಹೆಚ್ಚಿನ ಅಂಕಗಳೊಂದಿಗೆ ಉತ್ತೀರ್ಣವಾಗಿದ್ದಾಳೆ. ಈ ಫಲಿತಾಂಶದಿಂದ ಶಾಲೆಯ 40ಕ್ಕೆ 40 ವಿದ್ಯಾರ್ಥಿಗಳು ಉತ್ತೀರ್ಣವಾದಂತೆ ಆಗಿದೆ’ ಎಂದು ಶಾಲೆಯ ಪ್ರಾಂಶುಪಾಲ ಖಾಸಿಂ ಸಾಹೇಬ್ ತಿಳಿಸಿದ್ದಾರೆ.

‘ಪ್ರಧಾನಿಯಿಂದ ವಿಶ್ವಾಸದ್ರೋಹ’

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ‘ದಶಕಗಳಿಂದ ಹಿಂದೂಗಳ ರಕ್ತ ಹರಿಸಿದ್ದ ಪಾಕಿಸ್ತಾನದ ನಿರ್ನಾಮದವರೆಗೆ ಭಾರತ ಕದನ ವಿರಾಮ ಘೋಷಿಸಬಾರದಿತ್ತು. ಹಿಂದೂಗಳ ವಿಶ್ವಾಸಕ್ಕೆ ಪ್ರಧಾನಿ ಮೋದಿ ದ್ರೋಹ ಎಸಗಿದ್ದಾರೆ’ ಎಂದು ಶ್ರೀರಾಮ ಸೇನೆ ಸಂಘಟನೆ ಸಂಸ್ಥಾಪಕ ಅಧ್ಯಕ್ಷ ಪ್ರಮೋದ ಮುತಾಲಿಕ ಆಕ್ರೋಶ ವ್ಯಕ್ತಪಡಿಸಿದರು.

‘ಇಷ್ಟು ವರ್ಷ ಪಾಕ್ ನಡೆಸಿದ್ದ ಕ್ರೌರ್ಯ, ಉಗ್ರರ ಕೃತ್ಯಕ್ಕೆ ಪಾಠ ಕಲಿಸಬೇಕಿತ್ತು. ಪ್ರಧಾನಿ ತಪ್ಪು ನಿರ್ಧಾರ ತೆಗೆದುಕೊಂಡಿದ್ದು ಸರಿಯಲ್ಲ’ ಎಂದು ಶನಿವಾರ ಸುದ್ದಿಗಾರರಿಗೆ ತಿಳಿಸಿದರು.

‘ಹಿಂದೆಯೂ ಪಾಕಿಸ್ತಾನ ಕದನ ವಿರಾಮ ಎಂದು, ಎಷ್ಟೋ ಮಂದಿ ಭಾರತೀಯರನ್ನು ಸಾಯಿಸಿದೆ. ಈಗ ಮತ್ತೆ, ಮುಂದೆ ಇನ್ನು ಎಷ್ಟು ಮಂದಿ ಸಾಯಬೇಕು’ ಎಂದು ಪ್ರಶ್ನಿಸಿದರು.

ಜೆನ್ ಝೀ ನಾವೇಕೆ ಹೀಗೆ..?



ಪ್ರಜಾವಾಣಿ ಚಿತ್ರ: ರಂಜು ಪಿ.

ಒಂದನೇ ಪುಟದಿಂದ..

ಹೀಗಿದ್ದರೂ ಜೆನ್ ಝೀ ಉಪನ್ಯಾಸಕರಿಗೆ ಸವಾಲು ಹಾಗೂ ಉದ್ಯೋಗದಾತರಿಗೆ ಬಿಸಿತುಪ್ಪವಾಗಿದ್ದಾರೆ ಎಂಬ ಮಾತುಗಳೂ ಕೇಳುತ್ತಿವೆ.

ಡಿಜಿಟಲ್ ಪರಿಸರದ ಪ್ರಭಾವ: ಇವರ ಕ್ರಿಯಾಶೀಲತೆಯೂ, ಕಲಾಕೌಶಲ ಎಲ್ಲವೂ ಮೊಬೈಲ್ ಮೇಲೆಯೇ ಅವಲಂಬಿತ. ಭಾರತೀಯ ಮನೋಶಾಸ್ತ್ರದ ಕುರಿತ ಅಂತರರಾಷ್ಟ್ರೀಯ ಜರ್ನಲ್ ಒಂದು ಪ್ರಕಟಿಸಿರುವ ವರದಿಯ ಪ್ರಕಾರ, ಕಿರು ಅವಧಿಯ ವಿಡಿಯೊಗಳೇ ಇವರ ಅಚ್ಚುಮೆಚ್ಚು ಎಂದಿದೆ. ಕಾಲೇಜು ಒಂದರಲ್ಲಿ ನಡೆಸಿದ ಸಮೀಕ್ಷೆಯಲ್ಲಿ ಶೇ 35ರಷ್ಟು ವಿದ್ಯಾರ್ಥಿಗಳು ಮಿತಿಯೇ ಇಲ್ಲದಂತೆ ಒಂದಾದಮೇಲೊಂದರಂತೆ ಇಂಥ ಕಿರು ವಿಡಿಯೊಗಳನ್ನು ವೀಕ್ಷಿಸು ವವರೇ. ಜತೆಗೆ ಶೇ 70ರಷ್ಟು ಮಂದಿ ತಮ್ಮದೇ ವಿಡಿಯೊಗಳನ್ನು ಅಪ್ಲೋಡ್ ಮಾಡುವ ಹವ್ಯಾಸವನ್ನೂ ಹೊಂದಿದ್ದಾರೆ. ಇದರಿಂದ ಗಳಿಕೆಯ ಹಾದಿಯನ್ನು ಹುಡುಕಿಕೊಂಡವರು ಹಲವರು.

ಸದ್ಯ ಪ್ರಚಲಿತದಲ್ಲಿರುವ ಕಿರು ವಿಡಿಯೊಗಳ ಕಂಟೆಂಟ್ ಕ್ರಿಯೇಟರ್‌ಗಳು ಇವುಗಳನ್ನು ಹಂಚಿಕೊಳ್ಳುವುದರಲ್ಲೇ ತಮ್ಮ ಕ್ರಿಯಾಶೀಲತೆ ಮರೆಯುತ್ತಾರೆ. ಇದರ ಪರಿಣಾಮ ಏಕಾಗ್ರತೆಯ ಕೊರತೆ ಎದುರಿಸುತ್ತಿದ್ದಾರೆ. ಜತೆಗೆ, ಮನೆಯಲ್ಲಿ ಇತರರೊಂದಿಗೆ ಸಂವಹನ ನಡೆಸುವ ಮನುಷ್ಯ ಸಹಜ ಗುಣವನ್ನೂ ಕಳೆದುಕೊಳ್ಳುತ್ತಿರುವುದು ತಜ್ಞರ ಕಳವಳಕ್ಕೆ ಕಾರಣವಾಗಿದೆ.

ಭಾಷೆಯೂ ಬೇರೆಯೇ...!

ಜೆನ್ ಝೀ ನಂತರದಲ್ಲಿ ಜನರೇಷನ್ ಬೀಟಾ ಮತ್ತು ಜೆನ್ ಆಲ್ಫಾಗಳೂ ಈಗ ಬಂದಿವೆ. ಈ ವಯಸ್ಸಿನವರ ಮಾತು ಅರ್ಥಮಾಡಿಕೊಳ್ಳಬೇಕೆಂದರೆ ಈ ವರ್ಗದವರೊಂದಿಗೇ ಇದ್ದು ಸಂಶೋಧನೆ ಮಾಡಬೇಕು ಎನ್ನುವುದು ಹಲವು ಪೋಷಕರ ಅಳಲು.

ಸ್ಲ್ಯಾಂಗ್ (ಆಡು ಭಾಷೆ) ಎಂದು ಕರೆಯುವ ಬಹಳಷ್ಟು ಶಬ್ದಗಳ ಬಳಕೆ ಮಹಾನಗರಗಳ ಬಡಾವಣೆಗಳಲ್ಲಿರುವ ಇಂಥ ಯುವ ಸಮುದಾಯಗಳಲ್ಲಿ ಕೇಳಸಿಗಬಹುದು. ನಮ್ಮ ಅಂಕಲ್ 'ಒಮೆಗಾ' ಎಂದು ಈ ಮಕ್ಕಳು ಹೇಳಿದರೆ, ಬೆನ್ನು ತಟ್ಟಿಕೊಳ್ಳುವ ಅಗತ್ಯವಿಲ್ಲ. ಹಾಗೆಂದರೆ ಈ ಹಿಂದೆ ಹೇಳುತ್ತಿದ್ದಂತೆ 'ಓಬಿರಾಯನ ಕಾಲದವರು' ಎನ್ನುವುದಕ್ಕೆ ಇವರ ಭಾಷಾಪ್ರಯೋಗವಿದು. ಒಬ್ಬ ವ್ಯಕ್ತಿ ಸುಮಾರಾಗಿದ್ದರೆ ಅವರನ್ನು 'ಬೇಸಿಕ್', ಅದ್ಭುತವಾಗಿದ್ದರೆ 'ಫೈರ್', ಹೀಗೆ ಇವರ ಪದಗುಚ್ಛಗಳಿಗೆ ಈಗ ಸ್ಲ್ಯಾಂಗ್ ನಿಘಂಟು ಕೂಡಾ ಆನ್‌ಲೈನ್‌ನಲ್ಲಿ ಲಭ್ಯವಿದೆ. ಹೀಗೆ ಶಾಲಾ ಮಕ್ಕಳಾದಿಯಾಗಿ ಆಧುನಿಕ ತಲೆಮಾರಿನ ಯುವಸಮೂಹವು ಇಂಥ ಡಜನ್‌ಗಟ್ಟಲೆ ಪದಗಳನ್ನು ಸಾಮಾನ್ಯವಾಗಿ ಬಳಸುತ್ತಿದ್ದಾರೆ ಎಂದು ಬೆಂಗಳೂರಿನ ಪ್ರತಿಷ್ಠಿತ ಶಾಲೆಯ ಶಿಕ್ಷಕರೊಬ್ಬರು ಹೇಳುತ್ತಾರೆ. ಮಕ್ಕಳ ಈ ಭಾಷೆಗಳನ್ನು ಅರ್ಥೈಸಿಕೊಳ್ಳುವಲ್ಲಿ ತಾವೂ ಹೆಣಗಾಡುತ್ತಿರುವುದಾಗಿ ಪಾಲಕರೂ ಹೇಳುತ್ತಿದ್ದಾರೆ.

ಕಿರಿದಾದ ಕುಟುಂಬ ಗಾತ್ರ

ಸಾಮಾನ್ಯವಾಗಿ ಕಿರುಗಾತ್ರದ ಕುಟುಂಬ ಅಥವಾ ಏಕಪಾಲಕರ ಆರೈಕೆ ಇಂದು ಮಹಾನಗರಗಳಲ್ಲಿ ಸಾಮಾನ್ಯ ಎಂಬಂತಾಗಿದೆ. ಸಮಾಜದಲ್ಲಿನ ಇಂಥ ಪರಿವರ್ತನೆಗಳು ಭವಿಷ್ಯದ ಪೀಳಿಗೆಯಲ್ಲಿ ಪ್ರತಿಫಲಿಸುತ್ತಿದೆ. ಹಲವು ಸಂಸ್ಕೃತಿಗಳೊಂದಿಗೆ ಬದುಕು, ಹೊಸತನ್ನು ಬೇಗನೆ ಅಳವಡಿಸಿಕೊಳ್ಳುವುದು ಮತ್ತು ಭಿನ್ನ ರೀತಿಯ ಕುಟುಂಬ ಪರಿಸ್ಥಿತಿಯನ್ನು ಒಪ್ಪಿಕೊಳ್ಳುವ ಅನಿವಾರ್ಯತೆಯೂ ಇದರಲ್ಲಿದೆ.

'ಹಿಂದೆ ಮಕ್ಕಳಿಗೂ ಮನೆಯಲ್ಲಿ ಒಂದಷ್ಟು ಕೆಲಸ ಮತ್ತು ಜವಾಬ್ದಾರಿಗಳನ್ನು ನೀಡಲಾಗುತ್ತಿತ್ತು. ಅಂಗಡಿಗೆ ಹೋಗುವುದು, ವಿದ್ಯುತ್ ಅಥವಾ ಇನ್ನಾವುದೇ ಬಿಲ್‌ಗಳನ್ನು ಕಟ್ಟಿ, ಸರಿಯಾದ ಚಿಲ್ಲರೆ ತರುವುದು ಇತ್ಯಾದಿ. ಮನೆ ಶುಚಿಯಾಗಿಡುವಲ್ಲೂ ಮಕ್ಕಳನ್ನು ಬಳಸಿಕೊಳ್ಳುತ್ತಿದ್ದುದರಿಂದ ಜವಾಬ್ದಾರಿ ಸಹಜವಾಗಿ ಅವರಲ್ಲಿ ರೂಢಿಗತವಾಗುತ್ತಿತ್ತು. ಆದರೆ ಇಂದು, ಮಕ್ಕಳಿಗೆ ಮನೆ ಕಲಸ ಕೊಡಬಾರದು ಎಂಬ ಪಾಲಕರ ಬದಲಾದ ಮನಸ್ಥಿತಿ ಒಂದೆಡೆಯಾದರೆ, ಪಟ್ಟಣಗಳಲ್ಲಿ ಮನೆಗೆಲಸದವರನ್ನು ನೇಮಿಸಿಕೊಳ್ಳುವ ಪ್ರವೃತ್ತಿ ಬೆಳೆಯುತ್ತಿದೆ. ನಮ್ಮ ನಮ್ಮ ಕುಟುಂಬಕ್ಕಾಗಿ ದುಡಿಯುವುದು ಅಗತ್ಯ ಎಂಬ ಪರಿಕಲ್ಪನೆಯನ್ನು ರೂಢಿಸಿಕೊಳ್ಳದಿದ್ದರೆ ಜವಾಬ್ದಾರಿ ಮೂಡುವುದು ಕಷ್ಟ' ಎಂದು ಜೆನ್ ಝೀ ಕುರಿತು ಅಧ್ಯಯನ ನಡೆಸಿರುವ ಮೈಸೂರಿನ ಡಾರ್ವಿನ್ ಸೈಕಾಲಜಿ ಸೆಂಟರ್‌ನ ಮುಖ್ಯಸ್ಥ ಶ್ರೀಧರ್ ಮಂಡ್ಯಮ್ ಅವರ ಅಭಿಮತ.

'ಇಂಥ ಪರಿಸ್ಥಿತಿ ನಗರ ಪ್ರದೇಶದಲ್ಲಿ ಹೆಚ್ಚಾಗಿದೆ. ಹಿಂದಿನ ತಲೆಮಾರಿಗೆ ಹೋಲಿಸಿದರೆ ಸಾಕಷ್ಟು ಸುಭಿಕ್ಷ ಕಾಲದಲ್ಲಿ ಜನರೇಷನ್ ಝೀ ಇದೆ. ಹಿಂದಿನ ತಲೆಮಾರಿಗೆ ಇರದ ಟಿ.ವಿ. ಕಾರು, ಮೊಬೈಲ್, ಮನೆ ಸೇರಿದಂತೆ ಎಲ್ಲಾ ಸೌಕರ್ಯಗಳನ್ನೂ ತಮ್ಮ ಪಾಲಕರ ಮೂಲಕ ಇವರು ಪಡೆದಿದ್ದಾರೆ. ಹೀಗೆ ಎಲ್ಲಾ ಸವಲತ್ತುಗಳಿರುವ ಕಾಲದಲ್ಲಿ ತಾನೇಕೆ ದುಡಿಯಬೇಕು ಎಂಬುದನ್ನು ಪಾಲಕರು ಮನದಟ್ಟು ಮಾಡಬೇಕು. ಒಂದೊಮ್ಮೆ ಅಂಥ ಜ್ಞಾನ ಅವರಿಗೆ ಸಿಕ್ಕಿದ್ದೇ ಆದಲ್ಲಿ ಅವರು ಮಹತ್ತರವಾದದ್ದನ್ನು ಸಾಧಿಸುತ್ತಾರೆ' ಎಂಬ ವಿಶ್ವಾಸ ಅವರದ್ದು.

'ಹಿಂದಿನ ತಲೆಮಾರಿಗೆ ಆಯ್ಕೆಗಳು ಕಡಿಮೆ ಇದ್ದವು. ಈಗ ಓದಲು ನೂರಾರು ಕೋರ್ಸ್‌ಗಳಿಗೆ. ದುಡಿಯಲು ಹಲವು ದಾರಿಗಳಿವೆ. ಅವರಿಗೆ ಸೂಕ್ತ ಮಾರ್ಗದರ್ಶನದ ಅಗತ್ಯವಿದೆ. ಅದನ್ನು ಪಾಲಕರು ಮಾಡಬೇಕು. ಕುಟುಂಬದಲ್ಲಿ ಸದಸ್ಯರ ಸಂಖ್ಯೆಯೂ ಕಡಿಮೆಯಾಗಿರುವುದರಿಂದ ಮತ್ತು ಸ್ನೇಹಕ್ಕೆ ಸಹಜವಾಗಿ ಹಾತೊರೆಯುವ ಯುವ ಮನಸ್ಸುಗಳಿಗೆ ಸಾಮಾಜಿಕ ಮಾಧ್ಯಮಗಳ ಮೂಲಕ ಸಿಗುವ ಸ್ನೇಹ ಬಯಸುವುದರಲ್ಲಿ ತಪ್ಪೇನು. ಆದರೆ ಸಾಮಾಜಿಕ ಮಾಧ್ಯಮವನ್ನು ಏತಕ್ಕೆ ಮತ್ತು ಎಷ್ಟು ಬಳಸಬೇಕು ಎಂಬುದನ್ನು ತಿಳಿಸಬೇಕಾದ್ದು ಹಿರಿಯರ ಕರ್ತವ್ಯ' ಎನ್ನುತ್ತಾರೆ ಶ್ರೀಧರ್.

ಶಿಕ್ಷಣ ತಜ್ಞರ ಭರವಸೆ

ಜೆನ್ ಝೀ ಅವರ ನಿರ್ವಹಣೆಯಲ್ಲಿ ಸವಾಲುಗಳು ಇದ್ದರೂ, ಅವರ ಭವಿಷ್ಯದ ಕುರಿತು ಶಿಕ್ಷಣ ತಜ್ಞರು ಸಾಕಷ್ಟು ಭರವಸೆ ವ್ಯಕ್ತಪಡಿಸಿದ್ದಾರೆ.

'ಜೆನ್ ಝೀ ವಿದ್ಯಾರ್ಥಿಗಳ ಮೇಲೆ ಡಿಜಿಟಲ್ ಪರಿಸರ ತೀವ್ರವಾಗಿ ಪ್ರಭಾವ ಬೀರಿದೆ. ಇದರಿಂದ ಅವರು ಹೆಚ್ಚಿನ ಫಲಿತಾಂಶ ತರಬಲ್ಲರು ಎಂಬ ನಂಬಿಕೆ ಸೃಷ್ಟಿಯಾಗಿದೆ. ಅಸಲಿಗೆ ಒಂದೇ ವಿಷಯದ ಮೇಲೆ ಹೆಚ್ಚು ಹೊತ್ತು ಗಮನ ಹರಿಸಲು ಸಾಧ್ಯವಿಲ್ಲದ ಈ ತಲೆಮಾರಿನವರು ಕಿರು ಅವಧಿಯ ಶಿಕ್ಷಣವನ್ನು ಬಯಸುತ್ತಿದ್ದಾರೆ. ಜತೆಗೆ ಒಂದೇ ವಿಷಯದ ಕುರಿತು ಹಲವು ಮೂಲಗಳಿಂದ ಮಾಹಿತಿ ಕಲೆಹಾಕುವ ಸಾಮರ್ಥ್ಯ ಇವರಿಗಿದೆ. ಹೀಗಾಗಿ ಈ ಹಿಂದಿನ ತಲೆಮಾರಿನವರಿಗಿಂತ ಇವರು ಉತ್ತಮರು' ಎಂಬುದು ಪಿಇಎಸ್ ವಿಶ್ವವಿದ್ಯಾಲಯದ ಕುಲಾಧಿಪತಿ ಪ್ರೊ. ಜವಾಹರ್ ದೊರೆಸ್ವಾಮಿ ಅವರ ವಿಶ್ಲೇಷಣೆ.

'ಜೆನ್ ಝೀ ಪೀಳಿಗೆಯು ತಂತ್ರಜ್ಞಾನ ಶ್ರೀಮಂತರಾಗಿದ್ದು, ತ್ವರಿತ ಮಾಹಿತಿ ಜಾಗತಿಕ ಸಂಪರ್ಕದಿಂದ ಸಂಪದ್ಭರಿತರಾಗಿದ್ದಾರೆ. ಹೀಗಾಗಿ ಚರ್ಚೆ, ವೈಯಕ್ತಿಕ ಸಂವಾದ ಮತ್ತು ಪ್ರಾಯೋಗಿಕ ಕಲಿಕೆ ಮೂಲಕ ಇವರಿಗೆ ಶಿಕ್ಷಣ ನೀಡುವ ಪದ್ಧತಿಯನ್ನು ಅಳವಡಿಸಿಕೊಳ್ಳಲಾಗಿದೆ. ಬದಲಾಗುತ್ತಿರುವ ಪೀಳಿಗೆಯ ಅಗತ್ಯಗಳು ಶಿಕ್ಷಣ ಸಂಸ್ಥೆಗಳಿಗೂ ಹೊಸತನವನ್ನು ಅಳವಡಿಸಿಕೊಳ್ಳಲು ಪ್ರೇರೇಪಿಸಿವೆ' ಎನ್ನುತ್ತಾರೆ ಕ್ರೈಸ್ಟ್ ವಿಶ್ವವಿದ್ಯಾಲಯದ ಕುಲಪತಿ ಡಾ. ಫಾದರ್ ಜೋಸ್ ಸಿ.ಸಿ.

'20 ವರ್ಷಗಳ ಶಿಕ್ಷಕ ವೃತ್ತಿಯಲ್ಲಿ 2017ರಿಂದ ಮಕ್ಕಳ ವರ್ತನೆಯಲ್ಲಿ ಆಗುತ್ತಿರುವ ಬದಲಾವಣೆ ಗಮನಿಸುತ್ತಾ ಬಂದಿದ್ದೇನೆ. ಏಕಾಗ್ರತೆಯ ಕೊರತೆ ಬಹುವಾಗಿ ಇವರನ್ನು ಕಾಡುತ್ತಿದೆ. ಅದರಲ್ಲೂ ಕೃತಕ ಬುದ್ಧಿಮತ್ತೆಯ ಚಾಟ್‌ಬಾಟ್‌ಗಳು ಬಂದ ನಂತರವಂತೂ, ಕ್ರಿಯಾಶೀಲತೆಯೂ ಮರೆಯಾಗಿದೆ. ಪ್ರಬಂಧವಾಗಲೀ, ಕಂಪ್ಯೂಟರ್ ಕೋಡಿಂಗ್‌ಗಳಾಗಲಿ ಎಲ್ಲವೂ ಕಾಪಿ ಮತ್ತು ಪೇಸ್ಟ್ ಅಷ್ಟೇ' ಎನ್ನುವುದು ಪ್ರಾಧ್ಯಾಪಕಿ ಸಂಗೀತಾ ಬಿ.ಕೆ. ಅವರ ಅನುಭವದ ಮಾತು.

ಜೆನ್ ಝೀ ಚಿತ್ತಚಾಂಚಲ್ಯಕ್ಕೆ ಕಂಪನಿಗಳೂ ಹೈರಾಣ

'ವೃತ್ತಿ ಬದುಕಿನಲ್ಲಿ ಇವರ ವರ್ತನೆ ಕುರಿತೂ ಸಮೀಕ್ಷೆಗಳು ನಡೆದಿವೆ. ಜೆನ್ ಝೀ ಉದ್ಯೋಗಿಗಳು ವೃತ್ತಿಗಿಂತ ಹೆಚ್ಚಾಗಿ, ಇತರ ಕೆಲಸಗಳಲ್ಲಿ ಆಸಕ್ತರು. ಹಲವು ಬಾರಿ ಗುರಿ ತಲುಪಲು ಸಾಕಷ್ಟು ಪ್ರಯಾಸಪಡುವುದೂ ಉಂಟು. ಹಿಡಿದ ಕೆಲಸವನ್ನು ಮುಗಿಸುವುದೊರಳಗೆ, ಬೇರೊಂದು, ಮತ್ತೊಂದು, ಮಗದೊಂದು ಕೆಲಸ ಹಿಡಿಯುವ ಪ್ರವೃತ್ತಿಯ ಈ ಪೀಳಿಗೆಯ ಚಿತ್ತಚಾಂಚಲ್ಯಕ್ಕೆ ಕಂಪನಿಗಳೂ ಹೈರಾಣಾಗಿವೆ. ಹೀಗಾಗಿ ಕಂಪನಿಗಳೂ ಈಗ ತಮ್ಮ ತಂತ್ರಗಳನ್ನು ಬದಲಿಸಿವೆ. ಈ ತಲೆಮಾರಿನವರಿಗೆ ನಿರ್ದಿಷ್ಟ ಕೆಲಸವನ್ನು ನೀಡಿ, ಅದನ್ನು ಪೂರ್ಣಗೊಳಿಸಲು ನಿಗದಿತ ಸಮಯ ನೀಡುವುದನ್ನು ರೂಢಿಸಿಕೊಂಡಿವೆ' ಎಂದು ಟೆಕ್‌ಮೆರಿಡಿಯನ್ ಕಂಪನಿಯ ಕಾರ್ಯಾಚರಣೆ ವಿಭಾಗದ ಮುಖ್ಯಸ್ಥ ಶಿವಕುಮಾರ್ ಎಸ್. ಅಕ್ಕಿ ಹೇಳಿದ್ದಾರೆ.

'ಶುಗರ್ ಬ್ರೇಕ್' ಇದು ಜೆನ್ ಝೀ ನೌಕರರಲ್ಲಿ ಸಾಮಾನ್ಯ ಪದ. ಕೆಲಸದ ನಡುವೆ ಆಗಾಗ್ಗೆ ಬ್ರೇಕ್‌ಗಳನ್ನು ತೆಗೆದುಕೊಳ್ಳುವುದು ಇವರಿಗೆ ಸಾಮಾನ್ಯ ಸಂಗತಿ. ಪದೇ ಪದೇ ಬಿಡುವು ತೆಗೆದುಕೊಳ್ಳುವುದರಿಂದ ಕೆಲಸ ಸರಾಗವಾಗಿ ಸಾಗದು. ಆದರೆ ಜೆನ್ ಝೀ ದೃಷ್ಟಿಕೋನದಿಂದ ನೋಡುವುದಾದರೆ, ಅವರು ವೃತ್ತಿ ಸ್ಥಳದಲ್ಲೂ ಮಾನಸಿಕ ಸ್ವಾಸ್ಥ್ಯ ಮತ್ತು ಆರಾಮವನ್ನು ಬಯಸುತ್ತಿರುವುದು ಸ್ಪಷ್ಟ ಎಂದು ಮಾನಸಿಕ ತಜ್ಞರು ಹೇಳಿರುವುದನ್ನು ನ್ಯೂಯಾರ್ಕ್ ಟೈಮ್ಸ್ ವರದಿ ಮಾಡಿದೆ.

ಇವರ ಪ್ರೇಮ ಭಾಷೆಯೂ ಭಿನ್ನ

'ನೀ ನಡೆವ ಹಾದಿಯಲ್ಲಿ ನಗೆಹೂವು ಬಾಡದಿರಲಿ...', 'ಏಳೇಳು ಜನ್ಮಕ್ಕೂ ನೀನೇ ನನ್ನ ಸಂಗಾತಿ...' ಇಂಥ ಪದಗಳನ್ನೆಲ್ಲಾ ಹೇಳಿದರೆ ಜೆನ್ ಝೀ ನಕ್ಕುಬಿಡಬಹುದು. ಪ್ರೇಮ, ಪ್ರಯಣ ವಿಷಯದಲ್ಲೂ ಇವರ ನಿಲುವೇ ಬೇರೆ. ಯಾರೊಂದಿಗೆ ಎಷ್ಟು ದಿನ ಇರಬೇಕು, ಹೇಗಿರಬೇಕು, ಹೊಂದಿಕೊಳ್ಳದಿದ್ದರೆ ಹೇಗೆ ಪ್ರತ್ಯೇಕಗೊಳ್ಳಬೇಕು ಎಂಬುದಕ್ಕೆ ಇವರ ತಂತ್ರಗಳೇ ಬೇರೆ. ಹೀಗಾಗಿ ಈ ಪೀಳಿಗೆ ಪ್ರತಿಯೊಂದಕ್ಕೂ ಒಂದೊಂದು ಹೆಸರನ್ನಿಟ್ಟುಕೊಂಡಿದೆ. ಕೆಲವೇ ದಿನಗಳ ಸಂಬಂಧವಾದರೆ ನ್ಯಾನೊಶಿಪ್, ಕೆಲ ವಾರಗಳದ್ದಾದರೆ ಮೈಕ್ರೊಶಿಪ್, ಗಟ್ಟಿ ಸಂಬಂಧವಿಲ್ಲ ಆದರೂ ಪ್ರೇಮ, ಪ್ರಣಯಕ್ಕೇನೂ ಕೊರತೆ ಇಲ್ಲದಿದ್ದರೆ ಅದನ್ನು ಸಿಚ್ಯುಯೇಷನ್ಶಿಪ್, ಕುಟುಂಬಕ್ಕೆ ಬೆಲೆ ನೀಡುವ, ತನ್ನ ಬದುಕಿನ ಬಗ್ಗೆ ಸ್ಪಷ್ಟ ಗುರಿ ಹೊಂದಿರುವ ಮತ್ತು ಭಾವನಾತ್ಮಕವಾಗಿ ಪ್ರಬುದ್ಧತೆ ಹೊಂದಿದವರಿಗೆ ಹಸಿರು ಫ್ಲಾಗ್ ನೀಡಿ ಒಪ್ಪಿಕೊಳ್ಳುತ್ತಾರೆ. ಸ್ವಾಮ್ಯಸೂಚಕ, ಗುರಿ ಇಲ್ಲದ ಅಥವಾ ಹೆಚ್ಚು ಕಿರಿಕಿರಿ ಮಾಡುವವರಿಗೆ ಕೆಂಪು ಬಾವುಟ ತೋರಿಸಿ ಟಾಟಾ ಮಾಡಲೂ ಈ ಪೀಳಿಗೆ ಹೆಚ್ಚು ಯೋಚಿಸದು. ಯಾವುದೇ ಕಾರಣ ನೀಡದೆ ದೂರ ಸರಿದರೆ ಘೋಸ್ಟಿಂಗ್, ಸಾಮಾಜಿಕ ಜಾಲತಾಣದಲ್ಲಷ್ಟೇ ತಮ್ಮ ಸಂಗಾತಿಯನ್ನು ಪರಿಚಯಿಸಿದರೆ ಅದು ಸಾಫ್ಟ್ ಲಾಂಚ್, ಇಬ್ಬರ ಚಿತ್ರದೊಂದಿಗೆ ಸಂಬಂಧ ಬಹಿರಂಗಗೊಳಿಸಿದರೆ ಅದು ಹಾರ್ಡ್ ಲಾಂಚ್ ಹೀಗೆ ಇದು ಸಾಗುತ್ತಲೇ ಇರುತ್ತದೆ.

ನಮ್ಮ ಸ್ಪಷ್ಟತೆಯೇ ಎಲ್ಲರ ಗೊಂದಲಕ್ಕೆ ಕಾರಣ

'ನಮಗೇನು ಬೇಕು ಎಂಬುದರ ಸ್ಪಷ್ಟತೆ ನಮಗಿದೆ. ಆದರೆ ಹಲವು ವಿಷಯಗಳಲ್ಲಿ ನಮ್ಮ ತಲೆಮಾರಿನವರಲ್ಲೂ ಭಿನ್ನಾಭಿಪ್ರಾಯಗಳಿವೆ. ಕೆಲವರ ಅಭಿಪ್ರಾಯವನ್ನು ಎಲ್ಲರಿಗೂ ಹೋಲಿಕೆ ಮಾಡುವುದು ಸರಿಯಲ್ಲ. ಮಲ್ಟಿ ಟಾಸ್ಕರ್ಸ್ ಅಲ್ಲ ಎಂಬ ಆರೋಪವಿದೆ. ಒಪ್ಪಿಕೊಳ್ಳುತ್ತೇವೆ. ಆದರೆ ಒಂದೇ ವಿಷಯದಲ್ಲಿ ಹೆಚ್ಚು ಆಳವಾಗಿಳಿಯುವುದು ನಮ್ಮ ಸ್ವಭಾವ. ಇದರಿಂದ ಎಲ್ಲಾ ವಿಷಯಗಳನ್ನೂ ಒಂದಿಷ್ಟು ನೋಡುವ ಬದಲು, ಒಂದು ವಿಷಯದಲ್ಲಿ ಹೆಚ್ಚು ಸ್ಪಷ್ಟತೆ ಹೊಂದುವುದು ನಮ್ಮ ಅಭ್ಯಾಸ' ಎಂದೆನ್ನುತ್ತಾರೆ ಕಲೆ ವಿಷಯದಲ್ಲಿ ಪದವಿ ವ್ಯಾಸಂಗ ಮಾಡುತ್ತಿರುವ ವಿನ್ಯಾಸ್.

'ಶಿಕ್ಷಕರಿಗೆ ಗೌರವ ಕೊಡುವುದಿಲ್ಲ ಎಂಬುದು ಸುಳ್ಳು. ಆದರೆ ಅವರಿಗಿಂತ ಚೆನ್ನಾಗಿ ಮಾಹಿತಿ ನೀಡಬಲ್ಲ ಚಾಟ್‌ಬಾಟ್‌ಗಳಿದ್ದು, ಅವುಗಳನ್ನು ನಾವು ಹೆಚ್ಚು ಅವಲಂಬಿಸಿದ್ದೇವೆ ಎನ್ನುವುದು ಸತ್ಯ. ಕೃತಕ ಬುದ್ಧಿಮತ್ತೆಯಿಂದ ಒಂದಷ್ಟು ಕ್ರಿಯಾಶೀಲತೆ ನಮ್ಮಲ್ಲಿ ಕಡಿಮೆಯಾಗಿರಬಹುದು. ಆದರೆ ಆ ಉಳಿದ ಸಮಯವನ್ನು ಇನ್ನಷ್ಟು ಕೆಲಸಕ್ಕೆ ಬಳಸುತ್ತೇವೆ ಎಂಬುದು ಸತ್ಯ' ಎನ್ನುವುದು ಇವರ ಖಡಕ್ ಮಾತು.

'ರಾಜಕೀಯ ನಮಗೆ ಅರ್ಥವೇ ಆಗಲ್ಲ. ಅದರ ಗೋಜು ಬೇಡ ಎನ್ನುವವರು ನಾವು. ಜತೆಗೆ ನಮ್ಮಲ್ಲೂ ಹಲವರು ಭಾರೀ ಮನರಂಜನೆ ಬಯಸುವವರೂ ಇದ್ದಾರೆ. ಇನ್ನಷ್ಟು ಜನ ಸಿಕ್ಕಾಪಟ್ಟೆ ಕೆಲಸ ಮಾಡಿ ಕೋಟಿ ಕೋಟಿ ಸಂಪಾದಿಸುವ ಕನಸು ಹೊತ್ತವರೂ ಇದ್ದಾರೆ. ಹೀಗಾಗಿ ನಮ್ಮ ಬದುಕಿನ ಉದ್ದೇಶಗಳ ಕುರಿತು ಸ್ಪಷ್ಟತೆ ಹೊಂದಿರುವವರ ಸಂಖ್ಯೆಯೇ ದೊಡ್ಡದಿದೆ' ಎನ್ನುತ್ತಾರೆ ವಿನ್ಯಾಸ್.


'ನಾವೇನು ಆಯ್ಕೆ ಮಾಡಿದ್ದೇವೆಯೋ ಅದಕ್ಕೆ ಪಾಲಕರ ಬೆಂಬಲವಿದೆ. ಹೀಗಾಗಿ ನಾವು ಬಯಸಿದ್ದನ್ನು ಯಾರ ಅಂಜಿಕೆಯೂ ಇಲ್ಲದೆ ಕೈಗೊಳ್ಳುತ್ತಿದ್ದೇವೆ. ಈ ನಮ್ಮ ವರ್ತನೆ ಹಲವರಿಗೆ ಇರಿಸುಮುರುಸಾಗಬಹುದು. ಅದಕ್ಕೆ ಡೋಂಟ್‌ಕೇರ್' ಎನ್ನುವುದು ಮಾಡೆಲಿಂಗ್ ವಿದ್ಯಾರ್ಥಿನಿ ಶಿಪ್ರಾ ಅಭಿಪ್ರಾಯ.

ಕೃತಕ ಬುದ್ಧಿಮತ್ತೆ (ಎಐ) ಎಲ್ಲಾ ಕ್ಷೇತ್ರದಲ್ಲಿ ಕಾಲಿರಿಸಿರುವ ಸಂದರ್ಭದಲ್ಲಿ ಜೆನ್ ಝೀಗಳು ಶಿಕ್ಷಣ ಮುಗಿಸಿ ಉದ್ಯೋಗದತ್ತ ಮುಖಮಾಡುತ್ತಿದ್ದಾರೆ. ಇಂತಹ ಕಾಲದಲ್ಲಿ ಎಐ ಮೇಲೆ ನಿಯಂತ್ರಣ ಸಾಧಿಸುವಂತಹ ಇಲ್ಲವೇ ಎಐನಿಂದ ಅವಕಾಶಗಳನ್ನೇ ಕಳೆದುಕೊಳ್ಳಬಹುದಾದ ಕಾಲಘಟ್ಟದಲ್ಲಿ ಈ ಪೀಳಿಗೆಯಿದೆ. ಸವಾಲನ್ನು ಅವಕಾಶವನ್ನಾಗಿ ಪರಿವರ್ತಿಸಿಕೊಳ್ಳುವ ಜೆನ್ ಝೀ ಉದ್ಯಮಗಳಿಗೆ ಉಪಯುಕ್ತವಾಗುತ್ತಾರೆ.

ಪರಿಕಲ್ಪನೆ: ಯತೀಶ್ ಕುಮಾರ್ ಜಿ. ಡಿ

ಒಂದೊಂದು ತಲೆಮಾರಿಗೆ ಆಯಾ ಕಾಲಘಟ್ಟದ ಸಾಮಾಜಿಕ, ಆರ್ಥಿಕ ಬೆಳವಣಿಗೆ ಆಧರಿಸಿ ಜನರ ವರ್ತನೆಗಳಿಗೆ ಅನುಗುಣವಾಗಿ ಪಾಶ್ಚಾತ್ಯರು ಒಂದೊಂದು ಹೆಸರನಿಟ್ಟು ವಿಂಗಡಿಸಿದ್ದಾರೆ

ನಾಗರೀಕ ಯುದ್ಧದ ತಲೆಮಾರು (1845-1864)	ಸಾಕಷ್ಟು ನಾಗರಿಕ ಯುದ್ಧಗಳಿಗೆ ಸಾಕ್ಷಿಯಾದ ತಲೆಮಾರು
ಗಿಲ್ಡೆಡ್ ಏಜ್ ತಲೆಮಾರು (1865-1882)	ಒಂದಷ್ಟು ಭರವಸೆಯನ್ನು ಕಾಣುತ್ತಾ ಬೆಳೆದ ತಲೆಮಾರು
ಪ್ರೊಗ್ರೆಸಿವ್ ಎರಾ ತಲೆಮಾರು (1883-1900)	ಸಾಮಾಜಿಕ ಮತ್ತು ರಾಜಕೀಯ ಪ್ರಗತಿಯತ್ತ ಸಾಗಿದ ತಲೆಮಾರು
ಗ್ರೇಟೆಸ್ಟ್ ತಲೆಮಾರು (1901-1927)	ಆರ್ಥಿಕ ಸವಾಲುಗಳು ಮತ್ತು ಜಾಗತಿಕ ಮಟ್ಟದಲ್ಲಿನ ಒತ್ತಡಕ್ಕೆ ಸಾಕ್ಷಿಯಾದ ತಲೆಮಾರು
ಸೈಲೆಂಟ್ ಜನರೇಷನ್ (1928-1945)	ವಿಶ್ವಯುದ್ಧದ ನೆರಳಿನಲ್ಲೇ ಬೆಳೆದ ಈ ತಲೆಮಾರು ಆರ್ಥಿಕ ಅಸ್ಥಿರತೆಯ ಕಾಲದವರು
ಬೇಬಿ ಬೂಮರ್ಸ್ (1946-1964)	ಆರ್ಥಿಕ ಪ್ರಗತಿ ಮತ್ತು ಸಮಾಜದಲ್ಲಿ ಬದಲಾವಣೆ ಕಂಡ ತಲೆಮಾರು
ಜೆನರೇಷನ್ ಎಕ್ಸ್ (1965-1980)	ತಂತ್ರಜ್ಞಾನ ಬೆಳವಣಿಗೆ ಕಂಡ ತಲೆಮಾರಿನಲ್ಲಿ ಆರ್ಥಿಕ ಮತ್ತು ಸಾಮಾಜಿಕ ಬದಲಾವಣೆಯಾದವು
ಮಿಲೇನಿಯಲ್ಸ್ -ಜೆನ್ ವೈ (1981-1996)	ತಂತ್ರಜ್ಞಾನದ ಕ್ಷಿಪ್ರ ಕ್ರಾಂತಿಯೊಂದಿಗೆ ಜಗತ್ತು ಜಾಗತೀಕರಣದತ್ತ ಹೊರಳಿದ್ದಕ್ಕೆ ಸಾಕ್ಷಿಯಾದ ತಲೆಮಾರು
ಜೆನ್ ಝಡ್ (1997-2012)	ಅಂತರ್ಜಾಲಕ್ಕೆ ತೆರೆದುಕೊಂಡ ತಲೆಮಾರು, ಅಪರಿಮಿತ ಮಾಹಿತಿಯೊಂದಿಗೆ ಜಗತ್ತಿನೊಂದಿಗೆ ಮುಖಾಮುಖಿಯಾದ ತಲೆಮಾರು
ಜೆನ್ ಆಲ್ಫಾ (2013-2024)	ಕೃತಕ ಬುದ್ಧಿಮತ್ತೆ, ಹವಾಮಾನ ಕುರಿತು ಕಾಳಜಿ, ಜಾಗತಿಕ ಸಂಪರ್ಕ
ಜೆನ್ ಬಿಟಾ (2025-2039)	ತ್ವರಿತಗತಿಯ ತಂತ್ರಜ್ಞಾನ ಅನ್ವೇಷಣೆ, ಸಾಮಾಜದಲ್ಲಿ ಪರಿವರ್ತನೆ ಮತ್ತು ಪರಿಸರ ಸಂರಕ್ಷಣೆಯ ಕಾಳಜಿ



ಕಳೆದ ಮೂವತ್ತು ವರ್ಷಗಳಿಂದ ಮಾಡೆಲಿಂಗ್ ಮತ್ತು ನಟನೆ ಸಂಸ್ಥೆಯನ್ನು ನಡೆಸುತ್ತಿದ್ದೇನೆ. ಹೀಗಾಗಿ ಹಲವು ತಲೆಮಾರುಗಳ ಯುವಪಡೆಯನ್ನು ಅತ್ಯಂತ ಹತ್ತಿರದಿಂದ ನೋಡಿದ್ದೇನೆ. ಜೆನ್ ಝೀ ಬಹಳಾ ಬಿನ್ನ ಮತ್ತು ಸ್ಪಷ್ಟತೆ ಹೆಚ್ಚು.

ರವಿ ಹಾಸನ್, ಐಎಫ್‌ಎಂ ನಟನೆ ಮತ್ತು ಮಾಡೆಲಿಂಗ್ ತರಬೇತಿ ಸಂಸ್ಥೆ, ಬೆಂಗಳೂರು



ಜನರೇಷನ್ ಝೀನಲ್ಲಿ ಅತ್ಯಂತ ಹಿರಿಯರ ವಯಸ್ಸು ಈಗ 25 ವರ್ಷ. ಮುಂದಿನ 15 ವರ್ಷಗಳ ಕಾಲ ಇವರು ಉದ್ಯಮದ ಮುಂಚೂಣಿಯಲ್ಲಿರುತ್ತಾರೆ. ಜ್ಞಾನವನ್ನು ಹೆಚ್ಚಿಸುವ ಹೊಣೆಗಾರಿಕೆಯನ್ನು ಇವರು ಬಯಸುವುದರಿಂದ ಉದ್ಯಮವೂ ಬೆಳವಣಿಗೆ ಕಾಣಲಿದೆ.

ಶಿವಕುಮಾರ ಎಸ್. ಅಕ್ಕಿ
ಕಾರ್ಯಾಚರಣೆ ವಿಭಾಗದ ಮುಖ್ಯಸ್ಥ, ಟೆಕ್‌ಮೆರಿಡಿಯನ್



ವರ್ಷದಿಂದ ವರ್ಷಕ್ಕೆ ವಿದ್ಯಾರ್ಥಿಗಳ ಗ್ರಹಿಕೆಯ ಸಾಮರ್ಥ್ಯ ಹೆಚ್ಚಳವಾಗುತ್ತಿರುವುದರಿಂದ ತಂತ್ರಜ್ಞಾನದ ಎಲ್ಲಾ ಆಯಾಮಗಳಿಂದ ಅವರ ನಿರೀಕ್ಷೆಯನ್ನು ತಲುಪುವುದು ಸವಾಲಿನ ಕೆಲಸವೇ ಆಗಿದೆ. ಡಿಜಿಟಲ್ ತರಗತಿಗಳು, ಮುದ್ರಿತ ಪಾಠಗಳು, ಕೃತಕ ಬುದ್ಧಿಮತ್ತೆ ಆಧಾರಿತ ಮೌಲ್ಯಮಾಪನ ಮೂಲಕ ಶಿಕ್ಷಣದ ಗುಣಮಟ್ಟವನ್ನು ಕಾಪಾಡುವ ಪ್ರಯತ್ನ ಮಾಡಲಾಗುತ್ತಿದೆ.

ಪ್ರೊ. ಜವಾಹರ್ ದೊರೆಸ್ವಾಮಿ
ಕುಲಾಧಿಪತಿ, ಪಿಇಎಸ್ ವಿಶ್ವವಿದ್ಯಾಲಯ



ಈ ತಲೆಮಾರಿನವರ ನಿರ್ವಹಣೆಯು ಸವಾಲು ಮತ್ತು ಅವಕಾಶ ಎರಡನ್ನೂ ಸೃಷ್ಟಿಸಿವೆ. ಔದ್ಯಮಿಕ ಮನೋಭಾವ ಮತ್ತು ತಂತ್ರಜ್ಞಾನದ ನಿರರ್ಗಳತೆ ಹೊಸ ಅವಕಾಶವನ್ನು ತೆರೆದಿದೆ. ಹೀಗಾಗಿ ಶಿಕ್ಷಣದೊಂದಿಗೆ ಭಾವನಾತ್ಮಕ ಬುದ್ಧಿಮತ್ತೆ, ನೈತಿಕ ನಿರ್ಧಾರ ಮತ್ತು ನಾಯಕತ್ವ ಕುರಿತ ವೇದಿಕೆಗಳನ್ನು ಇವರಿಗೆ ಕಲ್ಪಿಸಲಾಗುತ್ತಿದೆ. ಆ ಮೂಲಕ ಜಾಗತಿಕ ನಾಗರಿಕರನ್ನಾಗಿ ಮಾಡಲಾಗುತ್ತಿದೆ.

ಡಾ. ಫಾದರ್ ಜೋಸ್ ಸಿ.ಸಿ.
ಕುಲಪತಿ, ಕ್ರೈಸ್ಟ್ ವಿಶ್ವವಿದ್ಯಾಲಯ

ಗುಂಡಣ್ಣ



25 ವರ್ಷಗಳ ಹಿಂದೆ

ಗುರುವಾರ, 11-5-2000

- **ಸಂವಿಧಾನದ 90ನೇ ತಿದ್ದುಪಡಿ ಲೋಕಸಭೆ ಅಂಗೀಕಾರ**

ನವದೆಹಲಿ, ಮೇ.10– ಸರ್ಕಾರಿ ನೌಕರಿಯಲ್ಲಿ ಶೇ.50ರಷ್ಟು ಮೀಸಲಾತಿಯ ಮಿತಿಗೊಳಿಸಿದ ಹಿನ್ನೆಲೆಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಬುಡಕಟ್ಟು ವರ್ಗಗಳ ಬ್ಲಾಕ್‌ಲಾಗ್ ಹುದ್ದೆಗಳನ್ನು ತುಂಬುವುದಕ್ಕೆ ಮತ್ತು ನೇಮಕಾತಿಗೆ ಇದ್ದ ಅಡೆತಡೆಯನ್ನು ನಿವಾರಿಸುವ ಸಂವಿಧಾನದ 90ನೇ ತಿದ್ದುಪಡಿ ಮಸೂದೆಯನ್ನು ಲೋಕಸಭೆಯು ಇಂದು ಮೂರನೇ ಎರಡರಷ್ಟು ಬಹುಮತದಿಂದ ಅಂಗೀಕರಿಸಿತು.

ಸುಪ್ರೀಂ ಕೋರ್ಟ್ ನೀಡಿದ್ದ ತೀರ್ಪಿನಿಂದಾಗಿ ಈ ವರ್ಗಗಳಿಗೆ ತಪ್ಪಿದ್ದ ಅವಕಾಶ ಮತ್ತೆ ದೊರೆಯುವಂತಾಯಿತು.

50 ವರ್ಷಗಳ ಹಿಂದೆ

ಭಾನುವಾರ, 11-5-1975

- **ಅರಸು ವಿರುದ್ಧ ಪತ್ರಕ್ಕೆ ಎಂ.ಪಿ.ಗಳ ಸಹಿ ಇಲ್ಲ**

ಬೆಂಗಳೂರು, ಮೇ.10– ರಾಜ್ಯದ ಮುಖ್ಯಮಂತ್ರಿಯನ್ನು ಬದಲಾಯಿಸ ಬೇಕೆಂದು ಸಂಸತ್‌ನ ಹದಿನೆಂಟು ಮಂದಿ ಕಾಂಗ್ರೆಸ್ ಸದಸ್ಯರು ಬಯಸಿದ್ದಾರೆಂಬ ಸುದ್ದಿಯನ್ನು ಈ ಸಮಯದಲ್ಲಿ ಉದ್ದೇಶಪೂರ್ವಕ ವಾಗಿ ಹರಡಲಾಗಿದೆಯೆಂಬುವುದು ಮಂತ್ರಿಮಂಡಲ ವಲಯದಲ್ಲಿನ ಭಾವನೆ.

ಪ್ರಧಾನಿ ಇಂದಿರಾ ಗಾಂಧಿಯವರಿಗೆ ಸಲ್ಲಿಸಲು ಸಂಯುಕ್ತ ಪತ್ರ ಒಪ್ಪಂದಕ್ಕೆ ನಿನ್ನೆ 18 ಮಂದಿ ಸಂಸತ್ ಸದಸ್ಯರು ಸಹಿ ಮಾಡಿದ್ದಾರೆಂಬ ವರದಿಗೆ ಆಧಾರವೇ ಇಲ್ಲವೆಂದು ಖಡಾಖಂಡಿತವಾಗಿ ಹೇಳಲಾಗುತ್ತಿದೆ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಭಾನುವಾರ ಮೇ 11, 2025

ಶ್ರೀ ವಿಶ್ವಾವಸು ನಾಮ ಸಂವತ್ಸರ ಉತ್ತರಾಯಣ ವಸಂತ ಋತು ತಿಥಿ: ವೈಶಾಖ ಶುಕ್ಲ ಚತುರ್ದಶಿ ಗಂ. 20-02 **ನಕ್ಷತ್ರ:** ಸ್ವಾತಿ ಅಹೋರಾತ್ರ **ಯೋಗ:** ವ್ಯತಿಪಾತ ಗಂ. 29-01 **ಕರಣ:** ಗರಜೆ ಗಂ. 6-47, ಮೇಷ ಮಾಸದ 28 ನೇ ದಿನ.
ರಾಹುಕಾಲ: ಸಾಯಂಕಾಲ 04-30 – 06-00
ಸೂರ್ಯೋದಯ: 06-09 **ಸೂರ್ಯಾಸ್ತ:** 06-45
ಮುಸ್ಲಿಂ ದಿನಾಂಕ: 12 ಜುಲ್ಕಾಯದ್
ದಿನ ವಿಶೇಷ: ನೃಸಿಂಹ ಜಯಂತಿ **ಅದೃಷ್ಟ ಸಂಖ್ಯೆ:** 5, 11

ಮೇಷ: ನಿಮ್ಮ ವೃತ್ತಿಗೆ ಸಂಬಂಧಿಸಿದಂತೆ ಬಾಕಿಯಿರುವ ಕೆಲಸಗಳನ್ನು ಇಂದು ಮುಗಿಸಲು ಪ್ರಯತ್ನಿಸಿ, ಅದರಿಂದಾಗಿ ಮೇಲಧಿಕಾರಿಗಳ ಗಮನ ಸೆಳೆಯಬಹುದು ಮತ್ತು ಕೆಲಸದ ಹೊರೆ ಕಡಿಮೆಯಾಗುವುದು.

ವೃಷಭ: ಕ್ರಯ– ವಿಕ್ರಯದ ಮಾತುಕತೆಗಳನ್ನು ಚಾಣಾಕ್ಷತನದಿಂದ ಆಡಿದರೆ ವ್ಯವಹಾರ ಕೈಗೂಡುವುದು. ಸ್ಪರ್ಧಾತ್ಮಕ ಪರೀಕ್ಷೆಯನ್ನು ಅಥವಾ ಆಟೋಟದ ಸ್ಪರ್ಧೆಯನ್ನು ಎದುರಿಸುವಾಗ ಧೈರ್ಯದಿಂದಿರಿ. ಜಯ ನಿಮ್ಮದೇ ಆಗಿರುತ್ತದೆ.

ಮಿಥುನ: ಪಾಲುದಾರಿಕೆ ಬಿಟ್ಟು ಸ್ವಂತ ವ್ಯಾಪಾರ ನಡೆಸಲು ನಿರ್ಧರಿಸುವುದು ಉತ್ತಮ. ನಿಮ್ಮ ಅನಿಸಿಕೆಗಳಿಗೆ ಸ್ಪಷ್ಟ ರೂಪ ತೋರಿಬರಲಿದೆ. ಪ್ರೀತಿಪಾತ್ರರೊಬ್ಬರ ಬಹು ದಿನಗಳ ನಂತರದ ಭೇಟಿಯಿಂದ ಸಂತೋಷವಾಗಲಿದೆ.

ಕರ್ಕಾಟಕ: ಯಾವುದೇ ಕ್ಷೇತ್ರದಲ್ಲಿಯಾದರೂ ನೀವು ಅಪೇಕ್ಷಿಸಿದ ಪ್ರಗತಿಯನ್ನು ಸಾಧಿಸುವಲ್ಲಿ ಯಶಸ್ವಿಯಾಗುವಿರಿ. ಬರಬೇಕಾಗಿದ್ದ ಹಣ ಬರುವುದು. ಮದುವೆಯ ಬಟ್ಟೆ, ಆಭರಣ ಖರೀದಿಗೆ ಪ್ರಯಾಣಿಸುವ ಸಾಧ್ಯತೆಯಿದೆ.

ಸಿಂಹ: ಬೇಳೆಕಾಳುಗಳ ವ್ಯಾಪಾರದಲ್ಲಿ ಪ್ರಗತಿ . ಹಿಂದೊಮ್ಮೆ ಸಂಬಂಧ ಹಾಳು ಮಾಡಿಕೊಂಡಿರುವವರನ್ನು ವ್ಯವಹಾರ ನಿಮಿತ್ತ ಪುನಃ ಭೇಟಿಯಾಗಬೇಕಾಗುವುದು. ಹಳೆಯದನ್ನು ಮರೆತು ಹೊಸ ಅಧ್ಯಾಯವನ್ನು ಆರಂಭಿಸಿ.

ಕನ್ಯಾ: ಹಾಸ್ಯಮಯವಾದ ಸೃಜನಶೀಲ ಬರವಣಿಗೆಗಳಿಂದ ಖ್ಯಾತಿ ಹಾಗೂ ಹಣವನ್ನು ಗಳಿಸುವಿರಿ. ಕೇಟರಿಂಗ್ ಮತ್ತು ಹೋಟೆಲ್ ಉದ್ಯಮದವರು ಗುಣಮಟ್ಟ ಮತ್ತು ಶುದ್ಧತೆ ಕಾಪಾಡಿಕೊಂಡಲ್ಲಿ ಬಿಡುವಿಲ್ಲದಂತೆ ಆಗುವುದು.

ತುಲಾ: ಮನೆ ನಿರ್ಮಾಣದ ಗುತ್ತಿಗೆದಾರರು ಲಾಭಕ್ಕಿಂತ ಹೆಸರು ಮಾಡಲು ಪ್ರಯತ್ನ ಮಾಡಿ, ಹಣ ತನ್ನಂತಾನಾಗಿಯೇ ಸಂಪಾದನೆಯಾಗುವುದು. ಮುಖ್ಯ ಉದ್ದೇಶ ಈಡೇರಿಕೆಗಾಗಿ ವಾಸಸ್ಥಳ ಬದಲಾಗುವ ಸಾಧ್ಯತೆಗಳಿದೆ.

ವೃಶ್ಚಿಕ: ಸ್ಥಿರ ಭಾವದಿಂದ ಬದುಕಿನಲ್ಲಿ ಮುಂದೆ ಬರುವಿರಿ. ಬಹಳ ಹಳೆಯದಾದ ಹಾಗೂ ಬಹು ಮುಖ್ಯವಾದ ಕೆಲಸವೊಂದು ಈ ಸಮಯದಲ್ಲಿ ಪೂರ್ಣಗೊಳ್ಳಲಿದೆ. ಗುಪ್ತಚರ ಮತ್ತು ಆರಕ್ಷಕ ಸಿಬ್ಬಂದಿ ವರ್ಗದವರಿಗೆ ಹೆಚ್ಚಿನ ಕೆಲಸ ಇರಲಿದೆ.

ಧನು: ಮನೆಯಲ್ಲಿ ಧಾರ್ಮಿಕ ಕಾರ್ಯಕ್ರಮಗಳು ಸರಾಗವಾಗಿ ನೆರವೇರುವುದರಿಂದ ಹಿರಿಯರ ಮನಸ್ಸಿಗೆ ಸಂತೃಪ್ತಿ ಇರುವುದು. ಕನಸುಗಳನ್ನು ಸಾಕಾರಗೊಳಿಸಲು ಅವಿರತ ಪರಿಶ್ರಮದ ಜೊತೆಗೆ ಶ್ರೀ ದೇವಿಯನ್ನು ಸ್ಮರಿಸಿ.

ಮಕರ: ಪತ್ರಿಕಾ ವರದಿಗಾರರು ಕೆಲಸದಲ್ಲಿ ಹೆಚ್ಚು ಗಮನವಹಿಸುವುದು ಅಗತ್ಯ. ವಿದೇಶಿ ಉದ್ಯೋಗಕ್ಕಾಗಿ ಆಸೆ ಪಡುವುದರಲ್ಲಿ ಅರ್ಥವಿಲ್ಲ. ಬದುಕನ್ನು ಹೆಚ್ಚು ಅರ್ಥಪೂರ್ಣವಾಗಿಸುವುದು ಹೇಗೆಂಬುದು ಈ ದಿನ ನಿಮಗೆ ತಿಳಿಯುವುದು.

ಕುಂಭ: ವ್ಯವಹಾರ ನೋಡಿಕೊಳ್ಳಲು ಇನ್ನೊಬ್ಬರ ಸಹಾಯ ಅಗತ್ಯವೆನಿಸಲಿದೆ. ರಿಯಲ್ ಎಸ್ಟೇಟ್ ವ್ಯಾಪಾರಿಗಳಿಗೆ ಹೆಚ್ಚು ಅವಕಾಶಗಳಿಂದ ಅಧಿಕ ಲಾಭ. ಬಟ್ಟೆ ವ್ಯಾಪಾರ ನಡೆಸುವುದಾಗಿ ಆಲೋಚನೆ ಬಂದು ಶುಭವಾಗುವುದು.


ಮೀನ: ಸಾಲ ತೀರಿದ ನೆಮ್ಮದಿಯ ಜೊತೆಗೆ ಭೂಮಿ ಖರೀದಿ ಅಥವಾ ಗೃಹ ನಿರ್ಮಾಣದ ಕಾರ್ಯಗಳು ಆರಂಭವಾಗುವ ಸಾಧ್ಯತೆಗಳಿವೆ. ಆದಾಯದ ಹೊಸ ಮೂಲಗಳನ್ನು ಹುಡುಕಿಕೊಂಡು ಕೆಲಸಗಳನ್ನು ಪ್ರಾರಂಭಿಸಿರಿ.

ಪದಬಂಧ 6039

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
2.ಹಾಲು ಮೊಸರು ಮಾರುವವನು (4)
4.ನೆರವು ಅಥವಾ ಒತ್ತಾಸೆ (3)
5.ಜಾಲಾಡುವಾಗ ಸುಳಿವು ಸಿಕ್ಕೀತೇ? (2)
6.ಪ್ರಾಚೀನ ಭಾರತದಲ್ಲಿ ಹುಟ್ಟಿಕೊಂಡ ದೈಹಿಕ ಮಾನಸಿಕ ಮತ್ತು ಆಧ್ಯಾತ್ಮಿಕ ಅಭ್ಯಾಸ (2)
7.ಕೋಲನ್ನು ಹಿಡಿದಾಗಲೇ ಈ ಗದ್ದಲ! (4)
9.ಪ್ರಗತಿಯಲ್ಲಿರುವ ನಕಲು! (2)
10.ಅರಿವಿಗೊಂದು ಪರ್ಯಾಯ ಪದ (2)
11.ಕೂದಲನ್ನು ಬಾಚಿಕೊಳ್ಳುವ ಸಾಧನ (4)
13.ಚರ್ಮದ ಊದುಚೀಲ (2)
14.ರಂಗವಲ್ಲಿಗೆ ತುಂಬಿರುವ ಬಣ್ಣ (2)
15.ರಾಜನ ಸಭೆ (3)
16.ಒಡೆಯನ ಎಲೆಯಡಕೆ ಚೀಲವನ್ನು ಹಿಡಿದು ಸೇವೆ ಮಾಡುವವನು (4)

ಮೇಲಿಂದ ಕೆಳಕ್ಕೆ
1.ಅನುಕಂಪವನ್ನು ಹೀಗೂ ಹೇಳುವರು (5)
2.ಅತಿಯಾದ ಬಾಯಾರಿಕೆ (4)
3.ಆನೆ ನಡಿಗೆಯಿದು (5)
8.ದಾವಣಿ ಧರಿಸಿ ಹಾಡಿದ ಜನಪದ ಹಾಡು (3)
9.ಹೆರಿಗೆ ಮನೆಯಿದು (5)
10.ದಾಯಾದಿ ಜಗಳವಿದು (5)
12.ರಾಜ ಮಂತ್ರಿ ಕಾಲಾಳುಗಳಿಂದ ಆಡುವ ಒಳಾಂಗಣ ಆಟ (4)



6038ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಕರ್ನಾಟಕ 3.ಶತಪದ
5.ನಸುಕು 6.ತಿಲೋದಕ
8.ನನಸು 10.ಮಮತೆ
12.ನಸುನಗು 15.ವಠಾರ
16.ಕೆನೆಹಾಲು 17.ಕಡುಗಲಿ

ಮೇಲಿಂದ ಕೆಳಕ್ಕೆ:
1.ಕಸೂತಿ 2.ಕನಕ
3.ಶಕುನ 4.ದಟ್ಟಿ
7.ಲೋಕಾಭಿರಾಮ 9.ಸುಪ್ತಚೇತನ
11.ತೆವಲು 12.ನರಕ
13.ಗುದ್ದಲಿ 14.ಸೆಕೆ

ಸುಡೊಕು 6423

	6			7		2	9	
	8		5	2		1	6	
1		5					8	
4			2		5			1
	9						2	
		9	3				4	
7			9		8	5		2
	5			4			3	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ

6422 ಸುಡೊಕು

4	6	5	3	9	8	7	1	2
2	7	1	4	6	5	3	8	9
9	8	3	7	1	2	5	4	6
7	1	9	5	8	3	2	6	4
5	2	6	9	4	7	1	3	8
3	4	8	6	2	1	9	7	5
6	3	4	1	5	9	8	2	7
8	5	7	2	3	4	6	9	1
1	9	2	8	7	6	4	5	3

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. To know more about The Printers (Mysore) Private Ltd, visit www.printersmysore.com.

ಸಂಕ್ಷಿಪ್ತ ಸುದ್ದಿ

ಸರ್ವಪಕ್ಷ ಸಭೆಗೆ ಕಾಂಗ್ರೆಸ್ ಒತ್ತಾಯ

ನವದೆಹಲಿ(ಪಿಟಿಐ): ಭಾರತ ಮತ್ತು ಪಾಕಿಸ್ತಾನ ಕದನ ವಿರಾಮಕ್ಕೆ ಒಪ್ಪಿಗೆ ಸೂಚಿಸಿರುವ ಬೆನ್ನಲ್ಲೇ, ಪ್ರಧಾನಿ ನರೇಂದ್ರ ಮೋದಿ ಅಧ್ಯಕ್ಷತೆಯಲ್ಲಿ ಸರ್ವಪಕ್ಷಗಳ ಸಭೆ ಕರೆಯಬೇಕು ಎಂದು ಕಾಂಗ್ರೆಸ್ ಶನಿವಾರ ಒತ್ತಾಯಿಸಿದೆ.



ಅಲ್ಲದೇ, ಕಳೆದ 18 ದಿನಗಳ ವಿದ್ಯಮಾನಗಳ ಕುರಿತು ಚರ್ಚಿಸಲು ಸಂಸತ್‌ನ ವಿಶೇಷ ಅಧಿವೇಶನ ಕರೆಯಬೇಕು ಎಂಬ ಬೇಡಿಕೆಯನ್ನೂ ಮುಂದಿಟ್ಟಿದೆ.

ಈ ಕುರಿತು ಪಕ್ಷದ ಪ್ರಧಾನ ಕಾರ್ಯದರ್ಶಿ (ಸಂವಹನ) ಜೈರಾಮ್ ರಮೇಶ್, 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ. 'ಕದನ ವಿರಾಮ ಕುರಿತು ಅಮೆರಿಕದಿಂದ ಗಮನಾರ್ಹ ಘೋಷಣೆ ಹೊರಬಿದ್ದಿದೆ. ಇಂತಹ ಸಂದರ್ಭದಲ್ಲಿ, ಪ್ರಧಾನಿ ನರೇಂದ್ರ ಮೋದಿಯವರು ತಮ್ಮ ಅಧ್ಯಕ್ಷತೆಯಲ್ಲಿ ಸರ್ವಪಕ್ಷಗಳ ಸಭೆ ಕರೆದು, ಎಲ್ಲ ರಾಜಕೀಯ ಪಕ್ಷಗಳನ್ನು ವಿಶ್ವಾಸಕ್ಕೆ ತೆಗೆದುಕೊಳ್ಳುವುದು ಅಗತ್ಯ' ಎಂದು ಪ್ರತಿಪಾದಿಸಿದ್ದಾರೆ.

ವಾಯುಪ್ರದೇಶ ಮತ್ತೆ ತೆರೆದ ಪಾಕಿಸ್ತಾನ

ಕರಾಚಿ (ಎಎಫ್‌ಪಿ): ಭಾರತದ ಜತೆಗೆ ಕದನ ವಿರಾಮ ಘೋಷಣೆ ಏರ್ಪಟ್ಟ ಬೆನ್ನಲ್ಲೇ, ಪಾಕಿಸ್ತಾನವು ತನ್ನ ವಾಯುಪ್ರದೇಶದಲ್ಲಿ ವಿಮಾನಗಳ ಹಾರಾಟಕ್ಕೆ ಅನುವು ಮಾಡಿಕೊಟ್ಟಿದೆ ಎಂದು ಪಾಕಿಸ್ತಾನದ ವಿಮಾನಯಾನ ಪ್ರಾಧಿಕಾರ (ಪಿಎಎ) ತಿಳಿಸಿದೆ.

'ಪಾಕಿಸ್ತಾನದ ವಾಯುಪ್ರದೇಶವನ್ನು ಎಲ್ಲ ಮಾದರಿಯ ವಿಮಾನಗಳ ಹಾರಾಟಕ್ಕೆ ಮುಕ್ತಗೊಳಿಸಲಾಗಿದೆ' ಎಂದು ತನ್ನ ಪ್ರಕಟಣೆಯಲ್ಲಿ ತಿಳಿಸಿದೆ.

ಪಾಕಿಸ್ತಾನ ಪರ ಬರಹ: ವ್ಯಕ್ತಿ ಬಂಧನ

ಮುಜಫ್ಫರ್‌ನಗರ (ಪಿಟಿಐ): ಸಾಮಾಜಿಕ ಜಾಲತಾಣದಲ್ಲಿ ಪಾಕಿಸ್ತಾನವನ್ನು ಬೆಂಬಲಿಸುವ ಪೋಸ್ಟ್ ಹಾಕಿದ ಕಾರಣ ವ್ಯಕ್ತಿಯೊಬ್ಬನನ್ನು ಪೊಲೀಸರು ಶನಿವಾರ ಇಲ್ಲಿ ಬಂಧಿಸಿದ್ದಾರೆ.

ಹಿರಿಯ ಪೊಲೀಸ್ ವರಿಷ್ಠಾಧಿಕಾರಿ (ಎಸ್‌ಎಸ್‌ಪಿ) ಸಂಜಯ್ ಕುಮಾರ್ ಈ ಬಗ್ಗೆ ಮಾಹಿತಿ ನೀಡಿದ್ದು, 'ಪಾಕಿಸ್ತಾನವನ್ನು ಬೆಂಬಲಿಸಿ ವಾಟ್ಸ್ ಆ್ಯಪ್ ಸ್ಟೇಟಸ್ ಹಾಕಿದ ಕಾರಣಕ್ಕಾಗಿ ವ್ಯಕ್ತಿಯೊಬ್ಬನ ವಿರುದ್ಧ ಪ್ರಕರಣ ದಾಖಲಿಸಲಾಗಿತ್ತು. ಶನಿವಾರ ಆತನನ್ನು ಬಂಧಿಸಿಲಾಗಿದೆ' ಎಂದಿದ್ದಾರೆ.

ಏತನ್ಮಧ್ಯೆ, 'ಪಾಕಿಸ್ತಾನ್ ಜಿಂದಾಬಾದ್' ಎಂಬ ಘೋಷಣೆ ಕೂಗಿದ್ದ ಅನ್ವರ್ ಜಮೀಲ್ ಎಂಬಾತನ ವಿಡಿಯೊ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿತ್ತು. ಈ ಕಾರಣ ಆತನನ್ನು ಶುಕ್ರವಾರ ಬಂಧಿಸಲಾಗಿದೆ. ಸ್ನೇಹಿತನ ಜತೆಗೆ ಬೆಟ್ಟಿಂಗ್ ಕಟ್ಟಿದ್ದಕ್ಕಾಗಿ ಆ ರೀತಿ ಘೋಷಣೆ ಕೂಗಿದ್ದೆ, ಅದು ಹಳೇ ವಿಡಿಯೊ ಎಂದು ಜಮೀಲ್ ಹೇಳಿದ್ದಾನೆಂದು ಪೊಲೀಸರು ತಿಳಿಸಿದ್ದಾರೆ.

ಶೆಲ್ ದಾಳಿ: ಮೃತರಿಗೆ ₹10 ಲಕ್ಷ ಪರಿಹಾರ

ಜಮ್ಮು (ಪಿಟಿಐ): 'ಆಪರೇಷನ್ ಸಿಂಧೂರ' ನಂತರ ಪಾಕಿಸ್ತಾನದ ಶೆಲ್ ದಾಳಿಯಿಂದ ಕೇಂದ್ರಾಡಳಿತ ಪ್ರದೇಶದಲ್ಲಿ ಪ್ರಾಣ ಕಳೆದುಕೊಂಡವರ ಕುಟುಂಬಗಳಿಗೆ ಜಮ್ಮು ಮತ್ತು ಕಾಶ್ಮೀರ ಮುಖ್ಯಮಂತ್ರಿ ಒಮರ್ ಅಬ್ದುಲ್ಲಾ ಶನಿವಾರ ತಲಾ ₹10 ಲಕ್ಷ ಪರಿಹಾರ ಘೋಷಣೆ ಮಾಡಿದ್ದಾರೆ.

ಪೂಂಚ್, ರಜೌರಿ, ಜಮ್ಮು ಮತ್ತು ಬಾರಾಮುಲ್ಲಾ ವಲಯಗಳಲ್ಲಿ ಪಹಲ್ಗಾಮ್ ದಾಳಿ ನಂತರ ನಡೆದ ಪಾಕಿಸ್ತಾನದ ಶೆಲ್ ದಾಳಿಯಲ್ಲಿ ಜಿಲ್ಲಾ ಹೆಚ್ಚುವರಿ ಅಭಿವೃದ್ಧಿ ಅಧಿಕಾರಿ ಮತ್ತು 19 ಗ್ರಾಮಸ್ಥರು ಸಾವಿಗೀಡಾಗಿದ್ದರು.

'ಅಮಾಯಕರ ಸಾವು ಅತೀವ ನೋವು ತಂದಿದೆ. ಸರ್ಕಾರ ನಮ್ಮ ಜನರ ರಕ್ಷಣೆಗೆ ಶಕ್ತಿ ಮೀರಿ ಕ್ರಮ ಕೈಗೊಳ್ಳಲಿದೆ' ಎಂದು 'ಎಕ್ಸ್' ಪೋಸ್ಟ್‌ನಲ್ಲಿ ಒಮರ್ ಅಬ್ದುಲ್ಲಾ ತಿಳಿಸಿದ್ದಾರೆ.

ಹುತಾತ್ಮ ಕಮಾಂಡೋಗಳ ಕುಟುಂಬಕ್ಕೆ ತಲಾ ₹1 ಕೋಟಿ ಪರಿಹಾರ

ಹೈದರಾಬಾದ್ (ಪಿಟಿಐ): ತೆಲಂಗಾಣದ ಮುಲುಗು ಜಿಲ್ಲೆಯಲ್ಲಿ ಇತ್ತೀಚೆಗೆ ನೆಲಬಾಂಬ್ ಸ್ಫೋಟಿಸಿ ಮೃತಪಟ್ಟಿದ್ದ ನಕ್ಸಲ್ ವಿರೋಧಿ ಪಡೆಯ ಮೂವರು ಕಮಾಂಡೋಗಳ ಕುಟುಂಬಗಳಿಗೆ ತೆಲಂಗಾಣ ರಾಜ್ಯ ಸರ್ಕಾರವು ತಲಾ ಒಂದು ಕೋಟಿ ವಿಶೇಷ ಪರಿಹಾರವನ್ನು ಪ್ರಕಟಿಸಿದೆ.

ಮುಖ್ಯಮಂತ್ರಿ ಎ.ರೇವಂತರೆಡ್ಡಿ ಈ ಪರಿಹಾರ ಘೋಷಿಸಿದ್ದಾರೆ. ಈ ಕುರಿತ ಹೇಳಿಕೆಯಲ್ಲಿ ಮುಖ್ಯಮಂತ್ರಿ ಅವರ ಕಚೇರಿಯು, 'ಭದ್ರತೆ ಯೋಜನೆಯಡಿ ₹80 ಲಕ್ಷ ನೆರವು, ನಿವೇಶನ ಹಂಚಿಕೆ ಮಾಡಲಾಗುವುದು. ಅಲ್ಲದೆ, ಕುಟುಂಬದ ಅರ್ಹ ಸದಸ್ಯರೊಬ್ಬರಿಗೆ ಸರ್ಕಾರಿ ನೌಕರಿ ನೀಡಲಾಗುವುದು' ಎಂದು ತಿಳಿಸಿದ್ದಾರೆ.

ಮುಲುಗು ಜಿಲ್ಲೆಯಲ್ಲಿ ಪೊಲೀಸರ ತಂಡ ತಪಾಸಣಾ ಕಾರ್ಯದಲ್ಲಿ ಇದ್ದಾಗ ಮೇ 8ರಂದು ನೆಲಬಾಂಬ್ ಸ್ಫೋಟಿಸಿ ಅವಘಡ ಸಂಭವಿಸಿತ್ತು. ಮೂವರು ಕಮಾಂಡೋಗಳು ಮೃತಪಟ್ಟಿದ್ದರು.

ಹತರಲ್ಲಿ 'ಕಂದಹಾರ್' ಮಾಸ್ಟರ್‌ಮೈಂಡ್

'ಆಪರೇಷನ್ ಸಿಂಧೂರ'

ನಿಷೇಧಿತ ಭಯೋತ್ಪಾದಕ ಸಂಘಟನೆಗಳಾದ 'ಲಷ್ಕರ್–ಎ–ತಯಬಾ' ಮತ್ತು 'ಜೈಷ್–ಎ–ಮೊಹಮ್ಮದ್'ಗೆ ಸೇರಿದ ಐವರು ಭಯೋತ್ಪಾದಕರು ಮೇ 7ರಂದು ನಡೆದ 'ಆಪರೇಷನ್ ಸಿಂಧೂರ'ನಲ್ಲಿ ಮೃತಪಟ್ಟಿದ್ದಾರೆ. ಇವರಲ್ಲಿ ಕಂದಹಾರ್ ವಿಮಾನ ಅಪಹರಣದ ಮಾಸ್ಟರ್ ಮೈಂಡ್ ಎನಿಸಿದ್ದ ಮೊಹಮ್ಮದ್ ಯೂಸುಫ್ ಅಜರ್ ಕೂಡ ಇದ್ದಾನೆ ಎಂದು ಮೂಲಗಳು ಶನಿವಾರ ತಿಳಿಸಿವೆ.

ಮೃತಪಟ್ಟ ಭಯೋತ್ಪಾದಕರು

1. ಮುದಸ್ಸರ್ ಖಾಡಿಯನ್ ಖಾಸ್ ಅಲಿಯಾಸ್ ಮುದಸ್ಸರ್ ಅಲಿಯಾಸ್ ಅಬು ಜುಂದಾಲ್
ಸಂಘಟನೆ: ಲಷ್ಕರ್–ಎ–ತಯಬಾ(ಎಲ್‌ಇಟಿ)
- ಮುರೀದ್ಕೆಯಲ್ಲಿ 'ಮರ್ಕಜ್ ತಯಬಾ'ದ ಉಸ್ತುವಾರಿ

***ಇಂಟರ್‌ಪೋಲ್‌ನಿಂದ ರೆಡ್‌ಕಾರ್ನರ್ ನೋಟಿಸ್**
- ಅಂತ್ಯಕ್ರಿಯೆ ವೇಳೆ ಆತನಿಗೆ ಪಾಕಿಸ್ತಾನ ಸೇನೆಯಿಂದ ಸರ್ಕಾರಿ ಗೌರವ ಸಮರ್ಪಣೆ
- ಜಾಗತಿಕ ಉಗ್ರ ಹಫೀಜ್ ಅಬ್ದುಲ್ ರೌಫ್ ನೇತೃತ್ವದಲ್ಲಿ ಸರ್ಕಾರಿ ಶಾಲೆಯಲ್ಲಿ ಮುದಸ್ಸರ್ ಅಂತಿಮ ನಮನ ಕಾರ್ಯಕ್ರಮ
- ಪಾಕಿಸ್ತಾನದ ಸೇನಾ ಮುಖ್ಯಸ್ಥ ಅಸೀಮ್ ಮುನೀರ್ ಮತ್ತು ಪಂಜಾಬ್ ಮುಖ್ಯಮಂತ್ರಿ ಮರಿಯಂ ನವಾಜ್ ಪರವಾಗಿ ಪುಷ್ಪಾರ್ಚನೆ
- ಅಂತ್ಯಕ್ರಿಯೆಯಲ್ಲಿ ಪಾಕ್ ಸೇನೆಯ ಲೆಫ್ಟಿನೆಂಟ್ ಜನರಲ್ ಮತ್ತು ಪಂಜಾಬ್ ಐಜಿಪಿ ಭಾಗಿ

2. ಹಫೀಜ್ ಮೊಹಮ್ಮದ್ ಜಮೀಲ್
ಸಂಘಟನೆ: ಜೈಷ್–ಎ–ಮೊಹಮ್ಮದ್ (ಜೆಇಎಂ)
- ಜೆಇಎಂ ಸಂಸ್ಥಾಪಕ, ಜಾಗತಿಕ ಉಗ್ರ ಮೌಲಾನಾ ಮಸೂದ್ ಅಜರ್‌ನ ಹಿರಿಯ ಬಾಮೈದ
- ಬಹಾವಾಲ್ಪುರದಲ್ಲಿ 'ಮರ್ಕಜ್ ತಯಬಾ'ದ ಉಸ್ತುವಾರಿ
- ಜೆಇಎಂಗೆ ಹಣ ಸಂಗ್ರಹಣೆ ಮಾಡುತ್ತಿದ್ದ ಮತ್ತು ಸಂಘಟನೆಗೆ ಸೇರಲು ಸ್ಥಳೀಯ ಯುವಕರನ್ನು ಪ್ರೇರೇಪಿಸುತ್ತಿದ್ದ

3. ಖಲೀದ್ ಅಲಿಯಾಸ್ ಅಬು ಅಕಾಶಾ
ಸಂಘಟನೆ: ಲಷ್ಕರ್–ಎ–ತಯಬಾ(ಎಲ್‌ಇಟಿ)
- ಜಮ್ಮು–ಕಾಶ್ಮೀರದ ಹಲವು ಭಯೋತ್ಪಾದಕ ದಾಳಿಗಳಲ್ಲಿ ಭಾಗಿ
- ಅಫ್ಗಾನಿಸ್ತಾನದಿಂದ ಶಸ್ತ್ರಾಸ್ತ್ರ ಸಾಗಣೆ ಮಾಡುತ್ತಿದ್ದ ಖಲೀದ್
- ಫೈಸಲಾಬಾದ್‌ನಲ್ಲಿ ನಡೆದ ಖಲೀದ್ ಅಂತ್ಯಕ್ರಿಯೆಯಲ್ಲಿ ಪಾಕಿಸ್ತಾನ ಸೇನೆಯ ಅಧಿಕಾರಿಗಳು, ಅಲ್ಲಿನ ಜಿಲ್ಲಾಧಿಕಾರಿ ಭಾಗಿ

4. ಮೊಹಮ್ಮದ್ ಹಸಾನ್ ಖಾನ್
ಸಂಘಟನೆ: ಜೈಷ್–ಎ–ಮೊಹಮ್ಮದ್ (ಜೆಇಎಂ)
- ಪಾಕ್ ಆಕ್ರಮಿತ ಕಾಶ್ಮೀರದಲ್ಲಿ ಜೆಇಎಂನ ಆಪರೇಷನಲ್ ಕಮಾಂಡರ್ ಮುಫ್ತಿ ಅಸ್ಗರ್ ಖಾನ್ ಕಾಶ್ಮೀರಿಯ ಪುತ್ರ
- ಹಲವು ಭಯೋತ್ಪಾದಕ ದಾಳಿಗಳನ್ನು ಸಂಘಟಿಸುವಲ್ಲಿ ಪ್ರಮುಖ ಪಾತ್ರವಹಿಸಿದ್ದ

5. ಮೊಹಮ್ಮದ್ ಯೂಸುಫ್ ಅಜರ್ ಅಲಿಯಾಸ್ ಉಸ್ತಾದ್ ಜಿ ಅಲಿಯಾಸ್ ಮೊಹದ್ ಸಲೀಮ್ ಅಲಿಯಾಸ್ ಘೋಸಿ ಸಾಹಬ್
ಸಂಘಟನೆ: ಜೈಷ್–ಎ–ಮೊಹಮ್ಮದ್ (ಜೆಇಎಂ)
- ಮೌಲಾನಾ ಮಸೂದ್ ಅಜರ್‌ನ ಕಿರಿಯ ಬಾಮೈದ
- ಜಮ್ಮು–ಕಾಶ್ಮೀರದ ಹಲವು ಭಯೋತ್ಪಾದಕ ದಾಳಿಗಳಲ್ಲಿ ಭಾಗಿ
- 1999ರಲ್ಲಿ ನಡೆದಿದ್ದ ಐಸಿ–814 ವಿಮಾನ ಅಪಹರಣದ ಮಾಸ್ಟರ್‌ಮೈಂಡ್
- ಜೆಇಎಂನಲ್ಲಿ ಶಸ್ತ್ರಾಸ್ತ್ರ ತರಬೇತುದಾರ

ಕಾಶ್ಮೀರ ನಾಯಕರ ಪ್ರತಿಕ್ರಿಯೆ



ಸಂಘರ್ಷ ಶಮನ ಘೋಷಣೆಯು ಸ್ವಾಗತಾರ್ಹ. ನೆರೆಯ ದೇಶಗಳು ಸ್ನೇಹದಿಂದ ಇರಬೇಕು. ಆದರೆ, ಗಡಿಯಾಚೆಗಿನ ಭಯೋತ್ಪಾದನೆ ಕುರಿತು ಭಾರತದ ಕಳವಳವನ್ನು ತೊಡೆದುಹಾಕುವ ಹೊಣೆಗಾರಿಕೆಯನ್ನು ಪಾಕಿಸ್ತಾನವು ಹೊತ್ತುಕೊಳ್ಳಬೇಕು
ಫಾರೂಕ್ ಅಬ್ದುಲ್ಲಾ, ಎನ್‌ಸಿ ಅಧ್ಯಕ್ಷ



ಅಮೆರಿಕ ಅಧ್ಯಕ್ಷ ಟ್ರಂಪ್ ಮಧ್ಯಸ್ಥಿಕೆ ವಹಿಸಿದ ಪರಿಣಾಮ ಎರಡೂ ದೇಶಗಳ ಮಧ್ಯೆ ಸಂಘರ್ಷ ಶಮನ ಆಗಿದೆ. ಇದು ಸ್ವಾಗತಾರ್ಹ ಹೆಜ್ಜೆ. ಶಾಂತಿಗಾಗಿ ಎರಡೂ ದೇಶಗಳು ಒಟ್ಟಿಗೆ ಕೆಲಸ ಮಾಡಬೇಕು
ಮೆಹಬೂಬ ಮುಫ್ತಿ, ಪಿಡಿಪಿ ಮುಖ್ಯಸ್ಥೆ



ಸಂಘರ್ಷ ಶಮನಕ್ಕೆ ಒಪ್ಪಿಕೊಂಡಿದ್ದು ಉತ್ತಮ ನಿರ್ಧಾರ. ಗಡಿ ನಿಯಂತ್ರಣ ರೇಖೆ ಬಳಿ ವಾಸಿಸುತ್ತಿರುವವರಿಗೆ ಇದು ಸಮಾಧಾನ ತಂದಿದೆ. ಅಮೂಲ್ಯ ಜೀವಗಳು ಇಲ್ಲವಾಗಿದ್ದವು
ಮೀರ್‌ವೈಜ್ ಉಮರ್ ಫಾರೂಕ್
ಹುರಿಯತ್ ಕಾನ್ಫರೆನ್ಸ್ ಮುಖ್ಯಸ್ಥ



ಪಹಲ್ಗಾಮ್ ದಾಳಿಗೆ ಭಾರತ ಉತ್ತರ ನೀಡಿದೆ. ಪಾಕಿಸ್ತಾನ ಮುಂಡಿಯೂರಿದ್ದು, ಅಮೆರಿಕ ಮತ್ತು ಪ್ರಧಾನಿ ಮೋದಿ ಅವರ ಕಾಲಡಿಗೆ ಬಿದ್ದಿದೆ. ವಿಶ್ವವೇ ಮೋದಿ ಅವರಿಗೆ ಸೆಲ್ಯೂಟ್ ಎನ್ನುತ್ತಿದೆ. ಕದನ ವಿರಾಮ ಘೋಷಿಸಿದ್ದು ಪಾಕಿಸ್ತಾನದ ಪುಣ್ಯ. ಇಲ್ಲವಾದಲ್ಲಿ ಜಗತ್ತಿನ ನಕ್ಷೆಯಿಂದಲೇ ಪಾಕಿಸ್ತಾನ ಅಳಿಸಿ ಹೋಗುತ್ತಿತ್ತು
ರವೀಂದ್ರ ರೈನಾ, ಬಿಜೆಪಿ ನಾಯಕ



ಹಾನಿ ಪರಿಶೀಲನೆ ಜಮ್ಮುವಿನಲ್ಲಿ ಪಾಕಿಸ್ತಾನ ಡ್ರೋನ್ ದಾಳಿಯಲ್ಲಿ ಹಾನಿಗೊಳಗಾಗಿರುವ ವಸತಿ ಕಟ್ಟಡವೊಂದನ್ನು ರಕ್ಷಣೆ ಹಾಗೂ ಭದ್ರತಾ ಸಿಬ್ಬಂದಿ ಶನಿವಾರ ಪರಿಶೀಲಿಸಿದರು –ಪಿಟಿಐ ಚಿತ್ರ

'ಪಾಕಿಸ್ತಾನ ಭಿಕ್ಷುಕ ದೇಶ'

ಹೈದರಾಬಾದ್ (ಪಿಟಿಐ): ಜಾಗತಿಕ ಭದ್ರತೆಗೆ ಅಪಾಯ ಒಡ್ಡಿರುವ ಪಾಕಿಸ್ತಾನವನ್ನು ಪರಮಾಣು ನಿಶ್ಯಸ್ತ್ರೀಕರಣಗೊಳಿಸಬೇಕು ಎಂದು ಎಐಎಂಐಎಂ ಮುಖ್ಯಸ್ಥ ಅಸಾದುದ್ದೀನ್ ಒವೈಸಿ ಒತ್ತಾಯಿಸಿದ್ದಾರೆ.

ಶನಿವಾರ ಇಲ್ಲಿ ಕಾರ್ಯಕ್ರಮವೊಂದರಲ್ಲಿ ಮಾತನಾಡಿದ ಸಂಸದ, 'ವಿಶ್ವಕ್ಕೆ ಅಪಾಯವಾಗಿರುವ ದೇಶದ ವಿರುದ್ಧ ನಾವು ಬಲವಾದ ನಿಲುವು ಕೈಗೊಳ್ಳಬೇಕಿದೆ. ಅಣು ಬಾಂಬ್‌ಗಳನ್ನು ಹೊಂದಲು ಈ ದೇಶಕ್ಕೆ ಇನ್ನು ಅವಕಾಶ ನೀಡಬೇಕೆ ಎಂಬ ಬಗ್ಗೆ ವಿಶ್ವ ನಾಯಕರು ನಿರ್ಧರಿಸಬೇಕು. ಆ ದೇಶದ ಬಳಿ ಇರುವ ಅಣು ಬಾಂಬ್‌ಗಳನ್ನು ನಿಶಸ್ತ್ರೀಕರಣಗೊಳಿಸಬೇಕು' ಎಂದು ಪ್ರತಿಪಾದಿಸಿದರು.



ಆಡಳಿತ ಮತ್ತು ಆರ್ಥಿಕ ನಿರ್ವಹಣೆಯಲ್ಲಿ ವಿಫಲವಾಗಿರುವ ಪಾಕಿಸ್ತಾನ ಭಾರತವನ್ನು ಅಸ್ಥಿರಗೊಳಿಸಲು ಇಸ್ಲಾಂ ಅನ್ನು ದುರುಪಯೋಗಪಡಿಸಿಕೊಳ್ಳುತ್ತಿದೆ
ಅಸಾದುದ್ದೀನ್ ಒವೈಸಿ, ಎಐಎಂಐಎಂ ಮುಖ್ಯಸ್ಥ

'ಪಾಕಿಸ್ತಾನದವರು ಭಿಕ್ಷುಕರು. ಐಎಂಎಫ್‌ನಿಂದ ₹8,500 ಕೋಟಿ (1 ಬಿಲಿಯನ್ ಡಾಲರ್) ಸಾಲ ಪಡೆದುಕೊಂಡಿದ್ದಾರೆ. ಇದು ಅಂತರರಾಷ್ಟ್ರೀಯ ಹಣಕಾಸು ನಿಧಿ ಅಲ್ಲ. ಪಾಕಿಸ್ತಾನಕ್ಕೆ ಅದು ಅಂತರರಾಷ್ಟ್ರೀಯ ಮಿಲಿಟೆಂಟ್ ನಿಧಿಯಾಗಿದೆ. ಇದಕ್ಕೆ ಅಮೆರಿಕ, ಜರ್ಮನಿ ಹಾಗೂ ಜಪಾನ್ ಹೇಗೆ ಸಮ್ಮತಿ ನೀಡಿದವು? ನಮ್ಮ ನೆಲ, ಮನೆ ಹಾಗೂ ಯೋಧರ ಮೇಲೆ ದಾಳಿ ನಡೆಯುತ್ತಿದೆ' ಎಂದು ಹೇಳಿದರು.

'ಶ್ರೀನಗರ ವಿಮಾನ ನಿಲ್ದಾಣ ಮತ್ತು ಆಸ್ಪತ್ರೆಯನ್ನು ಗುರಿಯಾಗಿಸಿ ದಾಳಿ ಡ್ರೋನ್ ನಡೆಸಿದ ಬಗ್ಗೆ ಬೇಸರ ವ್ಯಕ್ತಪಡಿಸಿದರು. ನಮ್ಮ ಯೋಧರು ಎಷ್ಟು ಚಾಣಾಕ್ಷರಾಗಿ ಶತ್ರುಗಳನ್ನು ಎದುರಿಸುತ್ತಿದ್ದಾರೆ ಎಂಬುದನ್ನು ನಾವು ಊಹಿಸಲು ಸಾಧ್ಯವಿಲ್ಲ. ನಮಗೆ ಯುದ್ಧ ಬೇಕಿಲ್ಲ. ಆದರೆ ಬೇರೆಯವರಿಗೆ ಬೇಕಿದ್ದಲ್ಲಿ ನಾವು ಯುದ್ಧ ಮಾಡಬೇಕು. ರಾಜಕೀಯ ಮರೆತು ದೇಶದ ಪಡೆಗಳಿಗೆ ನಾವು ಬೆಂಬಲ ನೀಡಬೇಕು' ಎಂದರು.

'ಸುದ್ದಿ ವಾಹಿನಿಗಳಲ್ಲಿ ಎಚ್ಚರಿಕೆ ಸೈರನ್ ಬಳಸಬೇಡಿ'

ಬೆಂಗಳೂರು: 'ವಾಯುದಾಳಿ ವೇಳೆ ನಾಗರಿಕರನ್ನು ಎಚ್ಚರಿಸಲು ರಕ್ಷಣಾ ಪಡೆಗಳು ಬಳಸುವ ಸೈರನ್ ಅನ್ನು ಸುದ್ದಿವಾಹಿನಿಗಳು ತಮ್ಮ ವರದಿಯ ವೇಳೆ ಬಳಸಬಾರದು' ಎಂದು ಕೇಂದ್ರ ಗೃಹ ಸಚಿವಾಲಯವು ಸೂಚಿಸಿದೆ.

'ಈ ರೀತಿಯ ಸೈರನ್ ಅನ್ನು ಹಲವು ಮಾಧ್ಯಮಗಳು ಪ್ರಸಾರ ಮಾಡಿವೆ. ಸಾಮಾಜಿಕ ಜಾಲತಾಣಗಳಲ್ಲೂ ಅದರ ಮುದ್ರಿಕೆಯನ್ನು ಹಂಚಿಕೊಳ್ಳಲಾಗಿದೆ. ಇದನ್ನು ಪದೇ–ಪದೇ ಪ್ರಸಾರ ಮಾಡಿದರೆ, ತುರ್ತು ಸಂದರ್ಭದಲ್ಲಿ ಸೈರನ್ ಮೊಳಗಿಸಿದರೂ ನಾಗರಿಕರು ಅದನ್ನು ಕಡೆಗಣಿಸುವ ಅಪಾಯವಿದೆ' ಎಂದು ಸಚಿವಾಲಯವು ತನ್ನ ಸುತ್ತೋಲೆಯಲ್ಲಿ ವಿವರಿಸಿದೆ.

ಭಾರತ–ಪಾಕ್ ನಡುವೆ ಉದ್ವಿಗ್ನತೆ • ಜಮ್ಮು–ಕಾಶ್ಮೀರ ಜನರಲ್ಲಿ ಹೆಚ್ಚುತ್ತಿರುವ ಆತಂಕ

ಅಗತ್ಯವಸ್ತುಗಳ ಖರೀದಿಗೆ ಮುಗಿಬಿದ್ದ ಜನ

• ಝುಲ್ಫೀಕರ್ ಮಜೀದ್

ಶ್ರೀನಗರ: ಭಾರತ ಮತ್ತು ಪಾಕಿಸ್ತಾನ ನಡುವಿನ ಸಂಘರ್ಷದಿಂದಾಗಿ ಗಡಿಯಲ್ಲಿ ಉದ್ವಿಗ್ನತೆ ಹೆಚ್ಚುತ್ತಿದೆ. ಇತ್ತ ಜಮ್ಮು–ಕಾಶ್ಮೀರದಲ್ಲಿ ಆತಂಕ ಹೆಚ್ಚುತ್ತಿದ್ದು, ಜನರು ಅಗತ್ಯ ವಸ್ತುಗಳ ಖರೀದಿಗೆ ಮುಗಿಬಿದ್ದಿದ್ದಾರೆ.

ಸೇನೆಯ ನೆಲೆಗಳು ಹಾಗೂ ನಾಗರಿಕ ಪ್ರದೇಶಗಳನ್ನು ಗುರಿಯಾಗಿಸಿ ಪಾಕಿಸ್ತಾನ ಡ್ರೋನ್ ಹಾಗೂ ಫಿರಂಗಿಗಳಿಂದ ದಾಳಿ ಮುಂದುವರಿಸಿದ್ದು, ಜನರು ಭಯದಿಂದಲೇ ದಿನಗಳನ್ನು ಕಳೆಯುವಂತಾಗಿದೆ.

ಜಮ್ಮು ಮತ್ತು ಕಾಶ್ಮೀರದ ಹಲವಾರು ಪ್ರದೇಶಗಳಲ್ಲಿ ಜನರು ದಿನಸಿ, ಇಂಧನ ಸೇರಿದಂತೆ ನಿತ್ಯ ಬಳಕೆಯ ಹಾಗೂ ಅಗತ್ಯ ವಸ್ತುಗಳನ್ನು ಖರೀದಿಸುತ್ತಿದ್ದಾರೆ.

ಹೊಸದೇನಲ್ಲ: ಅಗತ್ಯ ವಸ್ತುಗಳನ್ನು ಸಂಗ್ರಹಿಸಿ ಇಟ್ಟುಕೊಳ್ಳುವುದು ಕಾಶ್ಮೀರ ಕಣಿವೆ ಜನರಿಗೆ ಹೊಸದೇನೂ ಅಲ್ಲ. ಹಲವು ದಶಕಗಳಿಂದ ಕರ್ಫ್ಯೂ, ಸಂವಹನ ಸ್ಥಗಿತದಂತಹ ವಿದ್ಯಮಾನಗಳಿಗೆ ಈ ಪ್ರದೇಶ ಸಾಕ್ಷಿಯಾಗುತ್ತಲೇ ಬಂದಿದೆ.

ಹಿಂದಿನಿಂದಲೂ, ಪಾಕಿಸ್ತಾನ ನಡೆಸುವ ದಾಳಿಯ ಬಿಸಿ ಜಮ್ಮು ಪ್ರದೇಶಕ್ಕೆ ನೇರವಾಗಿ ತಟ್ಟಿಲ್ಲ. ಆದರೆ, ಈ ಬಾರಿ ನೆರೆ ರಾಷ್ಟ್ರದೊಂದಿಗಿನ ಸಂಘರ್ಷದ ಬಿಸಿ ಜಮ್ಮು ಪ್ರದೇಶಕ್ಕೆ ನೇರವಾಗಿ ತಟ್ಟುವ ಸಾಧ್ಯತೆಯೇ ಹೆಚ್ಚು. ಇದೇ ಕಾರಣಕ್ಕೆ ಈ ಪ್ರದೇಶದ ಜನರು ಕೂಡ ಅಗತ್ಯವಸ್ತುಗಳನ್ನು ಖರೀದಿಸಿ, ಸಂಗ್ರಹಿಸಿ ಇಟ್ಟುಕೊಳ್ಳಲು ಮುಂದಾಗಿದ್ದಾರೆ.

'ಕರ್ಫ್ಯೂಗಳು ಹಾಗೂ ಜನಜೀವನ ಸ್ತಬ್ಧವಾಗುವುದನ್ನು ಈ ಹಿಂದೆಯೂ ನೋಡಿದ್ದೇವೆ. ಇದೇ ಮೊದಲ ಬಾರಿಗೆ ಇಂತಹ ಆತಂಕದ ಸನ್ನಿವೇಶ ನೋಡುತ್ತಿದ್ದೇವೆ. ಜನರಲ್ಲಿ ಭೀತಿ ಆವರಿಸಿದೆ. ವದಂತಿಗಳದ್ದೇ ಕಾರುಬಾರು' ಎಂದು ಕಾಶ್ಮೀರದ ಗಾಂದರಬಲ್‌ನಲ್ಲಿ ಅಂಗಡಿ ನಡೆಸುತ್ತಿರುವ ವಾಹಿದ್ ರಾಥರ್ ಹೇಳುತ್ತಾರೆ. ಜಮ್ಮುವಿನಲ್ಲಿ ಕೂಡ ಪರಿಸ್ಥಿತಿ ಭಿನ್ನವಾಗಿಲ್ಲ. 'ಈ ರೀತಿಯ ಪರಿಸ್ಥಿತಿಯನ್ನು ಎದುರಿಸುತ್ತೇವೆ ಎಂದು ನಾನು ಭಾವಿಸಿರಲಿಲ್ಲ' ಎಂದು ಗಡಿ ಜಿಲ್ಲೆ ಸಾಂಬಾ ನಿವಾಸಿ ರಾಕೇಶ್ ಶರ್ಮಾ ಹೇಳುತ್ತಾರೆ.

'ಡ್ರೋನ್‌ಗಳು ಅಪ್ಪಳಿಸುವ ಭೀತಿಯಿಂದಾಗಿ ದೀಪಗಳನ್ನು ಆರಿಸದ ಹೊರತು ಮಕ್ಕಳು ನಿದ್ದೆ ಮಾಡುವುದಿಲ್ಲ' ಎಂದೂ ರಾಕೇಶ್ ಹೇಳುತ್ತಾರೆ.

'ಅಗತ್ಯವಸ್ತುಗಳ ಕೊರತೆ ಇಲ್ಲ'



ಜಮ್ಮು(ಪಿಟಿಐ): ಕೇಂದ್ರಾಡಳಿತ ಪ್ರದೇಶದಲ್ಲಿ ಆಹಾರ ಧಾನ್ಯಗಳು, ಪೆಟ್ರೋಲಿಯಂ ಉತ್ಪನ್ನಗಳು, ಅಡುಗೆ ಅನಿಲ ಸೇರಿದಂತೆ ಅಗತ್ಯ ವಸ್ತುಗಳ ಕೊರತೆ ಇಲ್ಲ. ಯಾರೂ ಆತಂಕಕ್ಕೆ ಒಳಗಾಗದೇ ಶಾಂತತೆಯಿಂದ ಇರಬೇಕು ಎಂದು ಜಮ್ಮು ಮತ್ತು ಕಾಶ್ಮೀರ ಸರ್ಕಾರ ಜನತೆಗೆ ಶನಿವಾರ ಮನವಿ ಮಾಡಿದೆ. ಆಹಾರ ಮತ್ತು ನಾಗರಿಕ ಪೂರೈಕೆ ಸಚಿವ ಸತೀಶ್ ಶರ್ಮಾ ಅವರು ಈ ಮನವಿ ಮಾಡಿದ್ದಾರೆ.

ಒಂದು ತಿಂಗಳಿಗೆ ಸಾಕಾಗುವಷ್ಟು ಅಕ್ಕಿ, ಬೇಳೆ ಮತ್ತಿತರ ದಿನಸಿಗಳನ್ನು ಸಂಗ್ರಹಿಸಿ ಇಟ್ಟುಕೊಂಡಿದ್ದೇವೆ. ಉದ್ವಿಗ್ನತೆ ಹೆಚ್ಚುತ್ತಿರುವ ಕಾರಣ ಆತಂಕ ಇದ್ದೇ ಇದೆ
ರಾಕೇಶ್ ಶರ್ಮಾ, ಸಾಂಬಾ ಜಿಲ್ಲೆ ನಿವಾಸಿ

ಮಧ್ಯಾಹ್ನದ ಹೊತ್ತಿಗೆ ಅಕ್ಕಿ, ಬೇಳೆಕಾಳುಗಳು, ಎಣ್ಣೆ ಖಾಲಿಯಾಗುತ್ತವೆ. ಮೊಂಬತ್ತಿ ಮತ್ತು ಬ್ಯಾಟರಿಗಳು ಕೂಡ ಖರ್ಚಾಗಿ ಬಿಡುತ್ತವೆ
ವಾಹಿದ್ ರಾಥರ್, ಕಾಶ್ಮೀರದ ಗಾಂದರಬಲ್‌ನ ಅಂಗಡಿ ಮಾಲೀಕ

ಸಾಕಷ್ಟು ಮುಂಜಾಗ್ರತೆ ಹಾಗೂ ಸಿದ್ಧತೆ ಅಗತ್ಯ. ಇದು ಕೇವಲ ಆಹಾರಕ್ಕೆ ಸಂಬಂಧಿಸಿದ್ದಲ್ಲ. ನಮ್ಮ ಸುರಕ್ಷತೆ, ಬದುಕಿನ ಪ್ರಶ್ನೆ
ಮೊಹಮ್ಮದ್ ಯಾಸಿನ್, ಅನಂತನಾಗ್ ನಿವಾಸಿ



ಹುತಾತ್ಮ ವೀರಯೋಧ ಮುರಳಿ ನಾಯಕ್ ಅವರ ಪಾರ್ಥಿವ ಶರೀರವನ್ನು ಚಿಕ್ಕಬಳ್ಳಾಪುರದ ಮೂಲಕ ಆಂಧ್ರಪ್ರದೇಶಕ್ಕೆ ಕೊಂಡೊಯ್ಯಲಾಯಿತು

ವೀರಯೋಧನಿಗೆ ಕಂಬನಿ ಮಿಡಿದ ಜನ

ಪ್ರಜಾವಾಣಿ ವಾರ್ತೆ

ಚಿಕ್ಕಬಳ್ಳಾಪುರ/ಬಾಗೇಪಲ್ಲಿ: ಗಡಿಯಲ್ಲಿ ಪಾಕಿಸ್ತಾನ ಸೇನೆ ಗುಂಡಿನ ದಾಳಿಯಲ್ಲಿ ಹುತಾತ್ಮರಾದ ವೀರಯೋಧ ಮುರಳಿ ನಾಯಕ್ ಪಾರ್ಥಿವ ಶರೀರವನ್ನು ಶನಿವಾರ ದೇವನಹಳ್ಳಿಯ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಮೂಲಕ ಆಂಧ್ರಪ್ರದೇಶದ ಸ್ವಗ್ರಾಮಕ್ಕೆ ಕೊಂಡೊಯ್ಯಲಾಯಿತು.

'ಅಗ್ನಿವೀರ್' ಯೋಜನೆ ಅಡಿ ಸೇನೆಗೆ ಸೇರಿದ್ದ ಮುರಳಿ ನಾಯಕ್ ಈಚೆಗೆ ಆಪರೇಷನ್ ಸಿಂಧೂರ ಕಾರ್ಯಾಚರಣೆಯಲ್ಲಿ ವೀರ ಮರಣ ಅಪ್ಪಿದ್ದರು.

ಆಂಧ್ರಪ್ರದೇಶದ ಕಲ್ಲಿಕೊಂಡ್ಲ ತಾಂಡಾದ ಶ್ರೀರಾಮುಲು ನಾಯಕ್ ಹಾಗೂ ಜ್ಯೋತಿಬಾಯಿ ದಂಪತಿಯ ಏಕೈಕ ಪುತ್ರ ಮುರುಳಿ ಪಾರ್ಥಿವ ಶರೀರ ವಿಮಾನ ನಿಲ್ದಾಣದಿಂದ ಹುಟ್ಟೂರಿಗೆ ಹೋಗುತ್ತಿದೆ ಎಂಬ ಸುದ್ದಿ ತಿಳಿದು ಅಸಂಖ್ಯ ಜನರು ಜಮಾಯಿಸಿದ್ದರು. ಆಂಧ್ರದಿಂದಲೂ ಜನ ಬಂದಿದ್ದರು.

ವಿಮಾನ ನಿಲ್ದಾಣದಿಂದ ತೆರೆದ ಸೇನಾ ವಾಹನದಲ್ಲಿ ಮೆರವಣಿಗೆಯಲ್ಲಿ ಚಿಕ್ಕಬಳ್ಳಾಪುರ, ಬಾಗೇಪಲ್ಲಿ ಮಾರ್ಗವಾಗಿ ಆಂಧ್ರ ಪ್ರದೇಶದ ಕಲ್ಲಿಕೊಂಡ್ಲ ಸ್ವಗ್ರಾಮಕ್ಕೆ ಪಾರ್ಥಿವ ಶರೀರ ಒಯ್ಯಲಾಯಿತು.

ಆಂಧ್ರ ಪ್ರದೇಶದ ಸಚಿವೆ ಸುನಿತಮ್ಮ, ಹಿರಿಯ ಅಧಿಕಾರಿಗಳು ಮತ್ತು ಪೊಲೀಸರು ಸರ್ಕಾರಿ ಮರ್ಯಾದೆಗಳೊಂದಿಗೆ ಪಾರ್ಥಿವ ಶರೀರವನ್ನು ಬರಮಾಡಿಕೊಂಡರು.

ಮೇ 11ರಂದು ಆಂಧ್ರಪ್ರದೇಶದ ಗೋರಂಟ್ಲ ಬಳಿಯ ಕಲ್ಲಿಕೊಂಡ್ಲ ತಾಂಡದಲ್ಲಿ ಮುರಳಿ ನಾಯಕ್ ಪಾರ್ಥಿವ ಶರೀರವನ್ನು ಸಾರ್ವಜನಿಕರ ದರ್ಶನಕ್ಕೆ ಇಡಲಾಗುವುದು. ನಂತರ ಸಕಲ ಸರ್ಕಾರಿ ಗೌರವದೊಂದಿಗೆ ಅಂತ್ಯಸಂಸ್ಕಾರ ನಡೆಸಲಾಗುವುದು ಎಂದು ಪ್ರಕಟಣೆ ತಿಳಿಸಿದೆ.

ಪಾಕ್ ಸೇನಾ ವಕ್ತಾರನ ತಂದೆಗೆ ಅಲ್‌ಖೈದಾ ನಂಟು

ನವದೆಹಲಿ (ಪಿಟಿಐ): 'ಲೆಫ್ಟಿನೆಂಟ್ ಜನರಲ್ ಅಹಮ್ಮದ್ ಷರೀಫ್ ಚೌಧರಿ ಪಾಕಿಸ್ತಾನ ಸೇನೆಯ ವಕ್ತಾರ. ಭಾರತ–ಪಾಕಿಸ್ತಾನ ನಡುವಿನ ಸೇನಾ ಸಂಘರ್ಷದ ಕುರಿತಂತೆ ಮಾಧ್ಯಮಗಳಿಗೆ ನಿರಂತರ ಮಾಹಿತಿ ಹಂಚಿಕೊಳ್ಳುತ್ತಿದ್ದಾರೆ. ಅಚ್ಚರಿಯ ವಿಚಾರವೆಂದರೆ, ಇವರ ತಂದೆ ಪಾಕಿಸ್ತಾನದ ಪರಮಾಣು ವಿಜ್ಞಾನಿಯಾಗಿದ್ದು, ಅಲ್ ಖೈದಾ ಸಂಘಟನೆಯ ಜೊತೆಗೆ ನಿಕಟ ಸಂಪರ್ಕವಿಟ್ಟುಕೊಂಡಿದ್ದರು' ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಷರೀಫ್ ಚೌಧರಿ ಅವರು ಸೇನೆಯಲ್ಲಿ ಜನರಲ್ ಹುದ್ದೆಯನ್ನು ಹೊಂದಿದ್ದು, ಪಾಕಿಸ್ತಾನ ಆಕ್ರಮಿತ ಕಾಶ್ಮೀರದ 9 ಉಗ್ರರ ಅಡಗುತಾಣಗಳ ಮೇಲೆ ಭಾರತ ದಾಳಿ ನಡೆಸಿದ್ದ ಕ್ಷಣದಿಂದಲೂ ಸೇನಾ ಕಾರ್ಯಾಚರಣೆ ಕುರಿತು ಮಾಧ್ಯಮಗಳಿಗೆ ಮಾಹಿತಿ ನೀಡುತ್ತಿದ್ದಾರೆ. ಸೇನೆಯ ಅಂತರ್ ಸೇವೆಗಳ ಸಾರ್ವಜನಿಕ ಸಂಪರ್ಕ ವಿಭಾಗದ (ಐಸಿಪಿಆರ್) ಮಹಾ ನಿರ್ದೇಶಕರಾಗಿಯೂ ಕೆಲಸ ಮಾಡುತ್ತಿದ್ದಾರೆ.



ಅಹಮ್ಮದ್ ಷರೀಫ್ ಚೌಧರಿ

ವಿಶ್ವಸಂಸ್ಥೆಯ ದಾಖಲೆಗಳ ಪ್ರಕಾರ, ಚೌಧರಿ ತಂದೆ ಸುಲ್ತಾನ್ ಬಶೀರುದ್ದೀನ್ ಮಹಮ್ಮದ್ ಅವರು ಅಮೃತಸರದಲ್ಲಿ ಜನಿಸಿದ್ದು, ಅಲ್ ಖೈದಾ ನಾಯಕ ಒಸಾಮಾ ಬಿನ್ ಲಾಡೆನ್‌ನನ್ನು ಭೇಟಿಯಾಗಿದ್ದರು. ಪರಮಾಣು ಶಸ್ತ್ರಾಸ್ತ್ರ ಯೋಜನೆ, ಅವುಗಳ ತಯಾರಿಕೆಗೆ ಬೇಕಾದ ಅಗತ್ಯ ಮೂಲಸೌಕರ್ಯ, ಪರಿಣಾಮಗಳ ಕುರಿತು ಅಲ್ ಖೈದಾ ಸಂಘಟನೆಗೆ ವಿವರಗಳನ್ನು ಒದಗಿಸಿದ್ದ ಆರೋಪಕ್ಕೆ ಗುರಿಯಾಗಿದ್ದರು. ಇದೇ ಆರೋಪದ ಮೇಲೆ 2001ರಲ್ಲಿ ಬಂಧನಕ್ಕೊಳಗಾಗಿ ನಂತರ ಬಿಡುಗಡೆಯಾಗಿದ್ದರು.

ಇದಲ್ಲದೇ, 1999ರಲ್ಲಿ ಜನ್ಮತಾಳಿದ ಮೂಲಭೂತವಾದಿ ಸಂಘಟನೆ 'ಉಮ್ಮಾ ತಮೀರ್–ಎ–ನೌ'ಗಾಗಿ ದೇಣಿಗೆ ಸಂಗ್ರಹಿಸಿದ ಆರೋಪಕ್ಕೆ ಗುರಿಯಾಗಿದ್ದರು. ಪಾಕಿಸ್ತಾನದ ಅಣುಶಕ್ತಿ ಆಯೋಗದಲ್ಲಿ ಕೆಲಸದಿಂದ ನಿವೃತ್ತಿ ಹೊಂದಿದ ಬಳಿಕ ಧರ್ಮ ಹಾಗೂ ವಿಜ್ಞಾನವನ್ನು ಸಮೀಕರಿಸಿದ ದೃಷ್ಟಿಕೋನದಲ್ಲಿ ಹಲವು ಪುಸ್ತಕಗಳನ್ನು ಬರೆದಿದ್ದರು. 'ಮೆಕ್ಯಾನಿಕ್ಸ್ ಆಫ್ ಡೂಮ್ಸ್‌ಡೇ ಆ್ಯಂಡ್ ಲೈಫ್ ಆಫ್ಟರ್ ಡೆತ್' ಹೆಸರಿನ ಕೃತಿ ಅವುಗಳಲ್ಲಿ ಒಂದು.

85 ವರ್ಷದ ಸುಲ್ತಾನ್ ಬಶೀರುದ್ದೀನ್ ಮಹಮ್ಮದ್ ಈಗ ಇಸ್ಲಾಮಾಬಾದಿನಲ್ಲಿ ನೆಲಸಿದ್ದಾರೆ. ಇವರ ಪುತ್ರ ಚೌಧರಿ 2022ರಿಂದ ಐಸಿಪಿಆರ್ ಮಹಾ ನಿರ್ದೇಶಕರಾಗಿದ್ದಾರೆ.

ಯುಪಿಎ, ಬಿಜೆಪಿ ಜಟಾಪಟಿ

ನವದೆಹಲಿ (ಪಿಟಿಐ, ಪ್ರಜಾವಾಣಿ ವಾರ್ತೆ): ಭಾರತದ ಮೇಲೆ ಭಯೋತ್ಪಾದಕ ದಾಳಿಗಳು ನಡೆದ ಸಂದರ್ಭದಲ್ಲಿ ಹಿಂದಿನ ಯುಪಿಎ ಸರ್ಕಾರವು 'ನಿಷ್ಕ್ರಿಯತೆ' ವ್ಯಕ್ತಪಡಿಸಿತ್ತು ಎಂಬ ಬಿಜೆಪಿ ಆರೋಪಗಳಿಗೆ ಕಾಂಗ್ರೆಸ್, ಆರ್‌ಜೆಡಿ ತಿರುಗೇಟು ನೀಡಿವೆ. ಆಡಳಿತ ಪಕ್ಷ ಹಾಗೂ ಸರ್ಕಾರವು ಏಕತೆಯ ಸಂದೇಶ ಹರಡುವ ಬದಲು ರಾಜಕೀಯ ಮಾಡಲು ಹೊರಟಿದೆಯಾ ಎಂಬುದನ್ನು ಸ್ಪಷ್ಟಪಡಿಸಬೇಕು ಎಂದು ಒತ್ತಾಯಿಸಿವೆ.

'ಇಡೀ ದೇಶವೇ ಭಾರತೀಯರಾಗಿ ಏಕತೆಯ ಸಂದೇಶ ವ್ಯಕ್ತಪಡಿಸುವ ಸಂದರ್ಭದಲ್ಲಿ, ರಾಜಕೀಯವಾಗಿ ವಿಭಜಿಸುವ ಪ್ರಯತ್ನ ಖಂಡನೀಯ' ಎಂದು ಕಾಂಗ್ರೆಸ್ ಸಂಸದ ಶಶಿ ತರೂರ್ ಟೀಕಿಸಿದ್ದಾರೆ.

'ಶತ್ರುಗಳಿಗೆ ಗಟ್ಟಿಧ್ವನಿಯಲ್ಲಿ ಸ್ಪಷ್ಟ ಸಂದೇಶ ಕಳುಹಿಸಲಾಗಿದೆ. ನಮ್ಮ ಜೊತೆ ಜಗಳವಾಡಬೇಡಿ. ಯುಪಿಎ ಸರ್ಕಾರದ ಅವಧಿಯಲ್ಲಿ ಇದ್ದಂತಹ ನಿಷ್ಕ್ರಿಯತೆ ಈಗ ನಡೆಯೊಲ್ಲ. ಹೊಸ ಭಾರತ ನಿರ್ಮಾಣದಲ್ಲಿ ವ್ಯರ್ಥ ಶಾಂತಿ ಮಾತುಕತೆ ನಡೆಸುವಷ್ಟು ತಾಳ್ಮೆ ಇಲ್ಲ' ಎಂಬ ಅರ್ಥದ ಸಾಲುಗಳನ್ನು ಬರೆದು, 'ಆಪರೇಷನ್ ಸಿಂಧೂರ್' ಕಾರ್ಯಾಚರಣೆಯ ವಿಡಿಯೊವನ್ನು ಸಾಮಾಜಿಕ ಜಾಲತಾಣ 'ಎಕ್ಸ್'ನಲ್ಲಿ ಬಿಜೆಪಿ ಅಪ್‌ಲೋಡ್ ಮಾಡಿತ್ತು.

'ಹಿಂದಿನ ಯುಪಿಎ ಸರ್ಕಾರದ ಅವಧಿಯಲ್ಲಿ ಭಯೋತ್ಪಾದಕ ದಾಳಿ ನಡೆದರೆ, ಮಾತುಕತೆಗೆ ಮುಂದಾಗಲಾಗುತ್ತಿತ್ತು. ಪ್ರಧಾನಿ ನರೇಂದ್ರ ಮೋದಿ ಅವಧಿಯಲ್ಲಿ ಈ ನಿಲುವು ಬದಲಾಗಿದೆ' ಎಂದು ತಿಳಿಸಿತ್ತು.



ಮನೋಜ್ ಕೆ. ಝಾ



ಪವನ್ ಖೇರಾ

ಇದಕ್ಕೆ ಆಕ್ಷೇಪ ವ್ಯಕ್ತಪಡಿಸಿರುವ ಕಾಂಗ್ರೆಸ್ ಮಾಧ್ಯಮ ಹಾಗೂ ಪ್ರಚಾರ ವಿಭಾಗದ ಮುಖ್ಯಸ್ಥ ಪವನ್ ಖೇರಾ, 'ಹಾಗಾದರೆ, ನಾವು ಈಗ ರಾಜಕೀಯ ಮಾಡಬೇಕೆ? ಇದು ರಾಜಕೀಯ ಮಾಡುವ ಸಮಯವೇ? ಸರ್ಕಾರಕ್ಕೆ ವಿರೋಧ ಪಕ್ಷಗಳ ಬೆಂಬಲ ಅಗತ್ಯವಿಲ್ಲವೇ? ಎಂದು 'ಎಕ್ಸ್'ನಲ್ಲಿಯೇ ಪ್ರಶ್ನಿಸಿದ್ದಾರೆ.

'ಈಗ ಏಕತೆ ಸಂದೇಶ ಕಳುಹಿಸುವ ಅಗತ್ಯವಿಲ್ಲವೇ? ಸರ್ಕಾರ ಹಾಗೂ ಬಿಜೆಪಿ ಸ್ಪಷ್ಟಪಡಿಸಬೇಕು' ಎಂದು ಆಗ್ರಹಿಸಿದ್ದಾರೆ.

'ಸೇನೆ ಹಾಗೂ ಸರ್ಕಾರವನ್ನು ಇಡೀ ದೇಶ ಹಾಗೂ ಸರ್ವಪಕ್ಷಗಳು ಬೆಂಬಲಿಸುತ್ತಿವೆ. ಇಂತಹ ಸಂದರ್ಭದಲ್ಲಿ ಬಿಜೆಪಿಯಿಂದ ರಾಜಕೀಯ ಸಲ್ಲದು, ಪ್ರಧಾನಿ ಮೋದಿ ಕೂಡಲೇ ಮಧ್ಯ ಪ್ರವೇಶಿಸಬೇಕು. ಬಿಜೆಪಿ ಹಾಕಿದ ಸಂದೇಶವು ಗಡಿಭಾಗದಲ್ಲಿ ದುರುಪಯೋಗವಾಗುವ ಸಾಧ್ಯತೆಯಿದೆ' ಎಂದು ಆರ್‌ಜೆಡಿಯ ಹಿರಿಯ ಸಂಸದ ಮನೋಜ್ ಕೆ. ಝಾ ತಿಳಿಸಿದ್ದಾರೆ.

ಗಡಿ ಜಿಲ್ಲೆಗಳ ಮೇಲೆ ಗುಂಡಿನ ದಾಳಿ: ಬಿಎಸ್‌ಎಫ್ ಯೋಧ ಹುತಾತ್ಮ

ಜಮ್ಮು: 7 ಸಾವು, 7 ಸಿಬ್ಬಂದಿಗೆ ಗಾಯ

ಜಮ್ಮು/ಪಠಾಣ್‌ಕೋಟ್ (ಪಿಟಿಐ): ಗಡಿ ನಿಯಂತ್ರಣ ರೇಖೆ (ಎಲ್‌ಒಸಿ) ಬಳಿಯ ಗಡಿ ಜಿಲ್ಲೆಗಳನ್ನು ಗುರಿಯಾಗಿಸಿ ಪಾಕಿಸ್ತಾನದ ಸೇನಾ ಪಡೆಗಳು ಶನಿವಾರವೂ ತೀವ್ರ ಗುಂಡಿನ ದಾಳಿ ನಡೆಸಿವೆ. ದಾಳಿಯಲ್ಲಿ 6 ಮಂದಿ ಮೃತಪಟ್ಟಿದ್ದು, ಬಿಎಸ್‌ಎಫ್‌ನ ಸುಬೇದಾರ್ ಪವನ್ ಕುಮಾರ್ ಹುತಾತ್ಮರಾಗಿದ್ದಾರೆ. 7 ಸಿಬ್ಬಂದಿ ಗಾಯಗೊಂಡಿದ್ದಾರೆ.

ಆರ್.ಎಸ್. ಪುರ ಸೆಕ್ಟರ್‌ನಲ್ಲಿ ನಡೆದ ದಾಳಿಯಲ್ಲಿ ಬಿಎಸ್‌ಎಫ್‌ನ 8 ಸಿಬ್ಬಂದಿ ಗಾಯಗೊಂಡಿದ್ದು, ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ. ಅಶೋಕ್ ಕುಮಾರ್ ಎಂಬ ವ್ಯಕ್ತಿ ಮೃತಪಟ್ಟಿದ್ದಾರೆ. ಜಮ್ಮುವಿನ ಖೇರಿ ಕೆರನ್ ಗ್ರಾಮದ ಮೇಲೆ ನಡೆದ ದಾಳಿಯಲ್ಲಿ ಒಬ್ಬ ವ್ಯಕ್ತಿ ಮೃತಪಟ್ಟಿದ್ದು, ಮೂವರು ಗಾಯಗೊಂಡಿದ್ದಾರೆ.

ರಜೌರಿಯಲ್ಲಿ ಹೆಚ್ಚುವರಿ ಜಿಲ್ಲಾಧಿಕಾರಿ ಮೃತಪಟ್ಟಿದ್ದು, ಇಬ್ಬರು ಸಿಬ್ಬಂದಿ ಗಾಯಗೊಂಡಿದ್ದಾರೆ. ಪೂಂಚ್‌ನ ಘಾಟಿ ಸೆಕ್ಟರ್‌ನಲ್ಲಿ ದಾಳಿ ನಡೆದಿದೆ. ಸುಬೇದಾರ್ ಮೇಜರ್ ಪವನ್ ಕುಮಾರ್ ಅವರು ಹುತಾತ್ಮರಾಗಿದ್ದು, ಮೂವರು ನಾಗರಿಕರು ಗಾಯಗೊಂಡಿದ್ದಾರೆ. ನೌಶೇರಾ ಸೆಕ್ಟರ್‌ನಲ್ಲಿ ಪತ್ರಕರ್ತರೊಬ್ಬರು ಗಾಯಗೊಂಡಿದ್ದಾರೆ. ರಜೌರಿ ಕೈಗಾರಿಕಾ ಪ್ರದೇಶದ ಮೇಲಿನ ದಾಳಿಯಲ್ಲಿ ಎರಡು ವರ್ಷದ ಮಗು ಸೇರಿ ಇಬ್ಬರು ಮೃತಪಟ್ಟಿದ್ದು, 3 ಮಂದಿ ಗಾಯಗೊಂಡಿದ್ದಾರೆ.

ಗಡಿ ಜಿಲ್ಲೆಗಳ ಮೇಲೆ ನಡೆಯುತ್ತಿರುವ ಗುಂಡಿನ ದಾಳಿ, ಡ್ರೋನ್ ದಾಳಿಯಿಂದ ಜನರು ಭಯಬೀತರಾಗಿದ್ದಾರೆ. ಕಾಶ್ಮೀರದ ಎಲ್‌ಒಸಿ ಬಳಿ ಇರುವ ಬಾರಾಮುಲ್ಲಾ, ಬಂಡಿಪೋರ, ಕುಪ್ವಾಡ ಜಿಲ್ಲೆಯ 1.10 ಲಕ್ಷಕ್ಕೂ ಅಧಿಕ ಜನರು ಮನೆಗಳನ್ನು ತೊರೆದಿದ್ದಾರೆ ಎನ್ನಲಾಗಿದೆ.

ಜನಾನುರಾಗಿ ಅಧಿಕಾರಿ ಥಾಪಾ

ಜಮ್ಮು (ಪಿಟಿಐ): ಪಾಕಿಸ್ತಾನದ ದಾಳಿಯಲ್ಲಿ ಹುತಾತ್ಮರಾಗಿರುವ ಜಮ್ಮು–ಕಾಶ್ಮೀರದ ಆಡಳಿತ ಸೇವಾ (ಜೆಕೆಎಎಸ್) ಅಧಿಕಾರಿ ರಾಜ್ ಕುಮಾರ್ ಥಾಪಾ (54) ಜನಾನುರಾಗಿಯಾಗಿದ್ದರು. ಸಾಮಾನ್ಯ ಜನರ ಸಂಕಷ್ಟಕ್ಕೆ ಮಿಡಿದು ನಿಜವಾದ ಜನಸೇವಕ ಎನಿಸಿಕೊಂಡಿದ್ದ ಥಾಪಾ ಅವರ ಸಾವಿಗೆ ಕೇಂದ್ರಾಡಳಿತ ಪ್ರದೇಶದ ಜನರು ಕಂಬನಿ ಮಿಡಿದಿದ್ದಾರೆ.

ಎಂಬಿಬಿಎಸ್ ಪದವೀಧರರಾಗಿರುವ ಥಾಪಾ, 2001ರಲ್ಲಿ ಜೆಕೆಎಎಸ್ ಸೇರ್ಪಡೆಗೊಂಡು, ಕಳೆದ ವರ್ಷ ರಜೌರಿ ಜಿಲ್ಲೆಗೆ ಹೆಚ್ಚುವರಿ ಜಿಲ್ಲಾಧಿಕಾರಿಯಾಗಿ ನೇಮಕಗೊಂಡಿದ್ದರು. ಅದೇ ವರ್ಷ ಡಿಸೆಂಬರ್ 7ರಿಂದ 19ರ ಅವಧಿಯಲ್ಲಿ ಬದಹಾಲ್ ಗ್ರಾಮದಲ್ಲಿ 3 ಕುಟುಂಬಗಳ 17 ಮಂದಿ ಇದ್ದಕ್ಕಿದ್ದಂತೆ ಅನಾರೋಗ್ಯಕ್ಕೀಡಾಗಿ ನಿಗೂಢವಾಗಿ ಮೃತಪಟ್ಟಿದ್ದರು. ಆ ಪ್ರಕರಣವನ್ನು ಸೂಕ್ಷ್ಮವಾಗಿ ನಿಭಾಯಿಸಿದ್ದರು.

ರಜೌರಿಗೆ ನೇಮಕಗೊಳ್ಳುವ ಮುನ್ನ ಮಾಜಿ ಉಪ ಮುಖ್ಯಮಂತ್ರಿ ತಾರಾ ಚಂದ್ ಅವರ ಬಳಿ ವಿಶೇಷ ಕರ್ತವ್ಯ ಅಧಿಕಾರಿಯಾಗಿ (ಒಎಸ್‌ಡಿ) 2009ರಿಂದ 2014ರವರೆಗೆ ಕಾರ್ಯನಿರ್ವಹಿಸಿದ್ದರು. ಜಮ್ಮು–ಕಾಶ್ಮೀರ ಕೌಶಲ ಅಭಿವೃದ್ಧಿ ಯೋಜನೆಯ ನಿರ್ದೇಶಕ, ಕಾರ್ಮಿಕ ಮತ್ತು ಉದ್ಯೋಗ ಇಲಾಖೆಯ ವಿಶೇಷ ಕಾರ್ಯದರ್ಶಿ ರೀತಿಯ ಪ್ರಮುಖ ಹುದ್ದೆಗಳನ್ನೂ ಅವರು ನಿಭಾಯಿಸಿದ್ದರು.



ರಾಜ್ ಕುಮಾರ್ ಥಾಪಾ ಅಗಲಿಕೆಯ ನೋವಿನಲ್ಲಿ ಮುಳುಗಿದ್ದ ಕುಟುಂಬದವರನ್ನು ಜಮ್ಮು ಮುತ್ತು ಕಾಶ್ಮೀರ ಮುಖ್ಯಮಂತ್ರಿ ಒಮರ್ ಅಬ್ದುಲ್ಲಾ ಶನಿವಾರ ಭೇಟಿ ಮಾಡಿ, ಸಾಂತ್ವನ ಹೇಳಿದರು –ಪಿಟಿಐ ಚಿತ್ರ







ಅರಣ್ಯ ಸಂರಕ್ಷಣೆ ನಾಸ್ತಿ ನಿರ್ವಹಣೆ ಜಾಸ್ತಿ


ಚಿಕ್ಕಮಗಳೂರು ಜಿಲ್ಲೆಯ ಆಲ್ದೂರು ಸಮೀಪದ ಕಂದೂರು ಅರಣ್ಯ ಪ್ರದೇಶದಲ್ಲಿ ಸೆರೆಯಾದ ಆನೆ

ಕರ್ನಾಟಕಕ್ಕೆ ಅರಣ್ಯ ಸಂರಕ್ಷಣೆಯ ವಿಷಯದಲ್ಲಿ ಮೊದಲ ಸ್ಥಾನಗಳಿಸಲು ಎಲ್ಲಾ ಅವಕಾಶಗಳಿವೆ. ಆದರೆ, ಆನೆ-ಕಾಟಿಗಳ ವರ್ತನೆಯನ್ನು ಅಭ್ಯಾಸ ಮಾಡಿದ ತಜ್ಞರ ಸಲಹೆಯನ್ನು ಕೇಳಲು ಇಲಾಖೆ ತಯಾರಿಲ್ಲ. ಜೊತೆಗೆ ಇಚ್ಛಾಶಕ್ತಿಯ ಕೊರತೆಯೂ ಇದೆ ಎಂದು ಲೇಖಕರು ವಿಶ್ಲೇಷಿಸಿದ್ದಾರೆ.

ಅಖಿಲೇಶ್ ಚಿಪ್ಪಳಿ

ಬದಲಾದ ಕಾಲಮಾನದಲ್ಲಿ ಜಗತ್ತಿನ ಹಲವು ದೇಶಗಳು ಪರಿಸರ ಸಂರಕ್ಷಣೆಗೆ ಹೆಚ್ಚು ಒತ್ತು ಕೊಡುತ್ತಿವೆ. ಸಹ್ಯಾದ್ರಿ ಶ್ರೇಣಿಯ ಬಹುಪಾಲು ಪ್ರದೇಶವನ್ನು ಹೊಂದಿದ ಕರ್ನಾಟಕ ಕೂಡಾ ಸಹ್ಯಾದ್ರಿ ಸಂರಕ್ಷಣೆಗೆ ಹೆಚ್ಚು ಒತ್ತು ಕೊಡಲಿದೆ. 2025-2026ನೇ ಸಾಲಿಗೆ ಹೆಚ್ಚು ಹಣವನ್ನು ಬಜೆಟ್ ನಲ್ಲಿ ಮೀಸಲಾಗಿ ಇಡಬಹುದು ಎಂಬ ಪರಿಸರ ಪ್ರೇಮಿಗಳ ನಿರೀಕ್ಷೆ ಹುಸಿಯಾಗಿದೆ.

ಅರಣ್ಯ, ವನ್ಯ ಸಂಪತ್ತು ಮತ್ತು ಜೀವಿವೈವಿಧ್ಯ ನೆಲೆಗಳಿಗೆ ರಕ್ಷಣೆ ಮತ್ತು ಭದ್ರತೆ ನೀಡುವ ಕೆಲಸವನ್ನು ಮಾಡುವುದು ಕರ್ನಾಟಕ ರಾಜ್ಯ ಅರಣ್ಯ ಇಲಾಖೆಯ ಪ್ರಮುಖ ಕರ್ತವ್ಯ ಮತ್ತು ಹೊಣೆ. ಇತ್ತೀಚಿನ ದಿನಗಳಲ್ಲಿ ಅರಣ್ಯ ಭವನದಲ್ಲಿ ಕುಳಿತವರ ಧೋರಣೆ ಬದಲಾಗಿದೆ. ರಕ್ಷಣೆ ಮತ್ತು ಭದ್ರತೆಗಳಿಗೆ ಬದಲಾಗಿ ನಿರ್ವಹಣೆಗೆ ಹೆಚ್ಚು ಒತ್ತು ನೀಡಲಾಗುತ್ತಿದೆ ಎಂದು ಈ ಬಾರಿಯ ಬಜೆಟ್ ಎತ್ತಿ ತೋರಿಸುತ್ತಿದೆ. ಕಳೆದ ಕಾಲು ಶತಮಾನದಲ್ಲಿ ಸಹ್ಯಾದ್ರಿಯ ಅರಣ್ಯ ಕಿರಿದಾಗುತ್ತಲೇ ಇದೆ. ವನ್ಯಜೀವಿಗಳ ಆವಾಸಸ್ಥಾನ ಕ್ಷೀಣಿಸುತ್ತಿದೆ. ಮಾನವನ ಕಾರ್ಯವ್ಯಾಪ್ತಿ ಮತ್ತು ಚಟುವಟಿಕೆಗಳು ಬೃಹದಾಕಾರವಾಗಿ ಬೆಳೆಯುತ್ತಿವೆ. ಇದು ನೇರವಾಗಿ ಮನುಷ್ಯನೊಂದಿಗೆ ಸಂಘರ್ಷಕ್ಕೆ ಕಾರಣವಾಗುತ್ತಿದೆ. ಕೃಷಿ ಪ್ರದೇಶಕ್ಕೆ ಕಾಡಾನೆಗಳು, ಕಾಟಿಗಳು ಬರುತ್ತಿವೆ. ಆಯಾ ಪ್ರದೇಶದಲ್ಲಿ ವಾಸಿಸುತ್ತಿರುವ ವನ್ಯಪ್ರಾಣಿಗಳ ನಿಯಂತ್ರಣ ನೈಸರ್ಗಿಕವಾಗಿಯೇ ಆಗುತ್ತದೆ. ಆದರೆ, ನೈಸರ್ಗಿಕವಾಗಿ ನಿಯಂತ್ರಣಗೊಳ್ಳುವ ಪ್ರಕ್ರಿಯೆ ಸಮಯ ಬೇಡುತ್ತದೆ.

ದೇಶದಲ್ಲಿ ಹೆಚ್ಚು ಆನೆಗಳನ್ನು ನಮ್ಮ ರಾಜ್ಯ ಹೊಂದಿದೆ. ಅರಣ್ಯ ಇಲಾಖೆಯ ಅತಿಯಾದ ಹಸ್ತಕ್ಷೇಪ ಮತ್ತು ಕಳಪೆ ನಿರ್ವಹಣೆಯಿಂದಾಗಿ, ಮಾನವ-ಆನೆ ಸಂಘರ್ಷ ತಾರಕಕ್ಕೇರಿದೆ. ಸಂಘರ್ಷವನ್ನು ನಿರ್ವಹಿಸುವಲ್ಲಿ ಇಲಾಖೆ ಪದೇ ಪದೇ ವಿಫಲವಾಗುತ್ತಿದೆ. ರೈತರ ಬೆಳೆ ನಾಶ ಮಾಡುವ ಹಾಗೂ ಮನುಷ್ಯರನ್ನು ಕಂಡರೆ, ಬೆನ್ನತ್ತುವ ಆನೆಗಳನ್ನು ಪುಂಡಾನೆಗಳು ಎಂದು ಕರೆಯಲಾಗುತ್ತದೆ. ಇಂತಹ ಆನೆಗಳನ್ನು ಗುರುತಿಸಿ, ಅವುಗಳಿಗೆ ಅರಿವಳಿಕೆ ಮದ್ದು ನೀಡಿ, ಅವುಗಳನ್ನು ಬೇರೆಯಾಗಿ ಇಡುವ ಯೋಜನೆಗೆ ₹ 20 ಕೋಟಿ ಮೀಸಲಾಗಿಡಲಾಗಿದೆ. ಚಿಕ್ಕಮಗಳೂರು ಜಿಲ್ಲೆಯ ಭದ್ರಾ ಅಭಯಾರಣ್ಯದ 2,000 ಹೆಕ್ಟೇರ್ ಪ್ರದೇಶದಲ್ಲಿ ಪುಂಡಾನೆಗಳನ್ನು ಕೂಡಿಡುವ ಈ ಯೋಜನೆಗೆ 'ಕಾಡಾನೆ ಬಿಡುವ ಧಾಮ' ವೆಂದು ಕರೆಯಲಾಗಿದೆ. ಚೋದ್ಯವೆಂದರೆ, ಯಾವುದಾದರೂ ಸಾಕಿದ ಅಥವಾ ಬಂಧನದಲ್ಲಿಟ್ಟ ಪ್ರಾಣಿಗಳ ಮರಿಗಳನ್ನು ಮತ್ತೆ ವಾಪಾಸು ಕಾಡಿಗೆ ಬಿಡುವ ಪೂರ್ವ ತಯಾರಿಯಾಗಿ ಈ ಧಾಮವನ್ನು ಸ್ಥಾಪಿಸಲಾಗುತ್ತದೆ. ಒಂದು ಸೀಮಿತ ಅರಣ್ಯ ಪ್ರದೇಶದಲ್ಲಿ ಅವುಗಳನ್ನು ಬಿಟ್ಟು, ಅವುಗಳನ್ನು ಹಲವು ದಿನಗಳ ಕಾಲ ಗಮನಿಸಲಾಗುತ್ತದೆ. ನಂತರದಲ್ಲಿ, ಆ ಪ್ರಭೇದದ ಮರಿಗಳು ನೈಸರ್ಗಿಕ ಕಾಡಿಗೆ ಹೊಂದಿಕೊಳ್ಳಬಲ್ಲವು ಎಂಬ ವಿಶ್ವಾಸ ಮೂಡಿದ ಮೇಲೆ, ಅವುಗಳನ್ನು ಶಾಶ್ವತವಾಗಿ ಕಾಡಿಗೆ ಬಿಡಲಾಗುತ್ತದೆ. ಆದರೆ, ಈಗಿನ ಈ ಯೋಜನೆ ಇದಕ್ಕೆ ತದ್ವಿರುದ್ಧವಾಗಿದೆ. ಕಾಡಿನಲ್ಲಿರುವ ಕಾಡಾನೆಗಳನ್ನು ಹಿಡಿದು ತಂದು ಸೀಮಿತ ಪ್ರದೇಶದಲ್ಲಿ ಬಿಡುವುದು. 2,000 ಹೆಕ್ಟೇರ್ ಪ್ರದೇಶದಲ್ಲಿ ಹೆಚ್ಚೆಂದರೆ, ನಾಲ್ಕರಿಂದ ಐದು ಆನೆಗಳನ್ನು ಬಿಡಬಹುದಾಗಿದೆ. ಹೆಚ್ಚು ಆನೆಗಳನ್ನು ಬಿಟ್ಟಲ್ಲಿ, ಅವುಗಳಲ್ಲೇ ಸಂಘರ್ಷ ಉಂಟಾಗುವ ಸಾಧ್ಯತೆಗಳಿವೆ. ಇದಕ್ಕಿಂತ ಕಡಿಮೆ ವೆಚ್ಚದಲ್ಲಿ, ಕಾಡಿನ ಪುಂಡಾನೆಗಳ ಸಂಚಾರ ಪಥ ಮತ್ತು ಚಲನವಲನಗಳನ್ನು ಗುರುತಿಸಿ, ಮುನ್ನೆಚರಿಕೆಯಾಗಿ ಅವು ಸಾಗುವ ಮಾರ್ಗದಲ್ಲಿ ಬರುವ ಹಳ್ಳಿಗರಿಗೆ ಮೊದಲೇ ಎಚ್ಚರಿಕೆ ನೀಡುವುದರಿಂದ ಮಾನವ–ಆನೆ ಸಂಘರ್ಷವನ್ನು ತಪ್ಪಿಸಬಹುದಾಗಿದೆ. ಹಾಗೂ ಬೇರೆ ರಾಜ್ಯಗಳಲ್ಲಿ ಈ ಪ್ರಯತ್ನ ಯಶಸ್ವಿಯಾಗಿದೆ.

ಆನೆ–ಕಾಟಿ ದೇಹದಲ್ಲಿ ಚರೆಗಳ ಗುರುತು!

ಆನೆ-ಕಾಟಿಗಳು ಮರಣ ಹೊಂದಿದಾಗ, ಮರಣೋತ್ತರ ಪರೀಕ್ಷೆಗೆ ಒಳಪಡಿಸಲಾಗುತ್ತದೆ. ಮಲೆನಾಡಿನಲ್ಲಿ ಇತ್ತೀಚಿನ ದಿನಗಳಲ್ಲಿ ಈ ಪ್ರಾಣಿಗಳ ಮರಣೋತ್ತರ ಪರೀಕ್ಷೆ ನಡೆಸಿದಾಗ ಅಚ್ಚರಿಯ ವಿಷಯ ಬಹಿರಂಗವಾಯಿತು. ಕಾಟಿಯ ದೇಹದಲ್ಲಿ 30-40 ಬಂದೂಕಿನಿಂದ ಹಾರಿಸಿದ ಚರೆಗಳು ಸಿಕ್ಕಿದರೆ, ಆನೆಗಳಲ್ಲಿ 80-100 ಚರೆಗಳು ಸಿಕ್ಕಿವೆ. ಈ ವಿದ್ಯಮಾನಕ್ಕೆ ಕಾರಣವೇನು? ವನ್ಯಜೀವಿಗಳ ಆವಾಸಸ್ಥಾನಗಳನ್ನು ಒತ್ತುವರಿ ಮಾಡಿಕೊಂಡು ಕೃಷಿ-ತೋಟಗಾರಿಕಾ ಬೆಳೆಗಳನ್ನು ಬೆಳೆಯುವುದು ಈಗ ಕಾನೂನುಬಾಹಿರ ಎಂದು ಪರಿಗಣಿತವಾಗುತ್ತಲೇ ಇಲ್ಲ. ತೋಟವಾಗಿ ಪರಿವರ್ತನೆಯಾದ ತನ್ನ ಮೂಲಸ್ಥಾನಕ್ಕೆ ಆನೆ-ಕಾಟಿಗಳು ಬರುವುದು ಸಾಮಾನ್ಯ ವಿದ್ಯಮಾನ. ಅದು ಒತ್ತುವರಿಯೇ ಇರಲಿ, ಅಲ್ಲಿ ರೈತ ಸಾಲ-ಸೂಲ ಮಾಡಿಯೇ ಬೆಳೆ ಬೆಳೆದಿರುತ್ತಾನೆ. ಬೃಹತ್ ದೇಹಿಗಳು ತೋಟಕ್ಕೆ ಬಂದಾಗ ಬೆಳೆ ನಾಶ ಆಗುತ್ತದೆ.

9ನೇ ಪುಟಕ್ಕೆ...

ಅಕ್ರಮ ನಾಡ ಬಂದೂಕು ತಯಾರಿಕೆ

ಮಲೆನಾಡಿನಲ್ಲಿ ಹೋಬಳಿಗೆ ಒಂದರಂತೆ, ನಾಡ ಬಂದೂಕು ತಯಾರಿಸುವ ಘಟಕಗಳಿವೆ. ಅಕ್ರಮ ಬಂದೂಕು ತಯಾರಿಕೆಯನ್ನು ಮಟ್ಟ ಹಾಕಲು ಪೋಲೀಸ್ ಇಲಾಖೆಗೆ ಸಾಧ್ಯವಾಗುತ್ತಿಲ್ಲ. ಕಾರಣ ಮಾಹಿತಿ ಕೊರತೆ. ಜೊತೆಗೆ ಬಂದೂಕು ತಯಾರಿಸುವವರು, ಬರೀ ಬಂದೂಕು ಮಾತ್ರ ತಯಾರಿಸುವುದಿಲ್ಲ. ಕೃಷಿ ಉಪಕರಣಗಳನ್ನು ತಯಾರಿಸುತ್ತಾರೆ. ಬಂದೂಕಿಗೆ ಬೇಡಿಕೆ ಬಂದಾಗ ಕಳ್ಳತನದಲ್ಲೇ ಮಾಡಿಕೊಡುತ್ತಾರೆ. ಮಲೆನಾಡಿನಲ್ಲಿ ಒಂದು ಅಕ್ರಮ ನಾಡ ಬಂದೂಕಿಗೆ ₹15-20 ಸಾವಿರ ಬೆಲೆಯಿದೆ. ಜೊತೆಗೆ ನಾಡ ಬಂದೂಕಿಗೆ ಬೇಕಾಗುವ ಸಾಮಾಗ್ರಿಗಳನ್ನು ಮಾರುವ ಅಧಿಕೃತ ಮಳಿಗೆಗಳಲ್ಲಿ ಯಾರೂ ಬೇಕಾದರೂ ಮಸಿ, ಚರೆ, ಮದ್ದುಗುಂಡುಗಳನ್ನು ಸುಲಭವಾಗಿ ಪಡೆಯಬಹುದು. ಪರವಾನಿಗೆ ಹೊಂದಿದವರಿಗೆ ಮಾತ್ರ ಮಾರಾಟ ಮಾಡಬೇಕು ಎಂಬ ನಿಯಮ ಪಾಲನೆಯಾಗುತ್ತಿಲ್ಲ. ಯಾರು ಎಷ್ಟು ಮದ್ದುಗುಂಡುಗಳನ್ನು ಖರೀದಿಸಿದರು ಎಂಬ ಲೆಕ್ಕವೂ ಸಿಗುವುದಿಲ್ಲ. ಇದರ ಮೇಲೆ ನಿಯಂತ್ರಣ ಹೇರಲು ಅರಣ್ಯ ಇಲಾಖೆಗೆ ಅಧಿಕಾರವಿಲ್ಲ. ಶಸ್ತ್ರಾಸ್ತ್ರ ಕಾಯ್ದೆಯಲ್ಲಿ ಕ್ರಮ ತೆಗೆದುಕೊಳ್ಳಬೇಕಾದ ಹೊಣೆ ಇರುವುದು ಗೃಹ ಇಲಾಖೆಗೆ ಇದುವರೆಗೂ ಯಾವುದೇ ಕಾಟಿಯಾಗಲಿ ಅಥವಾ ಆನೆಯಾಗಲಿ ಪೋಲೀಸರಿಗೆ ತಮಗೆ ತೊಂದರೆಯಾಗುತ್ತಿದೆಯೆಂದು ದೂರು ನೀಡಿಲ್ಲವಲ್ಲ?.


ಶಿವಮೊಗ್ಗ ಜಿಲ್ಲೆಯ, ಸಾಗರ ತಾಲ್ಲೂಕಿನ ಮಂಚಾಲೆಯಲ್ಲಿ ಸೆರೆಯಾದ ಕಾಟಿ


ಮೀನಾಕ್ಷಿ ಮಿಶ್ರಿಕೋಟಿ ಅವರೊಂದಿಗೆ ಹೋಳಿಗೆ ಸಿದ್ಧಪಡಿಸುತ್ತಿರುವ ಮಹಿಳೆಯರು

ಚಿತ್ರಗಳು: ಏಕನಾಥ ಅಗಸಿಮನಿ

ರೊಟ್ಟಿ ತಟ್ಟುತ್ತ, ಬದುಕು ಕಟ್ಟಿಕೊಳ್ಳುತ್ತ...

ರಶ್ಮಿ ಎಸ್

'ಜನುಮ, ಇಷ್ಟೇ ಅಂತನಿಸಿದಾಗ ಏನರೆ ಮಾಡ್ಕೊಂಡಿದ್ರ ಗೋಡೆ ಮೇಲಿನ ಫೋಟೊದಾಗಿರ್ತಿದ್ದೆ. ಆದ್ರ ಜನುಮ ಅದ ಅಂದ್ರ, ಏನರೆ ಮಾಡಾಕ ಇರಬೇಕು ಅಂತ ಅಪ್ಪಾರು ಹೇಳಿದ್ರು. ಗಟ್ಟಿಯಾದೆ. ನಾಕು ಮಂದಿ ಬಾಯಾಗ ಮೀನಾಕ್ಷಿ ಮಿಶ್ರಿಕೋಟಿ ಅಂದ್ರ ಅನ್ನಪೂರ್ಣ ಅನ್ನೂಹಂಗ ಆಗೇದ'.

ಬೆಳಗಾವಿಯ ಮೀನಾಕ್ಷಿ ಮಿಶ್ರಿಕೋಟಿ ತಮ್ಮ ಬದುಕನ್ನು ಎರಡು ಸಾಲಿನಲ್ಲಿ ಹೇಳಿದ್ದು ಹೀಗೆ.

ಇವರೊಡನೆ ಕೈ ಜೋಡಿಸಿದ ಸುಶೀಲಾ ರಾಜಶೇಖರ ಗೋಣಿ ಅವರೀಗ 65–70ರ ಆಸುಪಾಸಿನಲ್ಲಿರುವವರು. 'ನಾ ಬಂದಾಗ ನಲ್ವತ್ತು ರೂಪಾಯಿ ಕೂಲಿ ಸಿಗ್ತಿತ್ತು. ಈಗ ಅಡುಗೆ ಇದ್ರ ₹450. ಇರಲಿಕ್ರ ₹250 ಅಂತೂ ಖಾತ್ರಿರಿ. ಇವರ ಕೂಡ ದುಡಕೊಂತ ಇಬ್ರು ಹೆಣ್ಮಕ್ಕಳಿಗೆ ಮದಿವಿ ಮಾಡಿದೆ. ಮೂರು ಗಂಡುಮಕ್ಕಳು ನೆಲಿನಿಂತ್ರು. ಮನ್ಯಾಗ ಮಗ್ಗ ಅದ. ಜೀವನ ಸರಳ ಆಗೇದ.'

'ಮದಿವಿಯಾದ ವರ್ಷಕ್ಕ ಗಂಡ ಸತ್ತುಹೋದ್ರು. ಬಡತನ ಸ್ಥಿತಿಯೊಳಗಿದ್ವಿ. ಕೈಕಟ್ಕೊಂಡು ಕುಂತ್ರ ಕೂಳಿಗೆ ಮೂಲ ಆದಂಗ ಆಗ್ತಿತ್ತು. ನಮ್ಮತ್ತಿಗೆ ನೋಡ್ಕೊಂಡು ನಾನೂ ಅಗ್ದಿ ಮರ್ಯಾದಿಲೆ ಬದುಕೂಹಂಗಾಯ್ತು. ನಮ್ಮತ್ತಿ ಸೇವಾ ಮಾಡಿದೆ. ಯಾವುದಕ್ಕೂ ಕಡಿಮಿ ಆಗದ್ಹಂಗ ನೋಡ್ಕೊಂಡೆ. ನೀನೆ ನನ್ಮಗ ಆದಿ ತಾಯಿ ಅಂದಾಗ ನನಗೂ ಕಣ್ಣೀರು ಬಂದಿದ್ವು ನೋಡ್ರಿ. ಮರ್ಯಾದಿಯಿಂದ ಬದುಕೂದು ಮೀನಕ್ಕನ ಕೂಡ ಬಂದಿದ್ದಕ್ಕ ಸಾಧ್ಯ ಆಯ್ತು'– ಹೀಗೆ ಹೇಳುತ್ತಾರೆ ಲಕ್ಷ್ಮಿ ನಾಗಪ್ಪ.

ಕಸ್ತೂರಿ ಮಲ್ಲಿಕಾರ್ಜುನ್ ಹಿರೇಮಠ, ಗೀತಾ ಜವಳೆ.. ಹೀಗೆ ಇನ್ನೂ ಹತ್ತು ಹದಿನೈದು ಜನರು ಇವರೊಟ್ಟಿಗೆ ಕೈಜೋಡಿಸಿದ್ದಾರೆ. ಒಬ್ಬೊಬ್ಬರದ್ದೂ ಒಂದೊಂದು ಕಷ್ಟದ ಕತೆ. ಇಷ್ಟದ ಕೆಲಸ, ಹಸನಾದ ಜೀವನ.

ಇದಕ್ಕೆ ಕಾರಣ ಆಗಿದ್ದು ಮೀನಾಕ್ಷಿ ಕೇಟರ್ಸ್‌ನ ಮೀನಾಕ್ಷಿ ಸದಾನಂದ ಮಿಶ್ರಿಕೋಟಿ ಅವರು. ರೊಟ್ಟಿ ತಟ್ಟುತ್ತ, ತಮ್ಮೊಡನೆ ಇದ್ದವರ ಬದುಕು ಹಸನು ಮಾಡಿದವರ ಕತೆ ಇದು.

ಮದುವೆಯಾದ ಒಂದು ವರ್ಷಕ್ಕೇ ಪತಿ ಆತ್ಮಹತ್ಯೆ ಮಾಡಿಕೊಂಡರು. ಒಡಲೊಳಗಿದ್ದ ಮಗುವೊಂದು ಜಾರಿಹೋದ ಹೊತ್ತದು. ಬದುಕು ಬೇಡವೆನಿಸಿದ ಕ್ಷಣವದು. ಮದುವೆಗೆ ಮೊದಲು ತವರು ಮನೆಯಲ್ಲಿದ್ದಾಗ ಹಪ್ಪಳ, ಉಪ್ಪಿನಕಾಯಿ ಮಾರಾಟ ಮಾಡಿದ ಅನುಭವ ಇತ್ತು. ಅಪ್ಪ ಸಂಗಪ್ಪ ಬಾಳಪ್ಪ ಅಂಗಡಿ ಅಮ್ಮ ಸುಶೀಲಾ ಸಂಗಪ್ಪ ಅಂಗಡಿ ಬೆಂಬಲಕ್ಕೆ ನಿಂತರು. ಮೀನಾಕ್ಷಿ ಮತ್ತೆ ಸ್ವಾವಲಂಬಿ ಬದುಕಿಗೆ ಅಡಿ ಇಟ್ಟರು. ಮೊದಲಿಗೆ ಬಂಡವಾಳ ಇರಲಿಲ್ಲ. ರೊಟ್ಟಿ, ಚಪಾತಿ, ಬೇಕೆಂದವರ ಬಳಿಯೇ ಹಣ ಪಡೆದು, ಮಾಡಿ ಕೊಡುತ್ತಿದ್ದರು. ಸಣ್ಣ ಪುಟ್ಟ ಲಾಭ ಇರುತ್ತಿತ್ತು. ಶ್ರಮಕ್ಕೆ ತಕ್ಕ ಲಾಭವಲ್ಲ. ಆದರೆ ಸರ್ಕಾರಿ ಕಚೇರಿಗಳಲ್ಲಿ ಕೆಲಸ ಮಾಡುವವರಿಗೆ ಜವಾರಿ ಊಟ ಸರಬರಾಜು ಮಾಡುವ ಪ್ರಯತ್ನ ಆರಂಭಿಸಿದಾಗ ಕೈಕೊಟ್ಟ ಸಮಯವೂ ಕೈ ಹಿಡಿದು ನಡೆಸತೊಡಗಿತು.

10ನೇ ಪುಟಕ್ಕೆ...


ಮೀನಾಕ್ಷಿ ಅವರಿಗೆ ಮಳಿಗೆಯಲ್ಲಿ ನೆರವಾಗುವ ಸಹೋದರ ಮಹೇಶ.

ಸ್ಕೂಬಾ ಡೈವಿಂಗ್ ನೀಡುವ ಅನುಭವ ಅಪೂರ್ವ. ಕಡಲಾಳಕ್ಕೆ ಇಳಿದು ಜಲಚರಗಳೊಂದಿಗೆ ಈಜುತ್ತಾ, ಅವುಗಳನ್ನು ಹತ್ತಿರದಿಂದ ನೋಡುವುದು ರೋಮಾಂಚನಕಾರಿ.

ನೇತ್ರಾಣಿ ದ್ವೀಪ ಸ್ಕೂಬಾ ಡೈವಿಂಗ್ ಜಪ


ಕಡಲಾಳದಲ್ಲಿನ ನೋಟ

ಸುರೇಂದ್ರ ಪೈ

ಉತ್ತರ ಕನ್ನಡ ಜಿಲ್ಲೆಯ ಭಟ್ಕಳ ತಾಲ್ಲೂಕಿನ ಮುರುಡೇಶ್ವರದಿಂದ 19 ಕಿಲೋಮೀಟರ್ ದೂರದಲ್ಲಿ 'ನೇತ್ರಾಣಿ' ಎಂಬ ಪುಟ್ಟ ದ್ವೀಪವಿದೆ. ಇದು ಕರ್ನಾಟಕದ ಕರಾವಳಿಯ ಅರಬ್ಬೀ ಸಮುದ್ರದಲ್ಲಿರುವ ಒಂದು ದ್ವೀಪ. ಈ ದ್ವೀಪವನ್ನು 'ಹಾರ್ಟ್ ಶೇಪ್ ಐಲ್ಯಾಂಡ್', 'ಭಜರಂಗಿ ದ್ವೀಪ' ಮತ್ತು 'ಪಾರಿವಾಳ ದ್ವೀಪ' ಎಂಬ ಹೆಸರಿನಿಂದಲೂ ಕರೆಯಲಾಗುತ್ತದೆ. ತಿಳಿಯಾದ ನೀಲಿ ನೀರು, ಹವಳದ ದಿಬ್ಬ ಮತ್ತು ಸಮೃದ್ಧ ಸಮುದ್ರಜೀವಿಗಳನ್ನು ಹೊಂದಿರುವ ನೇತ್ರಾಣಿ ದ್ವೀಪದ ಸುತ್ತಮುತ್ತಲಿನ ನರ್ಸರಿ, ಪಬಲ್ ಬೀಚ್, ಟಿ55, ಬಾಂಬ್ ರಾಕ್ ಮತ್ತು ಐಲ್ಯಾಂಡ್ ಬ್ಯಾಕ್ ಸ್ಥಳಗಳಲ್ಲಿ ಸ್ಕೂಬಾ ಡೈವಿಂಗ್ ಮತ್ತು ಸ್ನಾರ್ಕ್ಲಿಂಗ್ ಎಂಬ ಸಾಹಸಮಯ ಚಟುವಟಿಕೆಯನ್ನು ಅನಂದಿಸಲು ನಮ್ಮ ರಾಜ್ಯದಲ್ಲಿರುವ ಏಕೈಕ ಪ್ರವಾಸಿ ತಾಣವಾಗಿದೆ. ಈ ದ್ವೀಪದ ಸುತ್ತಮುತ್ತಲಿನ ನೀರಿನಾಳದಲ್ಲಿ 14 ಜಾತಿಯ ಹವಳಗಳು ಮತ್ತು 89 ಜಾತಿಯ ಮೀನುಗಳಿವೆ ಎಂದು ತಜ್ಞರು ಹೇಳುತ್ತಾರೆ.

ಸ್ಕೂಬಾ ಡೈವಿಂಗ್ ತೆರಳುವ ಮುನ್ನ ಕಡ್ಡಾಯ ನೋಂದಣಿ ಮಾಡಬೇಕು. ಬಳಿಕ ಎಲ್ಲಾ ಡೈವರ್ಸ್‌ಗಳಿಗೆ 'ಪೂಲ್ ಸೇಷನ್' ಮೂಲಕ ಹಲವು ಅಗತ್ಯ ಮಾಹಿತಿ ನೀಡಿ, ಮಾಕ್ ಡ್ರಿಲ್ ಮಾಡಿಸಿ ಬೋಟ್ ಮೂಲಕ ನೇತ್ರಾಣಿ ದ್ವೀಪದ ಕಡೆಗೆ ಕರೆದೊಯ್ಯಲಾಗುತ್ತದೆ.

ಸ್ಕೂಬಾ ಡೈವಿಂಗ್‌ಗೆ ನಿಗದಿಪಡಿಸಲಾದ ಸ್ಥಳಕ್ಕೆ ತಲುಪಲು ಒಂದು ಗಂಟೆ ಬೇಕು. ಬೋಟ್ ಮೂಲಕ ಪಯಣಿಸುವಾಗ ಸುತ್ತಲೂ ವಿಶಾಲವಾಗಿ ಹಬ್ಬಿರುವ ಸಮುದ್ರದ ಸೌಂದರ್ಯ, ಬೆಸ್ತರು ಪುಟ್ಟ ಪುಟ್ಟ ದೋಣಿಗಳಲ್ಲಿ ಮೀನು ಹಿಡಿಯಲು ಬಲೆ ಬೀಸುತ್ತಿರುವ ದೃಶ್ಯಗಳೆಲ್ಲವೂ ಬೇರೊಂದು ಜಗತ್ತಿನಲ್ಲಿ ವಿಹರಿಸುತ್ತಿರುವ ಅನುಭವವನ್ನು ನೀಡುತ್ತವೆ. ಮನಸ್ಸು ಇನ್ನಷ್ಟು ಪುಳಕಿತಗೊಳ್ಳುತ್ತದೆ.

ಸುಮಾರು 12 ಕಿಲೋಮೀಟರ್ ಸಾಗುತ್ತಿದ್ದ ಹಾಗೆಯೇ ದೂರದಲ್ಲಿ ಕಾಣುವ ನೇತ್ರಾಣಿ ದ್ವೀಪವು ನಮ್ಮಲ್ಲಿ ಮತ್ತಷ್ಟು ಕುತೂಹಲವನ್ನು, ತವಕವನ್ನು ಹೆಚ್ಚಿಸುತ್ತದೆ. ಬೋಟ್ ನೇತ್ರಾಣಿ ದ್ವೀಪ ತಲುಪಿದ ತಕ್ಷಣ ಸ್ಕೂಬಾ ಸೂಟ್ ಧರಿಸಿ ಮಾಸ್ಟರ್ ನಿರ್ದೇಶನದಂತೆ 12 ಮೀಟರ್ ಆಳದ ಸಮುದ್ರದಲ್ಲಿ ಒಂಟಿಯಾಗಿ ಧುಮ್ಮಿಕ್ಕುವ ಆ ಒಂದು ಕ್ಷಣ ಎಂಥವರಿಗಾದರೂ ಹೃದಯ ಬಾಯಿಗೆ ಬಂದಂತಾಗುತ್ತದೆ. ನೋಡ ನೋಡುತ್ತಲೇ ಸಮುದ್ರದಲ್ಲಿ ದೊಪ್ಪೆಂದು ಬೀಳುವುದೇ ಸಖತ್ ಥ್ರಿಲ್. ನಂತರ ನೀರಿನ ಮೇಲೆ ತೇಲುತ್ತಾ ನೀರಿನ ಜೊತೆ ಆಟವಾಡತೊಡಗಿದಾಗ ಧೈರ್ಯ ಸ್ವಲ್ಪ ಸ್ವಲ್ಪವೇ ಹೆಚ್ಚಾಗುತ್ತದೆ.


ಅಲ್ಲಿಂದ ನಿಧಾನವಾಗಿ ಸಮುದ್ರದೊಳಗೆ ಅದರಲ್ಲೂ ನೇತ್ರಾಣಿಯ ವಿಶೇಷ ಜೀವಜಗತ್ತು ಇರುವ ಪ್ರದೇಶದಲ್ಲಿ ಆಳಕ್ಕೆ ಈಜುತ್ತಾ ಸಾಗಿದಂತೆ ತಕ್ಷಣ ಕಾಣುವ ನಯನ ಮನೋಹರ ಅದ್ಭುತ ದೃಶ್ಯಗಳು ಆಶ್ಚರ್ಯಚಕಿತರನ್ನಾಗಿಸುತ್ತವೆ.

10ನೇ ಪುಟಕ್ಕೆ...



ಸ್ನಾರ್ಕ್ಲಿಂಗ್ ಚಟುವಟಿಕೆ

ಅರ್ಧ ಗಂಟೆಯ ಡೈವಿಂಗ್ ಚಟುವಟಿಕೆಯೊಂದಿಗೆ ಇನ್ನುಳಿದ ಸಮಯದಲ್ಲಿ ಡೈವರ್‌ಗಳಿಗೆ ಸ್ನಾರ್ಕ್ಲಿಂಗ್ ಮಾಡಲು ಅವಕಾಶವಿದೆ. ಸ್ನಾರ್ಕ್ಲಿಂಗ್ ಎಂದರೆ ಇದೊಂದು ನೀರಿನ ಚಟುವಟಿಕೆಯಾಗಿದೆ. ಇದರಲ್ಲಿ ಡೈವರ್‌ಗಳು ಜೀವರಕ್ಷಕ ಜಾಕೆಟ್, ಮಾಸ್ಕ್ ಹಾಗೂ ಉಸಿರುಕೊಳವೆಯೊಂದಿಗೆ ನೀರಿನ ಮೇಲ್ಭಾಗದಲ್ಲಿ ಈಜುತ್ತಾ ನೀರಿನ ಅಡಿಯಲ್ಲಿರುವ ಹವಳದ ದಿಬ್ಬಗಳು ಮತ್ತು ಜಲಚರಗಳನ್ನು, ನೀರೊಳಗಿನ ಪರಿಸರವನ್ನು ಕಣ್ತುಂಬಿಕೊಳ್ಳಬಹುದು.



ಅಶ್ವತ್ಥಾಮ ಸಿಂಡ್ರೋಮ್ ಇನ್ನೂ 'ನಾಟೌಟ್'

ವಿಕ್ರಂ ಕಾಂತಿಕೆರೆ

ಧೃತರಾಷ್ಟ್ರನ ನೂರೊಂದು ಮಕ್ಕಳ ಜನನಕ್ಕೆ ಕಾರಣ ಗಾಂಧಾರಿಯ ಗರ್ಭದಲ್ಲಿ ಜೀವ ತಳೆದ ಭ್ರೂಣ ಮತ್ತು ಜಾಡಿಯಲ್ಲಿ ಮೂಡಿದ ಶಿಶುಗಳು ಅಲ್ಲವೇ...? ಅವರೆಲ್ಲರೂ ಅಂತಃಪುರದ ದಾಸಿಯರ ನೂರೊಂದು ಉದರದಲ್ಲಿ ಜನಿಸಿದವರೇ...?

ಪಾಂಚಾಲಿಯ ವಸ್ತ್ರಾಪಹರಣ ಸಂದರ್ಭದಲ್ಲಿ ಆಕೆಯ ಮಾನ ಉಳಿಸಿದ ಅಕ್ಷಯ ವಸನವನ್ನು ಕರುಣಿಸಿದ್ದು ಕೃಷ್ಣನಲ್ಲವೇ...? ಅದು ಅಂತಃಪುರದ ವನಿತೆಯರ ಸೌಜನ್ಯವೇ...? ಕೃಷ್ಣ ಮತ್ತು ಆತನ ಯಾದವ ಕುಲ ಕ್ಷೀರಲಾಬಿಯಲ್ಲಿ ಮುಳುಗಿತ್ತೇ..?

ಮಹಾಭಾರತದ ಪ್ರಚಲಿತ ಕಥೆಯ ಮೇಲೆ ಭಿನ್ನ ಬೆಳಕು ಚೆಲ್ಲಿ ಇಂಥ ಪ್ರಶ್ನೆಗಳನ್ನು ಹುಟ್ಟುಹಾಕಿದೆ, ಈಚೆಗೆ ಪ್ರದರ್ಶನಗೊಂಡ 'ಅಶ್ವತ್ಥಾಮ ನಾಟೌಟ್' ನಾಟಕ. ಮಂಗಳೂರಿನ ಅಯನ 'ನಾಟಕದ ಮನೆ' ಪ್ರಸ್ತುತಪಡಿಸಿರುವ ಈ ನಾಟಕವು ಅಶ್ವತ್ಥಾಮನ ಉನ್ಮಾದ, ಚಿರಂಜೀವಿಯಾಗುವ ವರವೇ ಶಾಪವಾದಂತೆ ತೋರಿ ಅನುಭವಿಸುವ ಸಂಕಟ, ಸಾವಿಗಾಗಿ ಹಪಹಪಿಸುವ ವೈಚಿತ್ರ್ಯ ಇತ್ಯಾದಿಗಳನ್ನು ಸದ್ಯದ ಸಮಾಜದೊಂದಿಗೆ ಮಿಳಿತಗೊಳಿಸುವ



ಶಕುನಿ ಮತ್ತು ಅಶ್ವತ್ಥಾಮ



ಅಶ್ವತ್ಥಾಮ ನಾಟೌಟ್ ನಾಟಕದಲ್ಲಿ ಅಶ್ವತ್ಥಾಮನ ರೋಷಾವೇಶ

ಚಿತ್ರಗಳು ಅರವಿಂದ ಕುಡ್ಲ

ಪ್ರಯತ್ನದೊಂದಿಗೆ 'ಅಶ್ವತ್ಥಾಮ ಸಿಂಡ್ರೋಮ್' ಎಂಬ ಮನೋವ್ಯಾಧಿಯ ಚಿಕಿತ್ಸೆಯ ವರೆಗೂ ವಿಸ್ತರಿಸುತ್ತದೆ. ವಾದ-ಸಂವಾದ, ಪ್ರತಿವಾದ ಆರಂಭದಿಂದ ಕೊನೆಯ ವರೆಗೂ ನಾಟಕದ ಜೀವಾಳವಾಗಿ ಸಾಗುತ್ತದೆ.

ಒಂದೇ ಎಳೆಯನ್ನು ವಿಸ್ತರಿಸಿಕೊಂಡು ಸಾಗದ, ಒಟ್ಟಾರೆಯಾಗಿ ಅಸಂಗತ ನಾಟಕದಂತೆ ಕಂಡರೂ 'ಅಶ್ವತ್ಥಾಮ ನಾಟೌಟ್' ಸಾಮಾಜಿಕ ಮತ್ತು ರಾಜಕೀಯ ವಿಡಂಬನೆಯ ಸೂಕ್ಷ್ಮಗಳ ಜೊತೆಯಲ್ಲಿ ಮಹಾಭಾರತದ ಪ್ರಸಂಗಗಳ ಹೊಸ ವ್ಯಾಖ್ಯಾನದೊಂದಿಗೆ ಚಿಂತನೆಗೆ ಹಚ್ಚುತ್ತದೆ. ಮೂರು ಭಾಗಗಳಲ್ಲಿ ಸಾಗುವ ನಾಟಕದ ಕುತೂಹಲಕಾರಿ ಅಂಶವೂ ಇದುವೇ.

ಮನೋರೋಗ ಚಿಕಿತ್ಸಾಲಯಕ್ಕೆ ಬರುವ ಪಂಡಿತ, ವೇದ ಶಾಸ್ತ್ರ ಪಾರಂಗತ ಅಶ್ವತ್ಥಾಮ ತನ್ನ ಮಾತು-ದೇಹಭಾಷೆಯ ಮೂಲಕ ಪುರಾಣದ ಚಿರಂಜೀವಿ ಅಶ್ವತ್ಥಾಮನೇ ಇವನು ಎಂಬ ಸಂದೇಹ ಮೂಡುವಂತೆ ಮಾಡುತ್ತಾನೆ. ಭ್ರಮೆಯಲ್ಲಿ ಮುಳುಗಿರುವ ಆತ ಮನೋವೈದ್ಯನನ್ನು ಶ್ರೀಕೃಷ್ಣನೆಂದೂ ಸಹಾಯಕ, ಕಾವಲುಗಾರನನ್ನು ಶಕುನಿ ಎಂದೂ ಭಾವಿಸುತ್ತಾನೆ.

ಹೀಗೆ ಆರಂಭವಾಗುವ ನಾಟಕದಲ್ಲಿ ಮೊದಲು 'ಹಾರವರ ರಾಜಕೀಯ'ದಂಥ ಸಾಮಾಜಿಕ, ಜಾಗಟೆ ಬಡಿದು ವ್ಯಾಧಿ ಇಲ್ಲದಾಗಿಸುವಂಥ ಭ್ರಾಂತು ಹರಡಿ ಜಗದ್ಗುರು ಆಗುವ ಪ್ರಯತ್ನದ ರಾಜಕೀಯ, ವಾರಕ್ಕೆ 70 ತಾಸು ದುಡಿಸುವ ಕಾರ್ಪೊರೇಟ್ ರಾಜಕಾರಣದ ವಿಷಯಗಳು ಮುನ್ನೆಲೆಗೆ ಬರುತ್ತವೆ. ನಟರ ಅಭಿನಯ ಚಾತುರ್ಯ, ಬೆಳಕು, ಬಣ್ಣ ಮತ್ತು ರಂಗಪರಿಕರಗಳ ಬಳಕೆಯಲ್ಲೂ ಈ ಸೂಕ್ಷ್ಮಗಳು ಬಿಂಬಿತವಾಗಿವೆ.

ನಿಜವಾಗಿಯೂ ತಾವು ಕೃಷ್ಣ ಮತ್ತು ಶಕುನಿ ಎಂದೇ ರೋಗಿಯನ್ನು ನಂಬಿಸಿ ಆತನ ಮಾನಸಿಕ ಸಮಸ್ಯೆ ಏನೆಂದು ತಿಳಿದುಕೊಳ್ಳಲು ಪ್ರಯತ್ನಿಸುವ 'ಚಿಕಿತ್ಸಾ ವಿಧಾನ'ದ ಹೊಳಹು ವೈದ್ಯರಲ್ಲಿ ಮೂಡಿಸುವುದು ಕಾವಲುಗಾರ. ಈ ಚಿಕಿತ್ಸೆಯ ಭಾಗವಾಗಿ ನಡೆಯುವ ಸಂಭಾಷಣೆಯ ತುಂಬ ಮಹಾಭಾರತದ ತಂತ್ರ-ಕುತಂತ್ರ, ವಂಚನೆ, ಅನಾಚಾರಗಳ ವಿಷಯಗಳೇ ಮೇಳೈಸಿವೆ. ಇಲ್ಲಿ ಶಕುನಿ, ಕೃಷ್ಣ ಮತ್ತು ಅಶ್ವತ್ಥಾಮ ತಮ್ಮ ಕೃತ್ಯಗಳನ್ನು ಸಮರ್ಥಿಸಿಕೊಳ್ಳಲು ಮುಂದಿಡುವ ವಾದ ಸರಣಿ ಪ್ರೇಕ್ಷಕರನ್ನು ನಾಟಕದ ಓಘದಲ್ಲಿ ಮುಳುಗುವಂತೆ ಮಾಡುತ್ತದೆ. ಅಪ್ಪ ಮತ್ತು ತಮ್ಮನನ್ನು ಕೊಂದ ಸಿಟ್ಟನ್ನು ಶಕುನಿ ಹೊರಹಾಕಿದರೆ, 'ನಿನಗೆ ಯುದ್ಧ ಬೇಕಾಗಿತ್ತು, ನನಗಲ್ಲ' ಎಂದು ಅಶ್ವತ್ಥಾಮನಿಗೆ ಕೃಷ್ಣ ಹೇಳುತ್ತಾನೆ. ನಿಮ್ಮಿಬ್ಬರ ಹುನ್ನಾರದಿಂದ ನಾವು ಮಹಾಯೋಧರನ್ನೇ ಕಳೆದುಕೊಂಡೆವಲ್ಲ ಎಂದು ಅಶ್ವತ್ಥಾಮ ಪರಿತಪಿಸುತ್ತಾನೆ. ದ್ರುಪದನ ಸಂತತಿ ನಾಶ ಮಾಡಿದ್ದನ್ನು ಮತ್ತು ಉಪಪಾಂಡವರನ್ನು ಕೊಂದದ್ದನ್ನು ಒಪ್ಪಿಕೊಳ್ಳುತ್ತಾನೆ. ವಿಧವೆಯೆಂಬ ಕಾರಣದಿಂದ ಗಾಂಧಾರಿಯನ್ನು ಮುಟ್ಟದೆ, ದಾಸಿಯರನ್ನೆಲ್ಲ ಗಾಂಧಾರಿ ಎಂದೇ ಭಾವಿಸಿದ ಕುರುಡ ಧೃತರಾಷ್ಟ್ರನ ಪ್ರಸಂಗ ಈ ವಾದದ ಪ್ರಮುಖ ಅಂಶ.


ವಿಚಾರಣೆಯಲ್ಲಿ ಹಾಸ್ಯದ ರಂಗು

ನಾಟಕದ ಕೊನೆಯ ಘಟ್ಟ, ಅಶ್ವತ್ಥಾಮನ ವಿಚಾರಣೆ. ಹಾಸ್ಯದ ಹೊನಲು ತುಂಬಿರುವ ಇಲ್ಲಿ ಒಂದು ಹಂತದಲ್ಲಿ ಕ್ಷೋಭೆಗೊಳ್ಳುವ ಅಶ್ವತ್ಥಾಮ ತಪ್ಪೊಪ್ಪಿಕೊಳ್ಳುತ್ತಾನೆ. ಆದರೆ ತನ್ನನ್ನು ಕೆಲವರು ಲಾಭಕ್ಕಾಗಿ ಬಳಸಿಕೊಂಡರು ಎಂದು ಹೇಳಿ ಆಕ್ರೋಶ ಹೊರಹಾಕುತ್ತಾನೆ. ಪ್ರಭುತ್ವದ ವಿರುದ್ಧ ಧ್ವನಿ ಎತ್ತುವವರು ಕಡಿಮೆ ಎಂಬ ಬೇಸರವೂ ಆತನನ್ನು ಕಾಡುತ್ತದೆ. ತನ್ನನ್ನು ಶಾಪಗ್ರಸ್ಥನನ್ನಾಗಿಸಿದ ಸಮಾಜಕ್ಕೆ ಮರುಶಾಪ ಕೊಡಲು ಮುಂದಾಗುತ್ತಾನೆ.

ಮೂವರೇ ನಟರು (ಚಂದ್ರಹಾಸ್ ಉಳ್ಳಾಲ್, ಪ್ರಭಾಕರ್ ಕಾಪಿಕಾಡ್ ಮತ್ತು ದಿನೇಶ್ ನಾಯಕ್), ಸರಳ ರಂಗಪರಿಕರಗಳು, ಮಿತ ಸಂಗೀತ ನಾಟಕವನ್ನು ಹಿತಗೊಳಿಸಲು ನೆರವಾಗಿದೆ. ತರ್ಕವನ್ನೇ ಒಳಗೊಂಡ ಮತ್ತು ವಾಚಿಕಾಭಿನಯ ಪ್ರಧಾನವಾಗಿರುವ ಯಕ್ಷಗಾನದ ಛಾಯೆಯೂ ಇರುವ 'ಅಶ್ವತ್ಥಾಮ ನಾಟೌಟ್' ನಾಟಕದ ತಂತ್ರವಿನ್ಯಾಸ ಕರಾವಳಿಯನ್ನು ದಾಟಿ ರಾಜಧಾನಿ ಮತ್ತು ಮಲೆನಾಡಿನತ್ತ ಪಯಣಿಸಲು ಈಗ ಸಜ್ಜಾಗಿದೆ.

'ವಾಸ್ತವದಲ್ಲಿ ಇದೊಂದು ರಂಗಪಠ್ಯ. ನಾಟಕವಾಗಿ ಪರಿವರ್ತಿಸಿರುವ ಇದರಲ್ಲಿ ಇನ್ನಷ್ಟು ಪ್ರಯೋಗಗಳು ಮಾಡುವುದು ಉಳಿದಿದೆ. ಮಹಾಭಾರತವನ್ನು ಇದಮಿತ್ಥಂ ಎಂದು ಹೇಳುವಂತಿಲ್ಲ. ಅದರ ಕಥಾನಕವನ್ನು ವಿಸ್ತರಿಸಲು ಸಾಧ್ಯತೆಗಳು ಸಾಕಷ್ಟು ಇವೆ ಎಂಬುದನ್ನು ನಾಟಕದಲ್ಲಿ ಬಿಂಬಿಸಲಾಗಿದೆ' ಎನ್ನುತ್ತಾರೆ ನಾಟಕ ರಚನೆಕಾರ ಮತ್ತು ನಿರ್ದೇಶಕ ಮೋಹನಚಂದ್ರ..

ಉದಯಗಿರಿ, ಖಂಡಗಿರಿ ಗುಹೆಗಳ ಹೊಕ್ಕಾಗ...



ಉದಯಗಿರಿ ಬೆಟ್ಟದ ಮೇಲಿರುವ ಗುಹೆಯ ಹೊರನೋಟ

ಗೀತಾ ಕುಂದಾಪುರ

ಒಡಿಶಾದ ರಾಜಧಾನಿ ಭುವನೇಶ್ವರದ ವಿಮಾನ ನಿಲ್ದಾಣದಿಂದ ಆರೇಳು ಕಿಲೋಮೀಟರ್ ದೂರದಲ್ಲಿ ಉದಯಗಿರಿ ಮತ್ತು ಖಂಡಗಿರಿ ಬೆಟ್ಟಗಳಿವೆ. ಅವುಗಳ ಮೇಲೆ ಅದೇ ಹೆಸರಿನ ಗುಹೆಗಳಿವೆ. ಈ ಎರಡೂ ಬೆಟ್ಟಗಳು ಕುಮಾರಿ ಪರ್ವತಶ್ರೇಣಿಯ ಭಾಗ. ಎರಡು ಸಾವಿರ ವರ್ಷಗಳು ಸಂದರೂ ಜೈನ ಭಕ್ತರನ್ನು, ಸಾವಿರಾರು ಪ್ರವಾಸಿಗರನ್ನೂ ತನ್ನೆಡೆಗೆ ಸೆಳೆಯುತ್ತಿವೆ. ಈಗೀನ ಒಡಿಶಾ ರಾಜ್ಯ ಹಿಂದೆ ಕಳಿಂಗ ರಾಜ್ಯ ಎಂದೂ ಕರೆಯಲ್ಪಡುತ್ತಿತ್ತು. ಮೌರ್ಯ ಸಾಮ್ರಾಟ್ ಅಶೋಕನೊಡನೆ ಮಾಡಿದ ಕಳಿಂಗ ಯುದ್ಧ ಇತಿಹಾಸ ಪ್ರಸಿದ್ಧ.

ಇದರಲ್ಲಿರುವ ಹೆಚ್ಚಿನ ಗುಹೆಗಳು ಮಾನವ ನಿರ್ಮಿತ. ಕೆಲವು ನೈಸರ್ಗಿಕ. ಅಜಂತಾ, ಎಲ್ಲೋರಾಗೆ ಹೋಲಿಸಿದರೆ ಇಲ್ಲಿ ರೋಮಾಂಚನಗೊಳ್ಳುವಂತಹ ಆಕರ್ಷಕ ಕೆತ್ತನೆಗಳಾಗಲಿ, ಮೂರ್ತಿಗಳಾಗಲಿ ಇಲ್ಲ. ವಾಸಿಸಲು ಮತ್ತು ಧ್ಯಾನಿಸಲು ಅನುಕೂಲವಿರುವಂತಹ ಗುಹೆಗಳು. ಕ್ರಿಸ್ತಪೂರ್ವ ಮೊದಲು ಮತ್ತು ಎರಡನೆ ಶತಮಾನದ ಕಾಲಘಟ್ಟದಲ್ಲಿ ನಿರ್ಮಿಸಿದ ಗುಹೆಗಳನ್ನು ಮಹಾಮೇಘವಾಹನ ರಾಜವಂಶದ ರಾಜ ಕರವೇಲನ ನೇತೃತ್ವದಲ್ಲಿ ನಿರ್ಮಿಸಲಾಯಿತು. ಎಲ್ಲವನ್ನು ತ್ಯಾಗ ಮಾಡಿ ಸದಾ ತಿರುಗಾಟದಲ್ಲಿರುವ ಜೈನ ಮುನಿಗಳಿಗೆ ಆಸರೆ ಕೊಡಲು ಇದನ್ನು ನಿರ್ಮಿಸಿದರು.

ಗುಹೆಗಳು ನೆಲದಿಂದ ಸುಮಾರು 150 ಅಡಿ ಎತ್ತರದಲ್ಲಿವೆ. ಮೊದಲಿಗೆ 117 ಗುಹೆಗಳು ನಿರ್ಮಾಣವಾದರೂ 33 ಗುಹೆಗಳನ್ನು ಮಾತ್ರ ಈಗ ನೋಡಬಹುದು. ಉದಯಗಿರಿಯಲ್ಲಿ 18, ಖಂಡಗಿರಿಯಲ್ಲಿ 15 ಗುಹೆಗಳಿವೆ. ಗುಹೆಗಳು ಒಂದು ಕಾಲದಲ್ಲಿ ಕಳಿಂಗ ರಾಜ್ಯವಾಳಿದ, ಶಕ್ತಿಯುತ ಶ್ರೀಮಂತ ಪ್ರಸಿದ್ಧ ಗುಪ್ತ, ಮಹಾಮೇಘವಾಹನ, ಮೌರ್ಯ, ರಾಜವಂಶದವರ ಏಳುಬೀಳನ್ನು ಕಂಡಿವೆ. ಇವು ಕೇವಲ ಕಲ್ಲುಗಳ ರಾಶಿಯಲ್ಲ, ಇವು ಆ ಕಾಲದ ಇತಿಹಾಸ, ಸಂಸ್ಕೃತಿ, ಕಲೆ, ಧರ್ಮದ ಬಗ್ಗೆ ಹೆಚ್ಚಿನ ಮಾಹಿತಿ ಕೊಡುತ್ತವೆ.

ಜೈನ ಮುನಿಗಳಿಗಾಗಿ ನಿರ್ಮಿಸಿದ ಗುಹೆಯ ಮುಚ್ಚಿಗೆ ಬಹಳ ಕೆಳಮಟ್ಟದಲ್ಲಿದ್ದು ಮನುಷ್ಯ ತಗ್ಗಿ, ಬಗ್ಗಿ ನಡೆಯಬೇಕು ಎನ್ನುವಂತಿದೆ. ಪ್ರತಿ ಗುಹೆಯಲ್ಲಿ ಕುಡಿಯುವ ನೀರು ಬರುವ ವ್ಯವಸ್ಥೆಯಿದೆ. ಮುನಿಗಳ ಮಧ್ಯೆ ಸಂವಹನಕ್ಕಾಗಿ ತೂತುಗಳು, ದೀಪವಿಡಲು ಕಿಂಡಿಗಳಿವೆ. ಕೆಲವೊಂದು ಗುಹೆಗಳಲ್ಲಿ ಎರಡು ಅಂತಸ್ತಿದ್ದು, ಮೇಲಿನಂತಸ್ತು ಮುನಿಗಳಿಗೆ ಧ್ಯಾನ ಮಾಡಲು ಇರಬಹುದು. ಹೆಚ್ಚಿನ ಗುಹೆಗಳು 4-6 ಜನರು ಕುಳಿತುಕೊಳ್ಳಬಹುದಾದಷ್ಟು ದೊಡ್ಡದಿದ್ದರೆ, ಕೆಲವೊಂದು 10-12 ಜನರು ಕುಳಿತುಕೊಳ್ಳಬಹುದಾದಷ್ಟು ದೊಡ್ಡದಿವೆ. ಜೈನರ 24ನೇ ತೀರ್ಥಂಕರ ಮಹಾವೀರ ಈ ಕುಮಾರಿ ಪರ್ವತ ಶ್ರೇಣಿಗೆ ಬಂದು ಬೋಧಿಸಿದನೆಂದು ಹೇಳಲಾಗಿದ್ದರಿಂದ ಜೈನರಿಗಿದು ಪವಿತ್ರ ಯಾತ್ರಾಸ್ಥಳ.

ಕ್ರಿಸ್ತಪೂರ್ವ ಕಾಲಘಟ್ಟದಲ್ಲಿ ನಿರ್ಮಿಸಿದರೂ ಕಾಲಚಕ್ರ ತಿರುಗಿದಂತೆ ನಿಧಾನವಾಗಿ ನೇಪಥ್ಯಕ್ಕೆ ಸರಿದು, ಜನಮನದಿಂದ ದೂರವಾಯಿತು. ಮತ್ತೆ 19ನೇ ಶತಮಾನದಲ್ಲಿ ಬ್ರಿಟಿಷ್ ಆಫೀಸರ್ ಆಂಡ್ರ್ಯೂ ಸ್ಟರ್ಲಿಂಗ್ ಕಣ್ಣಿಗೆ ಬಿದ್ದು ಜನಪ್ರಿಯವಾಯಿತು. ಈಗ ಭುವನೇಶ್ವರಕ್ಕೆ ಪ್ರವಾಸ ಬಂದವರು ಅಗತ್ಯವಾಗಿ ನೋಡುವ ಸ್ಥಳವಾಗಿದೆ.

ಉದಯಗಿರಿ ಗುಹೆಗಳು

ಇಲ್ಲಿರುವ 18 ಗುಹೆಗಳಲ್ಲಿ ಅತ್ಯಂತ ದೊಡ್ಡದು ಹಾಗೂ ಮುಖ್ಯವಾದದ್ದು ರಾಣಿ ಗುಂಪ (ರಾಣಿ ಗುಹೆ). ಇದು ಎರಡಂತಸ್ತಿನಲ್ಲಿದ್ದು ಮೂರು ವಿಭಾಗದಲ್ಲಿದೆ. ಮಧ್ಯದ ವಿಭಾಗವು ದೊಡ್ಡದಾಗಿದ್ದು ಕೆಳಅಂತಸ್ತಿನಲ್ಲಿ 7 ಪ್ರವೇಶದ್ವಾರ ಮತ್ತು ಮೇಲಿನಂತಸ್ತಿನಲ್ಲಿ 9 ಕಂಬಗಳಿವೆ. ಗೋಡೆಗಳ ಮೇಲೆ, ಬಾಗಿಲಿನ ತೊಲೆಯ ಮೇಲೆ ವಾದ್ಯ ನುಡಿಸುತ್ತಿರುವ ಮಹಿಳೆ, ಮಾನವ ಗೋಪುರ, ಮರಗಿಡಗಳು, ಪ್ರಾಣಿಗಳ ಕೆತ್ತನೆಯಿದೆ. ಇದು ಸಾಕಷ್ಟು ಎತ್ತರವೂ ಇದೆ. ಗಣೇಶ ಗುಂಪ, ಇದು ಇಲ್ಲಿರುವ ಮತ್ತೊಂದು ಆಕರ್ಷಕ ಗುಹೆ. ಗುಹೆಯ ಹಿಂಭಾಗದ ಗೋಡೆಯ ಮೇಲೆ ಗಣೇಶನ ಕೆತ್ತನೆಯಿದೆ. ಹಾರವನ್ನು ಸೊಂಡಿಲಲ್ಲಿ ಹಿಡಿದಿರುವ ಆನೆ ಮತ್ತು ದ್ವಾರಪಾಲಕನ ಮೂರ್ತಿಗಳಿವೆ.


ಇಲ್ಲಿರುವ ಗುಹೆಗಳು ಅಡ್ಡಡ್ಡಕ್ಕೆ ಹರಡಿಕೊಂಡಿದ್ದು ಹೆಚ್ಚಿನವು ಒಂದಕ್ಕೊಂದು ಜೋಡಿಸಿಕೊಂಡಿವೆ. ಪ್ರತಿಯೊಂದು ಗುಹೆಗೂ ಸಂಖ್ಯೆ ಮತ್ತು ಹೆಸರಿದೆ, ಛೋಟಾ ಹಾತಿ ಗುಂಪ, ಹಾತಿ ಗುಂಪ, ಅಲಕಪುರಿ ಗುಂಪ, ಜಯ, ವಿಜಯ ಗುಂಪ, ಟಕುರಾನಿ ಗುಂಪ, ಏಕಾದಶಿ ಗುಂಪ, ಸರ್ಪ ಗುಂಪ ಮುಂತಾದವು. ಸ್ಥಳೀಯ ಭಾಷೆಯಲ್ಲಿರುವ ಈ ಹೆಸರುಗಳನ್ನು ಇತ್ತೀಚೆಗೆ ಕೊಟ್ಟಿರಬಹುದೇನೋ. ಇಲ್ಲಿ ಗುಂಪ ಎಂದರೆ ಗುಹೆ ಎಂದರ್ಥ. ಕೆಲವೊಂದು ಗುಹೆಯ ಹೊರಗೆ ಹೆಸರನ್ನು ಸೂಚಿಸುವ ಫಲಕಗಳನ್ನೂ ಕಾಣಬಹುದು. ಗುಹೆಗಳು ಒಂದೇ ಆಕಾರದಲ್ಲಿಲ್ಲ. ಇಲ್ಲಿರುವ ಕೆತ್ತನೆಗಳೂ, ಮೂರ್ತಿಗಳೂ ಬೇರೆ, ಬೇರೆ ರೀತಿಯಲ್ಲಿವೆ. ಗುಹೆಯೊಂದರ ಮುಂಭಾಗದಲ್ಲಿಆರು ಚಿಕ್ಕ ಆನೆಗಳ ಮೂರ್ತಿ ಮತ್ತು ಕಾವಲುಗಾರನ ಮೂರ್ತಿಯಿದೆ. ಮತ್ತೊಂದು ಗುಹೆಯ ಮುಂಭಾಗದಲ್ಲಿ ತನ್ನ ಆಹಾರವನ್ನು ಬಾಯಲ್ಲಿ ಕಚ್ಚಿಕೊಂಡಿರುವ ಸಿಂಹದ ಮೂರ್ತಿಯಿದೆ.

ಅಗಲವಾದ ರಾಂಪ್ ಮತ್ತು ಮೆಟ್ಟಿಲುಗಳಿದ್ದು ಗುಹೆಯನ್ನು ಸುಲಭದಲ್ಲಿ ತಲುಪಬಹುದು. ಬೆಟ್ಟದ ತುದಿ ತಲುಪಿದಾಗ ಸುತ್ತಮುತ್ತಲಿರುವ ಹಳ್ಳಿಗಳು, ಮರ-ಗಿಡಗಳಿರುವ ಸುಂದರ ದೃಶ್ಯ ನಮ್ಮದಾಗುತ್ತದೆ. ಉದಯಗಿರಿ ಗುಹೆಗಳು ಹೆಚ್ಚು ಸುಂದರ, ಸ್ವಚ್ಛ ಮತ್ತು ಮನಸೆಳೆಯುತ್ತದೆ.

ಖಂಡಗಿರಿ ಗುಹೆಗಳು

ಖಂಡಗಿರಿಯಲ್ಲಿವೆ 15 ಗುಹೆಗಳು, ತೋತ್ವ ಗುಂಪ, ಅನಂತ ಗುಂಪ, ಖಂಡಗಿರಿ ಗುಂಪ, ನವಮುನಿ ಗುಂಪ, ಬಾರಾಭುಜಿ ಗುಂಪ, ತ್ರುಶುಲಾ ಗುಂಪ, ಅಂಬಿಕಾ ಗುಂಪ ಮುಂತಾದವು. ಎಲ್ಲವೂ ಸ್ಥಳೀಯ ಭಾಷೆಯಲ್ಲಿರುವ ಹೆಸರುಗಳು.

ಬೆಟ್ಟವೇರುತ್ತಿದ್ದಂತೆ ಮೊದಲಿಗೆ ಸಿಗುವ ಗುಹೆಯೇ ತೋತ್ವ ಗುಂಪ. ಎದುರಿನಲ್ಲಿರುವ ಕಮಾನಿನಲ್ಲಿ ಎರಡು ಗಿಳಿಗಳ ಕೆತ್ತನೆಯಿದೆ. ಗುಹೆಯ ಎರಡೂ ಕಡೆ ದ್ವಾರಪಾಲಕರು, ಸಿಂಹ ಮತ್ತು ಎತ್ತಿನ ಚಿತ್ರಣವಿದೆ. ಇಲ್ಲಿನ ಕೆಲವೊಂದು ಗುಹೆಯ ಗೋಡೆಗಳಲ್ಲಿ ಜೈನ ತೀರ್ಥಂಕರರ ಮೂರ್ತಿಗಳಿವೆ. ಮತ್ತೊಂದು ಗುಹೆಯ ಹೊರಗಡೆ ಎರಡು ಹಾವುಗಳು, ಆಟಗಾರ, ಹೆಂಗಸಿನ ಕೆತ್ತನೆಗಳಿವೆ.



ಉದಯಗಿರಿ ಗುಹೆ

ಖಂಡಗಿರಿ ಬೆಟ್ಟದ ಮೇಲೆ ಜೈನ ಮಂದಿರವೂ ಇದೆ. ನಾವು ಇಲ್ಲಿಗೆ ಭೇಟಿ ಕೊಟ್ಟಾಗ ಉತ್ಸವ ನಡೆಯುತ್ತಿದ್ದು ಹೆಚ್ಚಿನ ಗುಹೆಗಳಲ್ಲಿ ತಾಂತ್ರಿಕರು ಕುಳಿತಿದ್ದರು. ಅಲ್ಲಲ್ಲಿ ಬಳೆ, ಸರ ಮಾರಾಟ ಮಾಡುವವರಿದ್ದರು. ಹಾಗೆಯೇ ಹೋಮ, ಹವನಗಳೂ ಅಲ್ಲಲ್ಲಿ ನಡೆಯುತ್ತಿದ್ದವು. ಹಾಗಾಗಿ ಖಂಡಗಿರಿ ಬೆಟ್ಟದ ಎಲ್ಲಾ ಗುಹೆಗಳನ್ನು ಸಮೀಪದಿಂದ ನೋಡಲಾಗಲಿಲ್ಲ. ಇಲ್ಲಿ ಮೇಲೆ ಹತ್ತಿ ಹೋಗಲು ಸರಿಯಾದ ಮೆಟ್ಟಿಲುಗಳೂ ಇಲ್ಲ.

ಕೆಲವೊಂದು ಗುಹೆಯ ಮೇಲೆ ಶಾಸನಗಳು ಮತ್ತು ಬರಹಗಳು ಕಂಡು ಬಂದವು. ಬರಹಗಳೆಲ್ಲವೂ ರಾಜ ಕರವೇಲನ ಕಾಲದ್ದು ಹಾಗೂ ಅವನಿಗೆ ಸಂಬಂಧಿಸಿದ್ದೇ. ಇಲ್ಲಿನ ಬರಹವೊಂದು ರಾಜ ಕರವೇಲ ಮತ್ತು ಅವನ ಎರಡನೆಯ ಹೆಂಡತಿಯ ಮೇಲಿರುವ ಪ್ರೀತಿಯ ಬಗ್ಗೆ ಇದೆಯಂತೆ. ಮತ್ತೊಂದು ಅಲೆಕ್ಸಾಂಡರ್ ದಿ ಗ್ರೇಟ್‌ನೊಂದಿಗಿರುವ ಸಂಭಾಷಣೆಯಂತೆ. ಇಂತಹ ಬರವಣಿಗೆಗಳು, ಶಾಸನಗಳು ಇತಿಹಾಸಕ್ಕೆ ಸಾಕ್ಷಿಯಾಗುತ್ತವೆ. ಇಲ್ಲಿ ಬರೆದು ದಾಖಲಾಗಿರುವ ಘಟನೆಗಳು ಕಾಲಾನುಕ್ರಮವಾಗಿವೆ. ಹಾಗೆಯೇ ಒಡಿಶಾದಲ್ಲಿ ನಡೆದಿರುವ ಅಶೋಕ ಮತ್ತು ಕಳಿಂಗ ಯುದ್ಧದ ದಾಖಲೆಯೂ ಇದೇ ಗುಹೆಯಲ್ಲಿ ಸಿಗುತ್ತದೆ. ಅವು ಬ್ರಾಹ್ಮಿಲಿಪಿಯಲ್ಲಿವೆ.

ಇಲ್ಲಿಗೆ ಭೇಟಿ ಕೊಡಲು ಬೆಳಿಗ್ಗೆ ಸೂಕ್ತ ಸಮಯ. ಮಧ್ಯಾಹ್ನದ ಹೊತ್ತು ತಲೆ ಸುಡುವ ಬಿಸಿಲು ಮತ್ತು ಕಾದಿರುವ ಬಂಡೆಗಳು ಹೆಚ್ಚು ಹೊತ್ತು ಅಲ್ಲಿರಲು ಬಿಡಲಾರವು. ಪ್ರವೇಶ ಸಮಯ ಬೆಳಿಗ್ಗೆ 8 ರಿಂದ ಸಂಜೆ 5 ಗಂಟೆವರೆಗೆ. ಉದಯಗಿರಿ, ಖಂಡಗಿರಿಯ ಪ್ರವಾಸ ಕೇವಲ ಮೋಜಿನದ್ದಲ್ಲ, ಇದು ಧಾರ್ಮಿಕ ಮತ್ತು ಅಧ್ಯಯನ ಪ್ರವಾಸವೂ ಹೌದು. ಎಲ್ಲವನ್ನು ತಿಳಿದುಕೊಳ್ಳಲು ಮನಸ್ಸನ್ನು ತೆರೆದಿಡಬೇಕಷ್ಟೇ.

ಅರಣ್ಯ ಸಂರಕ್ಷಣೆ ನಾಸ್ತಿ ನಿರ್ವಹಣೆ ಜಾಸ್ತಿ

8ನೇ ಪುಟದಿಂದ...

ವನ್ಯಜೀವಿ ಸಂರಕ್ಷಣಾ ಕಾಯ್ದೆಯಲ್ಲಿ ಸಂರಕ್ಷಣೆಯಾದ ಯಾವುದೇ ಪ್ರಾಣಿಯನ್ನು ಕೊಲ್ಲುವುದು ಶಿಕ್ಷಾರ್ಹ ಅಪರಾಧ. ಆದ್ದರಿಂದ, ನೇರವಾಗಿ ಯಾರೂ ದೊಡ್ಡ ದೇಹಿಗಳನ್ನು ಕೊಲ್ಲುವ ಅತಿರೇಕದ ಕೆಲಸ ಮಾಡುವುದಿಲ್ಲ. ಕುಪಿತಗೊಂಡ ಕೃಷಿಕ ಇದಕ್ಕೊಂದು ಉಪಾಯ ಹುಡುಕಿಕೊಂಡಿದ್ದಾನೆ. ನಾಡಬಂದೂಕನ್ನು ಬಳಸಿ, ಚಿಕ್ಕ ಚರೆಗಳಿಂದ ಅವುಗಳಿಗೆ ಗಾಯ ಮಾಡುವುದು. ಈ ಪ್ರಕ್ರಿಯೆಯಲ್ಲಿ ಚಿಕ್ಕ ಚಿಕ್ಕ ಚರೆಗಳು ಆನೆ-ಕಾಟಿಗಳ ದೇಹವನ್ನು ಸೇರುತ್ತವೆ. ಕಲ್ಪನೆ ಮಾಡಿ, ನಮಗೆ ಚಿಕ್ಕದೊಂದು ಮುಳ್ಳು ಚುಚ್ಚಿದರೂ ಯಾತನೆಯಾಗುತ್ತದೆ. ಅಂಥದರಲ್ಲಿ ಹತ್ತಾರು ಸುಡುವ ಚರೆಗಳು ಪ್ರಾಣಿಗಳ ಮೈ ಸೇರಿದರೆ ಅವುಗಳಿಗೆ ಎಷ್ಟು ಯಾತನೆಯಾಗಬಹುದು. ಮೈ ತುಂಬಾ ಗಾಯಗಳಾಗುತ್ತವೆ. ಸೋಂಕಾದ ಗಾಯ ಮಾಯುವುದಿಲ್ಲ. ಯಮ ಯಾತನೆಯನ್ನು ಅನುಭವಿಸುವ ದೊಡ್ಡ ದೇಹಿಗಳು, ನಿಧಾನಕ್ಕೆ ಸಾವಿನ ದವಡೆಗೆ ಜಾರುತ್ತವೆ. ಬೆಳೆ ರಕ್ಷಣೆಗಾಗಿ ಎಂದು ಪರವಾನಿಗೆ ಪಡೆದ ಬಂದೂಕಿನಿಂದ ಈ ತರಹದ ಘಟನೆಗಳು ನಿರಂತರವಾಗಿ ನಡೆಯುತ್ತಿವೆ. ಇದರಿಂದ ದೊಡ್ಡ ದೇಹಿಗಳು ಮಾನವನೆಡೆಗೆ ತಮ್ಮ ಅಸಹನೆ ಬೆಳೆಸಿಕೊಳ್ಳುತ್ತವೆ. ಇದೇ ಘಟನೆ ಪುನರಾವರ್ತನೆಯಾಗುತ್ತಲೇ ಇರುತ್ತದೆ. ಈ ಹಂತದಲ್ಲಿ ದಾರಿಯಲ್ಲಿ ಅಡ್ಡ ಬಂದ ಮನುಷ್ಯನನ್ನು ತನ್ನ ಶತ್ರುವೆಂದೇ ಅವು ಪರಿಗಣಿಸುತ್ತವೆ. ಇದರಲ್ಲಿ ಅಮಾಯಕ ಮನುಷ್ಯರು ಬಲಿಯಾಗುತ್ತಾರೆ. ಪ್ರಾಣಿಗಳ ಈ ವರ್ತನೆಗೆ ಮನುಷ್ಯನ ವಿಪರೀತವೇ ಕಾರಣವಾದರೂ, ಮನುಷ್ಯನೆಡೆಗೆ ಅಸಹನೆ ಹೊಂದಿದ ಆನೆಗಳಿಗೆ 'ಪುಂಡಾನೆ' ಎಂಬ ಪಟ್ಟವನ್ನು ಕಟ್ಟಿ, ಅವುಗಳನ್ನು ಸ್ಥಳಾಂತರಿಸುವ ಯೋಜನೆ ರೂಪಿಸುತ್ತಾರೆ ಎಂದರೆ ವಿಪರ್ಯಾಸವಲ್ಲದೇ ಮತ್ತೇನು?

ಭಟ್ಟಿ ಇಳಿಸಲು ತುದಿಗಾಲು..

ಈಗ, ಚಿಕ್ಕಮಗಳೂರಿನಲ್ಲಿ ಮನುಷ್ಯ ಮತ್ತು ಕಾಟಿಗಳ ಸಂಘರ್ಷವಾಗುತ್ತಿದೆ. ಕಾಟಿಗಳನ್ನು ಹಿಡಿದು ಬೇರೆಡೆಗೆ ಸ್ಥಳಾಂತರಿಸುವ ಹೊಸ ಯೋಜನೆ ರೂಪಿಸಲು ಅರಣ್ಯ ಭವನ ತುದಿಗಾಲಲ್ಲಿ ನಿಂತಿದೆ. ಮಧ್ಯಪ್ರದೇಶದ ಭಾಂದವಖಂಡ ಹುಲಿ ಸಂರಕ್ಷಿತ ಅಭಯಾರಣ್ಯದಲ್ಲಿ ಸ್ಥಾನಿಕವಾಗಿ ಕಾಟಿಗಳು 1998 ರಲ್ಲಿ ಅಳಿದು ಹೋಗಿದ್ದವು. 250 ಕಿ.ಮೀ ದೂರದಲ್ಲಿರುವ ಕನಾ ಹುಲಿ ಸಂರಕ್ಷಿತ ಅಭಯಾರಣ್ಯದಲ್ಲಿ ಕಾಟಿಗಳ ಸಂಖ್ಯೆ ಚೆನ್ನಾಗಿಯೇ ಇತ್ತು. ಮಧ್ಯಪ್ರದೇಶ ಸರ್ಕಾರವು 2011 ರಿಂದ ಕನಾ ಹುಲಿ ಸಂರಕ್ಷಿತ ಅಭಯಾರಣ್ಯದ ಕಾಟಿಗಳನ್ನು ಹಂತ ಹಂತವಾಗಿ ಭಾಂದವಖಂಡ ಹುಲಿ ಸಂರಕ್ಷಿತ ಅಭಯಾರಣ್ಯ ಪ್ರದೇಶದಲ್ಲಿ ಮರು ಪರಿಚಯಿಸಿತು. ಇಲ್ಲೀಗ ಕಾಟಿಗಳ ಸಂಖ್ಯೆ 170ಕ್ಕೆ ಬಂದು ಮುಟ್ಟಿದೆ. ಇದೊಂದು ಯಶಸ್ವಿ ಪ್ರಯತ್ನವಾಗಿದೆ. ಇದೇ ಮಾದರಿಯನ್ನು ಕರ್ನಾಟಕ ಅರಣ್ಯ ಇಲಾಖೆ ಭಟ್ಟಿ ಇಳಿಸಲು ಹೊರಟಿದೆ.

ಚಿಕ್ಕಮಗಳೂರು ಭಾಗದಲ್ಲಿ ಸಾವಿರಾರು ವರ್ಷಗಳಿಂದ ಜೀವಿಸುತ್ತಿರುವ ಕಾಟಿಗಳನ್ನು ಹಿಡಿದು ಸ್ಥಳಾಂತರಿಸುವ ಯೋಜನೆ ನಿಧಾನಕ್ಕೆ ಮುನ್ನೆಲೆಗೆ ಬರುತ್ತಿದೆ. ಚಿಕ್ಕಮಗಳೂರಿನ ಸಮಸ್ಯಾತ್ಮಕ ಕಾಟಿಗಳನ್ನು ಸೆರೆ ಹಿಡಿದು ಮತ್ತೆ ಭದ್ರಾ ಅಭಯಾರಣ್ಯ ಭಾಗದಲ್ಲಿ ಬಿಡುವ ಯೋಜನೆಗೆ ಒಂದು ತಾರ್ಕಿಕ ತಳಪಾಯವೇ ಇಲ್ಲ. ಸಕಲೇಶಪುರ, ಹಾಸನ ಮುಂತಾದ ಕಡೆಗಳಲ್ಲಿ ಕಾಡಾನೆಗಳನ್ನು ಹಿಡಿದು ಸ್ಥಳಾಂತರಿಸುವ ಕೆಲಸವನ್ನು ಕಳೆದ ವರ್ಷ ಹಮ್ಮಿಕೊಳ್ಳಲಾಗಿತ್ತು. ಸೆರೆ ಸಮಯದಲ್ಲಿ ಅರಿವಳಿಕೆ ಪ್ರಮಾಣ ಹೆಚ್ಚಾಗಿದ್ದರಿಂದ ಹಲವು ಆನೆಗಳು ಸತ್ತು ಹೋಗಿದ್ದವು. ಗುಜರಾತಿನ ಗೀರ್ ರಾಷ್ಟ್ರೀಯ ಉದ್ಯಾನವನದಲ್ಲಿ ಅತಿ ಹೆಚ್ಚು ಸಾಂದ್ರತೆ ಹಾಗೂ ಒತ್ತಡದಲ್ಲಿ ಬದುಕುತ್ತಿರುವ ಏಷ್ಯಾಟಿಕ್ ಸಿಂಹಗಳ ಕೆಲವು ಗುಂಪುಗಳನ್ನು ಕುನೋ ಉದ್ಯಾನವನಕ್ಕೆ ಸ್ಥಳಾಂತರ ಮಾಡಬೇಕು ಎಂಬ ಪ್ರಸ್ತಾಪ ಹಿಂದೆ ಇತ್ತು. ಯಾವುದಾದರೂ ಸಾಂಕ್ರಮಿಕ ರೋಗ ಉಲ್ಬಣಗೊಂಡಲ್ಲಿ, ದೇಶದ ಮತ್ತು ಗುಜರಾತಿನ ಹೆಮ್ಮೆಯ ಸಿಂಹಗಳ ಇಡೀ ಸಂಕುಲವೇ ವಿನಾಶವಾಗಬಹುದು ಎಂಬುದು ಅತಿದೊಡ್ಡ ಕಾರಣವಾಗಿತ್ತು. ಸಿಂಹಗಳ ಸ್ಥಳಾಂತರ ಯೋಜನೆಯ ಭಾಗವಾಗಿ ಕುನೋದ 24 ಹಳ್ಳಿಗಳನ್ನು ಸ್ಥಳಾಂತರ ಮಾಡಲಾಗಿತ್ತು. ಪೂರಕವಾಗಿ 2013ರಲ್ಲಿ ಸರ್ವೋಚ್ಚ ನ್ಯಾಯಾಲಯವು 2018ರ ಹೊತ್ತಿಗೆ ಏಷ್ಯಾಟಿಕ್ ಸಿಂಹಗಳನ್ನು ಕುನೋ ರಾಷ್ಟ್ರೀಯ ಉದ್ಯಾನವನಕ್ಕೆ ಸಾಗಿಸಿ ವರದಿ ಸಲ್ಲಿಸುವುದಕ್ಕೆ ಐದು ವರ್ಷಗಳ ಗಡುವು ನಿಗದಿ ಮಾಡಿದ್ದನ್ನು ಹಾಗೂ ನ್ಯಾಯಾಲಯದ ಆದೇಶವನ್ನು ಕೇಂದ್ರ ಸರ್ಕಾರ ಉಲ್ಲಂಘಿಸಿದ್ದನ್ನು ಇಲ್ಲಿ ನೆನಪಿಸಿಕೊಳ್ಳಬಹುದು. ವನ್ಯಜೀವಿಗಳ ಹಾಗೂ ಅವುಗಳ ಆವಾಸಸ್ಥಾನಗಳನ್ನು ಕಾಪಿಡುವಲ್ಲಿ ಮತ್ತು ಒಟ್ಟಾರೆ ಅರಣ್ಯ ಪ್ರದೇಶವನ್ನು ರಕ್ಷಣೆ ಮಾಡುವಲ್ಲಿ ಮಧ್ಯಪ್ರದೇಶವು ಭಾರತದಲ್ಲಿ ಮೊದಲ ಸ್ಥಾನದಲ್ಲಿದೆ. ನಂತರದಲ್ಲಿ ಮಹಾರಾಷ್ಟ್ರವಿದೆ. ಆದರೆ, ಕರ್ನಾಟಕಕ್ಕೆ ಅರಣ್ಯ ಸಂರಕ್ಷಣೆಯ ವಿಷಯದಲ್ಲಿ ಮೊದಲ ಸ್ಥಾನಗಳಿಸಲು ಎಲ್ಲಾ ಅವಕಾಶಗಳಿವೆ. ಆನೆ-ಕಾಟಿಗಳ ವರ್ತನೆಯನ್ನು ಅಭ್ಯಾಸ ಮಾಡಿದ ತಜ್ಞರ ಸಲಹೆಯನ್ನು ಕೇಳಲು ಇಲಾಖೆ ತಯಾರಿಲ್ಲ ಹಾಗೂ ಇಲಾಖೆಯ ಈ ರೀತಿಯ ಇಚ್ಛಾಶಕ್ತಿಯ ಕೊರತೆಯಿಂದಾಗಿ ಇದು ಸಾಧ್ಯವಾಗುತ್ತಿಲ್ಲ.

ಮುನ್ನೋಟ 11-05-2025 ರಿಂದ 17-05-2025

ಎಂ.ಎನ್. ಲಕ್ಷ್ಮೀನರಸಿಂಹಸ್ವಾಮಿ, ಮಾದಾಪುರ
ಜ್ಯೋತಿಷ್ಯ ವಿಶಾರದ, ಸಂಪರ್ಕಕ್ಕೆ: 8197304680

ಈ ಭವಿಷ್ಯ ರಾಶಿಯನ್ನು ಅವಲಂಬಿಸಿದೆ

ಮೇಷ — ಅಶ್ವಿನಿ, ಭರಣಿ, ಕೃತ್ತಿಕಾ 1

ಆದಾಯವು ನಿಮ್ಮ ನಿರೀಕ್ಷೆಯಷ್ಟಿರುತ್ತದೆ. ನೀವು ಎಲ್ಲರನ್ನೂ ಒಗ್ಗೂಡಿಸಿ ಸಹಕಾರ ಪಡೆಯುವಿರಿ. ಕೃಷಿಯಿಂದ ಸ್ವಲ್ಪ ಆದಾಯವನ್ನು ನಿರೀಕ್ಷೆ ಮಾಡಬಹುದು. ವಿದ್ಯಾರ್ಥಿಗಳಿಗೆ ಉತ್ತಮ ಫಲಿತಾಂಶ ಪಡೆಯುವ ಯೋಗವಿದೆ. ದೇವರ ಕಾರ್ಯಕ್ಕೆ ಹಣ ಖರ್ಚಾಗುವುದು. ಕಬ್ಬಿಣದ ವ್ಯಾಪಾರಿಗಳಿಗೆ ವ್ಯಾಪಾರ ಕಡಿಮೆ ಇರುತ್ತದೆ. ಕೃಷಿಭೂಮಿ ಖರೀದಿ ಅವಕಾಶವಿದೆ.

ವೃಷಭ — ಕೃತ್ತಿಕಾ 2,3,4 ರೋಹಿಣಿ, ಮೃಗಶಿರಾ 1,2

ನಿಮ್ಮ ನಡವಳಿಕೆಯಲ್ಲಿ ಸಾಕಷ್ಟು ಗಂಭೀರತೆ ಇರುತ್ತದೆ. ಆದಾಯವು ನಿರೀಕ್ಷಿತ ಮಟ್ಟದಲ್ಲಿ ಇರುವುದಿಲ್ಲ. ಸರ್ಕಾರಿ ವ್ಯವಹಾರಗಳಲ್ಲಿ ಹಿನ್ನಡೆ ಇರುತ್ತದೆ. ಶೀತ ಬಾಧೆ ಕೆಲವರನ್ನು ಕಾಡಬಹುದು. ಸಂಗಾತಿಯ ಜತೆ ಸೇರಿ ಮಾಡಿದ ವ್ಯವಹಾರಗಳಲ್ಲಿ ಹೆಚ್ಚು ಲಾಭವಿರುತ್ತದೆ. ಕೆಲವೊಂದು ವೈಯಕ್ತಿಕ ಚಿಂತೆಗಳು ನಿಮ್ಮನ್ನು ಕಾಡಬಹುದು. ಹಿರಿಯರ ವ್ಯವಹಾರಗಳಲ್ಲಿ ನಿಮಗೆ ಅವಕಾಶ ದೊರೆತು ಲಾಭವಾಗುತ್ತದೆ.

ಮಿಥುನ — ಮೃಗಶಿರಾ 3,4 ಆರಿದ್ರಾ, ಪುನರ್ವಸು 1,2,3

ಸರ್ಕಾರಿ ವ್ಯವಹಾರಗಳಲ್ಲಿ ಹೆಚ್ಚು ಆಸಕ್ತಿ ಇರುತ್ತದೆ. ಕೃಷಿಯಿಂದ ಸ್ವಲ್ಪ ಲಾಭವಿರುತ್ತದೆ. ಸರ್ಕಾರಿ ಕಾಮಗಾರಿ ಗುತ್ತಿಗೆ ದೊರೆಯುವ ಸಂದರ್ಭವಿದೆ. ದೇವರ ದರ್ಶನಕ್ಕಾಗಿ ಪ್ರವಾಸ ಸಾಧ್ಯತೆಗಳಿವೆ. ವಿದ್ಯಾರ್ಥಿಗಳು ಹೆಚ್ಚು ಶ್ರಮ ಹಾಕಿ ಉತ್ತಮ ಫಲಿತಾಂಶ ಪಡೆಯಬಹುದು. ಬಂಧುಗಳ ನಡುವಿನ ವ್ಯವಹಾರ ನಷ್ಟಕ್ಕೆ ಕಾರಣವಾಗಬಹುದು. ಸಂಗಾತಿ ಆದಾಯ ಕಡಿಮೆಯಾಗುವ ಸಾಧ್ಯತೆಯಿದೆ.

ಕಟಕ — ಪುನರ್ವಸು 4 ಪುಷ್ಯ, ಆಶ್ಲೇಷ

ವಹಿಸಿಕೊಂಡ ಕೆಲಸಗಳನ್ನು ಮಾಡಲಾಗದೆ ಒದ್ದಾಡುವಿರಿ. ಉದ್ಯೋಗದಲ್ಲಿ ಆದಾಯ ಹೆಚ್ಚಾಗುವ ಸಾಧ್ಯತೆಯಿದೆ. ಹೈನುಗಾರಿಕೆ ಮಾಡುವವರಿಗೆ ಉತ್ತಮ ಲಾಭ ಇರುತ್ತದೆ. ಕ್ರೀಡಾಪಟುಗಳು ಸಿಕ್ಕ ಅವಕಾಶವನ್ನು ಸದುಪಯೋಗಪಡಿಸಿಕೊಳ್ಳುವರು. ಸರ್ಕಾರಿ ಕೆಲಸ ಕಾರ್ಯಗಳು ಸರಾಗವಾಗಿ ಆಗುತ್ತವೆ. ಪುಸ್ತಕ ವ್ಯಾಪಾರಿಗಳಿಗೆ ಹೆಚ್ಚಿನ ವ್ಯವಹಾರವಿರುತ್ತದೆ.

ಸಿಂಹ — ಮಖಾ, ಪೂರ್ವ ಫಲ್ಗುಣಿ, ಉತ್ತರ ಫಲ್ಗುಣಿ 1

ಆದಾಯವು ಕಡಿಮೆ ಇರುತ್ತದೆ. ಮಹಿಳೆಯರೊಡನೆ ವ್ಯವಹಾರ ಮಾಡದಿರುವುದು ಒಳ್ಳೆಯದು. ಕ್ರೀಡಾಪಟುಗಳಿಗೆ ಅಪೇಕ್ಷಿತ ಸೌಲಭ್ಯಗಳು ದೊರೆಯುವುದಿಲ್ಲ. ವೃತ್ತಿ ಸಂಬಂಧಿತ ಪರೀಕ್ಷೆಗಳನ್ನು ತೆಗೆದುಕೊಳ್ಳಬಹುದು. ಮೂತ್ರ ಸಂಬಂಧಿ ದೋಷಗಳಿರುವವರು ಎಚ್ಚರ ವಹಿಸಿ. ವಿದೇಶಿ ವ್ಯವಹಾರಗಳಲ್ಲಿ ಸ್ವಲ್ಪ ಹಿನ್ನಡೆಯಾಗಬಹುದು. ನಿಮ್ಮ ವ್ಯವಹಾರಗಳಿಗೆ ತಂದೆಯಿಂದ ಆರ್ಥಿಕ ನೆರವು ಸಿಗುತ್ತದೆ.

ಕನ್ಯಾ — ಉತ್ತರಫಲ್ಗುಣಿ 2,3,4 ಹಸ್ತ, ಚಿತ್ತಾ 1,2

ಯಾವುದೇ ಕೆಲಸ ಮಾಡಲು ಉತ್ಸಾಹ ಇರುವುದಿಲ್ಲ. ಆದಾಯವು ಚೆನ್ನಾಗಿರುತ್ತದೆ. ಬಂಧುಗಳಿಂದ ನಿಮಗೆ ಲಾಭ ಇರುತ್ತದೆ. ಭೂ ಸಂಬಂಧಿತ ವ್ಯವಹಾರಗಳಲ್ಲಿ ಲಾಭವಿರುತ್ತದೆ. ಶತ್ರುಗಳನ್ನು ಎದುರಿಸುವ ಶಕ್ತಿ ನಿಮಗೆ ಒದಗುತ್ತದೆ. ಸಂಗಾತಿಯ ವ್ಯವಹಾರಗಳಲ್ಲಿ ಲಾಭವನ್ನು ಕಾಣಬಹುದು. ಸರ್ಕಾರಿ ವ್ಯವಹಾರಗಳಲ್ಲಿ ನಿರೀಕ್ಷಿತ ಲಾಭವಿರುವುದಿಲ್ಲ.

ತುಲಾ — ಚಿತ್ತಾ 3,4 ಸ್ವಾತಿ, ವಿಶಾಖಾ 1,2,3

ವಾರದ ಆರಂಭ ಆನಂದದಾಯಕವಾಗಿರುತ್ತದೆ. ಆದಾಯವು ಮಧ್ಯಮಗತಿಯಲ್ಲಿ ಇರುತ್ತದೆ. ಆಸ್ತಿ ವ್ಯವಹಾರಗಳಲ್ಲಿ ಮೋಸವಾಗುವ ಸಾಧ್ಯತೆಗಳು ಹೆಚ್ಚಿವೆ. ವಿದ್ಯಾರ್ಥಿಗಳಿಗೆ ನಿರೀಕ್ಷಿತ ಫಲಿತಾಂಶ ಪಡೆಯುವುದು ಕಷ್ಟವಾಗಬಹುದು. ಹಳೆಯ ಕೆಲವು ರೋಗಗಳು ನಿಮ್ಮನ್ನು ಕಾಡಬಹುದು. ಸಂಗಾತಿಯ ಸಹಾಯದಿಂದ ಸರ್ಕಾರಿ ವ್ಯವಹಾರಗಳಲ್ಲಿ ಲಾಭವನ್ನು ಕಾಣಬಹುದು.

ವೃಶ್ಚಿಕ — ವಿಶಾಖಾ 4 ಅನೂರಾಧ, ಜ್ಯೇಷ್ಠ

ನಿಮ್ಮ ಕೆಲಸಗಳಲ್ಲಿ ಹಿರಿಯರ ಪ್ರಭಾವವನ್ನು ಕಾಣಬಹುದು. ಆದಾಯವು ನಿಮ್ಮ ವೆಚ್ಚವನ್ನು ಸರಿದೂಗಿಸುತ್ತದೆ. ನಿಮ್ಮ ಶತ್ರುಗಳನ್ನು ಈಗ ನೀವು ಮಟ್ಟ ಹಾಕಬಹುದು. ನಿಮ್ಮ ಮಕ್ಕಳಿಂದ ಯಾವುದೇ ರೀತಿಯ ಗೌರವ ದೊರೆಯುವುದಿಲ್ಲ. ತಲೆನೋವಿನ ತೊಂದರೆಗಳಿದ್ದಲ್ಲಿ ಚಿಕಿತ್ಸೆ ಪಡೆಯುವುದು ಉತ್ತಮ. ಸರ್ಕಾರಿ ವ್ಯವಹಾರಗಳಲ್ಲಿ ನಿರೀಕ್ಷಿತ ಲಾಭವಿಲ್ಲದಿದ್ದರೂ, ನಷ್ಟವಿಲ್ಲ.

ಧನುಸ್ಸು — ಮೂಲಾ, ಪೂರ್ವಾಷಾಢ, ಉತ್ತರಾಷಾಢ 1

ಯಾರ ತಂಟೆಗೂ ಹೋಗದೆ ನಿಮ್ಮ ಪಾಡಿಗೆ ನೀವು ಇರುವಿರಿ. ಆದಾಯವು ಕಡಿಮೆ ಇರುತ್ತದೆ. ನಿಮ್ಮ ಶತ್ರುಗಳನ್ನು ಮೆಟ್ಟಿ ನಿಲ್ಲುವ ಸಾಮರ್ಥ್ಯ ನಿಮಗಿರುತ್ತದೆ. ಬಂಧುಗಳೊಡನೆ ಯಾವುದೇ ರೀತಿಯ ಹಣಕಾಸಿನ ವ್ಯವಹಾರ ನಷ್ಟಕ್ಕೆ ಕಾರಣವಾಗಬಹುದು. ಸಂಗಾತಿ ಕಡೆಯವರ ಸಹಾಯದಿಂದ ಸರ್ಕಾರಿ ಕೆಲಸ ಕಾರ್ಯಗಳಲ್ಲಿ ಅನುಕೂಲತೆ ಇರುತ್ತದೆ. ಕೃಷಿ ಕ್ಷೇತ್ರದಲ್ಲಿ ನಿರೀಕ್ಷೆ ಮಾಡಿದಷ್ಟು ಅಭಿವೃದ್ಧಿ ಇರುವುದಿಲ್ಲ.

ಮಕರ — ಉತ್ತರಾಷಾಢ 2,3,4 ಶ್ರವಣ, ಧನಿಷ್ಠ 1,2

ವೃತ್ತಿಯಲ್ಲಿ ನಿಮ್ಮ ಪ್ರಭಾವವನ್ನು ಹೆಚ್ಚು ಮಾಡಿಕೊಳ್ಳುವಿರಿ. ಆದಾಯವು ಕಡಿಮೆ ಇದ್ದರೂ ಅದರಲ್ಲೇ ನಿರ್ವಹಣೆ ಮಾಡುವಿರಿ. ನಿಮ್ಮ ವಿರುದ್ಧ ಇರುವವರನ್ನು ಗುರುತಿಸುವಲ್ಲಿ ಯಶಸ್ವಿಯಾಗುವಿರಿ. ಈಗ ನಿಮಗೆ ಮಕ್ಕಳಿಂದ ಸೂಕ್ತ ಗೌರವ ಮತ್ತು ಧನ ಸಹಾಯ ದೊರೆಯುತ್ತದೆ. ನರ ದೌರ್ಬಲ್ಯ ಇರುವವರು ಎಚ್ಚರವಹಿಸಿ. ಸಂಗಾತಿಯಿಂದ ಸಂಸಾರಕ್ಕೆ ನಿರೀಕ್ಷಿತ ಧನಸಹಾಯ ಸಿಗುವುದಿಲ್ಲ.


ಕುಂಭ — ಧನಿಷ್ಠ 3,4 ಶತಭಿಷಾ, ಪೂರ್ವಾಭಾದ್ರ 1,2,3

ಶ್ರಮಪಟ್ಟು ಕೆಲಸ ಮಾಡಿದಲ್ಲಿ ಆದಾಯ ಬರುತ್ತದೆ. ನಿಮಗೆ ಅನಿರೀಕ್ಷಿತವಾಗಿ ಹಿರಿಯರ ಜತೆ ಸೇರಿ ವ್ಯವಹಾರ ಮಾಡುವ ಅವಕಾಶ ದೊರೆಯುತ್ತದೆ. ಸಂಸಾರದಲ್ಲಿ ಸಂತೋಷ ಹೆಚ್ಚುವ ಸಾಧ್ಯತೆಗಳಿವೆ. ಸರ್ಕಾರಿ ಸಂಸ್ಥೆಗಳಿಗೆ ವಸ್ತುಗಳನ್ನು ಪೂರೈಸುವವರ ಆದಾಯ ಈಗ ಹೆಚ್ಚುತ್ತದೆ.

ಮೀನ — ಪೂರ್ವಾಭಾದ್ರ 4 ಉತ್ತರಭಾದ್ರ, ರೇವತಿ

ವಿದೇಶಿ ವ್ಯಾಮೋಹ ಬಹಳ ಹೆಚ್ಚಿರುತ್ತದೆ. ಆದಾಯವು ಉತ್ತಮ ಹಂತಕ್ಕೆ ಬರುತ್ತದೆ. ಹಿರಿಯರ ಸಹಕಾರ ಗಳಿಸುವಲ್ಲಿ ಯಶಸ್ವಿಯಾಗುವಿರಿ. ಕೆಲವೊಂದು ವ್ಯವಹಾರಗಳಿಂದ ಆದಾಯ ವೃದ್ಧಿಸಿಕೊಳ್ಳುವ ಅವಕಾಶಗಳು ದೊರೆಯುತ್ತವೆ. ಕಣ್ಣಿನ ತೊಂದರೆಗಾಗಿ ಹೆಚ್ಚು ಹಣ ಖರ್ಚಾಗಬಹುದು. ಸಂಗಾತಿಯ ಅತಿಯಾದ ಧಾರ್ಮಿಕ ಆಸಕ್ತಿ ನಿಮಗೆ ಬೇಸರ ತರಿಸಬಹುದು.

ಪದಬಂಧ 2891



ಮೇಲಿನಿಂದ ಕೆಳಕ್ಕೆ

1. ತಾರುಣ್ಯದ ಹೊಸ್ತಿಲಲ್ಲಿರುವ ರಾಷ್ಟ್ರ ಪೌರರು 5
2. ಸುಸಂಸ್ಕೃತ ಗೌರವದಿಂದ ತಲೆ ಕೆಳಗು ಮಾಡಿದ್ದಾನೆ 5
3. ಒಟ್ಟು ಗುಣ ಗ್ರಹಿಸುವ ತಂದೆ 5
4. ಹರಿವ ಹೊಳೆಯ ಪಕ್ಕದಲ್ಲಿ ಹಬ್ಬಿದ ವಿಸ್ತಾರ ಮೈದಾನ 5
5. ಕುದುರೆಗಳೆಳವ ಬದುಕು ಬಂಡಿ 3
7. ಕೌಸಲ್ಯೆಯ ಪುತ್ರ ಒಳ್ಳೆಯ ಪ್ರಜೆ 3
12. ರಸಗಳನ್ನು ಆಸ್ವಾದಿಸುವವ 3
14. ವೃತ್ತಿಯಿಂದ ಹೊರಬರುವಿಕೆ 3
15. ದಶರಥಾತ್ಮಜನ ನಾಮ ಮುಗಿಲು ಮುಟ್ಟಿದೆ 5
16. ಲಕ್ಷ್ಮಿಯನ್ನೇ ಹೊತ್ತವ 3
17. ಲಲಿತಾದೇವಿ ಅಲಂಕರಿಸುವ ಬೆಳ್ಳಿಯ ಬೆಟ್ಟ 5
18. ಇಲ್ಲಿಯವರೆಗೆ ನಿಂತಿದ್ದು ಮತ್ತೆ ಶುರು 5
19. ವಿಜಯೋತ್ಸಾಹದ ಚಹರೆಯವ 3
20. ಮೊಸಳೆಗಳ ಗುಂಪು 5

ಎಡದಿಂದ ಬಲಕ್ಕೆ

1.. ಸಮರಕ್ಕೆ ಬಳಸುವ ಪ್ಲೇನು 5
3. ದುಷ್ಟ ದುರ್ಜನರ ಎದುರು ಇವರು ಮೆದುಗಸ್ಥರು 5
5. ವಿರಳವಾದ ಹುಟ್ಟು 3
6. ಗೆಲ್ಲು ಎಂಬ ಹರಕೆ 3
8. ಹಲ್ಲು ಕಿರಿಯುವ ಆಟ 3
9. ಹೊಗಳಿ ಹಾಡುವ ಮಂತ್ರ ರೂಪ 3
10. ಎಲ್ಲವೂ ಮುಳುಗಿ ಮುಗಿದು ಹೋಗುವ ಭೂಮಿಯ ಅಂತ್ಯ 3
11. ಅಲ್ಪ ಖಾರ ಉಂಟುಮಾಡುವ 3
13. ಧಾನ್ಯ ತುಂಬುವ ಕೀಟ 3
16. ಲಕ್ಷ್ಮೀ ಹಸ್ತ 3
18. ಇದೀಗ ಉಡುಪಿಯ ಕೃಷ್ಣ ಮಂದಿರದ ಪೀಠಾಧಿಪತ್ಯ ನೀಡಿರುವ ಮಠ 3
21. ಕೋಮು ವಿಷಯದಲ್ಲಿ ಕುರುಡನಾದವ 3
22. ಯುದ್ಧದಲ್ಲಿ ಹೋರಾಡುವ ತರುಣ 3
23. ಲೋಭಿಯಾದ ವ್ಯಾಧ 3
24. ರಕ್ಷಣೆ ಪಡೆದ ಹುಡುಗಿ 3
25. ರಘು ವಂಶದ ಕುವರನಾಗಿ ರಾಮ 3
26. ಹಸ್ತದಲ್ಲಿನ ತಾವರೆ 5
27. ಭೀತಿಯನ್ನು ಹೋಗಲಾಡಿಸುವವ 5

ಪದಬಂಧ ಉತ್ತರ -2890

ಮೇಲಿಂದ ಕೆಳಕ್ಕೆ

1. ವಿಂಶತಿ 2.ಲವಣಿ 3.ಅಂತಿಮ 4.ಕರುಳು 7.ಕ್ಷಿತಿಮತಿ 9.ಗಾಜರ 11.ಗರತಿ 12.ಮಾಲೀಕ 13.ಕಟುಕ 15.ಪರಾಯಿ 16.ಕಾಮಧೇನು 17.ಜಗಳ 19.ಮರುಗ 20.ಕೊಸರು 21.ಗಮಲು 22.ಮಡಿಕೆ 23.ಯತ್ನಿಸು

ಎಡದಿಂದ ಬಲಕ್ಕೆ

1.ವಿಂಧ್ಯಾಚಲ 3.ಅಂಬಿಕ 5.ವನಸ್ಪತಿ 8.ತಿರುಗಾಣಿ 10. ಮಗಳು 12.ಮಾರಜನಕ 14.ತಿರುಪತಿ 16.ಕಾಕರಾಜ 18.ಕರುಣಾಮಯಿ 20.ಕೊಳಗ 22.ಮಗರಾಯ 24.ನುಡಿಸು 25.ಮತಿಗೇಡಿ 26. ರುಮಾಲು 27.ಕೆರಳಿಸು

ಜೇಡರ ಬಲೆ ಕಲೆ ಸಾಕಾರವು...



ಅಂದವಾದ ಬಲೆ ಹೆಣೆದ ಜೇಡರ

ಚಿತ್ರಗಳು: ಏಕನಾಥ ಅಗಸಿಮನಿ

ಸಂತೋಷ ಈ. ಚಿನಗುಡಿ

ಮನೆಯ ಮೂಲೆಯಲ್ಲೆಲ್ಲೋ ಜೇಡರಬಲೆ ಕಂಡರೆ ಏನು ಮಾಡುತ್ತೀರಿ? ಪೊರಕೆಯಿಂದ ಅದನ್ನು ಜಾಡಿಸಿ ಸ್ವಚ್ಛ ಮಾಡುತ್ತೀರಿ. ಜೇಡವನ್ನು ಹುಡುಕಿ ಹೊಡೆದು ಸಾಯಿಸುತ್ತೀರಿ. ಜೇಡಗಳು ಮನೆಯ ಅಂದಗೆಡಿಸುತ್ತವೆ, ರೋಗ ಹರಡುತ್ತವೆ ಎಂದು ಭಾವಿಸಿದ್ದೇ ಇದಕ್ಕೆ ಕಾರಣ. ಆದರೆ, ಜೀವಸಂಕುಲದ ಸರಣಿಯಲ್ಲಿ ಜೇಡಗಳು ಮಾನವನಿಗೆ ಉಪಕಾರ ಮಾಡುತ್ತಲೇ ಬಂದಿವೆ ಎನ್ನುವುದು ತುಂಬಾ ಜನರಿಗೆ ಗೊತ್ತೇ ಇಲ್ಲ. ಇವು ರೋಗಕಾರಕ ಕ್ರಿಮಿಗಳನ್ನು ಕೊಂದು ತಿನ್ನುತ್ತವೆ. ಆಶ್ರಯ ನೀಡುವ ಮನೆಯ ಕುಟುಂಬದ ಆರೋಗ್ಯ ಕಾಪಾಡುವ ಹೊಣೆಯನ್ನು ಹೊತ್ತುಕೊಳ್ಳುತ್ತವೆ. ಕಾಡು, ಮನೆ, ಕಚೇರಿಗಳಲ್ಲಿ ಠಿಕಾಣಿ ಹೂಡುವ ಈ ಅತಿಥಿಗಳು ಪರಿಸರವನ್ನು ಇನ್ನಷ್ಟು ಅಂದಗೊಳಿಸುವ ಕೌಶಲ ಹೊಂದಿವೆ.

ಮನುಷ್ಯರು ಮಾತ್ರವಲ್ಲ, ಸಸ್ಯಗಳಿಗೂ, ಇತರ ಪ್ರಾಣಿಗಳಿಗೂ ತೊಂದರೆ ಕೊಡುವುದಿಲ್ಲ. ಅವು ನಮ್ಮ ರಕ್ತ ಹೀರುವುದಿಲ್ಲ. ಸಸ್ಯಗಳನ್ನು, ಕೃಷಿ ಬೆಳೆಗಳನ್ನು, ಸಂಗ್ರಹಿಸಿಟ್ಟ ಧಾನ್ಯಗಳನ್ನು ಹಾಳು ಮಾಡುವುದಿಲ್ಲ. ಮನೆಗಳಲ್ಲಿ ಸೊಳ್ಳೆ, ನೊಣ, ಜಿರಳೆ ಇತ್ಯಾದಿ ರೋಗಕಾರಕಗಳನ್ನು ತಿನ್ನುತ್ತವೆ. ಹೊಲ, ತೋಟ, ಗದ್ದೆ, ಅಡವಿಗಳಲ್ಲಿ ಸಸ್ಯಗಳ ಎಲೆಗಳನ್ನು ಭಕ್ಷಿಸುವ–ಕಾಂಡ ಕೊರೆವ ಹಾಗೂ ರಸ ಹೀರುವ ಹಾನಿಕಾರಕ ಕೀಟಗಳನ್ನು ಮತ್ತು ಅವುಗಳ ಮರಿಹುಳುಗಳನ್ನು ಜೇಡಗಳು ತಿಂದುಹಾಕುತ್ತವೆ. ಅಕ್ಷರಮಟ್ಟಿಗೆ ಅವು ಪರೋಪಕಾರಿ.

‘ಸ್ಪೈಡರ್‌ಮ್ಯಾನ್’ ಸಿನಿಮಾ ಸರಣಿಗಳಲ್ಲಿ ಜೇಡವನ್ನು ಆವಾಹನೆ ಮಾಡಿಕೊಂಡ ನಟ ಸಮಾಜದ ರಕ್ಷಣೆ ಮಾಡುತ್ತಾನೆ. ಅಂಥದ್ದೇ ಕೆಲಸವನ್ನು ಜೇಡಗಳು ನಿಜವಾಗಿಯೂ ಮಾಡುತ್ತವೆ ಎಂಬುದನ್ನು ಸಂಶೋಧಿಸಿದ್ದಾರೆ ಜೀವ ವೈವಿಧ್ಯ ಸಂಶೋಧಕ ಮಂಜುನಾಥ ಶಾಮಸುಂದರ ನಾಯಕ.

ನರಗುಂದದ ಜ್ಞಾನಮುದ್ರಾ ಪಬ್ಲಿಕ್ ಸ್ಕೂಲ್‌ನ ಆಡಳಿತಾಧಿಕಾರಿ ಆಗಿರುವ ನಾಯಕ, ಪ್ರವೃತ್ತಿಯಲ್ಲಿ ಸಂಶೋಧಕ. ಇರುವೆಯಿಂದ ಹಿಡಿದು ಆನೆಯವರೆಗೂ ಅವರು ಮೂರು ದಶಕಗಳಿಂದ ಜೀವ ವೈವಿಧ್ಯ ಅಧ್ಯಯನ– ಸಂಶೋಧನೆ ಮಾಡಿದ್ದಾರೆ. ಎಲ್ಲಿಯೇ ಜೇಡರಬಲೆ ಕಂಡರೂ ಸಾಕು; ಅಲ್ಲಿಗೆ ಹೋಗುತ್ತಾರೆ. ಅತ್ಯಂತ ಅಪರೂಪದ ಈ ಜೀವಿಯ ಬಗ್ಗೆ ಸಾಕಷ್ಟು ಕೌತುಕದ ಸಂಗತಿಗಳನ್ನು ಅವರು ಹಂಚಿಕೊಂಡಿದ್ದಾರೆ.

ಕುತೂಹಲಕರ ಸಂತತಿ ಮತ್ತು ಸಂಗತಿ

ಸಾಮಾನ್ಯವಾಗಿ ಭಾವಿಸಿರುವಂತೆ ಜೇಡ ಕೀಟಗಳ ಗುಂಪಿಗೆ ಸೇರಿಲ್ಲ. ಜೈವಿಕವಾಗಿ ‘ಸಂಧಿ ಪದಿ’ ವರ್ಗಕ್ಕೆ ಸೇರಿರುವ ಇದು ವಾಸ್ತವವಾಗಿ ಚೇಳುಗಳ ಅತ್ಯಂತ ನಿಕಟ ಸಂಬಂಧಿ. ‘ಎಂಟು ಕಾಲುಗಳು, ಕುಡಿಮೀಸೆಗಳ ನಾಸ್ತಿತ್ವ’ ಈ ಎರಡು ಲಕ್ಷಣಗಳು ಜೇಡವು ಇತರೆ ಕೀಟಗಳಿಂದ ಭಿನ್ನವಾಗಿಸಿವೆ.

ಜೇಡಗಳಲ್ಲಿ ಹಲವು ವಿಧಗಳಿವೆ. ತೋಟ ಜೇಡ, ತೋಳ ಜೇಡ, ಬಾಳೆ ಜೇಡ, ನವಿಲು ಜೇಡ, ಮನೆ ಜೇಡ, ನೆಗೆವ ಜೇಡ, ಕೀಲು ಕವಾಟ ಜೇಡ, ಆಲಿಕೆ ಬಲೆ ಜೇಡ, ಒಂಟೆ ಜೇಡ, ಬೋಲಾಸ್ ಜೇಡ, ವಿಧವೆ ಜೇಡ ಇತ್ಯಾದಿ. ಈವರೆಗೆ ಜೇಡಗಳ ಸುಮಾರು 45 ಸಾವಿರ ಪ್ರಭೇದಗಳನ್ನು ಗುರುತಿಸಲಾಗಿದೆ. ಸಹ್ಯಾದ್ರಿ ಶ್ರೇಣಿಗಳಲ್ಲಿ ಜೇಡಗಳನ್ನು ಗುರುತಿಸಬಹುದು. ಆದರೆ, ಅಮೆಜಾನ್‌ನಂಥ ದಟ್ಟಾರಣ್ಯದಲ್ಲಿ ಪ್ರವೇಶ ಸಾಧ್ಯವಿಲ್ಲ. ಅಲ್ಲಿನ ಜೇಡಗಳನ್ನು ಅಂದಾಜಿಸಬಹುದಷ್ಟೇ.

‘ಕೆಲವು ತಜ್ಞರ ಅಂದಾಜಿನ ಪ್ರಕಾರ, ಭೂಮಿ ಮೇಲೆ ಜೇಡಗಳ ಪ್ರಭೇದಗಳ ಒಟ್ಟು ಸಂಖ್ಯೆ ಒಂದು ಲಕ್ಷಕ್ಕೂ ಅಧಿಕ ಇರಬಹುದು! ಹಾಗಾಗಿಯೇ ಕೃಷಿ ಭೂಮಿ ಮತ್ತು ಅಡವಿಗಳಲ್ಲಿ ಜೇಡಗಳ ದಟ್ಟಣೆ ವಿಪರೀತ. ಒಂದು ಲೆಕ್ಕಾಚಾರದ ಪ್ರಕಾರ ಸಮೃದ್ಧ ಬೆಳೆ ಬೆಳೆದು ನಿಂತ ಪ್ರತಿ ಎಕರೆ ತೋಟದಲ್ಲಿ ಇರಬಹುದಾದ ಜೇಡಗಳ ಸಂಖ್ಯೆ ಸುಮಾರು 20 ಲಕ್ಷ!



ಮಂಜುನಾಥ ಶಾಮಸುಂದರ ನಾಯಕ

ಸಾಮಾನ್ಯವಾಗಿ ಹೊಲ–ಗದ್ದೆಗಳಲ್ಲಿ ನೂರೋ–ಇನ್ನೂರೋ ಬಲೆಗಳು ನೇತಾಡುವುದನ್ನು ಗಮನಿಸುತ್ತೇವೆ. ಆದರೆ, ಉದುರಿಬಿದ್ದ ಒಂದು ಎಲೆಯ ಮೇಲೂ ಜೇಡವು ಬಿಳಿಬಣ್ಣದ ಮೊಟ್ಟೆಚೀಲ (Egg case) ಕಟ್ಟುತ್ತದೆ. ಅದರಲ್ಲಿ ನೂರಾರು ಮೊಟ್ಟೆಗಳನ್ನು ಜತನ ಮಾಡಿ ಬೆಳೆಸುತ್ತದೆ. ಇಂಥ ಸಾವಿರಾರು ಮೊಟ್ಟೆಚೀಲಗಳು ಪ್ರತಿ ಗದ್ದೆಯಲ್ಲೂ ಇರುತ್ತವೆ. ಬರಿಗಣ್ಣಿಗೆ ಕಾಣದಷ್ಟು ಪುಟಾಣಿ ಜೇಡಗಳೂ ದೊಡ್ಡ ಸಂಖ್ಯೆಯಲ್ಲಿ ಇರುತ್ತವೆ’ ಎಂಬುದು ಮಂಜುನಾಥ ಅವರ ವಿವರಣೆ.

ಸೂಜಿಮೊನೆಯಷ್ಟೇ ಚಿಕ್ಕ ಗಾತ್ರದಿಂದ ಹಿಡಿದು ಅಂಗೈ ಅಗಲ ಗಾತ್ರ ಜೇಡಗಳೂ ಪ್ರಪಂಚದ ಬೇರೆ ಬೇರೆ ಕಡೆ ಸಿಗುತ್ತವೆ. ಎಲ್ಲ ಜೇಡ ಪ್ರಭೇದಗಳೂ ‘ರೇಷ್ಮೆ’ಯನ್ನು ತಯಾರಿಸಿ ದಾರ ನೂಲುತ್ತವೆ. ಅದಕ್ಕೆಂದೇ ಅವುಗಳ ಶರೀರದೊಳಗೆ ಹಿಂಬದಿಯಲ್ಲಿ ರೇಷ್ಮೆ ಉತ್ಪಾದಿಸುವ, ಅದನ್ನು ದಾರವನ್ನಾಗಿ ನೂಲುವ ವಿಶಿಷ್ಟ ಅಂಗಗಳಿವೆ.

ಆದರೆ ಹುಳು, ಕೀಟ, ಕಪ್ಪೆ, ಹಲ್ಲಿಗಳನ್ನು ಸೆರೆಹಿಡಿಯಲು ಇತರ ನಾನಾ ವಿಧದ ಮೃತ್ಯುಪಾಶಗಳನ್ನು ನೇಯುತ್ತವೆ. ಬಲೆಯನ್ನೇ ನಿರ್ಮಿಸದೆ ಕಾದು ಕುಳಿತು ಸನಿಹ ಬಂದ ಕೀಟದ ಮೇಲೆ ಅಂಟನ್ನು ಉಗಿದು ಬಂಧಿಸುವ, ಆಹಾರ ಕೀಟದ ಬೆನ್ನು ಹತ್ತಿ ಹಿಡಿದು ವಿಷ ಚುಚ್ಚುವ ಜೇಡ ವಿಧಗಳೂ ಇವೆ. ಬೇಟೆಗಷ್ಟೇ ಅಲ್ಲದೆ ತಾವೇ ಸುರಕ್ಷಿತವಾಗಿ ಅಡಗಲು ಮೊಟ್ಟೆಗಳನ್ನು ಕಾಪಾಡಲು, ಒಂದೆಡೆಯಿಂದ ಮತ್ತೊಂದೆಡೆಗೆ ತೇಲಿ ಸಾಗಲೂ ಜೇಡಗಳು ರೇಷ್ಮೆಯನ್ನು ಬಳಸುತ್ತವೆ.

ಜೇಡಗಳು ಇಲ್ಲವಾದರೆ ಅಡವಿ, ಹುಲ್ಲು ಬಯಲು ಇತ್ಯಾದಿ ಸಕಲ ವಿಧ ಸಸ್ಯ ಪ್ರಧಾನ ಜೀವಾವಾರುಗಳು ಪಿಡುಗಿನ ಕೀಟಗಳ ಅನಿಯಂತ್ರಿತ ಹಾವಳಿಯಿಂದ ರೋಗಗ್ರಸ್ತವಾಗುತ್ತವೆ. ವಿನಾಶದ ಹಾದಿ ಹಿಡಿಯುತ್ತವೆ.

ಜೇಡಗಳು ನೂರಾರು ಪಕ್ಷಿ ಪ್ರಭೇದಗಳಿಗೆ ಆಹಾರ ಮೂಲ ಕೂಡ ಆಗಿವೆ. ಕೆಲವಾರು ಹಕ್ಕಿ ಪ್ರಭೇದಗಳು ತಮ್ಮ ಪುಟ್ಟ, ಸುಂದರ, ದೃಢ ಗೂಡುಗಳನ್ನು ನಿರ್ಮಿಸಿಕೊಳ್ಳಲು ಜೇಡರಬಲೆಯ ರೇಷ್ಮೆ ದಾರಗಳೇ ಪ್ರಧಾನ ಸಾಮಗ್ರಿ ಕೂಡ ಆಗಿವೆ.

ಇನ್ನೂ ಒಂದು ವಿಶೇಷ ಏನೆಂದರೆ; ಕಾಂಬೋಡಿಯಾ, ಕೊಲಂಬಿಯಾ ಮತ್ತು ವೆನೆಜುವೆಲಾ ದೇಶಗಳಲ್ಲಿ ಜೇಡಗಳು ಮನುಷ್ಯರಿಗೆ ಆಹಾರವಾಗಿವೆ. ದೊಡ್ಡ ಗಾತ್ರದ ಜೇಡಗಳನ್ನು ಹಿಡಿದು, ಬಿದಿರಿನ ಕೊಳವೆಗಳಲ್ಲಿ ತುಂಬಿ, ಕೆಂಡಗಳ ಮೇಲಿಟ್ಟು ಹುರಿದು ತಿನ್ನುವ ಕ್ರಮ ಅಲ್ಲೆಲ್ಲ ವ್ಯಾಪಕವಾಗಿದೆ.



ಅಳ್ನಾವರದ ಬಂಡೂರ ಅರಣ್ಯ ಪ್ರದೇಶದಲ್ಲಿ ಶಾಲಾ ಮಕ್ಕಳಿಗೆ ಜೇಡಗಳ ಜೀವನಶೈಲಿ ಬಗ್ಗೆ ಅರಿವು ಮೂಡಿಸುತ್ತಿರುವ ಮಂಜುನಾಥ.



ಮುತ್ತಿನ ಮಾಲೆಯಂತಿರುವ ಜೇಡರ ಬಲೆ

ಭಲೇ ಬಲೆ...

ಕೆಲವು ಜೇಡಗಳು ದೊಡ್ಡದಾದ, ಎದ್ದುಕಾಣುವ ಬಲೆಗಳನ್ನು ನಿರ್ಮಿಸುತ್ತವೆ. ಹಗಲಿನ ಪರಭಕ್ಷಕಗಳಿಂದ ಪತ್ತೆಹಚ್ಚುವುದನ್ನು ತಪ್ಪಿಸಲು ರಾತ್ರಿಯೇ ಬಲೆ ಹೆಣೆಯುತ್ತವೆ. ಜೇಡರ ಕೌಶಲ ಗುಣದಲ್ಲಿ ಇದೂ ಒಂದು. ಕೆಲವು ಜೇಡಗಳು ಶಕ್ತಿಗಾಗಿ ಮತ್ತು ವಸ್ತುಗಳನ್ನು ಮರುಬಳಕೆ ಮಾಡಲು ತಮ್ಮ ಜಾಲಗಳನ್ನೇ ತಿನ್ನುತ್ತವೆ. ರೇಷ್ಮೆ ಪ್ರೊಟೀನ್‌ಗಳನ್ನು ರೂಪಿಸುವ ‘ಅಮೈನೋ ಆಮ್ಲ’ವನ್ನು ಪಡೆಯಲು ಅವು ರೇಷ್ಮೆಯನ್ನು ಕೆಡವಿ ಸೇವಿಸುತ್ತವೆ. ಮತ್ತೆ ಅದನ್ನೇ ಬಲೆಯಾಗಿ ಹೆಣೆಯುತ್ತವೆ. ರೇಷ್ಮೆ ಪ್ರೊಟೀನ್‌ಗಳು ಜೇಡಕ್ಕೆ ಶಕ್ತಿ ಒದಗಿಸುತ್ತವೆ. ರೇಷ್ಮೆಯನ್ನು ಸೇವಿಸುವ ಮೂಲಕ ಜೇಡವು ತನ್ನ ಶಕ್ತಿಯ ಸಂಗ್ರಹವನ್ನು ಪುನಃ ತುಂಬಿಸಿಕೊಳ್ಳಬಹುದು.

ಅನೇಕ ಜೇಡಗಳು ನಿಶಾಚರಿಗಳಾಗಿದ್ದು, ರಾತ್ರಿಯೇ ತಮ್ಮ ಬಲೆಗಳನ್ನು ಹೆಣೆಯುತ್ತವೆ. ಸುಲಭವಾಗಿ ಬೇಟೆ ಸೆರೆಹಿಡಿಯಲು ಮತ್ತು ಪರಭಕ್ಷಕಗಳನ್ನು ತಪ್ಪಿಸಲು ಮತ್ತು ಶಕ್ತಿಯನ್ನು ಸಂರಕ್ಷಿಸಲು ಹೀಗೆ ಮಾಡುತ್ತವೆ. ‘ಗಾರ್ಡನ್ ಆರ್ಬ್ ವೀವರ್’ನಂಥ ಜೇಡಗಳು ತಮ್ಮ ಬಲೆಯಲ್ಲೇ ಉಬ್ಬುಗಳನ್ನು ನಿರ್ಮಿಸಿಕೊಂಡು, ಅದರಲ್ಲೇ ಮರೆಮಾಚುವ ಚಾಕಚಕ್ಯತೆ ಹೊಂದಿವೆ. ಪರಭಕ್ಷಕಗಳಿಂದ ತಪ್ಪಿಸಿಕೊಳ್ಳಲು ಈ ಉಪಾಯ ಮಾಡುತ್ತವೆ. ಹೆಚ್ಚಾಗಿ, ಪಕ್ಷಿಗಳ ದಾಳಿಯಿಂದ ತಪ್ಪಿಸಿಕೊಳ್ಳಲು ಈ ಹೆಜ್ಜೆ ಇಡುತ್ತವೆ.

ಇಷ್ಟೆಲ್ಲ ಉಪಯುಕ್ತವಾಗಿರುವ ಜೇಡ ಮತ್ತು ಅದರ ಬಲೆಯನ್ನು ಕುತೂಹಲದಿಂದ ಗಮನಿಸಿ. ಆಗ ಅದರ ಮೇಲೆ ಸ್ವಲ್ಪವಾದರೂ ಪ್ರೀತಿ ಹುಟ್ಟಬಹುದು.

ನಿಬ್ಬೆರಗು ಮಾಡುವ ಜೇಡಗಳ ತೂಕ

ಉಫ್... ಎಂದು ಊದಿದರೆ ಹಾರಿಹೋಗುವ ಜೇಡಗಳ ಒಟ್ಟಾರೆ ತೂಕ ಎಷ್ಟಿರಬಹುದು? ಅಧ್ಯಯನದಲ್ಲಿ ಈ ಅಚ್ಚರಿ ಸಂಗತಿಯನ್ನು ಮಂಜುನಾಥ ಹೊರಹಾಕಿದ್ದಾರೆ.

ಪ್ರಕೃತಿಯಲ್ಲಿನ ಕೀಟಗಳ ನಿಯಂತ್ರಣ ಮಾಡುವುದೇ ಜೇಡಗಳ ಅತ್ಯಂತ ಪ್ರಧಾನ ಪಾತ್ರ. ಜಗತ್ತಿನಾದ್ಯಂತ ಪ್ರತಿ ದಿನ ಜೇಡಗಳು ಬೇಟೆಯಾಡುವ ಕೀಟಗಳ ಪ್ರಮಾಣ ಕಲ್ಪನಾತೀತ. ಅದು ಸ್ಪಷ್ಟವಾಗಲು ಆ ಕುರಿತ ತುಂಬ ಕುತೂಹಲದ, ಪರಮ ವಿಸ್ಮಯದ್ದೂ ಆದ ಈ ವೈಜ್ಞಾನಿಕ ಲೆಕ್ಕಾಚಾರ ಹೀಗಿದೆ...

ಭೂಮಿಯಲ್ಲಿ ಯಾವುದೇ ಸಮಯದಲ್ಲಿ ಒಟ್ಟು 30 ದಶಲಕ್ಷ ಟನ್ ತೂಗುವಷ್ಟು ಜೀವಂತ ಜೇಡಗಳಿರುತ್ತವೆ. ಪ್ರತಿ ಜೇಡವೂ ಪ್ರತಿ ದಿನ ತನ್ನ ದೇಹ ತೂಕದ ಕನಿಷ್ಠ ಶೇಕಡ 10ರಷ್ಟು ಆಹಾರವನ್ನು ಬೇಟೆಯಾಡಿ ಸೇವಿಸುತ್ತದೆ. ಪ್ರತಿ ದಿನ ಜಗತ್ತಿನಲ್ಲಿ ಜೇಡಗಳು ಕೊಲ್ಲುವ ಕೀಟಗಳ ತೂಕ ಮೂರು ದಶ ಲಕ್ಷ ಟನ್ ಎಂದಾಯಿತು!

ಇದನ್ನು ಕೀಟಗಳ ಸಂಖ್ಯೆಗೆ ಪರಿವರ್ತಿಸಿದರೆ, ಪ್ರತಿ ದಿನ ಜೇಡಗಳಿಗೆ ಬಲಿಯಾಗುವ ಕೀಟಗಳ ಸಂಖ್ಯೆ ಒಂಬತ್ತು ದಶಲಕ್ಷ ಕೋಟಿ.

ಮೊದಲ ಓದು

ಸ್ಫೂರ್ತಿದಾಯಕ ‘ಕೆರೆ ಕಥೆಗಳು’

ಎರಡೂವರೆ ದಶಕಗಳಿಂದ ‘ಕೆರೆ ಕಾಯಕ’ಕ್ಕಾಗಿ ನಾಡಿನ ಉದ್ದಕ್ಕೂ ಸುತ್ತಾಡಿರುವ ಬರಹಗಾರ ಶಿವಾನಂದ ಕಳವೆ, ಸಾವಿರಾರು ಕೆರೆಗಳನ್ನು ಅಧ್ಯಯನ ಮಾಡಿದ್ದಾರೆ. ಸಮುದಾಯ, ಸರ್ಕಾರ ಸೇರಿದಂತೆ ಯಾರೇ ಕೇಳಿದರೂ ಕೆರೆ ಪುನಶ್ಚೇತನ ಕಾರ್ಯಗಳಿಗೆ ಮಾರ್ಗದರ್ಶನ ನೀಡುತ್ತಿದ್ದಾರೆ. ಪ್ರತಿ ಕೆರೆಯ ಜೊತೆಗಿನ ಒಡನಾಟವನ್ನು ‘ಕೆರೆ ನೋಡಿರೋ’ ಕೃತಿಯಲ್ಲಿ ದಾಖಲಿಸಿದ್ದಾರೆ.

ಈ ಕೃತಿಯಲ್ಲಿ 34 ಕೆರೆಗಳ ವಿಭಿನ್ನ ಹಾಗೂ ವಿಶಿಷ್ಟ ದೃಷ್ಟಾಂತಗಳಿವೆ. ಬೀದರ್‌ನಿಂದ ಚಾಮರಾಜನಗರದವರೆಗೆ, ಮಲೆನಾಡು–ಕರಾವಳಿಯಿಂದ ಬಯಲು ಸೀಮೆವರೆಗಿರುವ ಕೆರೆ ಪುನಶ್ಚೇತನ, ನಿರ್ಮಾಣದ ಯಶೋಗಾಥೆಗಳಿವೆ. ‘ಕೆರೆಗಳ ಓದು’ ಅಧ್ಯಾಯದಲ್ಲಿ ಶಾಲೆಗೆ ಹೋಗದ ಮಂದಿ ಶತಮಾನಗಳ ಹಿಂದೆ ನಾಡಿನ ಮೂಲೆ ಮೂಲೆಗಳಲ್ಲಿ ಕೆರೆಗಳನ್ನು ನಿರ್ಮಿಸಿದ್ದನ್ನು ಉದಾಹರಿಸಿದ್ದಾರೆ. ‘ಕೆರೆ ಕಟ್ಟೆಗೆ ಜೀವ ಬಲಿ’ ಅಧ್ಯಾಯದಲ್ಲಿ ಕೆರೆಗೆ ಹಾರವಾದ ಭಾಗೀರಥಿಯಂತಹವರು ಕಥೆಗಳಿವೆ.

ಶಾಸನಗಳಲ್ಲಿ ಕೆರೆಗಳನ್ನು ದರ್ಶನ ಮಾಡಿಸುತ್ತಲೇ, ಎರೆ ಮಣ್ಣಿನ ಕೆರೆಯ ಕಥೆಗಳನ್ನು ಕಟ್ಟಿಕೊಟ್ಟಿದ್ದಾರೆ. ಒರತೆಯಿಂದ ಕೆರೆಗಳು ತುಂಬುವ ಒಳಗುಟ್ಟುಗಳನ್ನು ಬಿಚ್ಚಿಡುತ್ತಾ, ಬಂಡೆ ಬೆಟ್ಟದ ಕೆರೆಯ ಬೆರಗಿನ ಕಥೆಯನ್ನೂ ದಾಖಲಿಸಿದ್ದಾರೆ. ಕೆರೆಯಲ್ಲಿ ಕಳೆಗಳು ಬೆಳೆಯುವ ಪರಿಯನ್ನು ವಿವರಿಸುತ್ತಾರೆ. ಅತಿವೃಷ್ಟಿ–ಅನಾವೃಷ್ಟಿಯನ್ನು ಹೇಳುತ್ತಾ, ಎರಡನ್ನೂ ಗೆಲ್ಲುವುದಕ್ಕಿರುವ ಮಾರ್ಗಗಳನ್ನು ‘ಊರು ಗೆಲ್ಲುವ ನೀರ ದಾರಿಗಳು’ ಅಧ್ಯಾಯದಲ್ಲಿ ತೋರಿಸಿದ್ದಾರೆ.

ಜನರ ಬಳಿ ಹಣವಿಲ್ಲ. ಸರ್ಕಾರದಿಂದ ನೆರವು ಕೇಳಲಿಲ್ಲ. ಆದರೂ ಐದಾರು ದಶಕಗಳಿಂದ ಹಾಳಾಗಿದ್ದ ಕೆರೆ, ಜನರಿಂದ ಮರುಜೀವ ಪಡೆಯಿತು. ನರೇಗಲ್ಲಿನಲ್ಲಿ ಸಾಕಾರಗೊಂಡ ಈ ಸೋಜಿಗದ ಕೆರೆ ಕಥೆ, ಕೊಪ್ಪಳದ ಗವಿಮಠದಶ್ರೀಗಳು ಜಲಕಾಯಕಕ್ಕೆ ಶರಣೆನ್ನುತ್ತಾ ಜನಸಹಭಾಗಿತ್ವದೊಂದಿಗೆ ಕೆರೆಗಳ ಪುನಶ್ಚೇತನಗೊಳಿಸಿದ್ದು, ವೀರೇಂದ್ರ ಹೆಗ್ಗಡೆಯವರು ಶ್ರೀಕ್ಷೇತ್ರಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಮೂಲಕ 800 ಕೆರೆಗಳ ಪುನರುಜ್ಜೀವನಕ್ಕೆ ಕೈಜೋಡಿಸಿದ್ದು, ನಟ ಯಶ್, ‘ಯಶೋ ಮಾರ್ಗ’ದ ಮೂಲಕ ಯಲಬುರ್ಗ ತಾಲ್ಲೂಕಿನ ತಲ್ಲೂರು ಕೆರೆ ಹೂಳೆತ್ತಿಸಿ, ನೀರಾಸರೆಯಾದಂತಹ ಸ್ಫೂರ್ತಿದಾಯಕ ಯಶೋಗಾಥೆಗಳು ಕೃತಿಯಲ್ಲಿವೆ.

‘ಕೆರೆಯ ಹೂಳಿಗಿಂತ ಮಂಚೆ ತಲೆಯಲ್ಲಿರುವ ಹೂಳು ತೆಗೆಯಬೇಕು’ ಎಂದು ಹೇಳುತ್ತಲೇ ಕೆರೆ ಪುನಶ್ಚೇತನ ಕಾರ್ಯಗಳಿಗೆ ಸಮುದಾಯವನ್ನು ಅಣಿಯಾಗಿಸಿದ ಅವರು, ಈ ಕೃತಿಯ ಮೂಲಕ ನಾಡಿನ ಜನತೆಯನ್ನು ಕೆರೆ ಕಾಯಕಕ್ಕೆ ಆಹ್ವಾನಿಸುತ್ತಾರೆ.



ಪು: 192 ₹250

ಕೆರೆಯ ನೋಡಿರೋ
ಲೇ: ಶಿವಾನಂದ ಕಳವೆ
ಪ್ರ: ಸಾಹಿತ್ಯ ಪ್ರಕಾಶನ
ಸಂ: 94481 10034


ಭಾವಗೀತೆಗಳ ಗಾನ–ಯಾನಗಳ ಬಿಂಬ

ಕವಿಗಳ ಸಾಲುಗಳಿಗೆ ರಾಗದ ಮೂಲಕ ಭಾವ ತುಂಬುವುದರ ಜತೆಗೆ, ಅವರೊಂದಿಗಿನ ಒಡನಾಟದ ಸವಿನೆನಪುಗಳನ್ನು ದಾಖಲಿಸಿದ್ದಾರೆ ಭಾವಗೀತೆಗಳಿಗೆ ಜೀವ ತುಂಬಿದ ಗಾಯಕಿ ಎಚ್.ಆರ್. ಲೀಲಾವತಿ.

ಗಾನ ಯಾನ ಕಾವ್ಯ ಮಿಲನ (ನೆನಪುಗಳ ಕನ್ನಡಿಯಲ್ಲಿ ಕಂಡ ಮುಖಗಳು) ಎಂಬ ಶೀರ್ಷಿಕೆಯಡಿ ಪ್ರಕಟಗೊಂಡಿರುವ ಈ ಕೃತಿಯಲ್ಲಿ ತಮ್ಮ ವೃತ್ತಿ ಹಾಗೂ ಪ್ರವೃತ್ತಿಯೂ ಆದ ಭಾವಗೀತೆಗಳ ಗಾಯನದ ಪಯಣವನ್ನು ದಾಖಲಿಸಿದ್ದಾರೆ. 1950ರಿಂದಲೇ ಹಾಡುಗಾರಿಕೆ ಆರಂಭಿಸಿದ ಲೀಲಾವತಿ ಅವರು ಕವಿಗಳೊಂದಿಗಿನ ಒಡನಾಟವನ್ನು ನೆನಪಿಸಿಕೊಂಡಿದ್ದಾರೆ.

ಕುವೆಂಪು ಅವರ ಮೌನ ಧ್ಯಾನ, ಭಾವಗೀತೆಗಳನ್ನು ನಿಷ್ಠೆಯಿಂದ ಪ್ರೀತಿಸುವ ಗುಣ, ಕಾರಂತರ ದೈತ್ಯ ಸಾತ್ವಿಕ ಶಕ್ತಿ, ಮಾನವೀಯ ಗುಣ, ನೋವಿಗೆ ಮಿಡಿಯುವ ಮನ, ಪುತಿನ ಅವರೊಂದಿಗಿನ ಬಾಂಧವ್ಯ ಹಾಗೂ ಒಂದಷ್ಟು ತಿರುವು, ಕಯ್ಯಾರ ಅವರ ಎತ್ತರದ ನಿಲುವು ಹಾಗೂ ಮಧುರ ಗಾಯನ, ಕೆಎಸ್‌ನ ಅವರ ಪ್ರೀತಿ... ಹೀಗೆ ಎಚ್. ಆರ್. ಲೀಲಾವತಿಯವರು ಹೆಸರಾಂತ ಕವಿಗಳೊಂದಿಗಿನ ಒಡನಾಟವನ್ನು ಮೆಲುಕು ಹಾಕಿದ್ದಾರೆ. ಪರಮೇಶ್ವರ ಭಟ್ಟ, ಗೋಪಾಲಕೃಷ್ಣ ಅಡಿಗ, ಜಿಎಸ್ಎಸ್, ಹಾ.ಮಾ. ನಾಯಕ, ನಿಸಾರ್ ಅಹಮದ್, ರಾಮಚಂದ್ರ ಶರ್ಮ, ಸುಮತೀಂದ್ರ ನಾಡಿಗ, ಎಚ್‌ಎಸ್‌ವಿ, ಸಿದ್ದಲಿಂಗಯ್ಯ, ಎನ್.ಕೆ. ಕುಲಕರ್ಣಿ, ರಾಘವೇಂದ್ರ ಇಟಗಿ ಅವರ ಹಾಡುಗಳನ್ನು ಹಾಡುತ್ತಲೇ, ಕವಿಗಳ ಮೆಚ್ಚುಗೆಗೆ ಪಾತ್ರರಾಗಿದ್ದನ್ನು ಇಲ್ಲಿ ದಾಖಲಿಸಿದ್ದಾರೆ.

ಇದು ಕೇವಲ ಮೆಚ್ಚುಗೆ ಅಥವಾ ಪ್ರಶಂಸೆ ಪಡೆದ ಕೃತಿಯಾಗಷ್ಟೇ ಇರದೆ, ಆ ಕವಿಗಳೊಂದಿಗಿನ ಒಡನಾಟದಲ್ಲಿ ಎದುರಾದ ಕೆಲ ಸವಾಲುಗಳೂ ಅಲ್ಲಲ್ಲಿ ದಾಖಲಾಗಿವೆ. ತಮ್ಮ ಸಂಗೀತ ಬದುಕಿನಲ್ಲಿ ಪರಿಚಯವಾದ ಕವಿಗಳ ಒಡನಾಟದ ಜತೆಗೆ ಅವರ ಸ್ವಭಾವವನ್ನೂ ಅರಿತು, ದಾಖಲಿಸುವ ಪ್ರಯತ್ನವನ್ನು ಲೇಖಕಿ ಮಾಡಿದ್ದಾರೆ.



ಪು: 184 ₹250

ಗಾನ ಯಾನ ಕಾವ್ಯ ಮಿಲನ
ಲೇ: ಎಚ್.ಆರ್. ಲೀಲಾವತಿ
ಪ್ರ: ಬಹುರೂಪಿ
ಸಂ: 70191 82729

ಸಾದರ ಸ್ವೀಕಾರ

ಮಾರುಕಟ್ಟೆಯಲ್ಲಿನ ಹೊಸ ಪುಸ್ತಕಗಳ ಮಾಹಿತಿಗೆ ಮೊಬೈಲ್‌ನಲ್ಲಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಕಥೆ, ಕವಿತೆ, ಲೇಖನ, ಪ್ರತಿಕ್ರಿಯೆಗಳನ್ನು ಈ ಇ-ಮೇಲ್‌ಗೆ ಕಳುಹಿಸಿ
bhanuvara@prajavani.co.in

ಕಥೆ
ಜಯರಾಮಚಾರಿ ಅವರ **ಶುಗರ್**
ಮೊಬೈಲ್‌ನಲ್ಲಿ ಕಥೆ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
https://www.prajavani.net/short-story

ಕವನ
ನಿಂಗಪ್ಪ ಮುದೇನೂರು ಅವರ **ಕ್ಯೂಆರ್ ಕೋಡ್ ಕವಿತೆ**
ಮೊಬೈಲ್‌ನಲ್ಲಿ ಕವನ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
https://www.prajavani.net/poetry

ರೊಟ್ಟಿ ತಟ್ಟುತ್ತ, ಬದುಕು ಕಟ್ಟಿಕೊಳ್ಳುತ್ತ...

8ನೇ ಪುಟದಿಂದ..

ಬಹುತೇಕರಿಗೆ ಕಾಳು, ಝುಣಕಾ, ಸೊಪ್ಪಿನ ಪಲ್ಯ, ಇವರು ಕೊಡುವ ಎಳೆ ಸೌತೆಕಾಯಿ, ಗಜ್ಜರಿ ಮತ್ತು ಬಿಸಿ ರೊಟ್ಟಿಯೂಟ ಆರೋಗ್ಯವನ್ನು ಗಟ್ಟಿಗೊಳಿಸಿತು. ಬಾಯಿಂದ ಬಾಯಿಗೆ ರುಚಿಕರ ಅಡುಗೆಯ ಕುರಿತ ಮೆಚ್ಚುಗೆಯ ಮಾತು ಹರಡಿದಂತೆಲ್ಲ ಮೀನಾಕ್ಷಿ ಅವರ ಆತ್ಮಬಲ ದೃಢವಾಗುತ್ತ ಹೋಯಿತು. ಸರ್ಕಾರಿ ಕಚೇರಿಯ ಔತಣಗಳು ಬರತೊಡಗಿದವು. ಮನೆಯಲ್ಲಿ ಸಹೋದರ ಮತ್ತು ತಂದೆ ಇವರ ಬೆನ್ನಿಗೆ ನಿಂತರು. ಸಂತೆ ಮಾಡುವುದು, ಗುಣಮಟ್ಟದ ಸರಕು ಒದಗಿಸುವುದು ಅವರ ಜವಾಬ್ದಾರಿ ಆಯಿತು. ಅಮ್ಮ ಸಾಂಪ್ರದಾಯಿಕ ಅಡುಗೆಗಳನ್ನೆಲ್ಲ ಕಲಿಸಿಕೊಟ್ಟರು. ಅತ್ತಿಗೆಯರಾದ ವೀಣಾ ಮಲ್ಲಿಕಾರ್ಜುನ್ ಅಂಗಡಿ ಮತ್ತು ಪ್ರಿಯಾ ಮಹೇಶ ಅಂಗಡಿ ಇಬ್ಬರೂ ಮೇಲ್ವಿಚಾರಣೆಗೆ ಜೊತೆಯಾದರು. ಅಣ್ಣ ಮಲ್ಲಿಕಾರ್ಜುನ್ ದೈವಾಧೀನರಾದರು. ಅವರ ಮಕ್ಕಳನ್ನು ಓದಿಸಿ ತಮ್ಮ ಕಾಲಮೇಲೆ ನಿಲ್ಲಿಸಿದ್ದೂ ಇದೇ ವ್ಯಾಪಾರ.

ಕೆಲಸ ಬೆಳೆದಂತೆಲ್ಲ ಸಹಾಯದ ಕೈಗಳು ಬೇಕೆನಿಸಿದವು. ವೈಧವ್ಯ ಅನುಭವಿಸಿ, ವೈರಾಗ್ಯ ತಳೆದು, ಬದುಕು ಬೇಡವೆಂದಿದ್ದ ಮೀನಾಕ್ಷಿಗೆ ಆ ನೋವಿನ ಅರಿವಿತ್ತು. ಅಂಥವರಿಗೇ ಸಹಾಯ ಮಾಡಬಾರದೇಕೆ ಅನಿಸಿದ್ದೇ ದುರ್ಬಲ ಮಹಿಳೆಯರನ್ನು ಒಟ್ಟುಗೂಡಿಸಿದರು. ವಿಧವೆಯರು, ಗಂಡ ಬಿಟ್ಟವರು ಇವರೊಟ್ಟಿಗೆ ಕೈ ಜೋಡಿಸಿದರು. ಬೆಳಗಾವಿಯ ಗ್ರಾಮೀಣ ವಿಭಾಗದಲ್ಲಿ ಈಗಲೂ ಮನೆಯಿಂದಾಚೆ ಬಾರದ ಮಹಿಳೆಯರಿದ್ದಾರೆ. ಅವರ ಬಳಿ ಹೋಗಿ ಹಿಟ್ಟು ಕೊಟ್ಟು ಬಂದು, ಸೌತಿ ಬೀಜ, ಪರಡಿ, ಶ್ಯಾವಿಗೆಗಳನ್ನು ಮಾಡಿಕೊಡಲು ಕೇಳಿದರು. ಅವರಿಗೂ ಸೀಮಿತ ಚೌಕಟ್ಟಿನಲ್ಲಿ ಆದಾಯ ಒದಗಿಸುವ ಕೆಲಸ ನೀಡಿದರು.



ಬಿಸಿಬಿಸಿ ಹೋಳಿಗೆ

ಇನ್ನೂ ಕೆಲವಷ್ಟು ಜನರು ಬಾಳಕದ ಮೆಣಸಿನಕಾಯಿ, ಬಗೆಬಗೆಯ ಹಪ್ಪಳ ಮಾಡಿಕೊಡಲಾರಂಭಿಸಿದರು. ಮೀನಾಕ್ಷಿ ಅವರ ಮಾರುಕಟ್ಟೆ ವಿಸ್ತರಿಸತೊಡಗಿತ್ತು. ಒಮ್ಮೆ ಕೈಗಾರಿಕಾ ಸಚಿವರಾಗಿದ್ದ ಮುರುಗೇಶ ನಿರಾಣಿ ಅವರಿಗೆ ಊಟ ಬಡಿಸಿದಾಗ, ರುಚಿಕಟ್ಟಾದ ಊಟ ಮಾಡಿ, ಇವರ ವ್ಯವಸ್ಥೆಯನ್ನೆಲ್ಲ ವಿಚಾರಿಸಿಕೊಂಡಿದ್ದರು. ಡ್ವಾಕ್ರಾ ಯೋಜನೆ ಅಡಿ ಇವರಿಗೆ ಕೈಗಾರಿಕಾ ಪ್ರದೇಶದಲ್ಲಿ ನಿವೇಶನವನ್ನು ರಿಯಾಯ್ತಿ ದರದಲ್ಲಿ ಒದಗಿಸಿಕೊಡುವ ವ್ಯವಸ್ಥೆ ಮಾಡಿದರು. ಇದೀಗ ಅಲ್ಲಿ ದೊಡ್ಡ ಪ್ರಮಾಣದಲ್ಲಿ ಚಕ್ಕಲಿ, ಕೋಡುಬಳೆ, ಅವಲಕ್ಕಿ, ಚುರುಮುರಿ, ಭಡಂಗ್ ಮುಂತಾದ ಕುರುಕಲು ತಿಂಡಿಗಳನ್ನು ತಯಾರಿಸುತ್ತಾರೆ.

‘ಬದುಕು ಬೇಡವೆನಿಸಿದ ಗಳಿಗೆಯಲ್ಲಿ ಒಂದಡಿ ಮುಂದಡಿ ಇಟ್ಟಿದ್ದರೆ ಸಾವಿತ್ತು. ಒಂದಡಿ ಹಿಂದಿಟ್ಟರೆ ನೋವಿತ್ತು. ಆದರೆ ಬದುಕಿನಲ್ಲಿ ಅಚಲವಾಗಿ ನಿಲ್ಲಲು ಅಪ್ಪ, ಅಮ್ಮ, ಅಣ್ಣಂದಿರು, ಅಕ್ಕಂದಿರು ಸಹಾಯ ಮಾಡಿದರು. ಜೊತೆಗೆ ನಿಂತರು. ಅವರ ಮಕ್ಕಳನ್ನೇ ನನ್ನ ಮಕ್ಕಳೆಂದುಕೊಂಡು, ಶಿಕ್ಷಣ ಕೊಡಿಸಿದೆ. ನನಗೆ ಮಾತನಾಡಲು ಆಗುವುದಿಲ್ಲ. ಈಗಲೂ ನೇಣಿಗೆ ಶರಣಾದ ನನ್ನ ಗಂಡನ ಮುಖವೇ ಕಣ್ಮುಂದೆ ಬರುತ್ತದೆ. ಮತ್ತೆ ನನ್ನಂಥ ಅಬಲೆಯರಿಗೆ ಸಹಾಯ ಮಾಡುವ ಉಮ್ಮೇದೂ ಮೂಡುತ್ತದೆ. ನಮ್ಮ ನೋವು, ನಮಗೆ ದೊಡ್ಡದಾಗಿರಬಹುದು. ಇನ್ನೊಬ್ಬರಿಗೆ ಆ ನೋವು ನಲಿವಾಗಿ ಬದಲಿಸುವ ಶಕ್ತಿ ನಮಗೇ ಇರುತ್ತದೆ’ ಎನ್ನುತ್ತಲೇ ತಮ್ಮ ಕಣ್ಣಪಸೆ ಒರೆಯಿಸಿಕೊಂಡರು.

‘ನನ್ನ ಬಳಿ ಕೆಲಸಕ್ಕೆ ಇರುವವರೆಲ್ಲ ದಶಕದಿಂದಲೂ ಜೊತೆಗಾರ್ತಿಯರಾಗಿದ್ದಾರೆ. ಒಮ್ಮೆ ರೊಟ್ಟಿ ಬಡಿಯಲು ಕುಳಿತರೆ ಎಲ್ಲರೂ ಸೇರಿ ಐದು ಸಾವಿರ ರೊಟ್ಟಿ ಬಡೆಯುತ್ತೇವೆ. ನಮ್ಮ ಧೀಃಶಕ್ತಿಗೆ ಮನೋಸ್ಥೈರ್ಯವೇ ಕಾರಣ. ಜಿಲ್ಲಾಪಂಚಾಯಿತಿ, ಜಿಲ್ಲಾಧಿಕಾರಿ ಕಚೇರಿ ನಮ್ಮ ಬೆಂಬಲಕ್ಕೆ ನಿಂತಿದೆ. ಸರ್ಕಾರದ ಯೋಜನೆಗಳನ್ನು ತಿಳಿಸಿ ಹೇಳುತ್ತಾರೆ. ಅವುಗಳ ಲಾಭ ಪಡೆದಿದ್ದೇವೆ. ಮುನ್ನಡೆಯುತ್ತಿದ್ದೇವೆ. ನಮ್ಮೆಲ್ಲರದ್ದೂ ಒಂದೇ ಮನಸು. ಒಂದೇ ಕನಸು, ಯಾವ ವಿಧವೆಯೂ ಆತ್ಮಗೌರವ ಇಲ್ಲದಂತಿರಬಾರದು’

‘ಮಾತಾಡೋರು ನೂರು ಮಾತಾಡ್ತಾರೆ. ಗಂಡ ಸತ್ತರೂ ಇವಳು ಮೆರೆಯೋದು ಬಿಡಲಿಲ್ಲ ಎಂದೆಲ್ಲ ಜರೆದರು. ಜರೆದವರು ಯಾರೂ ನನ್ನ ಕಣ್ಣೀರು ಒರೆಯಿಸಿದವರಲ್ಲ. ಮಾತಾಡುವಷ್ಟು ವಿರಾಮದ ಸಮಯ ಇದ್ದೋರು ಅವರೆಲ್ಲ. ನಾನು ನನ್ನ ಕಣ್ಣೀರು ಒರೆಯಿಸಿಕೊಂಡು, ಇನ್ನೊಬ್ಬರ ಕಣ್ಣೀರು ಒರೆಸಲೆಂದೇ ಈ ಜನುಮ ಉಳಿದಿರೋದು ಎಂದು ನಂಬಿದಾಕೆ. ಎಲ್ಲಕ್ಕೂ ಬೆನ್ನು ಹಾಕಿ ಮುನ್ನಡೆದೆ’

ಹೀಗೆ ಆತ್ಮಸ್ಥೈರ್ಯದ ಮತ್ತು ಆತ್ಮಗೌರವದ ಮಾತಾಡುವ ಮೀನಾಕ್ಷಿ ಸದಾ ಹಾಡು ಕೇಳುತ್ತ, ಹಾಡು ಗುನುಗುತ್ತ ರೊಟ್ಟಿ ಬಡಿಯುತ್ತಾರೆ. ಚಪಾತಿ ಒತ್ತುತ್ತಾರೆ. ಉತ್ತರ ಕರ್ನಾಟಕದ ವಿಶೇಷ ತಿನಿಸಾದ ಜೋಳದ ವಡಿಯನ್ನು ಪ್ರೀತಿಯಿಂದ ಮಾಡಿ, ಗಟ್ಟಿಮೊಸರು, ಚಟ್ನಿಯೊಡನೆ ಉಣಬಡಿಸುತ್ತಾರೆ. ದೂರದ ಗಂಗಾವತಿ, ಕೊಪ್ಪಳ, ಹುಬ್ಬಳ್ಳಿ, ಬೆಳಗಾವಿ, ಧಾರವಾಡ, ಬೆಂಗಳೂರಿಗೂ ಬಂದು ಊಟದ ವ್ಯವಸ್ಥೆ ಮಾಡಿಕೊಡುವ ಮೀನಾಕ್ಷಿ ಅವರಿಗೆ ಮರೆಯದ ನೆನಪೆಂದರೆ ಅಣ್ಣಾ ಹಜಾರೆ ಅವರು ಉಂಡು, ಒಂದಗುಳನ್ನೂ ಬಿಡದೆಯೇ ಟ್ಟೆ ತೊಳೆದು, ಆ ನೀರನ್ನು ಸೇವಿಸಿ, ಮೀನಾಕ್ಷಿ ಅವರಿಗೆ ವಂದಿಸಿದ್ದು.

ಅನ್ನಪೂರ್ಣೆಯ ಅನುಗ್ರಹವಿದೆ. ಅನ್ನದೇವರ ಮುಂದೆ ನಾವೆಲ್ಲರೂ ಭಕ್ತರು ಎಂಬ ವಿನೀತ ಭಾವ ಇರುವುದರಿಂದಲೇ 2000–5000 ಜನರಿಗೆ ಊಟದ ವ್ಯವಸ್ಥೆ ಮಾಡುವುದೂ ಸಲೀಸಾಗಿದೆ ಎನ್ನುವ ಮೀನಾಕ್ಷಿ ಮಿಶ್ರಿಕೋಟಿ ಅವರ ಬಳಿ, ಮಿಶ್ರಿ ಸವಿಯ ಕೋಟಿಕೋಟಿ ಕತೆಗಳಿವೆ.

ಮೀನಾಕ್ಷಿ ಮಳಿಗೆಯಲ್ಲಿ ಊಟದ ವೈವಿಧ್ಯ

ಇಂದು ರಾಜ್ಯದಾದ್ಯಂತ ಮೀನಾಕ್ಷಿ ಕೇಟರ್ಸ್ ಹೆಸರು ಮಾಡಿದೆ. ವಿದೇಶಕ್ಕೂ ಇವರು ತಯಾರಿಸಿದ ಉಪ್ಪಿನಕಾಯಿ, ಹೋಳಿಗೆ ಹಾಗೂ ವೈವಿಧ್ಯಮಯ ಉಂಡೆಗಳು ತಲುಪಿವೆ. ಬೆಳಗಾವಿಯಲ್ಲಿ ನಡೆಯುವ ಚಳಿಗಾಲದ ಅಧಿವೇಶನದಲ್ಲಿ ಪೊಲೀಸ್ ಇಲಾಖೆಗೆ ಮೂರು ಹೊತ್ತೂ ಬಿಸಿಬಿಸಿ ಊಟ ತಲುಪಿಸುವ ಜವಾಬ್ದಾರಿ ಇವರದ್ದೇನೆ.

ಬಿಳಿಜೋಳ, ಸಜ್ಜೆ, ಮೆಕ್ಕೆಜೋಳ, ರಾಗಿ ರೊಟ್ಟಿ, ಹೂರಣದ ಹೋಳಿಗೆ, ಸೇಂಗಾ, ಕಾಯಿ, ಖರ್ಜೂರ ಹಾಗೂ ಸಜ್ಜಿಗೆಯ ಹೋಳಿಗೆ, ಸೀಸನ್ ಇದ್ದಾಗ ಗೆಣಸಿನ ಹೋಳಿಗೆಯನ್ನೂ ಸಿದ್ಧ ಪಡಿಸಿಕೊಡುತ್ತಾರೆ. ಗೋಧಿ, ಬೇಸನ್, ರವೆ, ಹೆಸರು, ಅಂಟಿನುಂಡೆ, ಡಿಂಕಿನುಂಡೆ ಆರೋಗ್ಯಕರ ಉಂಡೆಗಳು, ಶುದ್ಧ ತುಪ್ಪದಲ್ಲಿ ತಯಾರಿಸುವುದರಿಂದ ನಾಲ್ಕೈದು ತಿಂಗಳೂ ಕೆಡುವುದಿಲ್ಲವಂತೆ. ಇವರ ಬಳಿ ಮಾಡಿದ್ದೆಲ್ಲವೂ ಎರಡೇ ದಿನಗಳಲ್ಲಿ ಖರ್ಚಾಗುತ್ತವೆ. ಪ್ರತಿ ಎರಡು ದಿನಗಳಿಗೆ ಒಮ್ಮೆ ಉಂಡೆಯನ್ನು ಮಾಡಿಕೊಡುತ್ತಾರೆ.

ಬಳ್ಳೊಳ್ಳಿ, ಅಗಸಿ, ಗುರೆಳ್ಳು, ಸೇಂಗಾ, ಮಸಾಲಿಖಾರ, ಮೆಂತ್ಯ ಹಿಟ್ಟು, ಹುಣಸಿತೊಕ್ಕು, ಹುಣಸಿಚಿಗಳಿ, ಡ್ರೈಫ್ರೂಟ್ ಉಪ್ಪಿನಕಾಯಿ, ಸಿಹಿ ಉಪ್ಪಿನಕಾಯಿ, ನಿಂಬೆ, ಮಾವು, ಮಿಕ್ಸ್ ಉಪ್ಪಿನಕಾಯಿಗಳನ್ನೆಲ್ಲ ಮಾಡುತ್ತಾರೆ. ಫ್ಯಾಕ್ಟರಿಯಲ್ಲಿ ಸದಾ ಕೆಲಸ ಸಾಗುತ್ತಿರುತ್ತದೆ. ಸೀಮಂತಕ್ಕೆ, ಮದುವೆಯ ಸುರಗಿ ನೀಡಲು ಇವರ ಬಳಿ ವೈವಿಧ್ಯಮಯ ತಿಂಡಿಗಳನ್ನು ಮಾಡಿಸಿಕೊಂಡು ಹೋಗುತ್ತಾರೆ. ಸಾಂಪ್ರದಾಯಿಕವಾಗಿ ಮಾಡುವ ಸೌತಿಬೀಜ, ಪರಡಿ, ಜೋಳದ ವಡಿ ಮಾದ್ಲಿ, ಕರಚಿಕಾಯಿಗಳನ್ನು ಮಾರಾಟ ಮಾಡುತ್ತಾರೆ.


ನೇತ್ರಾಣಿ ದ್ವೀಪ ಸ್ಕೂಬಾ ಡೈವಿಂಗ್ ಜಪ

8ನೇ ಪುಟದಿಂದ...

ಸೂರ್ಯನ ಪ್ರಕಾಶಕ್ಕೆ ಸ್ಫಟಿಕದಂತೆ ಹೊಳೆಯುವ ನೀರು, ಮನೋಹರವಾದ ಹವಳದ ದಿಬ್ಬಗಳು, ತಂಡೋಪ ತಂಡವಾಗಿ ಕಣ್ಣ ಮುಂದೆ ಓಡಾಡುತ್ತಾ ಮನಸ್ಸಿಗೆ ಕಚಗುಳಿ ನೀಡುವ ಬಣ್ಣ ಬಣ್ಣದ ಚಿಟ್ಟೆ ಮೀನು, ಟ್ರಿಗರ್ ಮೀನು, ಗಿಳಿ ಮೀನು, ಈಲ್‌ಗಳು ಮತ್ತು ಸೀಗಡಿಗಳಂತಹ ಸಮುದ್ರಜೀವಿಗಳನ್ನು ನೋಡಿದಾಗ ಆಗುವ ಸಂತಸಕ್ಕೆ ಪಾರವೇ ಇರುವುದಿಲ್ಲ. ನಾವೂ ಸಹ ಅವುಗಳೊಂದಿಗೆ ಈಜುತ್ತಾ, ಅವುಗಳನ್ನು ಹಿಡಿಯಬೇಕೆಂದು ಬೆನ್ನಟ್ಟಿದರೆ ಎದುರಾದದ್ದು ಕಡಲಾಮೆ. ಕಪ್ಪೆಚಿಪ್ಪು, ಶಂಖ, ಜಲಸಸ್ಯಗಳು ಬಹಳವಾಗಿ ಆಕರ್ಷಿಸಿದವು. ಇವುಗಳ ನಡುವೆ ‘ನಮ್ಮ ಡೈವಿಂಗ್ ಮಾಸ್ಟರ್ ನಮ್ಮ ಜೊತೆ ಇದ್ದಾರೆ ಅಲ್ವಾ’ ಎಂದು ಖಾತ್ರಿ ಪಡಿಸಿಕೊಳ್ಳಲು ಮನಸ್ಸು ಮರೆಯುವುದಿಲ್ಲ!.

ಭಾರತೀಯ ನೌಕಾಪಡೆಯು ಗುರಿ ಅಭ್ಯಾಸಕ್ಕಾಗಿ ಈ ದ್ವೀಪದಲ್ಲಿ ತಾಲೀಮು ನಡೆಸುತ್ತಿದ್ದ ಕಾರಣ ಶೆಲ್‌ಗಳ ಚೂರುಗಳನ್ನು ಕಾಣಬಹುದು. ನಮಗಿರುವ 30 ನಿಮಿಷದಲ್ಲಿ ಕೊಂಚ ಗಾಬರಿ ಹಾಗೂ ದುಪ್ಪಟ್ಟು ಕುತೂಹಲದಿಂದ ಡೈವ್ ಮಾಡುತ್ತಾ, ಕಡಲಾಳದ ಸೌಂದರ್ಯವನ್ನು ಆಸ್ವಾದಿಸುತ್ತಾ ಸಾಗಿದಂತೆ ಮೇಲೆ ಬರಲು ಮನಸ್ಸೇ ಆಗುವುದಿಲ್ಲ. ನಾವು ಸಹ ಆ ಜಲಚರಗಳಂತೆ ಪ್ರಶಾಂತವಾಗಿ ತಮ್ಮದೇ ಲೋಕದಲ್ಲಿ ಹಾಯಾಗಿ ವಿಹರಿಸುತ್ತಾ ಇದ್ದಿದ್ದರೆ ಎಷ್ಟು ಚೆನ್ನಾಗಿರುತ್ತಿತ್ತು ಅಲ್ಲವೇ ಎಂದು ಸ್ಕೂಬಾ ಡೈವಿಂಗ್ ಮಾಡಿದ ಪ್ರತಿಯೊಬ್ಬರಿಗೂ ಅನಿಸಿದೆ ಇರದು. ಇದುವೇ ಸ್ಕೂಬಾ ಡೈವ್ ವೈಶಿಷ್ಟ್ಯ.

ಸ್ಕೂಬಾ ಡೈವಿಂಗ್ ನೀಡುವ ಅನುಭವ ಒಂದು ತೆರನಾಗಿದ್ದರೆ, ಇನ್ನು ಸಮುದ್ರದ ಮೇಲ್ಭಾಗದಲ್ಲಿ ಈಜುತ್ತಲೇ ಸ್ನಾರ್ಕ್ಲಿಂಗ್ ಮಾಡುತ್ತಲೇ ತಳಭಾಗದಲ್ಲಿರುವ ಸೌಂದರ್ಯವನ್ನು ಸವಿಯುವ ಅನುಭವ ಇನ್ನೂ ಭಿನ್ನ. ನೇತ್ರಾಣಿ ದ್ವೀಪದ ಕಡಲಿನಲ್ಲಿ ಡೈವ್ ಮಾಡುವಾಗ ಮೀನುಗಳನ್ನು ಮುಟ್ಟಲು ಅಥವಾ ಹವಳಗಳನ್ನು ಹಾನಿಗೊಳಿಸಲು ಮತ್ತು ಯಾವುದೇ ವಸ್ತುಗಳನ್ನು ಸಮುದ್ರಕ್ಕೆ ಎಸೆಯಲು ಅವಕಾಶವಿಲ್ಲ. ಬೋಟ್‌ಗಳು ಸಂಜೆ 4.30 ರಿಂದ ಸಂಜೆ 5.30 ರ ನಡುವೆ ಹಿಂತಿರುಗಲಾಗುತ್ತದೆ.



‘ಚಲನಚಿತ್ರ ತಾರೆಯರಾದ ಪುನೀತ್ ರಾಜಕುಮಾರ್, ಗಣೇಶ್, ದಿಗಂತ್ , ಡಾಲಿ ಧನಂಜಯ, ರಶ್ಮಿಕಾ ಮಂದಣ್ಣ ಸೇರಿದಂತೆ ವಿವಿಧ ಕ್ಷೇತ್ರದ ಗಣ್ಯರು ಇಲ್ಲಿಗೆ ಬಂದು ಸ್ಕೂಬಾ ಡೈವ್‌ನ ಖುಷಿಯನ್ನು ಅನುಭವಿಸಿದ್ದಾರೆ’ ಎಂದು ನೇತ್ರಾಣಿ ಗಣೇಶ್ ಮಾಹಿತಿ ನೀಡಿದರು.

ಸ್ಕೂಬಾ ಡೈವಿಂಗ್ ಸಾಹಸಮಯ ಚಟುವಟಿಕೆಯು ಹವಾಮಾನ ಪರಿಸ್ಥಿತಿಗೆ ಅನುಗುಣವಾಗಿ ಅಕ್ಟೋಬರ್‌ನಿಂದ ಮೇ ವರೆಗೆ ಪ್ರವಾಸೋದ್ಯಮ ಇಲಾಖೆ ಅನುಮತಿ ನೀಡುತ್ತದೆ. ಇದು ಉತ್ತರ ಕನ್ನಡ ಜಿಲ್ಲಾಡಳಿತದ ನಿಯಂತ್ರಣದಲ್ಲಿದೆ. ಡೈವರ್‌ಗಳು ಹತ್ತು ವರ್ಷಕ್ಕಿಂತ ಮೇಲ್ಪಟ್ಟವರಾಗಿರಬೇಕು. ಪ್ರತಿಯೊಬ್ಬರಿಗೆ ₹3,500 ರಿಂದ ₹4,000 ಶುಲ್ಕವನ್ನು ನಿಗದಿಪಡಿಸಲಾಗಿದೆ.

ವಿಶೇಷವಾಗಿ ನೇತ್ರಾಣಿ ದ್ವೀಪದ ಕಡಲು ಎಷ್ಟು ವೈವಿಧ್ಯಮಯ ಜಲಚರಗಳನ್ನು ಹೊಂದಿದೆಯೋ, ಅಷ್ಟೇ ಪ್ರಮಾಣದ ಅಪರೂಪದ ಪ್ರಾಣಿ ಸಂಕುಲವು ದ್ವೀಪದ ಮೇಲ್ಭಾಗದಲ್ಲಿದೆ. ಹಾಗಾಗಿ ದ್ವೀಪದ ಮೇಲೆ ಹತ್ತಲು ಪ್ರವಾಸಿಗರಿಗೆ ಅನುಮತಿ ಇಲ್ಲ. ಸ್ಕೂಬಾ ಡೈವಿಂಗ್ ಅಪರೂಪದ ಸಾಹಸಮಯ ಚಟುವಟಿಕೆ ಮಾತ್ರವಲ್ಲ, ಸಾಗರದ ಆಳದೊಳಗಿನ ಅತ್ಯದ್ಭುತ ಜೀವ ಜಗತ್ತಿನ ಬಗ್ಗೆ ತಿಳಿದುಕೊಳ್ಳಲು ಇರುವ ಒಂದು ಅವಕಾಶವು ಹೌದು.

ಕುವೆಂಪು ಪದ ಸೃಷ್ಟಿ ಜಿ.ಕೃಷ್ಣಪ್ಪ

ಜೇನುರುಳ್ಗೊಳ್ಳಿ


ಜೇನುರುಳ್ಗೊಳ್ಳಿ (ನಾ). ಜೇನಿನ ಉರುಳು ಕೊಳ್ಳಿ ಕುವೆಂಪು ಅವರು ಕೈಕೆಯು ತನ್ನ ಸುಂದರ ಶರೀರದಿಂದ ದಶರಥನನ್ನು ಸೆಳೆದುದನ್ನು ಹೀಗೆ ಚಿತ್ರಿಸಿದ್ದಾರೆ: ಆ ಹೊನ್ನಿನ ಬಳ್ಳಿಯು ಸ್ತ್ರೀಲಂಪಟನನ್ನು ಜೇನಿನ ಉರುಳುಕೊಳ್ಳಿಯಂತೆ ಬಿಗಿದು ಎಳೆಯಿತು!

ದೇಹಸವಿ ಕಾಮದ ಬೆಂಕಿಯನ್ನು ‘ಜೇನಿನ ಉರುಳುಕೊಳ್ಳಿ’ಯಂತೆ ಎಂಬ ಉಪಮಾನದಲ್ಲಿ ಚಿತ್ರಿಸಿ, ಅದು ಅವನನ್ನು ಬಿಗಿದು ಎಳೆದಾಡಿದ ಬಗೆಯನ್ನು ವರ್ಣಿಸಿರುವ ರೀತಿ ವಿಶಿಷ್ಟವಾಗಿದೆ.

**‘ಪೊಂಬಳ್ಳಿ
ಬಿಗಿದೆಳೆದುದಾ ಸ್ತ್ರೈಣನಂ, ಜೇನುರುಳ್ಗೊಳ್ಳಿಯೋಲ್!**

ಮಸಾಯ್ ಮಾರ ಕಾಡಿನಲ್ಲಿ ಕಳೆದ ದಿನಗಳು


ವನ್ಯಜೀವಿಗಳ ಬಗೆಗೆ ಅಪಾರ ಪ್ರೀತಿ ಹೊಂದಿರುವವರು ಒಮ್ಮೆಯಾದರೂ ಕೀನ್ಯಾದ ಮಸಾಯ್ ಮಾರಕ್ಕೆ ಭೇಟಿ ಕೊಡಲು ಹಂಬಲಿಸುತ್ತಾರೆ. ಇದೇ ರೀತಿಯ ಹಂಬಲ ಹೊಂದಿದ್ದ ಒಂದಷ್ಟು ಗೆಳೆಯರು ಈ ಅಭಯಾರಣ್ಯದಲ್ಲಿ ಕಳೆದ ದಿನಗಳ ಅವಿಸ್ಮರಣೀಯ ಅನುಭವ ಇಲ್ಲಿದೆ...



ನನಗಿದು ವಿಶ್ರಾಂತಿ ಸಮಯ



ಇದು ನಮ್ ಬೇಟೆ ಗೊತ್ತಾ?



ಸಿಕ್ಕಿದ್ದನ್ನು ಬಿಡೋ ಮಾತೇ ಇಲ್ಲ.

ಚಿತ್ರ–ಬರಹ: ಶೇಖರ್ ಗೌಳೇರ್

ಶತಮಾನಗಳ ಕಾಲ ಕಗ್ಗತ್ತಲೆಯ ಖಂಡವಾಗಿಯೇ ಉಳಿದಿದ್ದ ಆಫ್ರಿಕಾ ಈಗ ಜಗತ್ತಿನ ವನ್ಯಜೀವಿ ಸಫಾರಿಯ ಮೇರು ತಾಣ. ಮಾನವ ಸಂಬಂಧಿ ವಾನರುಗಳಾದ ಗೋರಿಲ್ಲಾ ಚಿಂಪಾಂಜಿಗಳಂಥ ಪ್ರಾಚೀನ ಪಳೆಯುಳಿಕೆಗಳು ಕೂಡ ಆಫ್ರಿಕಾದ ದಾಖಲೆಯಲ್ಲಿವೆ. ಪ್ರಪಂಚದ ಶೇಕಡ 25 ರಷ್ಟು ಕಾಡು ಪ್ರಾಣಿಗಳು ಆಫ್ರಿಕಾದಲ್ಲಿರುವುದು ಛಾಯಾಗ್ರಾಹಕರ ಪಾಲಿಗೆ ದೊಡ್ಡ ಆಕರ್ಷಣೆ. ಪ್ರತಿವರ್ಷ ಜಗತ್ತಿನ ಮೂಲೆ ಮೂಲೆಗಳಿಂದ ಸರಂಗೇಟಿ, ಮಸಾಯ್ ಮಾರ, ಬೋಟ್ಸವಾನಾ ಹಾಗೂ ಮೊಂಬಾಸಾಗಳಿಗೆ ವನ್ಯಜೀವಿ ಛಾಯಾಗ್ರಾಹಕರು, ಸಂಶೋಧಕರು ಹೆಚ್ಚಿನ ಸಂಖ್ಯೆಯಲ್ಲಿ ಭೇಟಿ ಕೊಡುತ್ತಾರೆ. ನನಗೂ ಒಮ್ಮೆಯಾದರೂ ಕೀನ್ಯಾದ ಮಸಾಯ್ ಮಾರಕ್ಕೆ ಹೋಗಬೇಕೆನ್ನುವ ಹಂಬಲವಿತ್ತು. ಒಮ್ಮೆ ನಿರ್ಧಾರ ಮಾಡಿ ಗೆಳೆಯರು ಸೇರಿ ಹೊರಟೇಬಿಟ್ಟೆವು.

ಕೀನ್ಯಾದ ರಾಜಧಾನಿ ನೈರೋಬಿ, ನಮ್ಮ ಮಲೆನಾಡಿನ ಯಾವ ಹಸಿರು ಪಟ್ಟಣಕ್ಕೂ ಕಮ್ಮಿ ಇರಲಿಲ್ಲ. ಬಿಸಿಲು ಏರುತ್ತಿದ್ದರೂ ತಂಪಾದ ಗಾಳಿ ಬೀಸುತ್ತಿತ್ತು. ಪಟ್ಟಣದ ಕ್ಯುರೋಶಾಪ್‌ಗಳನ್ನು ದಾಟಿದ ಕೂಡಲೇ ಬೆಟ್ಟಗಳ ಸರಣಿಯೇ ಮುಂದೆ ತೆರೆದುಕೊಂಡಿತ್ತು. ಜಗತ್ತಿನ ಪ್ರಸಿದ್ಧವಾದ 9,600 ಕಿಲೋಮೀಟರ್ ಉದ್ದದ 'ದಿ ಗ್ರೇಟ್ ರಿಫ್ಟ್ ಕಣಿವೆ'ಯ ಹೆಸರನ್ನು ಕೇಳಿದ್ದೆ, ನೋಡಿರಲಿಲ್ಲ. ಅದರ ಅದ್ಭುತ ಭೂದೃಶ್ಯಗಳ ನಡುವೆಯೇ ಪಯಣ ಸಾಗಿತ್ತು. ರಸ್ತೆ ಬದಿಯಲ್ಲಿಯೇ ಏಳೆಂಟು ಅಡಿ ಎತ್ತರ ಬೆಳೆದ ಹುಲ್ಲುಗಾವಲು, ಗೋಧಿ ಬೆಳೆಯ ಹೊಲ, ಮಧ್ಯ ಮಧ್ಯ ಛತ್ರಿ ಆಕಾರದ ಮರ, ಹಿಂಡು ಹಿಂಡು ಜಾನುವಾರು ಹಾಗೂ ಮಸಾಯಿ ಜನಾಂಗ ಹಾದಿಯುದ್ದಕ್ಕೂ ಎದುರಾಗುತ್ತಿದ್ದವು. ಬೆಟ್ಟಗಳ ಬದಿಯಲ್ಲಿರುವ ನ್ಯಾರೋಕ್ ಎಂಬ ಪುಟ್ಟ ಪಟ್ಟಣವನ್ನು ಬಿಟ್ಟರೆ ಯಾವ ಊರೂ ಕಾಣಿಸಲಿಲ್ಲ. ಎಲ್ಲಾ ಕಡೆ ವಿರಳವಾದ ಮನೆಗಳು, ಪ್ರತಿ ವರ್ಷ ಜುಲೈನಿಂದ ಅಕ್ಟೋಬರ್ ತಿಂಗಳಲ್ಲಿ ಲಕ್ಷಾಂತರ ವನ್ಯಜೀವಿಗಳು ಸೆರಂಗೇಟಿನಿಂದ ಮಸಾಯ್ ಮಾರದವರೆಗೆ ವಲಸೆ ಬರುತ್ತವೆ. ಮಹಾವಲಸೆಯ ವೀಕ್ಷಣೆ, ಛಾಯಾಗ್ರಹಣಕ್ಕಾಗಿ ಸಾವಿರಾರು ಪ್ರವಾಸಿಗರು ಬರುತ್ತಾರೆ. ಕೀನ್ಯಾಕ್ಕೆ ಅದು ಬಹುದೊಡ್ಡ ಆದಾಯದ ಮೂಲ. 1,500 ಚದರ ಕಿಲೋಮೀಟರ್ ವಿಸ್ತಾರದ ಜಗತ್ತಿನ ಬಹುದೊಡ್ಡ ಹುಲ್ಲುಗಾವಲನ್ನು ಕೀನ್ಯಾ ದೇಶ ಸಹಜವಾಗಿಯೇ ಇಟ್ಟುಕೊಂಡಿದೆ. ನೈರೋಬಿಯಿಂದ ಮಸಾಯ್ ಮಾರದವರೆಗಿನ 225 ಕಿಲೋಮೀಟರ್ ಕ್ರಮಿಸಿದಾಗ ಬರೀಮಣ್ಣಿನ ರಸ್ತೆಗಳೇ ಇದ್ದವು. ಸುತ್ತ ಎತ್ತ ನೋಡಿದರೂ ಸಹಜ ಕುರುಚಲು ಕಾಡಿನ ವಾತಾವರಣ. ನಾವು ಸಂಜೆ ಹೊತ್ತಿಗೆ ಮಸಾಯ್ ಮಾರದ ರೆಸಾರ್ಟ್‌ವೊಂದಕ್ಕೆ ತಲುಪಿದೆವು. ಅದೊಂದು ಪ್ರಶಾಂತ ಜಾಗ.

ಪ್ರವಾಸ

ಮಾರನೆ ದಿನ ಬೆಳಗ್ಗೆಯೇ ನಮ್ಮ ಸಫಾರಿ ಆರಂಭವಾಯಿತು. ಒಂದು ಕಾಲಕ್ಕೆ ಬಿಗ್ ಫೈವ್ ಪ್ರಾಣಿಗಳಾದ ಆಫ್ರಿಕನ್ ಎಲಿಫೆಂಟ್, ಕೇಫ್ ಬಫೆಲೋ, ರೈನೋಸಾರಸ್, ಸಿಂಹ ಹಾಗೂ ಚಿರತೆಗಳು ಭಯಾನಕವೆಂದು ತಿಳಿದ ಬೇಟೆಗಾರರು ಅವುಗಳನ್ನು ಬೆನ್ನಟ್ಟಿ ಕೊಲ್ಲುತ್ತಿದ್ದರು. ಈಗ ಅವುಗಳೇ ಮೂಲ ಆಕರ್ಷಣೆ. ಒಂದೇ ದಿನದಲ್ಲಿ ಚಿರತೆಯೊಂದನ್ನು ಬಿಟ್ಟು ಉಳಿದೆಲ್ಲಾ ಬಿಗ್‌ಫೈವ್ ಪ್ರಾಣಿಗಳನ್ನು ನೋಡಿ ಸಂತಸಪಟ್ಟೆವು.



ಈ ಸಂಭಾಷಣೆ...

ಚಿರತೆ ಬೇಟೆಯ ಸುತ್ತ... !

ಎರಡನೇ ದಿನ ಮಧ್ಯಾಹ್ನದ ಊಟ ಮುಗಿಸಿ ಹೊರಟಾಗ ನಮ್ಮ ಡ್ರೈವರ್ ಡೇವಿಡ್‌ಗೆ 'ಚಿರತೆ ಕಾಣಿಸಿಕೊಂಡಿದೆ' ಎಂಬ ಸುದ್ದಿ ಬಂತು. ಚಿರತೆಯ ವಿಷಯ ಕೇಳಿದ ಕೂಡಲೇ ನಮ್ಮವರೆಲ್ಲರಿಗೂ ಕುತೂಹಲ ಮೂಡಿತು. ಸಫಾರಿ ಜೀಪುಗಳು ಧೂಳೆಬ್ಬಿಸಿಕೊಂಡು ವೇಗವಾಗಿ ಹೊರಟವು. ಅಷ್ಟರಲ್ಲಿಯೇ ಬಯಲಿನಲ್ಲಿ ಎರಡು ಜೀಪು ನಿಂತಿದ್ದವು. ಸುಮಾರು 50 ಅಡಿ ದೂರದಲ್ಲಿ ನೀರಿನ ಗುಂಡಿಯ ಬಳಿ ಚಿಗರೆ ನೀರು ಕುಡಿಯಲು ನಿಂತಿತ್ತು. ಬಾಲವನ್ನು ಅತ್ತ ಇತ್ತ ಅಲ್ಲಾಡಿಸುತ್ತ, ನೋಡುತ್ತ ಅದು ಚಡಪಡಿಸುತ್ತಿತ್ತು. ಎಷ್ಟು ಹೊತ್ತಾದರೂ ಅದು ನೀರು ಕುಡಿಯಲು ಹೋಗಲೇ ಇಲ್ಲ. ಯಾಕಿರಬಹುದೆಂದು ನಮಗೆ ಅಚ್ಚರಿಯಾಯಿತು. ಅನುಭವಿ ಡ್ರೈವರ್ ಬೆರಳು ತೋರಿಸಿ ಚಿರತೆ ಎಂದು ಮೆಲ್ಲನೆ ಉಸುರಿದ. ತುಸು ದೂರದಲ್ಲಿ ಹುಲ್ಲಿನ ಮೆದೆಯೊಳಗೆ ಚಿರತೆ ಓಡುಗಾಲಿನ, ಮುದುಡಿದ ಭಂಗಿಯಲ್ಲಿ ಹೊಂಚು ಹಾಕಿ ಕುಳಿತಿತ್ತು. ಕೆಲವೇ ಕ್ಷಣದಲ್ಲಿ ಚಿರತೆ ಮಿಂಚಿನ ವೇಗದಲ್ಲಿ ನೆಗೆದು ಬಂದು ಚಿಗರೆಯ ಹಿಂಭಾಗದ ಕತ್ತಿಗೆ ಬಾಯಿಹಾಕಿ, ಬಲವಾಗಿ ಕಚ್ಚಿ, ಬೆನ್ನೆಲುಬನ್ನು ನಿಷ್ಕ್ರಿಯೆಗೊಳಿಸಿತು. ವಿಲವಿಲ ಒದ್ದಾಡಿದ ಚಿಗರೆ ಪ್ರಾಣ ಬಿಟ್ಟಿತು. ಚಿರತೆ ಬೇಟೆಯನ್ನು ಎಳೆದುಕೊಂಡು ಹತ್ತಿರದ ಮರದ ನೆರಳಿಗೆ ತೆರಳಿ ವಿಶ್ರಾಂತಿ ಪಡೆಯಿತು. ಹಸಿವು, ಆಸೆಯನ್ನು ತಡೆದುಕೊಳ್ಳಲಾರದ ಚಿರತೆ, ಬೇಟೆ ಪ್ರಾಣಿಯ ಹಿಂಭಾಗದಿಂದ ತಿನ್ನಲು ಆರಂಭಿಸಿತು. ಮುಂಗಾಲ ಮತ್ತು ಬಾಯಿಗೆ ಬಿಡುವಿಲ್ಲದ ಕೆಲಸ.

ಅಷ್ಟರಲ್ಲಿ ಸಫಾರಿಯ ಹದಿನಾಲ್ಕು ಜೀಪು ಸುತ್ತುವರಿದವು. ಛಾಯಾಗ್ರಾಹಕರು ಉಸಿರು ಬಿಗಿ ಹಿಡಿದು ಫೋಟೊ ತೆಗೆಯುತ್ತಿದ್ದರು. ಚಿರತೆ ಒಮ್ಮೊಮ್ಮೆ ನಮ್ಮನ್ನು ಕೆಕ್ಕರಿಸಿಕೊಂಡು ನೋಡಿತು. ಯಾರಿಗೂ ತಾವು ಚಿರತೆಗೆ ಭಂಗ ತರುತ್ತಿದ್ದೇವೆಂಬ ಅಳುಕು ಇರಲಿಲ್ಲ!. ಕೆಲವರು ಸಪ್ಪಳ ಮಾಡುತ್ತ ಹತ್ತಿರ ಹತ್ತಿರ ಹೋಗುವ ಪ್ರಯತ್ನ ಮಾಡುತ್ತಿದ್ದರು. ಅಷ್ಟರಲ್ಲಿ ಅಭಯಾರಣ್ಯದ ಅಧಿಕಾರಿಗಳಿಗೆ ವಿಷಯ ತಿಳಿದು ಎಲ್ಲಾ ವಾಹನ ಚಾಲಕರಿಗೆ ಜಾಗ ಖಾಲಿ ಮಾಡಲು ಸೂಚನೆ ನೀಡಿದರು. ಕೆಲವು ವಾಹನ ಹೊರಟು ಹೋದವು. ನಮ್ಮ ವಾಹನ ಚಾಲಕ ಮಾತ್ರ ದೂರದಲ್ಲಿಯೇ ಇದ್ದು ಚಟುವಟಿಕೆಯನ್ನು ಗಮನಿಸಲು ಹೇಳುತ್ತಿದ್ದ. ಅಷ್ಟರಲ್ಲಿ ಚಿರತೆ ಬೇಟೆಯನ್ನು ಹೊತ್ತುಕೊಂಡು ಮರ ಹತ್ತಲು ಪ್ರಯತ್ನಿಸತೊಡಗಿತು. ಚಿರತೆಯ ಎರಡು ಪಟ್ಟು ಭಾರದ ಚಿಗರೆಯನ್ನು ಹೊತ್ತು ಮರ ಏರಲು ಅದಕ್ಕೆ ಆಗುತ್ತಿರಲಿಲ್ಲ. ಕಾಲು ಪದೇ ಪದೇ ಜಾರುತ್ತಿತ್ತು. ಎರಡು ಮೂರು ಬಾರಿ ಬೇಟೆಯ ಬಲಿ ಕೆಳಗೆ ಬಿತ್ತು. ಒಮ್ಮೆ ಯಶಸ್ವಿಯಾಗಿ ಮರ ಏರಿ ಟೊಂಗೆಯ ಮೇಲೆ ಜಿಂಕೆಯ ದೇಹವನ್ನು ಇಟ್ಟುಕೊಂಡು ಸರಿಪಡಿಸುವಾಗ ಅದು ಮತ್ತೆ ಕೆಳಕ್ಕೆ ಜಾರಿ ಬಿತ್ತು. ಬಹುಶಃ ಚಿರತೆ ನಿರಾಸೆಗೊಂಡಿರಬೇಕು.

ಸುಸ್ತಾದ ಚಿರತೆ ಬೇಟೆಯನ್ನು ಹಳ್ಳಕ್ಕೆ ಎಳೆದೊಯ್ದು ಅದರ ಮೇಲೆ ಎಲೆ, ಕಸ, ಹುಲ್ಲು ಮುಚ್ಚಿತು. ಬಳಿಕ ಅದು ನಾಪತ್ತೆ ಆಯಿತು. ಅಷ್ಟರಲ್ಲಿ ಆರು ಗಂಟೆ ಆಗಿತ್ತು. ಸಫಾರಿ ಬಂದ್ ಆಗುವ ಹೊತ್ತಾಗಿತ್ತು. ಚಿರತೆ ಬೇಟೆ ನೋಡಿದ ಆ ರಾತ್ರಿ ನಮಗೆ ನಿದ್ರೆಯೇ ಬರಲಿಲ್ಲ. ಮುಂದೇನಾಯ್ತು ಎಂಬ ಕುತೂಹಲ, ಅದೇ ಕನಸು.

ಮಾರನೇ ದಿನ ಬೆಳಗ್ಗೆಯೇ ಮತ್ತೆ ಅದೇ ಜಾಗಕ್ಕೆ ತಲುಪಿದಾಗ ಅಚ್ಚರಿ ಕಾದಿತ್ತು. ಚಿರತೆ ತನ್ನ ಜಾಗವನ್ನು ಬದಲಿಸಿ ಬೇರೊಂದು ಮರಕ್ಕೆ ಸ್ಥಳಾಂತರಗೊಂಡಿತ್ತು. ಅಲ್ಲಿ ಅದು ಆರಾಮವಾಗಿ ಕುಳಿತು ವಿಶ್ರಮಿಸುತ್ತಿತ್ತು. ಅದರ ಮುಂದೆಯೇ ಅರ್ಧ ತಿಂದು ಮುಗಿಸಿದ್ದ ಅಸ್ಥಿ ಪಂಜರವಿತ್ತು. ಮರದ ಕೆಳಗೆ ಹತ್ತಾರು ಕತ್ತೆಕಿರುಬಗಳು ಬಿದ್ದ ಮಾಂಸದ ಮೂಳೆ ತುಂಡುಗಳನ್ನು ಹುಡುಕುತ್ತಿದ್ದವು. ಹತ್ತಿರದ ಒಣಮರಗಳ ಮೇಲೆ ಹದ್ದು, ಕಾಗೆ, ಗಿಡುಗಗಳು ಕೂಡ ಅಳಿದುಳಿದ ಮಾಂಸದ ಚೂರುಗಳಿಗಾಗಿ ಚಡಪಡಿಸುತ್ತಿದ್ದವು.


ಮಾಂಸಾಹಾರಿ ಪ್ರಾಣಿಗಳಲ್ಲಿ ವಿಶಿಷ್ಟವಾದ ಚಿರತೆ ಹೆಚ್ಚು ಸಮಯ ಮರದ ಮೇಲೆ ಕಳೆಯುತ್ತದೆ. ಬಂಗಾರದ ಮೈಬಣ್ಣ, ಆಕರ್ಷಕ ಕಪ್ಪು ಮಚ್ಚೆಗಳು, ರೇಶಿಮೆಯಂಥ ತುಪ್ಪಳ ಇದರ ಚೆಲುವಿಗೆ ಕಾರಣ. ತುಪ್ಪಳದ ಮಾರಾಟಕ್ಕಾಗಿ ಚಿರತೆಯನ್ನು ವ್ಯಾಪಕವಾಗಿ ಬೇಟೆಯಾಡಿ ಕೊಲ್ಲಲಾಗುತ್ತಿದೆ. ಚಿರತೆ ಕೂಡ ವಿನಾಶದಂಚಿನ ಜೀವಿಯಾಗಿದೆ. ಅಪರೂಪದ ಚಿರತೆ ಬೇಟೆಯನ್ನು ಮಸಾಯ್ ಮಾರದಲ್ಲಿ ಕಣ್ಣಾರೆ ನೋಡಿದ್ದಲ್ಲದೇ, ಅದನ್ನು ಕ್ಯಾಮೆರಾದಲ್ಲಿ ಸೆರೆಹಿಡಿದ್ದು ನನ್ನಲ್ಲಿ ಸದಾ ಹಚ್ಚ ಹಸುರಿನ ನೆನಪು.

ಮಜ ಮಜ ಮಜಕೂರ

• ಎಂ.ಎಸ್.ಪೂಜಾರ

ಡಿಶ್ಯುಂ ಚಿಕ್ಕು ಕೌತುಕ್ಕ ಕಥೆಯ: ಹಾವಿಗೆ ಆಟ ಇಲಿಗೆ ಪ್ರಾಣಸಂಕಟ

• ಕಲೆ–ಪರಿಕಲ್ಪನೆ: ಸಂತೋಷ್ ಸಸಿಹಿತ್ಲು



ಹಾವಾಡಿಗನೊಬ್ಬ ತನ್ನೆದುರಿಗಿದ್ದ ಬುಟ್ಟಿಯನ್ನು ತೆರೆದು ಪುಂಗಿ ಊದಲಾರಂಭಿಸಿದ. ಹಾವು ಹೆಡೆ ಎತ್ತಿ ಹೊರಬರಬಹುದು ಎಂದು ನಿರೀಕ್ಷಿಸಿದ. ಆದರೆ ಕೆಲ ಕ್ಷಣದಲ್ಲೇ ಅದರೊಳಗಿನಿಂದ ಬಂದ ಇಲಿಯೊಂದು ಕಾಪಾಡಿ ಕಾಪಾಡಿ ಎನ್ನುತ್ತಾ ಜಿಗಿಯಿತು. ಆ ಇಲಿಯನ್ನು ಹಿಡಿಯಲು ಬುಟ್ಟಿಯೊಳಗಿದ್ದ ಹಾವು ಏಕಾಏಕಿ ಹೆಡೆಯೆತ್ತಿ ಚಿಮ್ಮಿದಾಗ ಅದನ್ನು ಕಂಡು ಹಾವಾಡಿಗ ಬೆಚ್ಚಿಬಿದ್ದ.

ಪದ ಸಂಕಲನ

ಇಲ್ಲಿ ಕೊಟ್ಟಿರುವ ಎರಡು ಪದ ಹಾಗೂ ಒಂದು ಅಕ್ಷರವನ್ನು ಕೂಡಿಸಿ ಅರ್ಥಬದ್ಧ ಒಂದೇ ಪದ ಮಾಡಿರಿ.

1	ಕಸಿ	+	ಕರ	+	ಲಾ	=	
2	ಮತ	+	ಹಾರ	+	ಭಾ	=	
3	ಲಾಗ	+	ಕವಿ	+	ಭಾ	=	
4	ಹಿಡಿ	+	ಮಾಸು	+	ಸ	=	
5	ಕಹಿ	+	ನಲಿ	+	ಸ	=	

ಮೋಜಿನ ಇಂಗ್ಲಿಷ್ ಕಾಂಗರೂ ಪದಗಳು

ಇಲ್ಲಿ ಹತ್ತು ಅಪೂರ್ಣ ಪದಗಳನ್ನು ಕೊಡಲಾಗಿದೆ. ಇನ್ನೊಂದು ಪಟ್ಟಿಯಲ್ಲಿ ಈ ಪದಗಳ ಗರ್ಭದಲ್ಲಿರಿಸಿಕೊಂಡ ಕಾಂಗರೂ ಪದಗಳನ್ನು ಕೊಡಲಾಗಿದೆ. ನೀವು ಅಪೂರ್ಣ ಪದಗಳಿಗೆ ಯಾವ ಕಾಂಗರೂ ಪದ ಸೇರಿಸಿದರೆ ಅರ್ಥಬದ್ಧ ಪದ ಆಗುತ್ತದೆ ಎಂದು ಯೋಚಿಸಿ ತುಂಬಿರಿ.

1	M			H	S	
2	C			D	Y	
3	F			I	L	Y
4	M			K		
5	D			N	E	R
6	K			T	L	E
7	W			D	O	M
8	B			T	E	R
9	S			R	Y	
10	S			T		

ಪದ ಪಟ್ಟಿ

1	A	S
2	A	T
3	I	N
4	I	S
5	I	T
6	A	N
7	O	F
8	I	T
9	O	R
10	A	M

ಸಣ್ಣಾಟ

	12	
A	13	C
	14	

ಇಲ್ಲಿ A,C ಮೇಲೆ ಬೆರಳಿಟ್ಟು ಓದಿದರೆ 12,13,14 ಕಾಣುತ್ತದೆ. ಹಾಗೆಯೇ 12,14 ಸಂಖ್ಯೆಗಳ ಮೇಲೆ ಬೆರಳಿಟ್ಟು ಓದಿದರೆ A,B,C ಆಗುತ್ತದೆ.

ಸರಿ ಉತ್ತರ ಮುಂದಿನ ವಾರ..

ಸರಿ ಉತ್ತರ ನೀಡಿದ ಮಕ್ಕಳ ವಿವರವನ್ನು ಪ್ರಜಾವಾಣಿ ವೆಬ್‌ಸೈಟ್‌ನಲ್ಲಿ ಹಾಗೂ ಆಯ್ದ ಆರು ಮಕ್ಕಳ ಚಿತ್ರಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಸರಿಉತ್ತರಗಳ ಜತೆಗೆ ಮಗುವಿನ ಹೆಸರು, ತರಗತಿ, ಶಾಲೆಯ ಹೆಸರು, ಊರು ಹಾಗೂ ವಿಳಾಸವನ್ನು ಕಳುಹಿಸಬೇಕು. ಉತ್ತರ ಕಳುಹಿಸಲು ಇಮೇಲ್ ವಿಳಾಸ:

majakoora@prajavani.co.in

ಮಜ ಮಜ ಮಜಕೂರದ ಕಳೆದ ಸಂಚಿಕೆಯ ಪ್ರಶ್ನೆಗಳಿಗೆ ಸರಿ ಉತ್ತರ ನೀಡಿದ ಮಕ್ಕಳ ಹೆಸರುಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾತೆಯ 'ಮಮ'ಕಾರದ ಬಳ್ಳಿ

ಮಮತೆಯ ಸುಧೆಯನು ಮಗುವಿಗೆ ಉಣಿಸಿ
ಮಾತೆಯು ಸಂತಸ ಪಡುವಳು
ಮಿಗಿಲೇನಿಹುದು ಆಕೆಯ ಪ್ರೀತಿಗೆ
ಮೀರಿಸಿ ದೈವವ ಮೆರೆಯುವಳು
ಮುಖದಲಿ ಮಗುವಿಗೆ ಮುತ್ತನು ನೀಡಿ
ಮೂಲೋಕಕೂ ಮಿಗಿಲೆನ್ನುವಳು
ಮೆಚ್ಚಿನ ನಗುವಿನ ರೂಪವ ಕಂಡು
ಮೇರೆಯೇ ಇಲ್ಲದೇ ನಲಿಯುವಳು
ಮೈಮರೆತಾಡುತ ಇರುತಿರೆ ಕಂದ
ಮೊಗದಲಿ ನಗುವನು ತರುತಿಹಳು
ಮೋದದಿ ಮಗುವಿನ ಸಂಭ್ರಮ ಕಂಡು
ಮೌನದಿ ಮನದಲೇ ಹಿಗ್ಗುವಳು
ಮಂಜುಳ ಗಾನದಿ ಮಂಗಳ ಹಾಡುತ
ಮಃಹದಾನಂದವ ಹೊಂದುವಳು

ಪದಶೋಧ

ಇಲ್ಲಿ ಕೊಟ್ಟಿರುವ ಪದಗಳಿಂದ ಒಂದು ವಿಶಿಷ್ಟ ಕ್ರಮದಲ್ಲಿ ಒಂದೊಂದು ಅಕ್ಷರ ಆಯ್ಕೆ ಮಾಡಿಕೊಂಡು ಒಬ್ಬ ಕವಿಯ ಹೆಸರು ಹುಡುಕಿ.

1	ಆದಿಮಾನವ	
2	ನವಕವನ	
3	ಸುಂಕದಕಟ್ಟೆ	
4	ರಮಾರಮಣ	
5	ವಿದೇಶಿಮಾಲು	
6	ಸಾರಜನಕ	
7	ತಾಯಿಕರುಣೆ	

ಉತ್ತರ: ಪಂಪ

ವರ್ಗಸಂಖ್ಯಾ ವಿನೋದ

3600, 5776, 2500

ಈ ಸಂಖ್ಯೆಗಳು ತಮ್ಮ ವರ್ಗಮೂಲ ಸಂಖ್ಯೆಗಳನ್ನು ತಮ್ಮ ಒಡಲಿನಲ್ಲಿ ಇಟ್ಟುಕೊಂಡಿವೆ.

ಉದಾ: $3600 = 60^2$

$5776 = 76^2$

$2500 = 50^2$

ಕಳೆದ ಸಂಚಿಕೆಯ ಸರಿ ಉತ್ತರಗಳು

ಪದಸಂಕಲನ: 1.ಕನಕಗಿರಿ 2.ಸಮಾಜವಾದ 3.ಮಹಾಸಾಗರ 4.ಉದಾಹರಣೆ 5.ಜಳಕಮಾಡು

ಜಾಣಪದ ಆಟ: 1.ಕಾಡುಪಾಪ 2.ಬಡಿವಾರ 3.ಗಡಿಬಿಡಿ 4.ನಾಯಿಕೊಡೆ 5.ರಾಜಸ್ಥಾನ 6.ರಾಜಗಿರಿ 7.ಹರಿದ್ವಾರ 8.ಮದನಾರಿ 9.ಕೋಡುಬಳೆ 10.ಉಡದಾರ

ಸರಿ ಉತ್ತರ ನೀಡಿದ ಆಯ್ದ ಆರು ಪುಟಾಣಿಗಳು



ಪ್ರಣೀಕ ಎಂ., ಶಿವಮೊಗ್ಗ




ಯಾಶಿಕಾ ಸಿ., ಬೆಂಗಳೂರು



ರಿತ್ವಿಕ್ ಎಸ್.ಯು., ತುಮಕೂರು



ಭಾರ್ಗವಿ ಶ್ಯಾಯನ್ನವರ, ಧಾರವಾಡ



ತನ್ಮಯಿ ಎಂ. ಎ, ಬಾಗಲಕೋಟೆ



ಸುಬ್ರಹ್ಮಣ್ಯ ಬನ್ನಿಗಿಡದ, ನರಗುಂದ

ದಲ್ಲಾಳಿಗಳ ಹಾವಳಿ ಬೆಳೆಗಾರರಿಗೆ ಸಿಗದ ಲಾಭ

ಹಡಗಲಿ ಮಲ್ಲಿಗೆ ದರ ಕುಸಿತ



ಹೂವಿನಹಡಗಲಿ ತಾಲ್ಲೂಕಿನ ಮಿರಾಕೊರನಹಳ್ಳಿಯಲ್ಲಿ ಮೊಗ್ಗು ಕೀಳದಿರುವುದರಿಂದ ಗಿಡದಲ್ಲಿಯೇ ಹೂವುಗಳು ಅರಳಿವೆ

• ಕೆ.ಸೋಮಶೇಖರ್

ಹೂವಿನಹಡಗಲಿ (ವಿಜಯನಗರ ಜಿಲ್ಲೆ): ಮಾರುಕಟ್ಟೆಯಲ್ಲಿ 'ಹಡಗಲಿ ಮಲ್ಲಿಗೆ'ಯ ಬೆಲೆಯು ದಿಢೀರ್ ಕುಸಿದಿದ್ದು, ರೈತರು ಕಂಗಾಲಾಗಿದ್ದಾರೆ.

ಮಾರ್ಚ್‌ನಲ್ಲಿ ಮಲ್ಲಿಗೆ ಋತು ಪ್ರಾರಂಭವಾದಾಗ ಪ್ರತಿ ಕೆ.ಜಿಗೆ ₹400ರಿಂದ ₹500 ದರ ಇತ್ತು. ಸಾಮಾನ್ಯ ದಿನಗಳಲ್ಲಿ ಕೆ.ಜಿಗೆ ₹250ರಿಂದ ₹300 ಇರುತ್ತಿದ್ದ ಬೆಲೆಯು, ಕಳೆದ ಒಂದು ವಾರದಿಂದ ದಾವಣಗೆರೆ, ಹಾವೇರಿ ಹೂವಿನ ಮಾರುಕಟ್ಟೆಯಲ್ಲಿ ₹100 ರಿಂದ ₹80ಕ್ಕೆ ಕುಸಿದಿದೆ.

ಪಟ್ಟಣ ಸೇರಿ ಹನಕನಹಳ್ಳಿ, ದೇವ ಗೊಂದನಹಳ್ಳಿ, ಮಿರಾಕೊರನಹಳ್ಳಿ, ವಿನೋಬನಗರ, ಹಾಲ್ ತಿಮಲಾಪುರ, ಮುದೇನೂರು, ಕೊಂಬಳಿ ಗ್ರಾಮದ 180 ಎಕರೆಯಲ್ಲಿ ರೈತರು ಮಲ್ಲಿಗೆ ಕೃಷಿ ಮಾಡುತ್ತಾರೆ. ದಾವಣಗೆರೆ, ಹಾವೇರಿ, ಗದಗ, ಹುಬ್ಬಳ್ಳಿಗೆ ಇಲ್ಲಿಂದ ಪ್ರತಿ ದಿನ 25ರಿಂದ 30 ಕ್ವಿಂಟಲ್ ಮಲ್ಲಿಗೆ ಮೊಗ್ಗು ಸಾಗಣೆಯಾಗುತ್ತದೆ.

> ಮಾರುಕಟ್ಟೆಯಲ್ಲಿ ಮಲ್ಲಿಗೆಗೆ ಎಲ್ಲ ಕಾಲದಲ್ಲೂ ಬೇಡಿಕೆ ಇರುತ್ತದೆ. ಆದರೆ, ಬಹುಪಾಲು ಲಾಭ ದಲ್ಲಾಳಿಗಳ ಪಾಲಾಗುತ್ತಿದೆ. ಕಷ್ಟಪಟ್ಟು ಬೆಳೆಯುವ ರೈತರಿಗೆ ಸಿಗುತ್ತಿಲ್ಲ
> **ಮಲ್ಲಿಕಾರ್ಜುನ ಹನುಮಂತಪ್ಪ**, ರೈತ

> ಈ ಬಾರಿ ಇಳುವರಿ ಹೆಚ್ಚಾಗಿರುವ ಕಾರಣ ಮಲ್ಲಿಗೆಗೆ ಬೆಲೆ ಕುಸಿದಿದೆ. ಬೇಡಿಕೆ ಇರುವ ಕಡೆಗೆ ರವಾನಿಸಲು ರೈತರು, ರೈತ ಉತ್ಪಾದಕ ಸಂಸ್ಥೆಗಳು ಮುಂದಾಗಬೇಕಿದೆ
> **ನಾಗರಾಜ**, ಹಿರಿಯ ಸಹಾಯಕ ನಿರ್ದೇಶಕ ತೋಟಗಾರಿಕೆ ಇಲಾಖೆ, ಹೂವಿನಹಡಗಲಿ

'ಪ್ರತೀತಿಗೆ ದಾವಣಗೆರೆ, ಹಾವೇರಿಯ ಹೂವಿನ ಮಾರುಕಟ್ಟೆಯಲ್ಲಿ ದಲ್ಲಾಳಿಗಳ ಹಾವಳಿ ಹೆಚ್ಚಾಗಿದೆ. 'ಹಡಗಲಿ ಮಲ್ಲಿಗೆ'ಗೆ ಬೇಕಾಬಿಟ್ಟಿ ದರ ನಿಗದಿ ಮಾಡುತ್ತಾರೆ. ಖಾಸಗಿ ವಾಹನ ಬಾಡಿಗೆ, ದಲ್ಲಾಳಿಗಳ ಕಮಿಷನ್ ಹೊರೆಯಾಗಿ ಪರಿಣಮಿಸಿದೆ' ಎಂಬುದು ರೈತರ ದೂರು.

'ಬಿಸಿಲ ಝಳ ಹೆಚ್ಚಿರುವುದು ಮತ್ತು ಈಚೆಗೆ ಸುರಿದ ಮಳೆಯು ಮಲ್ಲಿಗೆಗೆ ಪೂರಕ ಹವಾಮಾನ ಸೃಷ್ಟಿಸಿದ್ದು, ಇಳುವರಿ ದುಪ್ಪಟ್ಟಾಗಿದೆ. ಬೆಂಗಳೂರು ಭಾಗದಿಂದ ದುಂಡು ಮಲ್ಲಿಗೆ, ಸೇವಂತಿ ಸಹಿತ ತರಹೇವಾರಿ ಹೂಗಳು ಮಾರುಕಟ್ಟೆಗೆ ಬರುತ್ತಿವೆ. ಹೀಗಾಗಿ, 'ಹಡಗಲಿ ಮಲ್ಲಿಗೆ'ಗೆ ಬೆಲೆ ಕುಸಿದಿದೆ' ಎಂದು ವ್ಯಾಪಾರಿಗಳಾದ ದಾವಲ್ ಮಲ್ಲಿಕ್ ಮತ್ತು ಸುಭಾನ್ ಸಾಬ್ ಹೇಳುತ್ತಾರೆ.

'ಕೆ.ಜಿ ಮೊಗ್ಗು ಬಿಡಿಸಲು ಕಾರ್ಮಿಕರಿಗೆ ₹100 ಕೂಲಿ ಕೊಡುತ್ತೇವೆ. ದಲ್ಲಾಳಿಗಳು ₹30ರಿಂದ ₹40 ಕಮಿಷನ್ ತೆಗೆದುಕೊಳ್ಳುತ್ತಾರೆ. ಸಾಗಣೆ ವೆಚ್ಚವೂ ಹೆಚ್ಚಾಗಿದೆ. ಕನಿಷ್ಠ ಉತ್ಪಾದನಾ ವೆಚ್ಚವೂ ಸಿಗದ ಕಾರಣ ಮೊಗ್ಗು ಕೀಳುವುದನ್ನೇ ಬಿಟ್ಟಿದ್ದೇವೆ' ಎಂದು ವಿನೋಬನಗರದ ರೈತ ಗೋಣಾಳ ಮಹಾಂತೇಶ ಅಳಲು ತೋಡಿಕೊಂಡರು.





ಉಡುಪಿ ಜಿಲ್ಲೆಯ ಶಂಕರಪುರದಲ್ಲಿ ರೈತರೊಬ್ಬರು ಬೆಳೆದಿರುವ ಮಲ್ಲಿಗೆ ಗಿಡ (ಎಡಚಿತ್ರ). ಮಾರಾಟಕ್ಕಿಟ್ಟಿರುವ ಮಲ್ಲಿಗೆ

> ನರೇಗಾ ಯೋಜನೆಯಡಿ ಒಂದು ಎಕರೆವರೆಗೆ ಮಲ್ಲಿಗೆ ಗಿಡ ನೆಡಲು ನೆರವು ನೀಡಲಾಗುತ್ತಿದೆ. ರೈತರು ಇದರ ಪ್ರಯೋಜನ ಪಡೆದುಕೊಳ್ಳಬೇಕಿದೆ
> **ಭುವನೇಶ್ವರಿ**, ಉಪ ನಿರ್ದೇಶಕಿ, ತೋಟಗಾರಿಕೆ ಇಲಾಖೆ, ಉಡುಪಿ

ರೈತರಿಗೆ ಧಾರಣೆ ಏರಿಳಿತದ ಸವಾಲು

• ನವೀನ್ ಕುಮಾರ್ ಜಿ.

ಉಡುಪಿ: ಕರಾವಳಿಯಲ್ಲಿ ಪ್ರಸಿದ್ಧಿ ಪಡೆದಿರುವ ಶಂಕರಪುರ ಮಲ್ಲಿಗೆಯ ಇಳುವರಿ ಕುಸಿದಿಲ್ಲ. ಆದರೆ, ದರ ಏರಿಳಿತದಿಂದಾಗಿ ಕೃಷಿಕರು ಸವಾಲು ಎದುರಿಸುವಂತಾಗಿದೆ.

ಮೇ 7ರಂದು ಒಂದು ಅಟ್ಟೆ ಮಲ್ಲಿಗೆಯ ದರ ₹370 ಇತ್ತು. ಶುಕ್ರವಾರ ₹570 ಇದ್ದರೆ, ಶನಿವಾರ ₹750ಕ್ಕೆ ಮುಟ್ಟಿದೆ.

ಕರಾವಳಿ ಭಾಗದಲ್ಲಿ ಬಾಳೆ ದಿಂಡಿನ ನಾರು ಬಳಸಿ ಮೊಗ್ಗು ಕಟ್ಟಲಾಗುತ್ತದೆ. ಸುಮಾರು 800 ಮೊಗ್ಗುಗಳಿರುವ ಗುಚ್ಛಕ್ಕೆ ಒಂದು ಚೆಂಡು ಎಂದು ಕರೆಯಲಾಗುತ್ತದೆ. ಇಂತಹ ನಾಲ್ಕು ಚೆಂಡು ಸೇರಿಸಿದರೆ ಒಂದು ಅಟ್ಟೆ ಆಗುತ್ತದೆ.

ಏಪ್ರಿಲ್, ಮೇ ತಿಂಗಳಲ್ಲಿ ಮದುವೆ ಮತ್ತು ಧಾರ್ಮಿಕ ಕಾರ್ಯಕ್ರಮಗಳು ಇರುವ ಕಾರಣ ಶಂಕರಪುರ ಮಲ್ಲಿಗೆಗೆ ಎಲ್ಲಿಲ್ಲದ ಬೇಡಿಕೆ ಇರುತ್ತದೆ. ಆದರೆ, ಬೆಲೆಯಲ್ಲಿ ಸ್ಥಿರತೆ ಇಲ್ಲದ ಕಾರಣ ಶ್ರಮವಹಿಸಿ ಮಲ್ಲಿಗೆ ಬೆಳೆಯುವ ಕೃಷಿಕರು, ನಿರಾಸೆ ಅನುಭವಿಸುವಂತಾಗಿದೆ. ಮಧ್ಯವರ್ತಿಗಳೇ ಬೆಲೆ ನಿಗದಿಪಡಿಸುವುದರಿಂದ ನಮ್ಮ ಶ್ರಮಕ್ಕೆ ಸರಿಯಾದ ಪ್ರತಿಫಲ ಸಿಗುತ್ತಿಲ್ಲ ಎಂಬುದು ರೈತರ ಆರೋಪ.

ಜಿಲ್ಲೆಯ ಶಂಕರಪುರ ಪ್ರದೇಶದಲ್ಲಿ 500ಕ್ಕೂ ಹೆಚ್ಚು ರೈತರು ಮಲ್ಲಿಗೆ ಕೃಷಿಯನ್ನೇ ನಂಬಿಕೊಂಡಿದ್ದಾರೆ. ಈ ಮಲ್ಲಿಗೆಗೆ ಕರಾವಳಿಯಲ್ಲಷ್ಟೇ ಅಲ್ಲದೆ ಮುಂಬೈನಲ್ಲೂ ಹೆಚ್ಚಿನ ಬೇಡಿಕೆಯಿದೆ.

'ಈ ಬಾರಿ ಇಳುವರಿ ಚೆನ್ನಾಗಿಯೇ ಬಂದಿದೆ. ಆದರೆ, ಬಿಸಿಲಿನ ಝಳ ಹೆಚ್ಚಾಗಿರುವುದರಿಂದ ಬೆಂಕಿ ರೋಗ ಕಾಣಿಸಿಕೊಳ್ಳುವ ಭೀತಿ ಎದುರಾಗಿದೆ. ಮಲ್ಲಿಗೆ ಗಿಡಗಳಿಗೆ ಸಿಂಪಡಿಸುವ ಕೀಟನಾಶಕಗಳ ದರವೂ ಗಗನಕ್ಕೇರಿದೆ' ಎನ್ನುತ್ತಾರೆ ಕೃಷಿಕ ಮಾರ್ಕ್ ಡಿಸೋಜ.

'ಕೋವಿಡ್‌ಗಿಂತ ಮೊದಲು ವಿಮಾನದ ಮೂಲಕ ಮುಂಬೈಗೆ ಮಲ್ಲಿಗೆ ರವಾನಿಸುತ್ತಿದ್ದೆವು. ಆ ನಂತರ ವಿಮಾನದ ಸಮಯ ವ್ಯತ್ಯಾಸವಾಗಿರುವುದರಿಂದ ಈಗ ಬಸ್ ಮೂಲಕ ಕಳುಹಿಸುತ್ತಿದ್ದೇವೆ' ಎನ್ನುತ್ತಾರೆ ಮಾರಾಟಗಾರ ವಿನ್ಸೆಂಟ್ ರೋಡ್ರಿಗಸ್.

ಮರೆಯಾಗುತ್ತಿದೆ 'ದುಂಡು ಮಲ್ಲಿಗೆ' ಘಮ

• ಎಂ. ಮಹೇಶ್

ಮೈಸೂರು: ವಿಶಿಷ್ಟ ಸುವಾಸನೆ ಹೊಂದಿರುವ 'ಮೈಸೂರು ದುಂಡು ಮಲ್ಲಿಗೆ' ಬೆಳೆಯುವ ಪ್ರದೇಶವು ಜಿಲ್ಲೆಯಲ್ಲಿ ಕ್ರಮೇಣ ಕ್ಷೀಣಿಸುತ್ತಿದೆ.

ಪ್ರಸ್ತುತ ಅಂದಾಜು 10 ಎಕರೆಯಲ್ಲಷ್ಟೇ ಈ ಪುಷ್ಪ ಕೃಷಿ ಮಾಡಲಾಗುತ್ತಿದೆ. ತಾಲ್ಲೂಕಿನ ಅಲ್ಲಲ್ಲಿ 4, 5 ಅಥವಾ 6 ಗುಂಟೆ ಲೆಕ್ಕದಲ್ಲಿ ರೈತರು ಬೆಳೆಯುತ್ತಿದ್ದಾರೆ. ಬೇಡಿಕೆ ಹೆಚ್ಚಿರುವುದರಿಂದ ಒಳ್ಳೆಯ ಬೆಲೆ ದೊರೆಯುತ್ತದೆಯಾದರೂ, ಹೂವು ಬಿಡಿಸುವುದು ನಾಜೂಕಿನ ಕೆಲಸವಾದ್ದರಿಂದ ಎಕರೆಗಟ್ಟಲೆ ಬೆಳೆಯಲು ಬೆಳೆಗಾರರು ಮುಂದೆ ಬರುತ್ತಿಲ್ಲ. ಇದರಿಂದ ಇಲ್ಲಿನ ಮಾರುಕಟ್ಟೆಯನ್ನು ತಮಿಳುನಾಡಿನ ಹೂವುಗಳೇ ಆಕ್ರಮಿಸಿವೆ.

ಇಲ್ಲಿನ ದೇವರಾಜ ಮಾರುಕಟ್ಟೆಯಲ್ಲಿ ಶನಿವಾರ ಕೆ.ಜಿ. ಮಲ್ಲಿಗೆ ಹೂವಿನ ದರ ₹800ರಿಂದ ₹900 ಇತ್ತು. ಹೂವಿನ ವ್ಯಾಪಾರಿಗಳ ಬಳಿ ಸಾಮಾನ್ಯ ದಿನಗಳಲ್ಲಿ ಮೊಳಕ್ಕೆ ₹50 ದರ ಇದ್ದರೆ, ಹಬ್ಬಗಳಿದ್ದಾಗ ₹150ರಿಂದ ₹200ರವರೆಗೂ ಬೆಲೆ ಏರಿಕೆ ಆಗುತ್ತದೆ.



ಮೈಸೂರಿನಲ್ಲಿ ವ್ಯಾಪಾರಿಯೊಬ್ಬರು ಮಲ್ಲಿಗೆ ಹೂವನ್ನು ಮಾರಾಟಕ್ಕೆ ಅಣಿಗೊಳಿಸಿದರು

> ಉತ್ತೇಜನ ಕಾರ್ಯಕ್ರಮದ ಮೂಲಕ ಮಲ್ಲಿಗೆ ವಿಸ್ತರಣೆಗೆ ಕ್ರಮವಹಿಸಲಾಗಿದೆ. ರೈತರಿಗೆ ಮಾರ್ಗದರ್ಶನ ನೀಡುವ ಕೆಲಸವನ್ನೂ ಮಾಡಲಾಗುತ್ತಿದೆ
> **ಮಂಜುನಾಥ ಅಂಗಡಿ**, ಉಪ ನಿರ್ದೇಶಕ, ತೋಟಗಾರಿಕೆ ಇಲಾಖೆ ಮೈಸೂರು

ಸದ್ಯ ಮೈಸೂರು ಭಾಗದಿಂದ ಹೂವು ಬರುತ್ತಿರುವುದು ಕಡಿಮೆ ಪ್ರಮಾಣದಲ್ಲಿದೆ. ಇಲ್ಲಿಗೆ ತಮಿಳುನಾಡಿನ ಮಧುರೈ ಮೊದಲಾದ ಕಡೆಯಿಂದಲೇ ಹೆಚ್ಚು ಬರುತ್ತಿದೆ ಎನ್ನುತ್ತಾರೆ ಸಗಟು ವ್ಯಾಪಾರಿಗಳು.

ನಿರ್ವಹಣಾ ವೆಚ್ಚ ಹೆಚ್ಚುತ್ತಿರುವುದು, ರೋಗ ಬಾಧೆ, ಕೊಯ್ಲಿಗೆ ಹೆಚ್ಚಿನ ಜನರ ಅಗತ್ಯ ಕಂಡುಬರುವುದು ಹಾಗೂ ಹರಸಾಹಸಪಟ್ಟು ಮಾರುಕಟ್ಟೆಗೆ ತಂದರೆ ಸೂಕ್ತ ಬೆಲೆ ಸಿಗದಿರುವುದು ಸೇರಿ ಮೊದಲಾದ ಕಾರಣದಿಂದ ಈ ಕೃಷಿ ಮಾಡುವುದರಿಂದ ವಿಮುಖರಾಗುವಂತಾಗಿದೆ ಎನ್ನುತ್ತಾರೆ ರೈತರು.

'ಬೆಳೆದವರಿಗಿಂತಲೂ ಹೆಚ್ಚಿನ ಲಾಭವನ್ನು ಮಧ್ಯವರ್ತಿಗಳು, ವ್ಯಾಪಾರಿಗಳು ಮಾಡಿಕೊಳ್ಳುತ್ತಾರೆ. ನಮಗೆ ದೊರೆಯುವ ಲಾಭ ಕಡಿಮೆ' ಎನ್ನುವುದು ಅವರ ಬೇಸರದ ನುಡಿ.

'ನಾನೀಗ ಅರ್ಧ ಎಕರೆಯಲ್ಲಿ ಮೈಸೂರು ಮಲ್ಲಿಗೆ ಬೆಳೆಯುತ್ತಿದ್ದೇನೆ. ತಮಿಳುನಾಡಿನ ಹೂವಿನಲ್ಲಿ ಪರಿಮಳವೇ ಇರುವುದಿಲ್ಲ. ಹೀಗಾಗಿ, ಮೈಸೂರು ಮಲ್ಲಿಗೆಗೆ ಬೆಲೆ ಹೆಚ್ಚಿರುತ್ತದೆ' ಎಂದು ತಾಲ್ಲೂಕಿನ ಮಾರಗೌಡನಹಳ್ಳಿಯ ರೈತ ಕೃಷ್ಣಪ್ಪ ತಿಳಿಸಿದರು.

ಬಡ್ಡಿದರ ಇಳಿಸಿದ ಕೆನರಾ ಬ್ಯಾಂಕ್

ನವದೆಹಲಿ (ಪಿಟಿಐ): ಸರ್ಕಾರಿ ಸ್ವಾಮ್ಯದ ಕೆನರಾ ಬ್ಯಾಂಕ್ ಮಾರ್ಜಿನಲ್ ಕಾಸ್ಟ್ ಆಫ್ ಫಂಡ್ಸ್ ಆಧರಿತ ಸಾಲದ (ಎಂಸಿಎಲ್‌ಆರ್) ಮೇಲಿನ ಬಡ್ಡಿದರವನ್ನು ಶೇ 0.10ರಷ್ಟು ಕಡಿತಗೊಳಿಸಿದೆ. ಇದರಿಂದ ವಾಹನ ಮತ್ತು ವೈಯಕ್ತಿಕ ಸಾಲಗಾರರಿಗೆ ಅನುಕೂಲವಾಗಲಿದೆ.

ಸದ್ಯ ವಾಹನ ಮತ್ತು ವೈಯಕ್ತಿಕ ಸಾಲದ ಮೇಲಿನ ಬಡ್ಡಿದರವು ಶೇ 9.10ರಿಂದ ಶೇ 9ಕ್ಕೆ ಇಳಿಕೆಯಾಗಿದೆ ಎಂದು ಬ್ಯಾಂಕ್ ಷೇರುಪೇಟೆಗೆ ತಿಳಿಸಿದೆ.

ಒಂದು, ಮೂರು ಮತ್ತು ಆರು ತಿಂಗಳ ಅವಧಿಯ ಎಂಸಿಎಲ್‌ಆರ್ ಶೇ 8.25ರಿಂದ ಶೇ 8.80ರ ಶ್ರೇಣಿಯಲ್ಲಿ ಇರಲಿದೆ. ಒಂದು ವರ್ಷದ ಎಂಸಿಎಲ್‌ಆರ್ ಶೇ 8.30ರಿಂದ ಶೇ 8.20ಕ್ಕೆ ಇಳಿಕೆಯಾಗಲಿದೆ. ಈ ಹೊಸ ಪರಿಷ್ಕೃತ ಬಡ್ಡಿದರವು ಮೇ 12ರಿಂದ ಜಾರಿಗೆ ಬರಲಿದೆ ಎಂದು ತಿಳಿಸಿದೆ.

ಕಳೆದ ತಿಂಗಳು ಭಾರತೀಯ ರಿಸರ್ವ್ ಬ್ಯಾಂಕ್ ರೆಪೊ ದರವನ್ನು ಶೇ 0.25ರಷ್ಟು ಕಡಿತಗೊಳಿಸಿತ್ತು.

ಎನ್‌.ಆರ್‌.ಪುರ ರಬ್ಬರ್



ಆರ್‌ಎಸ್‌ಎಸ್‌-4	₹191
ಆರ್‌ಎಸ್‌ಎಸ್‌-5	₹186
ಗುಡ್ ಲಾಟ್	₹176

(ಪ್ರತಿ ಕೆ.ಜಿಗೆ)

ರಾಮನಗರ ರೇಷ್ಮೆಗೂಡು



ಮಿಶ್ರತಳಿ (ಸಿ.ಬಿ)	₹200-541
ದ್ವಿತಳಿ (ಬಿ.ವಿ)	₹266-655

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು	
100ಕ್ಕೆ	₹550
12 ಕ್ಕೆ	₹73
ಮೈಸೂರು	
100ಕ್ಕೆ	₹565

ಐಎಂಎಫ್ ಸಭೆ ಅನುಮೋದನೆ: ಬಿಜೆಪಿ– ಕಾಂಗ್ರೆಸ್ ನಾಯಕರ ಜಟಾಪಟಿ

ಪಾಕ್‌ಗೆ ಸಾಲ: ಭಾರತ ಆಕ್ಷೇಪ

ನವದೆಹಲಿ (ಪಿಟಿಐ): ಭಾರತದ ತೀವ್ರ ಆಕ್ಷೇಪದ ನಡುವೆಯೂ ಅಂತರ ರಾಷ್ಟ್ರೀಯ ಹಣಕಾಸು ನಿಧಿಯು (ಐಎಂಎಫ್) ಪಾಕಿಸ್ತಾನಕ್ಕೆ ಮೊದಲ ಕಂತಿನಲ್ಲಿ ₹8,500 ಕೋಟಿ ಸಾಲ ನೀಡಲು ಅನುಮೋದನೆ ನೀಡಿದೆ.

ಸಾಲ ವಿಸ್ತರಣೆ ಕಾರ್ಯಕ್ರಮದಡಿ ಪಾಕಿಸ್ತಾನಕ್ಕೆ ಹೊಸದಾಗಿ ಒಟ್ಟು ₹19,500 ಕೋಟಿ ಸಾಲ ನೀಡಲು ಐಎಂಎಫ್ ಮುಂದಾಗಿದೆ. ಸಾಲ ನಿಲುವಳಿಗೆ ಮತ ಚಲಾಯಿಸುವುದಕ್ಕೆ ನಡೆದ ಸಭೆಯಿಂದ ಭಾರತವು ದೂರ ಉಳಿಯುವ ಮೂಲಕ ಇದಕ್ಕೆ ಆಕ್ಷೇಪ ವ್ಯಕ್ತಪಡಿಸಿದೆ.

ಐಎಂಎಫ್ ನೀಡಿರುವ ಸಾಲದ ಮರುಪಾವತಿಯಲ್ಲಿ ಪಾಕಿಸ್ತಾನದ ಸಾಧನೆ ತೀರಾ ಕಳಪೆಯಾಗಿದೆ. ಇಂತಹ ಸ್ಥಿತಿಯಲ್ಲೂ ಆ ದೇಶಕ್ಕೆ ಹೊಸದಾಗಿ ಸಾಲ ನೀಡುವುದು ಸರಿಯಾದ ಕ್ರಮವಲ್ಲ. ಈ ಹಣವನ್ನು ಗಡಿಯಾಚೆಗಿನ ಭಯೋತ್ಪಾದನೆಗೆ ದುರ್ಬಳಕೆ ಮಾಡಿಕೊಳ್ಳುವ ಸಾಧ್ಯತೆಯಿದೆ ಎಂದು ಕೇಂದ್ರ ಮಾಹಿತಿ ಮತ್ತು ಪ್ರಚಾರ ಸಚಿವಾಲಯ 'ಎಕ್ಸ್'ನಲ್ಲಿ ಪ್ರತಿಕ್ರಿಯಿಸಿದೆ.

> ಅದು ಅಂತರರಾಷ್ಟ್ರೀಯ ಹಣಕಾಸು ನಿಧಿಯಲ್ಲ. ಅಂತರರಾಷ್ಟ್ರೀಯ ಭಯೋತ್ಪಾದಕ ನಿಧಿ. ಯುದ್ಧ ಸಾಮಗ್ರಿಗಳ ಖರೀದಿಗಾಗಿ ಪಾಕಿಸ್ತಾನಕ್ಕೆ ನೆರವು ನೀಡುತ್ತಿದೆ
> **ಒಮರ್ ಅಬ್ದುಲ್ಲಾ**, ಕಾಶ್ಮೀರ ಮುಖ್ಯಮಂತ್ರಿ

> ಐಎಂಎಫ್ ಪಾಕಿಸ್ತಾನಕ್ಕೆ ಉಗ್ರ ನಿಧಿ ನೀಡುತ್ತಿದೆ. ಅಮೆರಿಕ, ಜಪಾನ್, ಜರ್ಮನಿ ಇದಕ್ಕೆ ಹೇಗೆ ಒಪ್ಪಿಗೆ ಸೂಚಿಸಿವೆ ಎಂಬುದು ತಿಳಿಯುತ್ತಿಲ್ಲ
> **ಅಸಾದುದ್ದೀನ್ ಓವೈಸಿ**, ಎಐಎಂಐಎಂ ಮುಖ್ಯಸ್ಥ

ಮತ್ತೊಂದೆಡೆ ಐಎಂಎಫ್ ತೀರ್ಮಾನವು ಕಾಂಗ್ರೆಸ್ ಮತ್ತು ಬಿಜೆಪಿ ನಡುವಿನ ವಾಕ್ಸಮರಕ್ಕೆ ಕಾರಣವಾಗಿದೆ. ಭಾರತವು ಮತದಾನ ಪ್ರಕ್ರಿಯೆಯಿಂದ ಹೊರಗುಳಿದಿದ್ದನ್ನು ಕಾಂಗ್ರೆಸ್ ಟೀಕಿಸಿದೆ.

'ಪಹಲ್ಗಾಮ್ ದಾಳಿಯು ಪಾಕಿಸ್ತಾನ ಪ್ರಾಯೋಜಿತವಾಗಿದೆ. ಇಂತಹ ದೇಶಕ್ಕೆ ಸಾಲ ಮಂಜೂರು ಮಾಡಿರುವುದು ಆಶ್ಚರ್ಯ ಮತ್ತು ಬೇಸರದ ಸಂಗತಿ. ಈ ನೆರವು ಪಾಕಿಸ್ತಾನದ ಸೇನಾಡಳಿತವನ್ನು ಶಾಶ್ವತಗೊಳಿಸಲಿದೆ ಅಷ್ಟೆ' ಎಂದು ಲೋಕಸಭೆಯ ವಿರೋಧ ಪಕ್ಷದ ಉಪ ನಾಯಕ ಗೌರವ್ ಗೊಗೋಯಿ ಪ್ರತಿಕ್ರಿಯಿಸಿದ್ದಾರೆ.

ಕಾಂಗ್ರೆಸ್‌ನ ಮತ್ತೊಬ್ಬ ನಾಯಕ ಜೈರಾಮ್ ರಮೇಶ್, 'ಪಾಕಿಸ್ತಾನಕ್ಕೆ ಸಾಲ ನೀಡುವುದಕ್ಕೆ ವಿರುದ್ಧವಾಗಿ ಮತ ಚಲಾಯಿಸಲು ಸರ್ಕಾರಕ್ಕೆ ಆಗ್ರಹಿಸಿದ್ದೆವು. ಆದರೆ, ಭಾರತ ಮತದಾನದಿಂದಲೇ ದೂರ ಉಳಿದಿದೆ' ಎಂದಿದ್ದಾರೆ.

ಕಾಂಗ್ರೆಸ್ ವಿರುದ್ಧ ಟೀಕೆ: ಕಾಂಗ್ರೆಸ್ ನಾಯಕರ ಹೇಳಿಕೆಗೆ ಬಿಜೆಪಿ ಆಕ್ಷೇಪ ವ್ಯಕ್ತಪಡಿಸಿದೆ. 'ಕಾಂಗ್ರೆಸ್ ನಾಯಕರು ವಾಸ್ತವಾಂಶ ತಿರುಚಿ ದೇಶದ ಜನರನ್ನು ದಿಕ್ಕು ತಪ್ಪಿಸುವ ಕೆಲಸ ಮಾಡುತ್ತಿದ್ದಾರೆ. ಐಎಂಎಫ್‌ನಿಂದ ಸಾಲ ನೀಡಬಾರದೆಂದು ಒತ್ತಾಯಿಸಿ ಸಭೆಯಲ್ಲಿ ಮತ ಚಲಾಯಿಸುವ ಅವಕಾಶ ಯಾವುದೇ ದೇಶಕ್ಕೆ ಇಲ್ಲ' ಎಂದಿದ್ದಾರೆ.


ನೆರವು ಪುನರ್ ಪರಿಶೀಲನೆಗೆ ಆಗ್ರಹ

ಪಾಕಿಸ್ತಾನಕ್ಕೆ ಘೋಷಿಸಿರುವ ಸಾಲದ ನೆರವನ್ನು ಐಎಂಎಫ್ ಪುನರ್ ಪರಿಶೀಲಿಸಬೇಕು ಎಂದು ರಾಷ್ಟ್ರೀಯ ಸ್ವಯಂ ಸೇವಕ ಸಂಘದ (ಆರ್‌ಎಸ್‌ಎಸ್) ಅಂಗಸಂಸ್ಥೆಯಾದ ಸ್ವದೇಶಿ ಜಾಗರಣ್ ಮಂಚ್ (ಎಸ್‌ಜೆಎಂ) ಆಗ್ರಹಿಸಿದೆ.

ಪಾಕಿಸ್ತಾನವು ಭಯೋತ್ಪಾದನೆಗೆ ನಿರಂತರವಾಗಿ ಬೆಂಬಲ ನೀಡುತ್ತಿದೆ. ಇಂತಹ ದೇಶಕ್ಕೆ ಸಾಲ ನೀಡಿರುವುದು ತೀವ್ರ ಆತಂಕ ಸೃಷ್ಟಿಸಿದೆ. ಈ ಹಿಂದೆ ಆ ದೇಶವು ಪಡೆದಿರುವ ಸಾಲವನ್ನು ನಿರ್ದಿಷ್ಟ ಉದ್ದೇಶಕ್ಕೆ ಬಳಸಿಕೊಳ್ಳುವಲ್ಲಿ ವಿಫಲವಾಗಿದೆ ಎಂದು ಎಸ್‌ಜೆಎಂ ರಾಷ್ಟ್ರೀಯ ಸಹ ಸಂಚಾಲಕ ಅಶ್ವನಿ ಮಹಾಜನ್ ಹೇಳಿದ್ದಾರೆ.

ಸಂಕ್ಷಿಪ್ತ ಸುದ್ದಿ

ಅವಾಮಿ ಲೀಗ್ ನಿಷೇಧಕ್ಕೆ ಬಾಂಗ್ಲಾ ಸರ್ಕಾರದ ಚಿಂತನೆ



ಮೊಹಮ್ಮದ್ ಯೂನಸ್

ಢಾಕಾ (ಪಿಟಿಐ): ಬಾಂಗ್ಲಾದೇಶದ ಪದಚ್ಯುತ ಪ್ರಧಾನಿ ಶೇಖ್ ಹಸೀನಾ ನೇತೃತ್ವದ 'ಅವಾಮಿ ಲೀಗ್' ಪಕ್ಷವನ್ನು ನಿಷೇಧಿಸುವ ಬಗ್ಗೆ ಶೀಘ್ರವೇ ನಿರ್ಧಾರ ಕೈಗೊಳ್ಳುವುದಾಗಿ ಇಲ್ಲಿನ ಮಧ್ಯಂತರ ಸರ್ಕಾರ ಶುಕ್ರವಾರ ಘೋಷಣೆ ಮಾಡಿದೆ.

'ಭಯೋತ್ಪಾದಕ ಚಟುವಟಿಕೆಗಳು ಮತ್ತು ಸರ್ವಾಧಿಕಾರಿ ಆಡಳಿತ ನಡೆಸಿದ ಆರೋಪದ ಮೇರೆಗೆ ಅವಾಮಿ ಲೀಗ್ ಪಕ್ಷವನ್ನು ನಿಷೇಧಿಸಬೇಕು ಎಂದು ವಿವಿಧ ಸಂಘಟನೆಗಳು, ವಿವಿಧ ರಾಜಕೀಯ ಪಕ್ಷಗಳು ಕೋರಿಕೆ ಸಲ್ಲಿಸಿವೆ. ಈ ಮನವಿಗಳನ್ನು ಸರ್ಕಾರವು ಗಂಭೀರವಾಗಿ ಪರಿಗಣಿಸಿದೆ' ಎಂದು ಮಧ್ಯಂತರ ಸರ್ಕಾರ ತಿಳಿಸಿದೆ.

ಹಸೀನಾ ನೇತೃತ್ವದ ಪಕ್ಷವನ್ನು ವಿಸರ್ಜಿಸಬೇಕು ಎಂದು ಒತ್ತಾಯಿಸಿ ಹೊಸದಾಗಿ ಆರಂಭವಾದ ನ್ಯಾಷನಲ್ ಸಿಟಿಜನ್ ಪಕ್ಷದ ಕಾರ್ಯಕರ್ತರು, ಬಾಂಗ್ಲಾದೇಶ ಮಧ್ಯಂತರ ಸರ್ಕಾರದ ಮುಖ್ಯಸ್ಥ ಮೊಹಮ್ಮದ್ ಯೂನಸ್ ಅವರ ನಿವಾಸದ ಎದುರು ಗುರುವಾರ ರಾತ್ರಿ ಪ್ರತಿಭಟನೆ ನಡೆಸಿದ್ದರು. ಬಳಿಕ ಹಸೀನಾ ಅವರ ಪಕ್ಷದ ನಿಷೇಧ ಮಾಡುವ ಕುರಿತ ಸರ್ಕಾರದ ಹೇಳಿಕೆ ಹೊರಬಿದ್ದಿದೆ.

'ಭಾರತದ ಕ್ಷಿಪಣಿ ಅಫ್ಗಾನಿಸ್ತಾನಕ್ಕೆ ಅಪ್ಪಳಿಸಿಲ್ಲ'


ಇಸ್ಲಾಮಾಬಾದ್ (ಪಿಟಿಐ): ಭಾರತದ ಕ್ಷಿಪಣಿಯು ಅಫ್ಗಾನಿಸ್ತಾನಕ್ಕೆ ಅಪ್ಪಳಿಸಿದೆ ಎಂಬ ಪಾಕಿಸ್ತಾನದ ಹೇಳಿಕೆ ಸುಳ್ಳು ಮತ್ತು ಆಧಾರ ರಹಿತ ಎಂದು ಅಫ್ಗಾನಿಸ್ತಾನ ಸರ್ಕಾರ ಸ್ಪಷ್ಟಪಡಿಸಿದೆ.

'ಅಫ್ಗಾನಿಸ್ತಾನ ಸಂಪೂರ್ಣ ಸುರಕ್ಷಿತ ಮತ್ತು ಸದೃಢವಾಗಿದೆ. ಅಂತಹ ಯಾವುದೇ ದಾಳಿ ನಡೆದಿಲ್ಲ. ಭಾರತ ಸಹ ಪಾಕಿಸ್ತಾನದ ಹೇಳಿಕೆಯು ನಗೆಪಾಟಲಿನಿಂದ ಕೂಡಿದೆ ಎಂದು ತಿಳಿಸಿದೆ ಎಂದು ಅಫ್ಗಾನಿಸ್ತಾನದ ರಕ್ಷಣಾ ಇಲಾಖೆ ವಕ್ತಾರ ಇನಾಯತ್‌ವುಲ್ಲಾ ಖವರ್ಝಾಮಿ ತಿಳಿಸಿದ್ದಾರೆ.

ಪಾಕಿಸ್ತಾನ ಸೇನೆಯ ವಕ್ತಾರ ಲೆಫ್ಟಿನೆಂಟ್ ಜನರಲ್ ಅಹ್ಮದ್ ಶರೀಫ್ ಚೌಧ್ರಿ 'ಭಾರತದ ಕ್ಷಿಪಣಿಯೊಂದು ಅಫ್ಗಾನಿಸ್ತಾನ ಪ್ರದೇಶಕ್ಕೆ ಅಪ್ಪಳಿಸಿದೆ' ಎಂದು ಶನಿವಾರ ಹೇಳಿಕೆ ನೀಡಿದ್ದರು.

32 ವಿಮಾನ ನಿಲ್ದಾಣ ಕಾರ್ಯಾಚರಣೆ ಸ್ಥಗಿತ

ನವದೆಹಲಿ (ಪಿಟಿಐ): ದೆಹಲಿ ವಿಮಾನ ನಿಲ್ದಾಣದಲ್ಲಿ ಶನಿವಾರ ದೇಶೀಯ ಮಾರ್ಗದಲ್ಲಿ ಹಾರಾಟ ನಿಗದಿಯಾಗಿದ್ದ 60 ವಿಮಾನಗಳ ಸಂಚಾರ ರದ್ದಾಗಿದೆ ಎಂದು ಮೂಲಗಳು ತಿಳಿಸಿವೆ.



ಭಾರತ ಮತ್ತು ಪಾಕಿಸ್ತಾನದ ನಡುವೆ ತಲೆದೋರಿರುವ ಉದ್ವಿಗ್ನತೆಯಿಂದಾಗಿ ಸುರಕ್ಷತೆ ದೃಷ್ಟಿಯಿಂದ ದೇಶದ 32 ವಿಮಾನ ನಿಲ್ದಾಣಗಳ ಕಾರ್ಯಾಚರಣೆಯನ್ನು ಮೇ 15ರವರೆಗೆ ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿದೆ. ಹಾಗಾಗಿ, ವಿಮಾನಗಳ ಹಾರಾಟ ಸ್ಥಗಿತಗೊಂಡಿದೆ ಎಂದು ಹೇಳಿವೆ.

'ವಿಮಾನ ನಿಲ್ದಾಣವು ಸಹಜ ಸ್ಥಿತಿಯಲ್ಲಿದೆ. ಆದರೆ, ನಾಗರಿಕ ವಿಮಾನಯಾನ ಭದ್ರತಾ ಬ್ಯೂರೊದ ಸೂಚನೆ ಮೇರೆಗೆ ಕೆಲವು ವಿಮಾನಗಳ ಹಾರಾಟವನ್ನು ರದ್ದುಪಡಿಸಲಾಗಿದೆ' ಎಂದು ದೆಹಲಿ ಇಂಟರ್‌ನ್ಯಾಷನಲ್ ಏರ್‌ಪೋರ್ಟ್ ಲಿಮಿಟೆಡ್ (ಡಿಐಎಎಲ್) ತಿಳಿಸಿದೆ.

ಈಕ್ವಿಟಿ ಎಂಎಫ್: ಹೂಡಿಕೆ ಇಳಿಕೆ

ನವದೆಹಲಿ (ಪಿಟಿಐ): ಏಪ್ರಿಲ್‌ನಲ್ಲಿ ಈಕ್ವಿಟಿ ಮ್ಯೂಚುವಲ್ ಫಂಡ್‌ನಲ್ಲಿ ₹24,269 ಕೋಟಿ ಹೂಡಿಕೆಯಾಗಿದೆ. ಮಾರ್ಚ್‌ನಲ್ಲಿ ₹25,082 ಕೋಟಿ ಹೂಡಿಕೆಯಾಗಿತ್ತು. ಇದಕ್ಕೆ ಹೋಲಿಸಿದರೆ ಹೂಡಿಕೆ ಪ್ರಮಾಣದಲ್ಲಿ ಶೇ 3.24ರಷ್ಟು ಇಳಿಕೆಯಾಗಿದೆ ಎಂದು ಭಾರತೀಯ ಮ್ಯೂಚುವಲ್ ಫಂಡ್ ಕಂಪನಿಗಳ ಒಕ್ಕೂಟ (ಎಎಂಎಫ್‌ಐ) ತಿಳಿಸಿದೆ.

ಸತತ ನಾಲ್ಕು ತಿಂಗಳಿನಿಂದ ಈಕ್ವಿಟಿ ಮ್ಯೂಚುವಲ್ ಫಂಡ್‌ನಲ್ಲಿ ಹೂಡಿಕೆ ಪ್ರಮಾಣ ಕಡಿಮೆಯಾಗುತ್ತಿದೆ. ಡೆಟ್ ಮತ್ತು ಹೈಬ್ರೀಡ್ ಫಂಡ್‌ಗಳತ್ತ ಹೂಡಿಕೆದಾರರ ಚಿತ್ತ ನೆಟ್ಟಿರುವುದೇ ಇದಕ್ಕೆ ಕಾರಣ ಎಂದು ಹೇಳಿದೆ.

ಭಾರತ ಮತ್ತು ಪಾಕಿಸ್ತಾನದ ನಡುವಿನ ಸಂಘರ್ಷದಿಂದ ದೇಶೀಯ ಷೇರುಪೇಟೆಯು ಏರಿಳಿತ ಕಾಣುತ್ತಿದೆ. ಅಲ್ಲದೆ, ಅಮೆರಿಕದ ಸುಂಕ ನೀತಿಯು ಮಾರುಕಟ್ಟೆ ಮೇಲೆ ಪರಿಣಾಮ ಬೀರಿದೆ. ಇದು ಕೂಡ ಹೂಡಿಕೆ ಇಳಿಕೆಗೆ ಕಾರಣವಾಗಿದೆ ಎಂದು ಹೇಳಿದೆ.

ಈ ಬೆಳವಣಿಗೆಗೆ ಹೊರತಾಗಿಯೂ ವ್ಯವಸ್ಥಿತ ಹೂಡಿಕೆ ಯೋಜನೆ (ಎಸ್‌ಐಪಿ) ಮೂಲಕ ಹೂಡಿಕೆ ಪ್ರಮಾಣವು ಹೆಚ್ಚಾಗುತ್ತಿದೆ. ಮಾರ್ಚ್‌ನಲ್ಲಿ ಎಸ್‌ಐಪಿ ಮೂಲಕ ₹25,926 ಕೋಟಿ ಹೂಡಿಕೆಯಾಗಿದ್ದರೆ, ಏಪ್ರಿಲ್‌ನಲ್ಲಿ ₹26,632 ಕೋಟಿ ಹೂಡಿಕೆಯಾಗಿದೆ.

'ಭಾರತದ ಹೋರಾಟಕ್ಕೆ ರಷ್ಯಾ ಬೆಂಬಲ'

ಮಾಸ್ಕೊ (ಪಿಟಿಐ): ಭಯೋತ್ಪಾದನೆ ವಿರುದ್ಧದ ಭಾರತದ ಹೋರಾಟಕ್ಕೆ ಅಗತ್ಯವಿರುವ ಎಲ್ಲ ನೆರವು ನೀಡುವುದಾಗಿ ರಷ್ಯಾ ಭರವಸೆ ನೀಡಿದೆ ಎಂದು ರಕ್ಷಣಾ ಸಚಿವಾಲಯದ ರಾಜ್ಯ ಖಾತೆ ಸಚಿವ ಸಂಜಯ್ ಸೇಠ್ ಶನಿವಾರ ಹೇಳಿದ್ದಾರೆ.

ಜತೆಗೆ, ರಷ್ಯಾ ಜತೆಗಿನ ಭಾರತದ ಒಪ್ಪಂದದಂತೆ ಸೇನಾ ಸಲಕರಣೆಗಳನ್ನು ಪೂರೈಸುವುದಾಗಿಯೂ ರಷ್ಯಾ ತಿಳಿಸಿದೆ ಎಂದು ತಿಳಿಸಿದ್ದಾರೆ.

ಈ ಸಂದರ್ಭದಲ್ಲಿ ಉಭಯ ರಾಷ್ಟ್ರಗಳು ನಿರಂತರ ಸಮಾಲೋಚನೆ ಮೂಲಕ ಸಂಬಂಧವನ್ನು ಮತ್ತಷ್ಟು ಉತ್ತಮಗೊಳಿಸಲು ಒಪ್ಪಿಕೊಂಡಿವೆ.

ವಿಶ್ವದ 2ನೇ ಮಹಾಯುದ್ಧದಲ್ಲಿ ಜರ್ಮನಿಯ ನಾಝಿ ಸೇನೆ ವಿರುದ್ಧದ ಸೋವಿಯತ್ ಒಕ್ಕೂಟದ ವಿಜಯೋತ್ಸವದ 80ನೇ ವಾರ್ಷಿಕೋತ್ಸವದಲ್ಲಿ ಸೇಠ್ ಅವರು ಭಾರತದ ಪ್ರತಿನಿಧಿಯಾಗಿ ಭಾಗವಹಿಸಿದ್ದರು. ಸೇನೆ ಮತ್ತು ತಾಂತ್ರಿಕ ಸಹಕಾರದ ಕುರಿತು ಚರ್ಚಿಸಲು ರಷ್ಯಾದ ರಕ್ಷಣಾ ಸಚಿವಾಲಯದ ಉಪ ಸಚಿವ ಕರ್ನಲ್ ಜನರಲ್ ಅಲೆಕ್ಸಾಂಡರ್ ಫಾಮಿನ್ ಅವರು ಭಾರತವನ್ನು ಆಹ್ವಾನಿಸಿದ್ದರು.



ಕೇಂದ್ರ ಸಚಿವ ಸಂಜಯ್ ಸೇಠ್ ಅವರು ರಷ್ಯಾ ಅಧ್ಯಕ್ಷ ವ್ಲಾದಿಮಿರ್ ಪುಟಿನ್ ಅವರನ್ನು ಭೇಟಿಯಾಗಿ ಚರ್ಚೆ ನಡೆಸಿದರು ಪಿಟಿಐ ಚಿತ್ರ

ಪಹಲ್ಗಾಮ್ ಭಯೋತ್ಪಾದಕ ದಾಳಿ ಬಳಿಕ ಭಾರತ ಮತ್ತು ಪಾಕಿಸ್ತಾನದ ನಡುವೆ ಯುದ್ಧದ ಸನ್ನಿವೇಶ ನಿರ್ಮಾಣವಾಗಿರುವ ಕಾರಣ ಪ್ರಧಾನಿ ನರೇಂದ್ರ ಮೋದಿ ಅಥವಾ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರು ಪಾಲ್ಗೊಳ್ಳಲಿಲ್ಲ. ಹೀಗಾಗಿ, ಈ ವಿಜಯೋತ್ಸವದ ಕಾರ್ಯಕ್ರಮಕ್ಕೆ ಸೇಠ್ ಅವರನ್ನು ಕಳುಹಿಸಲಾಗಿದೆ ಎಂದು ತಿಳಿದುಬಂದಿದೆ.

10 ವರ್ಷಗಳಲ್ಲಿ 769 ಕೈದಿಗಳ ಸಾವು; 111 ಅಧಿಕಾರಿಗಳ ವಿರುದ್ಧ ಶಿಸ್ತುಕ್ರಮ

ಕಾರಾಗೃಹಗಳಲ್ಲಿ 90 ಕೈದಿಗಳ ಆತ್ಮಹತ್ಯೆ

● ಸಿದ್ದು ಆರ್.ಜಿ.ಹಳ್ಳಿ

ಮಂಡ್ಯ: ರಾಜ್ಯದ ಕಾರಾಗೃಹಗಳಲ್ಲಿ ಕಳೆದ 10 ವರ್ಷಗಳಲ್ಲಿ 769 ಕೈದಿಗಳು ಮೃತಪಟ್ಟಿದ್ದು, 90 ಮಂದಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. 79 ಕೈದಿಗಳ ಸಾವಿಗೆ 'ನಿಖರ ಕಾರಣ'ವೇ ತಿಳಿದುಬಂದಿಲ್ಲ.

ನ್ಯಾಯಾಂಗ ಬಂಧನದಲ್ಲಿದ್ದಾಗ ಘರ್ಷಣೆ, ಆತ್ಮಹತ್ಯೆ, ಅಸಹಜ ಸಾವುಗಳ 47 ಪ್ರಕರಣಗಳಲ್ಲಿ, ಕರ್ತವ್ಯಲೋಪ ಆರೋಪದಡಿ 111 ಮಂದಿ ಅಧಿಕಾರಿ, ಸಿಬ್ಬಂದಿ ವಿರುದ್ಧ ಶಿಸ್ತುಕ್ರಮ ಜರುಗಿಸಲಾಗಿದೆ.

'597 ಕೈದಿಗಳ ಸಾವನ್ನು 'ಸ್ವಾಭಾವಿಕ' ಎಂದು ಗುರುತಿಸಿದ್ದು, ಕೈದಿಗಳೊಂದಿಗೆ ಘರ್ಷಣೆಯಿಂದ ಮೂವರು ಮೃತಪಟ್ಟಿದ್ದಾರೆ' ಎನ್ನುತ್ತವೆ ಕಾರಾಗೃಹ ಇಲಾಖೆಯ ದಾಖಲೆಗಳು.

ಬೆಂಗಳೂರು ಕೇಂದ್ರ ಕಾರಾಗೃಹದಲ್ಲಿ ಹೆಚ್ಚು (325) ಕೈದಿಗಳು ಸತ್ತಿದ್ದಾರೆ. ಬೆಳಗಾವಿ– 61, ಮೈಸೂರು– 56, ಧಾರವಾಡ– 49, ಕಲಬುರಗಿ,–47, ಬಳ್ಳಾರಿ ಕಾರಾಗೃಹದಲ್ಲಿ 40 ಕೈದಿಗಳು ಅಸುನೀಗಿದ್ದಾರೆ.

ಶಿಸ್ತು ಕ್ರಮ: 'ಕರ್ತವ್ಯಲೋಪ ಪ್ರಕರಣದಲ್ಲಿ ವಾರ್ಷಿಕ ವೇತನ ಬಡ್ತಿ ಮುಂದೂಡಿಕೆ, ಸೇವೆಯಿಂದ ಅಮಾನತು, ಶೇ 25ರಷ್ಟು ಪಿಂಚಣಿಗೆ ತಡೆ, ಕಡ್ಡಾಯ ನಿವೃತ್ತಿ ಮೊದಲಾದ ಕ್ರಮಗಳನ್ನು ಅಧಿಕಾರಿ, ಸಿಬ್ಬಂದಿ ವಿರುದ್ಧ ಕೈಗೊಳ್ಳಲಾಗಿದೆ' ಎನ್ನುತ್ತಾರೆ ಇಲಾಖೆಯ ಹಿರಿಯ ಅಧಿಕಾರಿಗಳು.

ಬೆಂಗಳೂರಿನ ಜೀವನ್‌ಬಿಮಾ ನಗರ ಠಾಣೆಯಲ್ಲಿ 2016ರಲ್ಲಿ ವಿಚಾರಣೆಗೆ ಕರೆತಂದಿದ್ದ ವ್ಯಕ್ತಿಗೆ ಸಾವಿನ ಪ್ರಕರಣದಲ್ಲಿ ನಾಲ್ವರು ಪೊಲೀಸರಿಗೆ ಕೋರ್ಟ್ 7 ವರ್ಷ ಶಿಕ್ಷೆ ವಿಧಿಸಿದೆ. ಕೆಲ ಪ್ರಕರಣಗಳಲ್ಲಿ ಶಿಸ್ತುಕ್ರಮಕ್ಕೆ ಶಿಫಾರಸು ಮಾಡಲಾಗಿದೆ. ಕೆಲ ಪ್ರಕರಣಗಳು ವಿಚಾರಣೆ ಹಂತದಲ್ಲಿವೆ.

₹4.34 ಕೋಟಿ ಪರಿಹಾರ: 'ದಶಕದ ಅವಧಿಯಲ್ಲಿ ಅಸಹಜವಾಗಿ ಸಾವಿಗೀಡಾದ ಕೈದಿ ಅಥವಾ ವಿಚಾರಣಾಧೀನ ಕೈದಿಗಳ ಅವಲಂಬಿತರಿಗೆ ಗೃಹ ಇಲಾಖೆಯಿಂದ ಒಟ್ಟು ₹1.40 ಕೋಟಿ ಹಾಗೂ ಕಾರಾಗೃಹ ಇಲಾಖೆಯಿಂದ ₹2.94 ಕೋಟಿ ಪರಿಹಾರ ನೀಡಲಾಗಿದೆ' ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಮುಖ್ಯಾಂಶಗಳು

- 79 ಕೈದಿಗಳ ಸಾವಿಗೆ ತಿಳಿಯದ 'ನಿಖರ ಕಾರಣ'
- ಬೆಂಗಳೂರು ಕೇಂದ್ರ ಕಾರಾಗೃಹದಲ್ಲಿ 325 ಕೈದಿಗಳ ಸಾವು

ಕೈದಿಗಳಲ್ಲಿ ಖಿನ್ನತೆ ನಿವಾರಿಸಲು ಯೋಗ, ಧ್ಯಾನ, ಸಾಕ್ಷರತೆ, ಕೌಶಲ ತರಬೇತಿ ನೀಡುತ್ತಿದ್ದೇವೆ. ಆಪ್ತ ಸಮಾಲೋಚನೆಯನ್ನೂ ನಡೆಸಲಾಗುತ್ತಿದೆ
ಟಿ.ಕೆ. ಲೋಕೇಶ್
ಜಿಲ್ಲಾ ಕಾರಾಗೃಹ ಅಧೀಕ್ಷಕ, ಮಂಡ್ಯ



ಮಂಡ್ಯ ಜಿಲ್ಲಾ ಕಾರಾಗೃಹದ ಹೊರನೋಟ

367 ಆರೋಪಿಗಳ ಸಾವು

10 ವರ್ಷಗಳಲ್ಲಿ, ಪೊಲೀಸ್ ವಶದಲ್ಲಿ ಇದ್ದಾಗ 367 ಆರೋಪಿಗಳು ಮೃತಪಟ್ಟಿದ್ದಾರೆ. ಹುಬ್ಬಳ್ಳಿ–ಧಾರವಾಡ ನಗರದಲ್ಲಿ 59, ಬೆಳಗಾವಿ ನಗರದಲ್ಲಿ 53, ಮೈಸೂರು ನಗರದಲ್ಲಿ 50, ಕಲಬುರಗಿ ನಗರದಲ್ಲಿ 45, ಮಂಗಳೂರು ನಗರದಲ್ಲಿ 24 ಆರೋಪಿಗಳು ಸಾವಿಗೀಡಾಗಿದ್ದಾರೆ ಎಂದು ಇಲಾಖೆ ಅಂಕಿಅಂಶಗಳು ತಿಳಿಸಿವೆ.

ಬ್ರಹ್ಮೋಸ್ ಕ್ರೂಸ್ ಕ್ಷಿಪಣಿ: ಘಟಕಕ್ಕೆ ಚಾಲನೆ ಇಂದು

ಲಖನೌ (ಪಿಟಿಐ): ಉತ್ತರ ಪ್ರದೇಶದ ರಕ್ಷಣಾ ಕೈಗಾರಿಕಾ ಕಾರಿಡಾರ್‌ನಲ್ಲಿ ಬ್ರಹ್ಮೋಸ್ ಕ್ರೂಸ್ ಕ್ಷಿಪಣಿ ತಯಾರಿಕಾ ಘಟಕ ನಿರ್ಮಾಣಕ್ಕೆ ರಕ್ಷಣಾ ಸಚಿವ ರಾಜನಾಥ ಸಿಂಗ್ ಮತ್ತು ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ವಿಡಿಯೊ ಕಾನ್ಫರೆನ್ಸ್ ಮೂಲಕ ಭಾನುವಾರ ಚಾಲನೆ ನೀಡಲಿದ್ದಾರೆ.

ಒಟ್ಟು 80 ಎಕರೆ ವಿಸ್ತೀರ್ಣದಲ್ಲಿ ಈ ಘಟಕವನ್ನು ಸ್ಥಾಪಿಸಲಾಗುತ್ತಿದ್ದು, ಘಟಕ ನಿರ್ಮಾಣಕ್ಕೆ ಬೇಕಾದ ಜಾಗವನ್ನು ಉತ್ತರ ಪ್ರದೇಶ ಸರ್ಕಾರವು ಉಚಿತವಾಗಿ ನೀಡಿದೆ. ಮೂರೂವರೆ ವರ್ಷದಲ್ಲಿ ಘಟಕದ ನಿರ್ಮಾಣ ಕಾರ್ಯ ಪೂರ್ಣಗೊಳ್ಳಲಿದೆ.

₹300 ಕೋಟಿ ವೆಚ್ಚದಲ್ಲಿ ಈ ಘಟಕವನ್ನು ನಿರ್ಮಾಣ ಮಾಡಲಾಗುತ್ತಿದೆ. 290 ಕಿ.ಮೀನಿಂದ 400 ಕಿ.ಮೀ. ದೂರದವರೆಗೆ 3,430 ಕಿ.ಮೀ ವೇಗದಲ್ಲಿ ತೆರಳುವ ಬ್ರಹ್ಮೋಸ್ ಕ್ಷಿಪಣಿಗಳನ್ನು ಇಲ್ಲಿ ತಯಾರಿಸಲಾಗುವುದು. ಕ್ಷಿಪಣಿಯ ಬಿಡಿ ಭಾಗಗಳನ್ನು ಜೋಡಿಸುವ, ಕ್ಷಿಪಣಿ ಪರೀಕ್ಷಿಸುವ ಸೌಲಭ್ಯವೂ ಇರಲಿದೆ.



ತಾಯಿಗೆ ನಮನ

ಪಶ್ಚಿಮ ಬಂಗಾಳದ ನಾಡಿಯಾದಲ್ಲಿ ಅಮ್ಮನ ದಿನಾಚರಣೆಯಾದ ಶನಿವಾರ ಮಹಿಳೆಯೊಬ್ಬರು ಮಗುವನ್ನು ಬೆನ್ನಿಗೆ ಕಟ್ಟಿಕೊಂಡು ಕಲ್ಲಿದ್ದಲು ಪುಡಿ ಮಾಡುವ ಕೆಲಸದಲ್ಲಿ ತೊಡಗಿದರು
ಪಿಟಿಐ ಚಿತ್ರ

'ದಪ್ಪಗಿದ್ದೀಯ' ಎಂದು ಗೇಲಿ: ಗುಂಡಿನ ದಾಳಿ

ಲಖನೌ: 'ದಪ್ಪಗಿದ್ದೀಯ' ಎಂದು ಗೇಲಿ ಮಾಡಿದ್ದಾರೆ ಎಂದು ಆರೋಪಿಸಿ ಯುವಕನೊಬ್ಬ ಇಬ್ಬರ ಮೇಲೆ ಗುಂಡು ಹಾರಿಸಿ ಗಾಯಗೊಳಿಸಿರುವ ಘಟನೆ ಉತ್ತರ ಪ್ರದೇಶದ ಗೋರಖಪುರ ಜಿಲ್ಲೆಯಲ್ಲಿ ನಡೆದಿದೆ.

ಆರೋಪಿ ಅನಿಲ್ ಚೌಹಾಣ್‌ನನ್ನು ಬಂಧಿಸಲಾಗಿದೆ. ಗಾಯಗೊಂಡಿರುವ ಇಬ್ಬರನ್ನು ಆಸ್ಪತ್ರೆಗೆ ದಾಖಲಿಸ ಲಾಗಿದ್ದು, ಅವರ ಆರೋಗ್ಯ ಸ್ಥಿತಿ ಗಂಭೀರವಾಗಿದೆ.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಹೇಮರೆಡ್ಡಿ ಮಲ್ಲಮ್ಮ ಜಯಂತಿ

'ಸಂಕಷ್ಟಗಳ ನಡುವೆ ಆಧ್ಯಾತ್ಮಿಕ ಸಾಧನೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೌಟುಂಬಿಕ ಸಂಕಷ್ಟಗಳ ನಡುವೆ ತಾಳ್ಮೆಯಿಂದ ಆಧ್ಯಾತ್ಮಿಕ ಸಾಧನೆ ಮಾಡಿದ ಹೇಮರೆಡ್ಡಿ ಮಲ್ಲಮ್ಮ ನಿಜಶರಣೆ ಎಂದು ಹರಿಹರದ ಎರೆಹೊಸಹಳ್ಳಿ ರೆಡ್ಡಿ ಗುರುಪೀಠದ ವೇಮನಾನಂದ ಸ್ವಾಮೀಜಿ ತಿಳಿಸಿದರು.

ನಗರದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಶನಿವಾರ ಹಮ್ಮಿಕೊಂಡಿದ್ದ ಹೇಮರೆಡ್ಡಿ ಮಲ್ಲಮ್ಮ ಜಯಂತಿ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಮಲ್ಲಮ್ಮ ಅವರಿಗೆ ಮನೆಯಲ್ಲಿ ಗಂಡ, ಅತ್ತೆ ಮಾವ, ನಾದಿನಿ ಸಹಿತ ಹಲವರು ತೊಂದರೆ ಕೊಡುತ್ತಿದ್ದರು. ಅವುಗಳನ್ನೆಲ್ಲ ಸಹಿಸಿಕೊಂಡೇ ಕುಟುಂಬವನ್ನು ತ್ಯಜಿಸದೇ, ಸಂಸಾರವೇ ದೈವಸ್ವರೂಪ ಎಂದು ಬಗೆದರು ಎಂದು ಹೇಳಿದರು.

ಅಕ್ಕಮಹಾದೇವಿ ಸೇರಿದಂತೆ ಹಲವು ಶರಣೆಯರು ಸಂಸಾರಿಗಳಾಗದೇ ಮಲ್ಲಿಕಾರ್ಜುನನ ಜಪ ಮಾಡಿದ್ದರು. ಆತನೇ ತಮ್ಮ ಪತಿ ಎಂದು ಭಾವಿಸಿದ್ದರು. ಆದರೆ ಹೇಮರೆಡ್ಡಿ ಮಲ್ಲಮ್ಮ ಸಂಸಾರಿಯಾಗಿ ಸಂಕಷ್ಟಗಳನ್ನು ಉಂಡು ಕಾಯಕದಲ್ಲಿ ದೇವರ ಕಂಡರು. ಓದದಿದ್ದರೂ, ವಚನಗಳನ್ನು ರಚಿಸದಿದ್ದರೂ ಮೈದುನ ವೇಮನನ್ನು ಸರಿದಾರಿಗೆ ತಂದು ಕವಿ, ತತ್ವಜ್ಞಾನಿಯನ್ನಾಗಿಸಿದರು. ಬೇಡಿ ಬಂದವರಿಗೆ ಕೊಡುಗೈ ದಾನಿಯಾದರು ಎಂದು ವಿವರಿಸಿದರು.

ತುಮಕೂರು ವಿಶ್ವವಿದ್ಯಾಲಯದ ಕನ್ನಡ ಸಹಪ್ರಾಧ್ಯಾಪಕ ವೆಂಕಟರೆಡ್ಡಿ ರಾಮರೆಡ್ಡಿ ಮಾತನಾಡಿ, 'ಹೇಮರೆಡ್ಡಿ ಮಲ್ಲಮ್ಮ ಎಷ್ಟೇ ಕಷ್ಟಗಳನ್ನೂ ಅನುಭವಿಸಿದರೂ ಅದಕ್ಕೆ ಕೊರಗಲಿಲ್ಲ. ಇತರರಿಗೆ ಕೆಟ್ಟದ್ದನ್ನು ಬಯಸಲಿಲ್ಲ, ಬಗೆಯಲಿಲ್ಲ. ಎಲ್ಲರ ಒಳಿತನ್ನು ಬಯಸುವ ಭಕ್ತಿಯನ್ನು ತೋರಿದರು. ದೃಢಭಕ್ತಿಯಿಂದೇ ಜನರನ್ನು ಸೆಳೆದು ವಿವರಣ(?) ತತ್ವವನ್ನು ಸಾರಿದ ಮಹಾಶರಣೆ ಅವರು' ಎಂದು ನೆನಪು ಮಾಡಿಕೊಂಡರು.

ಕರ್ನಾಟಕ ರೆಡ್ಡಿ ಜನಸಂಘದ ಅಧ್ಯಕ್ಷ ಎಸ್.ಜಯರಾಮರೆಡ್ಡಿ, ಪ್ರಧಾನ ಕಾರ್ಯದರ್ಶಿ ಎನ್. ಶೇಖರ್ ರೆಡ್ಡಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕಿ ಕೆ.ಎಂ. ಗಾಯತ್ರಿ, ಜಂಟಿ ನಿರ್ದೇಶಕರಾದ ಬಲವಂತರಾವ್ ಪಾಟೀಲ್, ಬನಶಂಕರಿ ಅಂಗಡಿ ಭಾಗವಹಿಸಿದ್ದರು. ವಚನಗಾಯನ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಿದವು.


ಹೇಮರೆಡ್ಡಿ ಮಲ್ಲಮ್ಮ ಜಯಂತಿ ಪ್ರಯುಕ್ತ ಅವರ ಭಾವಚಿತ್ರಕ್ಕೆ ಎನ್. ಶೇಖರ್ ರೆಡ್ಡಿ, ಕೆ.ಎಂ. ಗಾಯತ್ರಿ, ಎಸ್. ಜಯರಾಮರೆಡ್ಡಿ, ವೇಮನಾನಂದ ಸ್ವಾಮೀಜಿ ಪುಷ್ಪನಮನ ಸಲ್ಲಿಸಿದರು
ಪ್ರಜಾವಾಣಿ ಚಿತ್ರ

ಸಂಕ್ಷಿಪ್ತ ಸುದ್ದಿ

ಎನ್‌ಎಎಲ್‌ಎಸ್‌ಎ ಅಧ್ಯಕ್ಷರಾಗಿ ನ್ಯಾಯಮೂರ್ತಿ ಸೂರ್ಯಕಾಂತ್ ನೇಮಕ

ನವದೆಹಲಿ (ಪಿಟಿಐ): ರಾಷ್ಟ್ರೀಯ ಕಾನೂನು ಸೇವಾ ಪ್ರಾಧಿಕಾರದ (ಎನ್‌ಎಎಲ್‌ಎಸ್‌ಎ) ಕಾರ್ಯನಿರ್ವಾಹಕ ಅಧ್ಯಕ್ಷರಾಗಿ ನ್ಯಾಯಮೂರ್ತಿ ಸೂರ್ಯಕಾಂತ್ ಅವರನ್ನು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ನೇಮಕ ಮಾಡಿದ್ದಾರೆ.


ನ್ಯಾ. ಸೂರ್ಯಕಾಂತ್

ಎನ್‌ಎಎಲ್‌ಎಸ್‌ಎ ಈ ಕುರಿತು ಪತ್ರಿಕಾ ಹೇಳಿಕೆ ನೀಡಿದೆ. ರಾಷ್ಟ್ರಪತಿ ಅವರು ನೇಮಕ ಮಾಡಿರುವ ಕುರಿತು ಕಾನೂನು ಸಚಿವಾಲಯವು ಮೇ 9ರಂದು ಅಧಿಸೂಚನೆ ಹೊರಡಿಸಿದೆ ಎಂದು ತಿಳಿಸಿದೆ.

ಈ ಮೊದಲು ನ್ಯಾಯಮೂರ್ತಿ ಬಿ.ಆರ್.ಗವಾಯಿ ಈ ಸ್ಥಾನದಲ್ಲಿದ್ದರು. ಸಂಪ್ರದಾಯದಂತೆ ಸುಪ್ರೀಂ ಕೋರ್ಟ್‌ನ ಎರಡನೇ ಅತಿ ಹಿರಿಯ ನ್ಯಾಯಮೂರ್ತಿಯವರನ್ನು ಈ ಸ್ಥಾನಕ್ಕೆ ನೇಮಿಸಲಾಗುತ್ತದೆ.

ಆದಾಯ ತೆರಿಗೆ ಆಯುಕ್ತರ ಬಂಧನ

ನವದೆಹಲಿ (ಪಿಟಿಐ): ₹70 ಲಕ್ಷ ಲಂಚ ಪಡೆದ ಪ್ರಕರಣದಲ್ಲಿ ಆದಾಯ ತೆರಿಗೆ ಆಯುಕ್ತ (ವಿನಾಯಿತಿ) ಜೀವನ್ ಲಾಲ್ ಲಾವಿಡಿಯಾ ಹಾಗೂ ಇತರ ನಾಲ್ವರನ್ನು ಸಿಬಿಐ ಹೈದರಾಬಾದ್‌ನಲ್ಲಿ ಬಂಧಿಸಿದೆ.

2004ರ ಬ್ಯಾಚ್‌ನ ಭಾರತೀಯ ಕಂದಾಯ ಸೇವಾ ಅಧಿಕಾರಿ ಲಾವಿಡಿಯಾ ಅವರು ಲಂಚ ಪಡೆಯುತ್ತಿದ್ದಾರೆ ಎಂದು ಮಾಹಿತಿ ಸಿಬಿಐಗೆ ಲಭಿಸಿತ್ತು. ಅವರ ವಿರುದ್ಧ ಈಚೆಗಷ್ಟೇ ಎಫ್‌ಐಆರ್ ದಾಖಲಿಸಲಾಗಿತ್ತು ಎಂದು ಅಧಿಕಾರಿಗಳು ಶನಿವಾರ ತಿಳಿಸಿದ್ದಾರೆ.

ಪದ್ಮನಾಭಸ್ವಾಮಿ ದೇಗುಲ: 100 ಗ್ರಾಂ ಚಿನ್ನ ಕಳವು

ತಿರುವನಂತಪುರ (ಪಿಟಿಐ): ಕೇರಳದ ಶ್ರೀ ಪದ್ಮನಾಭಸ್ವಾಮಿ ದೇವಸ್ಥಾನದಿಂದ ಸುಮಾರು 100 ಗ್ರಾಂ ಚಿನ್ನ ಕಳ್ಳತನವಾಗಿದೆ ಎಂದು ಆರೋಪಿಸಿ ಇಲ್ಲಿನ ಕೋಟೆ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ ಎಂದು ಪೊಲೀಸರು ಶನಿವಾರ ತಿಳಿಸಿದ್ದಾರೆ.

ಚಿನ್ನದ ಲೇಪಿತ ಕೆಲಸಕ್ಕೆ ದೇವಸ್ಥಾನದಲ್ಲಿ ಇಡಲಾಗಿದ್ದ 12 ಪವನ್ (ಸುಮಾರು 96 ಗ್ರಾಂ) ಚಿನ್ನ ಕಳ್ಳತನ ವಾಗಿದೆ. ಅದನ್ನು ಯಾರು ಕಳವು ಮಾಡಿದ್ದಾರೆ ಎಂದು ಪತ್ತೆಹಚ್ಚಲು ಸಿ.ಸಿ.ಟಿ.ವಿ ದೃಶ್ಯಾವಳಿಗಳನ್ನು ಪರಿಶೀಲಿಸಲಾಗುತ್ತಿದೆ ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದ್ದಾರೆ.

ಕೈ, ಕಾಲು ಕಟ್ಟಿ ಹಾಕಿದ ಸ್ಥಿತಿಯಲ್ಲಿ ಮೃತದೇಹ ಪತ್ತೆ

ಹಾಥರಸ್, ಉತ್ತರಪ್ರದೇಶ (ಪಿಟಿಐ): ಜಿಲ್ಲೆಯ ರಾಗಿ ಹೊಲವೊಂದರಲ್ಲಿ ಕೈ, ಕಾಲು ಕಟ್ಟಿಹಾಕಿದ ಸ್ಥಿತಿಯಲ್ಲಿ 7 ವರ್ಷದ ಬಾಲಕನ ಮೃತದೇಹವು ಪತ್ತೆಯಾಗಿದೆ.

ಮೃತ ಬಾಲಕನನ್ನು ಖುಶಿಪುರ ಜಟನ್ ಗ್ರಾಮದ ನಿವಾಸಿ ಜೀವನ್ ಅಲಿಯಾಸ್ ಛೋಟೂ ಎಂದು ಗುರುತಿಸಲಾಗಿದೆ.

'ಮೇ 8ರಂದು ಮಧ್ಯಾಹ್ನ 3 ಗಂಟೆಗೆ ತಂದೆ ರಾಜ್‌ಪಾಲ್ ಜೊತೆಗೆ ಮೇಳಕ್ಕೆ(?) ಹೋಗಿದ್ದ ಬಾಲಕ, ಆಟವಾಡಲು ಸನಿಹದ ಹೊಲಕ್ಕೆ ತೆರಳಿದ್ದ. ಆದಾದ ಬಳಿಕ ನಾಪತ್ತೆಯಾಗಿದ್ದ. ತಕ್ಷಣವೇ ಹತ್ತಾರು ಸುತ್ತಲಿನ ಜಾಗದಲ್ಲಿ ಹುಡುಕಾಟ ನಡೆಸಿದ್ದರು. ಸ್ಥಳೀಯ ಠಾಣೆಯಲ್ಲಿ ನಾಪತ್ತೆ ಪ್ರಕರಣ ದಾಖಲಿಸಿದ್ದರು. ವರದಿ ಆಧರಿಸಿ, ಅಪಹರಣ ಪ್ರಕರಣ ಕೂಡ ದಾಖಲಿಸಲಾಗಿತ್ತು' ಎಂದು ಅಧಿಕಾರಿಗಳು ತಿಳಿಸಿದ್ದಾರೆ.

'ರಾಗಿ ಹೊಲದಲ್ಲಿ ಬಾಲಕನ ಮೃತದೇಹವು ಪತ್ತೆಯಾಗಿದ್ದು, ಕೈ ಕಾಲುಗಳು ಕಟ್ಟಿದ ಸ್ಥಿತಿಯಲ್ಲಿತ್ತು' ಎಂದು ಮುರ್ಸಾನ್ ಠಾಣೆಯ ಠಾಣಾಧಿಕಾರಿ ಮಮತಾ ಸಿಂಗ್ ತಿಳಿಸಿದರು.

ವಿಶ್ವ ಸುಂದರಿ ಸ್ಪರ್ಧೆ ಮುಂದೂಡಲು ಒತ್ತಾಯ

ಹೈದರಾಬಾದ್ (ಪಿಟಿಐ): ಹೈದರಾಬಾದ್‌ನಲ್ಲಿ ನಡೆಯುತ್ತಿರುವ ವಿಶ್ವ ಸುಂದರಿ ಸ್ಪರ್ಧೆಯನ್ನು ಮುಂದೂಡುವಂತೆ ಬಿಆರ್‌ಎಸ್ ನಾಯಕಿ ಕೆ.ಕವಿತಾ ಅವರು ತೆಲಂಗಾಣ ಸರ್ಕಾರವನ್ನು ಶುಕ್ರವಾರ ಒತ್ತಾಯಿಸಿದ್ದಾರೆ.

ಬಾಕಿಯಿರುವ ಐಪಿಎಲ್ ಪಂದ್ಯಗಳನ್ನು ಮುಂದೂಡಿದ ಕುರಿತು ಉಲ್ಲೇಖಿಸಿದ ಅವರು, 'ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ರಾಜ್ಯವು ವಿಶ್ವ ಸುಂದರಿ ಸ್ಪರ್ಧೆಯನ್ನು ಮುಂದೂಡುವ ನಿರ್ಧಾರ ತೆಗೆದುಕೊಳ್ಳಬೇಕು' ಎಂದು ಹೇಳಿದ್ದಾರೆ. 'ಈ ಸಮಯದಲ್ಲಿ ಮನೋರಂಜನೆ ಕಾರ್ಯಕ್ರಮಗಳನ್ನು ನಾವು ಆಯೋಜಿಸಬಾರದು. ಐಪಿಎಲ್‌ನಂತಹ ಜನಪ್ರಿಯ ಪಂದ್ಯವೇ ಮುಂದೂಡಲಾಗಿದೆ' ಎಂದಿದ್ದಾರೆ.

ಕೃಷಿ ವಿಜ್ಞಾನಿ ಅಯ್ಯಪ್ಪನ್ ನಿಗೂಢ ಸಾವು

ಒಂದನೇ ಪುಟದಿಂದ...

'ಅಯ್ಯಪ್ಪನ್ ಶ್ರೀರಂಗಪಟ್ಟಣದ ಸಾಯಿಬಾಬಾ ಆಶ್ರಮದ ಸಮೀಪ 3 ದಿನದ ಹಿಂದೆ ನದಿಗೆ ಹಾರಿದ್ದರು. ದಡದಲ್ಲಿ ಅವರ ಸ್ಕೂಟರ್ ಸಿಕ್ಕಿದೆ ಎಂಬ ಪ್ರಾಥಮಿಕ ಮಾಹಿತಿ ಲಭ್ಯವಾಗಿದೆ' ಎಂದು ಪೊಲೀಸರು ತಿಳಿಸಿದರು.

'ಮೇ 7ರಂದು ಮನೆಯಿಂದ ಹೋದವರು ನಾಪತ್ತೆಯಾಗಿದ್ದಾರೆ. ಮೊಬೈಲ್ ಫೋನ್ ಮನೆಯಲ್ಲೇ ಬಿಟ್ಟಿದ್ದಾರೆ' ಎಂದು ಕುಟುಂಬದವರು ಮೈಸೂರಿನ ವಿದ್ಯಾರಣ್ಯಪುರಂ ಠಾಣೆಗೆ ದೂರು ನೀಡಿದ್ದರು. ಶವವನ್ನು ಮರಣೋತ್ತರ ಪರೀಕ್ಷೆಗೆ ಮೈಸೂರಿನ ಕೆ.ಆರ್.ಆಸ್ಪತ್ರೆಗೆ ಸಾಗಿಸಲಾಗಿದೆ. ಸಾವಿಗೆ ನಿಖರ ಕಾರಣ ತಿಳಿದುಬಂದಿಲ್ಲ' ಎಂದು ಪೊಲೀಸರು ತಿಳಿಸಿದರು.

ಮೈಸೂರು–ಬೆಂಗಳೂರು ರಸ್ತೆಯ ವರ್ತುಲ ರಸ್ತೆ ಜಂಕ್ಷನ್‌ನಲ್ಲಿ ಅಯ್ಯಪ್ಪನ್ ಅವರು ಸ್ಕೂಟರ್‌ನಲ್ಲಿ ತೆರಳುವುದನ್ನು ಪತ್ತೆಹಚ್ಚಿದ್ದ ವಿದ್ಯಾರಣ್ಯಪುರಂ ಠಾಣೆ ಪೊಲೀಸರು ಶ್ರೀರಂಗಪಟ್ಟಣ ಪೊಲೀಸರಿಗೆ ಮಾಹಿತಿ ನೀಡಿದ್ದರು ಎಂದು ತಿಳಿದುಬಂದಿದೆ.

ಧ್ಯಾನಕ್ಕೆ ಹೋಗುತ್ತಿದ್ದರು: 'ಸುಬ್ಬಣ್ಣ ಅವರು ಮೈಸೂರಿನ ರಾಮಕೃಷ್ಣ ಆಶ್ರಮ ಮತ್ತು ಶ್ರೀರಂಗಪಟ್ಟಣದ ಕಾವೇರಿ ನದಿ ತಟಕ್ಕೆ ಧ್ಯಾನ ಮಾಡಲು ಹೋಗುತ್ತಿದ್ದರು. ಅಲ್ಲಿಯೇ ಅವರ ಮೃತದೇಹ ಸಿಕ್ಕಿದೆ' ಎಂದು ಸಂಬಂಧಿಕರಾದ, ವಕೀಲ ಶ್ರೀನಿಧಿ ತಿಳಿಸಿದ್ದಾರೆ.

ಪರಿಚಯ: ಅಯ್ಯಪ್ಪನ್ ಕೃಷಿ, ಮೀನುಗಾರಿಕಾ (ಅಕ್ವಾಕಲ್ಚರ್) ವಿಜ್ಞಾನಿಯಾಗಿ ದೆಹಲಿ, ಮುಂಬೈ, ಭೋಪಾಲ್ ಹಾಗೂ ಬೆಂಗಳೂರಿನಲ್ಲಿ ಕಾರ್ಯನಿರ್ವಹಿಸಿ ನಿವೃತ್ತರಾಗಿದ್ದರು. ಭಾರತದ 'ನೀಲಿ ಕ್ರಾಂತಿ'ಯಲ್ಲಿ ಮಹತ್ವದ ಪಾತ್ರ ವಹಿಸಿದ್ದ ಅವರಿಗೆ 2022ನೇ ಸಾಲಿನಲ್ಲಿ 'ಪದ್ಮಶ್ರೀ' ಪ್ರಶಸ್ತಿ ಲಭಿಸಿತ್ತು. ಕೃಷಿ ಕ್ಷೇತ್ರದ ಸಂಶೋಧನೆಯಲ್ಲಿ ಸಕ್ರಿಯರಾಗಿದ್ದುಕೊಂಡೇ, ವಿವಿಧ ಸಂಸ್ಥೆಗಳನ್ನು ಕಟ್ಟಿಬೆಳೆಸಿದ ಹಿರಿಮೆ ಅವರದು. ಇಂಫಾಲದ ಕೇಂದ್ರೀಯ ಕೃಷಿ ವಿಶ್ವವಿದ್ಯಾಲಯದ (ಸಿಎಯು) ಕುಲಪತಿಯಾಗಿ ಕಾರ್ಯನಿರ್ವಹಿಸಿದ್ದರು.

1955ರ ಡಿ.10ರಂದು ಜನಿಸಿದ್ದ ಅವರು, ಚಾಮರಾಜನಗರ ಜಿಲ್ಲೆ ಯಳಂದೂರು ಮೂಲದವರು. ಮಂಗಳೂರಿನಲ್ಲಿ ಪದವಿ (ಬಿ.ಎಫ್.ಎಸ್‌ಸಿ–1975) ಹಾಗೂ ಸ್ನಾತಕೋತ್ತರ ಪದವಿ (ಎಂ.ಎಫ್.ಎಸ್‌ಸಿ– 1977) ವ್ಯಾಸಂಗ ಮಾಡಿದ್ದರು. 1998ರಲ್ಲಿ ಬೆಂಗಳೂರು ಕೃಷಿ ವಿಶ್ವವಿದ್ಯಾಲಯದಲ್ಲಿ ಪಿಎಚ್‌.ಡಿ ಪದವಿ ಪಡೆದಿದ್ದರು. ಡಿಪಾರ್ಟ್‌ಮೆಂಟ್ ಆಫ್ ಅಗ್ರಿಕಲ್ಚರಲ್ ರಿಸರ್ಚ್ ಆ್ಯಂಡ್ ಎಜುಕೇಷನ್‌ನ (ಡಿಎಆರ್‌ಇ) ಕಾರ್ಯದರ್ಶಿಯಾಗಿ, ಭಾರತೀಯ ಕೃಷಿ ಸಂಶೋಧನಾ ಪರಿಷತ್‌ನ (ಐಸಿಎಆರ್) ವ್ಯವಸ್ಥಾಪಕ ನಿರ್ದೇಶಕ, ರಾಷ್ಟ್ರೀಯ ಕೃಷಿ ವಿಜ್ಞಾನ ಅಕಾಡೆಮಿ ಅಧ್ಯಕ್ಷರಾಗಿದ್ದರು.

ಕೃಷಿ ಮತ್ತು ಸಂಶೋಧನಾ ಕ್ಷೇತ್ರದಲ್ಲಿ ಗಣನೀಯ ಸೇವೆ ಸಲ್ಲಿಸಿದ್ದ ಅವರು ಹಲವು ಸಮಿತಿಗಳ ಅಧ್ಯಕ್ಷರಾಗಿದ್ದರು. ಹಲವು ಪುರಸ್ಕಾರಗಳಿಗೆ ಭಾಜನರಾಗಿದ್ದರು.

'ಸುಳ್ಳು ಸುದ್ದಿಗಳಿಗೆ ಕಡಿವಾಣ ಹಾಕಿ'

ಒಂದನೇ ಪುಟದಿಂದ...

'ಪೌರ ರಕ್ಷಣಾ ವ್ಯವಸ್ಥೆಯನ್ನು ಬಲಪಡಿಸಿ, ಅವರಿಗೆ ಸೂಕ್ತ ತರಬೇತಿಯನ್ನು ಒದಗಿಸಬೇಕು. ಎಲ್ಲಾ ಜಿಲ್ಲೆಗಳಲ್ಲಿ ಪೌರ ರಕ್ಷಣಾ ವ್ಯವಸ್ಥೆಗೆ ಸ್ವಯಂ ಸೇವಕರನ್ನು ನೇಮಕ ಮಾಡುವ ಕಾರ್ಯ ಆರಂಭಿಸಬೇಕು. ಆನ್‌ಲೈನ್‌ನಲ್ಲಿ ಹೆಸರು ನೋಂದಾಯಿಸಲು ವ್ಯವಸ್ಥೆ ಕಲ್ಪಿಸಬೇಕು. ಅಗತ್ಯ ವಸ್ತುಗಳ ದರ ಹೆಚ್ಚಳ ಆಗದಂತೆ ನಿಗಾ ವಹಿಸುವ ಜೊತೆಗೆ, ಅಕ್ರಮ ದಾಸ್ತಾನು, ಕಾಳಸಂತೆ ಮೇಲೆ ನಿರಂತರವಾಗಿ ನಿಗಾ ಇರಿಸಬೇಕು' ಎಂದು ಸೂಚನೆ ನೀಡಿದರು.

ಗೃಹ ಸಚಿವ ಜಿ. ಪರಮೇಶ್ವರ, ಗ್ರಾಮೀಣಾಭಿವೃದ್ಧಿ ಸಚಿವ ಪ್ರಿಯಾಂಕ್ ಖರ್ಗೆ, ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರ ಅಧ್ಯಕ್ಷ ಎಚ್‌.ಎಂ. ರೇವಣ್ಣ, ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್, ಮುಖ್ಯಮಂತ್ರಿಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಎಲ್‌.ಕೆ. ಅತೀಕ್, ಪೊಲೀಸ್ ಮಹಾ ನಿರ್ದೇಶಕ ಅಲೋಕ್ ಮೋಹನ್ ಇದ್ದರು.

ಆಪರೇಷನ್ ಸಿಂಧೂರ: ಸುಪ್ರೀಂ ಕೋರ್ಟ್‌ಗೆ ಅರ್ಜಿ

ನವದೆಹಲಿ (ಪಿಟಿಐ): 'ಆಪರೇಷನ್ ಸಿಂಧೂರ' ಹೆಸರಿನಲ್ಲಿ ಟ್ರೇಡ್‌ಮಾರ್ಕ್ ನೋಂದಣಿ ಮಾಡಿಕೊಳ್ಳಲು ಅವಕಾಶ ನೀಡದಂತೆ ಆಡಳಿತಾಧಿಕಾರಿಗಳಿಗೆ ನಿರ್ದೇಶನ ನೀಡಬೇಕೆಂದು ಕೋರಿ ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿಯೊಂದು ಸಲ್ಲಿಕೆಯಾಗಿದೆ. ದೇವ್ ಆಶಿಶ್ ದುಬೆ ಎಂಬವರು ವಕೀಲ ಓಂ ಪ್ರಕಾಶ್ ಪರಿಹಾರ್ ಅವರ ಮೂಲಕ ಈ ಅರ್ಜಿ ಸಲ್ಲಿಸಿದ್ದಾರೆ.

'ಆಪರೇಷನ್ ಸಿಂಧೂರ ಎಂಬುದು ದೇಶವಾಸಿಗಳ ಭಾವನೆ ಮಾತ್ರವಲ್ಲದೇ, ದೇಶಕ್ಕಾಗಿ ಉಸಿರು ಚೆಲ್ಲಿದವರ ತ್ಯಾಗ, ಪಹಲ್ಗಾಮ್‌ನಲ್ಲಿ ಹತ್ಯೆಗೀಡಾದ ಅಮಾಯಕರ ಸಾವಿನ ಆಕ್ರೋಶವನ್ನೂ ಒಳಗೊಂಡಿದೆ. ಪಾಕಿಸ್ತಾನ ಪ್ರೇರಿತ ಭಯೋತ್ಪಾದನೆ ವಿರುದ್ಧದ ಹೋರಾಟದಲ್ಲಿ ಹುತಾತ್ಮರಾದ ಯೋಧರ ಪತ್ನಿಯರ ತ್ಯಾಗದ ಪ್ರತೀಕವಾಗಿರುವ 'ಆಪರೇಷನ್ ಸಿಂಧೂರ' ಹೆಸರು ಜನರ ಭಾವನೆಗಳನ್ನು ವಾಣಿಜ್ಯದ ಉದ್ದೇಶಕ್ಕೆ ಬಳಸುವವರ ಕೈಗೆ ಸೇರಬಾರದು. ಹೀಗಾಗಿ ಅದರ ನೋಂದಣಿಗೆ ಅವಕಾಶ ನೀಡಬಾರದು' ಎಂದು ಅರ್ಜಿಯಲ್ಲಿ ಮನವಿ ಮಾಡಲಾಗಿದೆ.

ಆಪರೇಷನ್ ಸಿಂಧೂರ ಹೆಸರಿನ ಟ್ರೇಡ್ ಮಾರ್ಕ್‌ಗಾಗಿ ಈಗಾಗಲೇ 5 ಮಂದಿ ಅರ್ಜಿ ಸಲ್ಲಿಸಿರುವಂತೆಯೇ 'ಸುಪ್ರೀಂ'ನಲ್ಲಿ ಈ ಮನವಿ ಸಲ್ಲಿಕೆಯಾಗಿರುವುದು ಮಹತ್ವ ಪಡೆದಿದೆ.

ಒಪ್ಪಂದ ಮುರಿದು ಸಂಘರ್ಷಕ್ಕಿಳಿದ ಪಾಕ್

ಒಂದನೇ ಪುಟದಿಂದ...

'ಭಾರತ ಹಾಗೂ ಪಾಕಿಸ್ತಾನ ಸಂಪೂರ್ಣವಾಗಿ ಹಾಗೂ ತತ್‌ಕ್ಷಣದಿಂದಲೇ ಸಂಘರ್ಷ ಕೊನೆಗಾಣಿಸಲು ಒಪ್ಪಿಗೆ ಸೂಚಿಸಿವೆ. ಅಮೆರಿಕ ನಡೆಸಿದ ದೀರ್ಘ ರಾತ್ರಿಯ ಮಧ್ಯಸ್ಥಿಕೆ ಮಾತುಕತೆಗೆ ಸಿಕ್ಕ ಫಲಿತಾಂಶವಿದು' ಎಂದು ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಸಾಮಾಜಿಕ ಜಾಲತಾಣ ಖಾತೆಯಲ್ಲಿ ಘೋಷಿಸಿದ ಬೆನ್ನಹಿಂದೆಯೇ, ಎರಡೂ ದೇಶಗಳು ಸಂಘರ್ಷ ನಿಲ್ಲಿಸಿರುವ ಕುರಿತು ಅಧಿಕೃತ ಪ್ರಕಟಣೆ ಹೊರಡಿಸಿದವು.

ಕಮಡೋರ್ ರಘು ನಾಯರ್, ವಿಂಗ್ ಕಮಾಂಡರ್ ವ್ಯೋಮಿಕಾ ಸಿಂಗ್ ಹಾಗೂ ಕರ್ನಲ್ ಸೋಫಿಯಾ ಖುರೇಷಿ ಪತ್ರಿಕಾಗೋಷ್ಠಿ ನಡೆಸಿ, 'ಮುಂದಿನ ದಿನಗಳಲ್ಲಿ ಪಾಕ್ ಯಾವುದೇ ದುಸ್ಸಾಹಸಗಳನ್ನು ಮಾಡಿದರೆ ಅದಕ್ಕೆ ಭಾರತೀಯ ಸಶಸ್ತ್ರ ಪಡೆ ತಕ್ಕ ಪ್ರತ್ಯುತ್ತರ ನೀಡಲಿದೆ' ಎಂದು ಎಚ್ಚರಿಸಿದರು. 'ನಮ್ಮ ಸಶಸ್ತ್ರ ಪಡೆಗಳ ಕಾರ್ಯಾಚರಣೆಯಿಂದಾಗಿ ಪಾಕಿಸ್ತಾನವು ಭೂ ಮತ್ತು ವಾಯು ಎರಡೂ ಕಡೆಗಳಲ್ಲಿ ಅಪಾರ ನಷ್ಟ ಅನುಭವಿಸಿದೆ' ಎಂದು ಹೇಳಿದರು.

ಪಾಕಿಸ್ತಾನವು ಜಮ್ಮು ಮತ್ತು ಕಾಶ್ಮೀರದಲ್ಲಿ ಶುಕ್ರವಾರ ರಾತ್ರಿ ನಡೆಸಿದ ಶೆಲ್ ದಾಳಿಗೆ ಹೆಚ್ಚುವರಿ ಜಿಲ್ಲಾಧಿಕಾರಿ, ಬಿಎಸ್‌ಎಫ್‌ನ ಹಿರಿಯ ಅಧಿಕಾರಿ, ಸಬ್ ಇನ್‌ಸ್ಪೆಕ್ಟರ್ ಬಲಿಯಾಗಿದ್ದಾರೆ ಹಾಗೂ ಗಡಿ ಭದ್ರತಾ ಪಡೆಯ ಎಂಟು ಮಂದಿ ಗಾಯಗೊಂಡಿದ್ದಾರೆ. ಗಡಿ ಭಾಗದ 26 ಪ್ರದೇಶಗಳ ಮೇಲೆ ಪಾಕ್ ಸೇನೆ ನಡೆಸಿದ ಕ್ಷಿಪಣಿ ಹಾಗೂ ಡ್ರೋನ್ ದಾಳಿಯನ್ನು ಭಾರತೀಯ ಸೇನೆ ವಿಫಲಗೊಳಿಸಿದೆ. 'ಪಾಕಿಸ್ತಾನವು ಶ್ರೀನಗರ, ಅವಂತಿಪುರ ಮತ್ತು ಉಧಂಪುರ ವಾಯುನೆಲೆಗಳಲ್ಲಿನ ಮೆಡಿಕೇರ್ ಕೇಂದ್ರ ಮತ್ತು ಶಾಲಾ ಆವರಣದ ಮೇಲೆ ದಾಳಿ ಮಾಡಿದೆ. ಇದೊಂದು ಹೇಡಿತನದ ಕೃತ್ಯ. ಪಂಜಾಬ್‌ನ ವಿವಿಧ ವಾಯುನೆಲೆಗಳ ಮೇಲೆ ಬೆಳಗಿನ ಜಾವ 1.40ಕ್ಕೆ ಅತಿ ವೇಗದ ಕ್ಷಿಪಣಿಗಳು ದಾಳಿ ಮಾಡಿವೆ. ಇದರಿಂದಾಗಿ ಸ್ವಲ್ಪ ಹಾನಿಯಾಗಿದೆ' ಎಂದು ಖುರೇಷಿ ಹೇಳಿದರು.

ಪಾಕ್‌ನ ರಫೀಕಿ, ಮುರಿಯದ್, ಚಕ್ಲಾಲಾ, ರಹಿಮ್ಯಾರ್ ಖಾನ್, ಸುಕ್ಕೂರ್, ಚುನಿಯನ್‌ನ ಸೇನಾ ನೆಲೆಗಳು ಹಾಗೂ ಪಸ್ರೂರ್, ಸಿಯಾಲ್‌ಕೋಟ್ ವಾಯು ನೆಲೆಗಳನ್ನು ಗುರಿಯಾಗಿಸಿ ಕಾರ್ಯಾಚರಣೆ ನಡೆಸಿ ಭಾರಿ ಹಾನಿ ಉಂಟು ಮಾಡಲಾಗಿದೆ' ಎಂದೂ ಅವರು ಮಾಹಿತಿ ನೀಡಿದರು.


ಭಾರತ ಮತ್ತು ಪಾಕಿಸ್ತಾನ ಕದನ ವಿರಾಮಕ್ಕೆ ಒಪ್ಪಿದ ಬಳಿಕ ಉತ್ತರ ಪ್ರದೇಶದ ವಾರಾಣಸಿಯಲ್ಲಿ ಶನಿವಾರ ಹನುಮಾನ್ ಚಾಲೀಸಾ ಪಠಿಸಿ ಸಂಭ್ರಮಿಸಿದರು
ಪಿಟಿಐ ಚಿತ್ರ

ಪಹಲ್ಗಾಮ್ ದಾಳಿಯಿಂದ ಸಂಘರ್ಷ ಶಮನದವರೆಗೆ

ಒಂದನೇ ಪುಟದಿಂದ...

- **ಮೇ 7:** 'ಪಾಕಿಸ್ತಾನ ಆಕ್ರಮಿತ ಕಾಶ್ಮೀರದಲ್ಲಿನ ಒಂಬತ್ತು ಉಗ್ರರ ನೆಲೆಗಳ ಮೇಲೆ ದಾಳಿ ನಡೆಸಲಾಯಿತು' ಎಂದು ಭಾರತ ಹೇಳಿತು. 'ಇದು ಯುದ್ಧಕ್ಕೆ ಸಮನಾದ ಕ್ರಿಯೆ. ಭಾರತದ ದಾಳಿಯಲ್ಲಿ 31 ಮಂದಿ ಮೃತಪಟ್ಟಿದ್ದಾರೆ. ನಾವು ಪ್ರತೀಕಾರ ತೀರಿಸಿಕೊಳ್ಳುತ್ತೇವೆ' ಎಂದು ಪಾಕಿಸ್ತಾನ ಶಪಥ ಮಾಡಿತು
- **ಮೇ 8:** ವಾಯು ರಕ್ಷಣಾ ವ್ಯವಸ್ಥೆಯನ್ನು ಗುರಿಯಾಗಿಸಿ ಪಾಕಿಸ್ತಾನವು ದಾಳಿ ನಡೆಸಿದೆ ಎಂದು ಆರೋಪಿಸಿದ ಭಾರತವು, ಕ್ಷಿಪಣಿ ದಾಳಿ ನಡೆಸಿತು
- **ಮೇ 9:** ಭಾರತವು ಐಪಿಎಲ್ ಕ್ರಿಕೆಟ್ ಟೂರ್ನಿಯನ್ನು ಮುಂದೂಡಿತು. 'ಸಂಯಮದಿಂದ ಇರಿ' ಎಂದು ಜಿ7 ರಾಷ್ಟ್ರಗಳು ಒತ್ತಾಯಿಸಿದವು
- **ಮೇ 10:** 'ಭಾರತವು ನಮ್ಮ ವಾಯುನೆಲೆ ಮೇಲೆ ದಾಳಿ ನಡೆಸಿತು. ಅದಕ್ಕಾಗಿ ನಾವು ಪ್ರತಿ ದಾಳಿ ನಡೆಸಿದೆವು' ಎಂದು ಪಾಕಿಸ್ತಾನ ಹೇಳಿತು. ಕಾಶ್ಮೀರದ ಹಲವೆಡೆ ದೊಡ್ಡದಾಗಿ ಶಬ್ದ ಕೇಳಿಸಿತು ಎಂದು ಜನರು ಹೇಳಿದರು. 'ಭಾರತ ಮತ್ತು ಪಾಕಿಸ್ತಾನವು ಸಂಘರ್ಷ ಶಮನಕ್ಕೆ ಒಪ್ಪಿಕೊಂಡಿವೆ' ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಹಂಚಿಕೊಂಡರು. ಬಳಿಕ, ಎರಡೂ ದೇಶಗಳು ಇದನ್ನು ದೃಢೀಕರಿಸಿದವು

ರಿಲೆ ಸ್ಪರ್ಧೆ: ಹೀಟ್ಸ್‌ನಲ್ಲಿ ಭಾರತ ತಂಡಗಳಿಗೆ ಐದನೇ ಸ್ಥಾನ

ವಿಶ್ವ ಚಾಂಪಿಯನ್‌ಷಿಪ್: ಅರ್ಹತೆ ವಿಫಲ

ಗುವಾಂಗ್‌ಝೌ, ಚೀನಾ (ಪಿಟಿಐ): ಭಾರತದ ಪುರುಷರ ಮತ್ತು ಮಿಶ್ರ 4x400 ಮೀಟರ್ ರಿಲೆ ತಂಡಗಳು ಇಲ್ಲಿ ನಡೆದ ವಿಶ್ವ ಅಥ್ಲೆಟಿಕ್ಸ್ ಸ್ಪರ್ಧೆಯ ಹೀಟ್ಸ್‌ಗಳಲ್ಲಿ ಕ್ರಮವಾಗಿ ಐದನೇ ಸ್ಥಾನ ಪಡೆದವು. ಎರಡೂ ತಂಡಗಳಿಗೂ ವಿಶ್ವ ಚಾಂಪಿಯನ್‌ಷಿಪ್‌ನ ನೇರ ಅರ್ಹತಾ ಮಟ್ಟವನ್ನು ತಲುಪಲು ಸಾಧ್ಯವಾಗಲಿಲ್ಲ.

ಸೆಪ್ಟೆಂಬರ್ 13ರಿಂದ 21ರವರೆಗೆ ಟೋಕಿಯೊದಲ್ಲಿ ವಿಶ್ವ ಚಾಂಪಿಯನ್‌ಷಿಪ್ ನಡೆಯಲಿದೆ. ಈ ಕೂಟಕ್ಕೆ ಟಿಕೆಟ್ ಪಡೆಯಲು ಭಾರತದ ಉಭಯ ತಂಡಗಳಿಗೆ ಭಾನುವಾರ ಮತ್ತೊಂದು ಅವಕಾಶ ಸಿಗಲಿದೆ.

ಜಯ್ ಕುಮಾರ್, ಸ್ನೇಹಾ ಕೊಲ್ಲೇರಿ, ಧರ್ಮವೀರ್ ಚೌಧರಿ ಮತ್ತು ರೂಪಲ್ ಚೌಧರಿ ಅವರನ್ನು ಒಳಗೊಂಡ ಮಿಶ್ರ ತಂಡವು 3 ನಿಮಿಷ 16.85 ಸೆಕೆಂಡ್‌ಗಳಲ್ಲಿ ಗುರಿ ಮುಟ್ಟಿತು. ಹೀಟ್ಸ್‌ನಲ್ಲಿದ್ದ ಏಳು ತಂಡಗಳ ಪೈಕಿ ಐದನೇ ಸ್ಥಾನ ಗಳಿಸಿತು. ಇದು ಭಾರತ ಮಿಶ್ರ ತಂಡದ ಋತುವಿನ ಅತ್ಯುತ್ತಮ ಸಾಧನೆಯಾಗಿದ್ದರೂ ರಾಷ್ಟ್ರೀಯ ದಾಖಲೆಯಿಂದ (3 ನಿ.12.87ಸೆ) ಬಹಳಷ್ಟು ದೂರವಿದೆ.

ಮೂರು ಹೀಟ್ಸ್‌ಗಳಲ್ಲಿ ಮೊದಲೆರಡು ಸ್ಥಾನ ಪಡೆದ ತಂಡಗಳು ಮತ್ತು ವೇಗವಾಗಿ ಗುರಿ ತಲುಪಿದ ಇತರ ಎರಡು ತಂಡಗಳು ವಿಶ್ವ ಚಾಂಪಿಯನ್‌ಷಿಪ್‌ಗೆ ನೇರ ಅರ್ಹತೆ ಪಡೆಯುತ್ತವೆ. ವಿಶ್ವ ಅಥ್ಲೆಟಿಕ್ಸ್ ರಿಲೆ ಫೈನಲ್ ಭಾನುವಾರ ನಡೆಯಲಿದೆ.

ಭಾರತ ತಂಡವು ಫೈನಲ್ ಪ್ರವೇಶಿಸಲು ವಿಫಲವಾದರೂ ಭಾನುವಾರ ನಡೆಯುವ ಹೀಟ್ 2ರಲ್ಲಿ ಸ್ಪರ್ಧಿಸಿ, ವಿಶ್ವ ಚಾಂಪಿಯನ್‌ಷಿಪ್ ಅರ್ಹತೆಗೆ ಮತ್ತೊಂದು ಅವಕಾಶ ಹೊಂದಿದೆ. ಬೋಟ್ಸ್ವಾನಾ, ಇಟಲಿ, ಜರ್ಮನಿ, ಉಗಾಂಡಾ ಮತ್ತು ಕೆನಡಾ ತಂಡಗಳೊಂದಿಗೆ ಭಾರತ ಸೆಣಸಲಿದೆ.

ಭಾನುವಾರ ನಡೆಯಲಿರುವ ಎರಡು ಹೀಟ್‌ಗಳಲ್ಲಿ ಮೊದಲ ಮೂರು ಸ್ಥಾನ ಪಡೆಯುವ ತಂಡಗಳು ವಿಶ್ವ ಚಾಂಪಿಯನ್‌ಷಿಪ್‌ಗೆ ಅರ್ಹತೆ ಪಡೆಯುತ್ತವೆ.

2023ರ ವಿಶ್ವ ಚಾಂಪಿಯನ್‌ಷಿಪ್ ಮತ್ತು 2024ರ ಒಲಿಂಪಿಕ್ಸ್‌ನಲ್ಲಿ ಸ್ಪರ್ಧಿಸಿದ್ದ ಅಥ್ಲೀಟ್‌ಗಳನ್ನು ಹೊರಗಿಟ್ಟು, ಭಾರತ ಪುರುಷರ 4x400 ಮೀಟರ್ ರಿಲೆ ತಂಡದಲ್ಲಿ ಹೊಸ ಮುಖಗಳನ್ನು ಕಣಕ್ಕಿಳಿಸಿದೆ.

ಜಯ್ ಕುಮಾರ್, ಸಂತೋಷ್ ಕುಮಾರ್ ತಮಿಳರಸನ್, ತೆಕ್ಕಿನಲಿಲ್ ಸಜಿ ಮನು, ತೆನ್ನರಸು ಕಾಯಲ್ವಿಳಿ ವಿಶಾಲ್ ಮತ್ತು ಮೋಹಿತ್ ಕುಮಾರ್ ಅವರ ತಂಡವು 3 ನಿಮಿಷ 03.92 ಸೆಕೆಂಡ್‌ಗಳಲ್ಲಿ ಗುರಿ ಮುಟ್ಟಿ, ಹೀಟ್ಸ್‌ನಲ್ಲಿದ್ದ ಆರು ತಂಡಗಳ ಪೈಕಿ ಐದನೇ ಸ್ಥಾನ ಗಳಿಸಿತು.

ಈ ತಂಡವೂ ಋತುವಿನ ಅತ್ಯುತ್ತಮ ಸಮಯವನ್ನು ದಾಖಲಿಸಿತು. ಆದರೆ, ರಾಷ್ಟ್ರೀಯ ದಾಖಲೆ (2:59.05) ತಲುಪಲು ಸಾಧ್ಯವಾಗಲಿಲ್ಲ. ಈ ತಂಡಕ್ಕೂ ಭಾನುವಾರ ನಡೆಯಲಿರುವ ಹೀಟ್ಸ್ 2ರಲ್ಲಿ ಟೋಕಿಯೊ ವಿಶ್ವ ಚಾಂಪಿಯನ್‌ಷಿಪ್‌ಗೆ ಅರ್ಹತೆ ಗಿಟ್ಟಿಸುವ ಅವಕಾಶವಿದೆ.

ಕ್ರಿಕೆಟ್: ಮಾಗಡಿ ಸಿಎ ತಂಡಕ್ಕೆ ಜಯ

ಬೆಂಗಳೂರು: ಕೀರ್ತನ್ ಗಳಿಸಿದ ಅಜೇಯ ಅರ್ಧಶತಕ ಮತ್ತು ಜೀವನ್ ಆಲ್‌ರೌಂಡ್ ಆಟದ ನೆರವಿನಿಂದ ಮಾಗಡಿ ಕ್ರಿಕೆಟ್ ಅಕಾಡೆಮಿ ತಂಡವು ಪ್ರೊ. ಅನಂತಾಚಾರ್ ಸ್ಮಾರಕ ಟ್ರೋಫಿ 12 ವರ್ಷದೊಳಗಿನವರ ಕ್ರಿಕೆಟ್ ಟೂರ್ನಿಯಲ್ಲಿ ಹೆರಾನ್ಸ್ ಕ್ರಿಕೆಟ್ ಕ್ಲಬ್ ವಿರುದ್ಧ 61 ರನ್‌ಗಳಿಂದ ಗೆಲುವು ಸಾಧಿಸಿತು.

ಸೋಮನಹಳ್ಳಿಯ ಎಪಿಎಸ್ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಮಾಗಡಿ ತಂಡದ ಕೀರ್ತನ್ (ಔಟಾಗದೇ 75, 62 ಎ, 4x9, 6x2), ಜೀವನ್ (21ಕ್ಕೆ 3) ಹಾಗೂ ಪ್ರಣೀತ್ (19ಕ್ಕೆ 2) ಮಿಂಚಿದರು. ಮತ್ತೊಂದು ಪಂದ್ಯದಲ್ಲಿ ಹೆರಾನ್ಸ್ ಸಿಸಿ ತಂಡವು 5 ವಿಕೆಟ್‌ಗಳಿಂದ ಪೂರ್ಣ ವಿಕಾಸ್ ವಿರುದ್ಧ ಜಯಿಸಿತು.

ಸಂಕ್ಷಿಪ್ತ ಸ್ಕೋರು: ಮಾಗಡಿ ಕ್ರಿಕೆಟ್ ಅಕಾಡೆಮಿ: 25 ಓವರ್‌ಗಳಲ್ಲಿ 5ಕ್ಕೆ158 (ಕೀರ್ತನ್ ಔಟಾಗದೇ 85, ಅಮೇಯ ಪ್ರಭು 18ಕ್ಕೆ2) ಹೆರಾನ್ಸ್ ಸಿಸಿ: 22.3 ಓವರ್‌ಗಳಲ್ಲಿ 97 (ಆರುಷ್ 24, ಜೀವನ್ 21ಕ್ಕೆ3, ಪ್ರಣೀತ್ 19ಕ್ಕೆ2)

ಪೂರ್ಣವಿಕಾಸ್: 24.5 ಓವರ್‌ಗಳಲ್ಲಿ 122 (ನಿರ್ಮಿಷ್ 32, ದಿಗಂತ್ 24, ಸಚಿನ್ 15ಕ್ಕೆ3) **ಹೆರಾನ್ಸ್ ಸಿಸಿ:** 21.2 ಓವರ್‌ಗಳಲ್ಲಿ 5ಕ್ಕೆ123 (ಆರುಷ್ 26, ಲವಿಕ್ ಔಟಾಗದೇ 22, ಆಯುಷ್ 21, ಕೆವಿನ್ 21, ನಿರ್ಮಿಶ್ 18ಕ್ಕೆ2)

ಕೆಸಿಸಿ ಗುರುಕುಲ್: 25 ಓವರ್‌ಗಳಲ್ಲಿ 9ಕ್ಕೆ165 (ರೆಯಾಂಶ್ 69, ವಿಷ್ಣು 8ಕ್ಕೆ3) **ಬಿಪಿಸಿಎ:** 25 ಓವರ್‌ಗಳಲ್ಲಿ 9ಕ್ಕೆ115 (ವಿಷ್ಣು 35, ಆದ್ಯವೀರ್ 25, ಸೂರಜ್ 21, ಎವಿಯಾನ್ 11ಕ್ಕೆ2)

ಅನಾಹತ್, ಅಭಯ್ ಶುಭಾರಂಭ

ಷಿಕಾಗೊ (ಪಿಟಿಐ): ಭಾರತದ ಯುವ ಸ್ಕ್ವಾಷ್ ತಾರೆ ಅನಾಹತ್ ಸಿಂಗ್ ಅವರು ಇಲ್ಲಿ ನಡೆಯುತ್ತಿರುವ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ವಿಶ್ವದ 28ನೇ ರ‍್ಯಾಂಕ್‌ನ ಮರೀನಾ ಸ್ಟೆಫಾನೋನಿ ಅವರಿಗೆ ಆಘಾತ ನೀಡಿ ಶುಭಾರಂಭ ಮಾಡಿದರು.


ಅನಾಹತ್ ಸಿಂಗ್

